ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು

ಸಾಧನೆ

ಸಂಪುಟ 6
ಸಂಚಿಕೆ 4
ಅಕ್ಟೋಬರ್ - ಡಿಸೆಂಬರ್ - 1977

ಸಾಧನೆ

ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

SADHANE: Kannada Quarterly of the Bangalore University, Bangalore
Vol. 6. No. 4, October–December 1977

Chief Editor: Dr. G. S. Sivarudrappa

ವಾರ್ಷಿಕ ಚಂದಾ : ರೂ. 8–00
ರೂ. 5–00 (ವಿದ್ಯಾರ್ಥಿಗಳಿಗೆ)

ಪ್ರಕಾಶಕರು : ಹೆಚ್. ಆರ್. ದಾಸೇಗೌಡ
ನಿರ್ದೇಶಕರು, ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು 560056

ಮುದ್ರಕರು :
ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು 560056

ಪರಿವಿಡಿ

ಕಥಾ ವರ್ತುಲ

ಜಯಸುದರ್ಶನ

ನನ್ನ ಸ್ವಪ್ನದೊಳಹೊಗುವ ಮಂದಪ್ರಕಾಶ ಹಾಸುವ
ನಕ್ಷತ್ರಗಳು ನಿದ್ದೆಗೆಟ್ಟವರನ್ನು ಅವರ ದುಃಸ್ವಪ್ನದಂಥ
ಎಚ್ಚರಕೆ ಕಟ್ಟಿ ಹಾಕುತ್ತವೆ.
ಪ್ರತಿಯೊಂದು ತಾರೆಗಿದೆ ತನ್ನ ಕತೆ, ನನಗುಂಟು ನನ್ನದು.

ನಿದ್ದೆ ಹತ್ತಿದವರನ್ನು ಹಿಡಿಯುವುದಿಲ್ಲ ತಾರೆಗಳ ಈ ವ್ಯೂಹ ;
ಇರುಳ ಗಂಭೀರ ನೀರವಕೆ ತನ್ನ ವಂತಿಗೆ ಎಂದೂ
ತಪ್ಪಿಸಿಲ್ಲ ಸತ್ತವರ ಸಮೂಹ.
ಹೊತ್ತು ನಡೆದಿದ್ದೇನೆ ನಾನು ಲೆಕ್ಕ ಸಿಗದಷ್ಟು
ಕತೆಗಳ ಕಂತೆಯನ್ನು —
ನಿದ್ದೆಯಲ್ಲೇ ಕೇಳುತ್ತ, ಎಸ್ಡಾಗ ಮರೆವಂಥವನ್ನು,
ನನ್ನಂಥ ಮಂದಿಗೆ ನಾನು ಹೇಳಬಯಸಿರುವ ಕತೆಗಳನ್ನು.
ನನ್ನ ಕತೆಗಳ ನಡುವೆ ಸಾಮ್ಯ ಬಹಳ.

ಹುಟ್ಟದಿರುವವರು ಹುಟ್ಟುತ್ತಾರೆ, ಹುಟ್ಟುತ್ತಾರೆ
ದಿಟ ತಮ್ಮ ಸ್ವಂತ ನಕ್ಷತ್ರಗಳ ಕೆಳಗೆ :
ಇವರ ಮರಣಕೆ ತಾರೆಗಳು ಉದುರಿ ಬೀಳುತ್ತಾವೆ ಖಂಡಿತ.
ನಕ್ಷತ್ರಗಳು ಇಲ್ಲವಾಗುವುದಿಲ್ಲ ಎಷ್ಟಾದರೂ,
ಹೊತ್ತಿಕೊಳ್ಳುತ್ತಾವೆ ಅವು ಮತ್ತೆ ಇನ್ನೆತ್ತಲೋ,
ಬೇರೆ ಯಾವಾಗಲೋ.

ಹೊತ್ತಿಗೆ ಕಟ್ಟುಬೀಳದ ನನ್ನ ಮನಸ್ಸಿನಾಳಕೆ
ಗೂಟ ಕಟ್ಟಿರುವಂಥ ತನ್ನೆಲ್ಲ ಪ್ರಾಚೀನ ಗಳಿಕೆಯತ್ತ
ತೋಳ ಚಾಚಿದೆ ನನ್ನ ಜನಾಂಗ ಇದ್ದಲ್ಲೆ ಕುಳಿತುಕೊಂಡು,
ತನ್ನ ತೆಕ್ಕೆಯಲಿ ತಾನೆ ತುಂಬಿಕೊಳ್ಳುವ ಕನಸ ಕಂಡು.
ನನ್ನ ಅಲ್ಪಾಯು ಹೃದಯದ ಮಿಡಿತಗಳ ತಬ್ಬಿ
ತಮ್ಮಂಥವರನ್ನೆ ಈದುಹೋಗಲು, ಮತ್ತೆ
ಹಾದುಹೋಗಲು ನಿಂತಿದ್ದಾವೆ ಕ್ಷಿಪ್ರಕತೆಗಳು,
ನಿಂತಿದ್ದಾವೆ ಸಾಲುಗಟ್ಟಿಕೊಂಡು.

ಹರಿಹರನ ದರ್ಶನ

ಜಿ. ಎಸ್. ಶಿವರುದ್ರಪ್ಪ

ಹರಿಹರ ಭಕ್ತ ಕವಿ. ಶಿವನನ್ನು ಅರ್ಚಿಸುವುದು, ಅರ್ಚನೆಯ ಆನಂದದಲ್ಲಿ ವ್ಯಕ್ತಿತ್ವವನ್ನು ಕರಗಿಸುವುದು, ಶಿವನ ಕೃಪೆಯನ್ನು ಸಂಪಾದಿಸುವುದು ಬದುಕಿನ ಗುರಿ ಎಂಬ ನಂಬಿಕೆಯಲ್ಲಿ ಬದುಕಿದವನು. ಈ ಒಂದು ನಂಬಿಕೆಯೆ ಅವನ ವ್ಯಕ್ತಿತ್ವದ ತಳಹದಿಯಾದದ್ದರಿಂದ, ತನ್ನನ್ನು ಬಹಿರಂಗವಾಗಿ ನಿಯಂತ್ರಿಸುವ ಎಲ್ಲ ರೀತಿಯ ಪ್ರಭು ಶಕ್ತಿಯನ್ನೂ ನಿರಾಕರಿಸಿ ಸ್ವತಂತ್ರವಾಗಿ ನಿಂತವನು; ಅಷ್ಟೆ ಅಲ್ಲ, ಅಂಥ ಪ್ರಭುಶಕ್ತಿಯ ಆಶ್ರಯದಿಂದ ದೊರೆಯಬಹುದಾದ ಸುಖ, ಸಂಪತ್ತು, ಕೀರ್ತಿ, ಗೌರವ ಇತ್ಯಾದಿ ಆಮಿಷಗಳನ್ನು ಅತ್ಯಂತ ನಿಕೃಷ್ಟವಾಗಿ ಕಂಡು, ತನ್ನ ವ್ಯಕ್ತಿತ್ವವನ್ನು ಆ ಪರಾತ್ಪರನಾದ ಶಿವನ ಸೇವೆಗೆ ಸಮರ್ಪಿಸಿಕೊಂಡವನು.

ಹರಿಹರನ ಈ ನಿಲುವು ಶಿವಪರವಾಗಿದ್ದರೂ ಜೀವನವಿರೋಧಿಯಾಗಿಲ್ಲ ಎನ್ನುವುದೇ ಹರಿಹರನ ದರ್ಶನವನ್ನು ಕುರಿತು ಹೇಳುವಾಗ ಗುರುತಿಸಬೇಕಾದ ಮೊದಲ ಸಂಗತಿ.* ಭಕ್ತ ಕವಿಯಾದ ಹರಿಹರ, ಪರಮ ವೈರಾಗ್ಯವನ್ನೆ ತಾತ್ವಿಕವಾಗಿ ಎತ್ತಿ ಹಿಡಿದು, ಈ ಲೋಕದ ಭೋಗ, ಐಶ್ವರ್ಯ ಇತ್ಯಾದಿಗಳು ಅಲ್ಪವೆಂಬ ಅರಿವನ್ನು ಬೆಳೆಯಿಸಿಕೊಂಡರೂ, ಆ ಕಾರಣಕ್ಕಾಗಿ ಇಹದ ಬದುಕು ತುಚ್ಛವೆಂದಾಗಲಿ, ಸಂಪೂರ್ಣ ನಿರಾಕರಣೆಗಷ್ಟೆ ಅರ್ಹವಾದದ್ದೆಂದಾಗಲಿ ರಭಸದಿಂದ ಹೇಳುವ ಸ್ವಭಾವದವನಲ್ಲ. ಈ ಬದುಕು ಒಂದು ಸಾಧನಾರಂಗ; ಶಿವಾರ್ಚನೆಗೆ ಒಂದು ವೇದಿಕೆ, ಶಿವ ಕೃಪೆಯ ಸಂಪಾದನೆಗೆ ಒಂದು ಮಾರ್ಗ ಎಂಬುದನ್ನು ಮರೆಯಲಿಲ್ಲ.

ಹರಿಹರ ವಚನಕಾರರ ವಿಚಾರ ಕ್ರಾಂತಿಯ ಅನಂತರ ಬಂದವನು ಎಂಬುದನ್ನು ನೆನೆದರೆ, ಹರಿಹರನ ಈ ಜೀವನದರ್ಶನ ಈ ರೀತಿಯದಾದದ್ದು ಆಶ್ಚರ್ಯವಲ್ಲ

---

* 'ಮನುಜರ ಮೇಲೆ, ಸಾವವರ ಮೇಲೆ, ಕನಿಷ್ಠರ ಮೇಲೆ' ತಾನು ಕೃತಿರಚನೆ ಮಾಡುವುದಿಲ್ಲ ಎಂಬ ಹರಿಹರನ ಘೋಷಣೆ ಮೇಲು ನೋಟಕ್ಕೆ ಮಾನವತಾ ವಿರೋಧಿ ಎಂಬಂತೆ ಭಾಸವಾದರೂ, ಅವನ ಕೃತಿಗಳ ಕಥಾನಾಯಕರೆಲ್ಲ ಮಾನವರೆ, ಸಾಮಾನ್ಯ ಮಾನವರೆ ಎಂಬುದನ್ನು ಮರೆಯಬಾರದು. ಆದರೆ ಹರಿಹರ ತನ್ನ ಘೋಷಣೆಯಲ್ಲಿ ಪ್ರಕಟಿಸುವ ವಿರೋಧ, ಅಧಿಕಾರಾರೂಢರಾದ, ರಾಜರುಗಳಾದ 'ಮನುಜ'ರನ್ನು ಕುರಿತದ್ದು; ಇಂದ್ರ ಚಂದ್ರ ದೇವೇಂದ್ರರೆಂದು ಮುನ್ನಿನ ಕವಿಗಳಿಂದ ಸ್ತುತ್ಯರಾದ ರಾಜರುಗಳನ್ನು ಕುರಿತದ್ದು. ಆದುದರಿಂದ ಇದು ಮುಖ್ಯವಾಗಿ ರಾಜವಿರೋಧಿ, ಅಥವಾ ರಾಜನಿಷ್ಠ ವಿರೋಧೀ ಧೋರಣೆ ಎಂದೇ ತಿಳಿಯಬೇಕು.

ಎಂದು ಯಾರಿಗಾದರೂ ಅನಿಸುತ್ತದೆ. ವಚನಕಾರರ ಬದುಕು, ಚಿಂತನೆ, ಅವರ ಅಭಿವ್ಯಕ್ತಿಯಲ್ಲಿನ ಹೊಸತನ, ಅವರ ಒಲವು–ನಿಲವುಗಳು ಹರಿಹರನಮೇಲೆ ಎಂತಹ ಪ್ರಭಾವವನ್ನು ಬೀರಿವೆ, ಪರಿಣಾಮವನ್ನು ಮಾಡಿವೆ ಎಂಬುದನ್ನು ಮತ್ತೆ ಬೇರೆಯಾಗಿ ಹೇಳಬೇಕಾಗಿಲ್ಲ. ಇಹ–ಪರವನ್ನು ಕುರಿತು ವಚನಕಾರರು ತಾಳಿದ ಧೋರಣೆಯನ್ನು ಹರಿಹರ ಮುಖ್ಯವಾಗಿ ನೂತನರನ್ನು ಕುರಿತು ಬರೆದ ರಗಳೆಗಳಲ್ಲಿ ಎತ್ತಿ ಹಿಡಿದಿದ್ದಾನೆ.

ಹರಿಹರನ ರಗಳೆಗಳ ಹಿಂದೆ ಒಂದು ಸಿದ್ಧ ಮಾದರಿ ಇದೆ. ಅದು ಪುರಾತನರನ್ನು ಕುರಿತ ರಗಳೆಗಳಲ್ಲಿ ಒಂದು ತೆರನಾಗಿದ್ದರೆ, ನೂತನರನ್ನು ಕುರಿತ ರಗಳೆಗಳಲ್ಲಿ ಬೇರೊಂದು ತೆರನಾಗಿದೆ. ಪುರಾತನರ ರಗಳೆಗಳ ಪ್ರಕಾರ, ಅದರಲ್ಲಿನ ಕಥಾನಾಯಕರಿಗೆ ಶಿವ ಭಕ್ತಿ ಜನ್ಮಸಿದ್ಧವಾದದ್ದು. ಹುಟ್ಟಿನೊಡನೆ ಬಂದ ಈ ಶಿವಭಕ್ತಿ ಬಹುಮಟ್ಟಿಗೆ ಗುಪ್ತವಾಗಿ ಇದ್ದದ್ದು, ಕಾಲಕ್ರಮೇಣ ಶಿವನ ಇಚ್ಛೆಯಂತೆ ತಕ್ಕ ಕಾಲದಲ್ಲಿ ಅನಾವರಣವಾಗುತ್ತದೆ. ಶಿವನೇ ಒಂದು ಸಂದರ್ಭವನ್ನು ನಿರ್ಮಿಸಿ ತನ್ನ ಭಕ್ತರ ಅನುಪಮವಾದ ಭಕ್ತಿಯ 'ಪ್ರದರ್ಶನ'ಕ್ಕೆ ಒಂದು ಪರೀಕ್ಷಾವಕಾಶವನ್ನು ಕಲ್ಪಿಸಿ, ಅದು ಝಗ್ಗನೆ ಪ್ರಕಟವಾಗುವುದನ್ನು ಕಂಡು ತಾನೇ ಹಿಗ್ಗಿ, ಅದನ್ನು ತನ್ನ ಪ್ರಿಯತಮೆಯಾದ ಪಾರ್ವತಿಗೋ, ಆಪ್ತನಾದ ನಂದೀಶನಿಗೋ, ಮತ್ತಿತರ ಪರಿವಾರದವರಿಗೋ ತೋರಿಸಿ, ಹೇಳಿ, ಹೊಗಳಿ ಕೊಂಡಾಡುವುದು, ಅಥವಾ ಆಯಾ ಭಕ್ತರ ಮಹಿಮಾತಿಶಯಗಳನ್ನು ವ್ಯಾಖ್ಯಾನ ಮಾಡುವುದು, ಅನಂತರ ಅವರಿಗೆ ಗಣಪದವಿಯನ್ನು ಕರುಣಿಸುವುದು. ಇದು ಪುರಾತನರ ರಗಳೆಗಳ ರಚನೆಯಲ್ಲಿ ಹರಿಹರನು ಅನುಸರಿಸಿರುವ ಒಂದು ಸಿದ್ಧ ಮಾದರಿ[1]. ಇಲ್ಲೆಲ್ಲಾ ಮುಖ್ಯಪಾತ್ರಗಳು ಶಿವಸಂಕಲ್ಪದ ಕೀಲು ಕೊಟ್ಟು ಇರಿಸಿದಂತೆ ಒಂದೇ ವಿಧಾನದಲ್ಲಿ ನಡೆದುಕೊಳ್ಳುತ್ತವೆ.

---

1. ಕಂಡಾಗಿರಿಜೆ ಎನ್ನನೇಹದಸುವಪ್ಪನಂ
ಇಂತಪ್ಪ ಭಕ್ತನಂ ಕಂಡು ಬಲ್ಲಾಗಿರಿಜೆ
ಇಂತಪ್ಪ ಭಕ್ತನಂ ಕೇಳ್ದು ಬಲ್ಲಾಗಿರಿಜೆ
ಎಂದು ಕಣ್ಣಪ್ಪನಂ ನೋಡಿ ಕೊಂಡಾಡುತುಂ

ಹರಿಹರನ ರಗಳೆಗಳು : ಭಾಗ ೧ : ಸಂ. ಫ. ಗು. ಹಳಕಟ್ಟಿ, ಪು. 54, ಪಂ. 14-171

* * *

ಇಂತೆಲ್ಲವಂ ಮರೆದು ಕೊಳಲೂದಿದವರುಂಟೆ
ಸಂತತಂ ಪಂಚಾಕ್ಷರಿಯ ಸವಿದರಿಂತುಂಟೆ
ಮರದ ಮೇಲಾನಿರಲ್ಕರಿದು ಪೊಲ್ದವರುಂಟೆ
ತರುವಿನೊಳಗಿರ್ದೆನ್ನರಿದು ನೆನೆದವರುಂಟೆ
ನೋಡಯ್ಯ ನಂದೀಶ ನೋಡಯ್ಯ ಭಕ್ತನಂ

ಅಲ್ಲೇ : ಪು. 61 ; ಪಂ. 17-26

ಹರಿಹರನ ರಚನಾ ತಂತ್ರದ ಇನ್ನೊಂದು ಮಾದರಿ ಎಂದರೆ, ಅವನ ರಗಳೆಯ ಕಥಾನಾಯಕರು – ಇದು ಮುಖ್ಯವಾಗಿ ನೂತನರನ್ನು ಕುರಿತ ರಗಳೆಗಳಲ್ಲಿ – ತಾವು ಕೈಲಾಸದಲ್ಲಿ ಮಾಡಿದ ಯಾವುದೋ ಪ್ರಮಾದದಿಂದಾಗಿ, ಶಪಿತರಾಗಿಯೋ, ನಿರ್ದೇಶಿತರಾಗಿಯೋ, ಅನುಗ್ರಹೀತರಾಗಿಯೋ ಈ ಮರ್ತ್ಯಕ್ಕೆ ಇಳಿದು ಬಂದು, ಲೋಕೋದ್ಧಾರಕರಾಗಿ ತಮ್ಮನ್ನೂ ಹಾಗೂ ಸುತ್ತಣ ಲೋಕವನ್ನು ತಿದ್ದುತ್ತಾ ಮತ್ತೆ ಕೈಲಾಸಕ್ಕೆ ಹಿಂದಿರುಗುವಂತೆ ಚಿತ್ರಿತವಾಗಿರುವುದು. ಬಸವ, ಅಲ್ಲಮ, ಅಕ್ಕ ಮಹಾದೇವಿ – ಇಂಥವರನ್ನು ಕುರಿತು ಹರಿಹರನು ಬರೆದ ರಗಳೆಗಳ ರಚನಾ ಕ್ರಮ ಇದು. ಕೈಲಾಸದಲ್ಲಿ ವೃಷಭಮುಖನೆಂಬ ಗಣೇಶ್ವರನು ಶಿವನ ಅಪ್ಪಣೆಯ ಪ್ರಕಾರ ಪುಷ್ಪ ಪ್ರಸಾದವನ್ನು ವಿನಿಯೋಗಿಸುವಾಗ, ಷಣ್ಮುಖನಿಗೆ ಕೊಡುವುದನ್ನು ಮರೆತ. ಶಿವನು, ಪ್ರಸಾದವನ್ನು ಎಲ್ಲರಿಗೂ ಕೊಟ್ಟೆಯಾ ಎಂದು ಕೇಳಿದಾಗ, ವೃಷಭ ಮುಖನು ಕೊಟ್ಟೆನೆಂದು ಸುಳ್ಳು ಹೇಳುತ್ತಾನೆ. ಹೀಗೆ ಸುಳ್ಳು ಹೇಳಿದ ಕಾರಣ ದಿಂದ ಶಿವನು ಆಕ್ಷೇಪಿಸಿ "ಇದಱಿಂದ [ವೊಂ]ದು ಜನನಂ ನಿನಗೆ ದೊರೆಕಿತ್ತು. ಮುದದಿಂದ ಹೋಗಯ್ಯ ಜನನವಂ ನೀ ಹೊತ್ತು, ಧರಣಿಯೊಳು ವೃಷಭ ಮುಖ ಹುಟ್ಟು" – ಎಂದು ಕಳುಹಿಸಿಕೊಡುತ್ತಾನೆ. ಈ ವೃಷಭ ಮುಖನೇ ಮರ್ತ್ಯದಲ್ಲಿ ಬಸವಣ್ಣನವರಾಗಿ ಹುಟ್ಟುತ್ತಾನೆ. ಒಮ್ಮೆ ಕೈಲಾಸದಲ್ಲಿ ಗುಪ್ತಗಣನಾಥನೊಬ್ಬನು ಪಾರ್ವತಿಗೆ ನಮಸ್ಕರಿಸುತ್ತಿರುವಾಗ ಅವನ ಕಾಲು ಮಹದೇವಿ ಎಂಬ ಹೆಸರಿನ ಭಕ್ತೆಯೊಬ್ಬಳಿಗೆ ತಾಕುತ್ತದೆ. ಆಗ ಆಕೆ ಆ ಗುಪ್ತಗಣನಾಥನನ್ನು ಪಾರ್ವತಿಯ ಸಮ್ಮುಖದಲ್ಲೇ 'ಭವಿ' ಎಂದು ಬಯ್ಯುತ್ತಾಳೆ. ಆಗ ಭಕ್ತನನ್ನು ಭವಿ ಎಂದ ತಪ್ಪಿಗಾಗಿ, ಮಹದೇವಿ ಒಂದು ಜನ್ಮವನ್ನು ಮರ್ತ್ಯದಲ್ಲಿ ಪಡೆದು, ಅನಂತರ ಕೈಲಾಸಕ್ಕೆ ಬರಬೇಕೆಂದು ಪಾರ್ವತಿಯು ಶಾಪ ಕೊಡುತ್ತಾಳೆ. ಈಕೆಯೇ ಬಸವಣ್ಣನವರ ಸಮಕಾಲೀನಳಾದ ಅಕ್ಕಮಹಾದೇವಿ. ಹೀಗೆಯೆ ಒಮ್ಮೆ ಕೈಲಾಸ ದಲ್ಲಿ ನಿರ್ಮಾಯನೆಂಬ ಗಣೇಶ್ವರನು ಸುರಸತಿಯರಲ್ಲಿ ಒಬ್ಬಳನ್ನು ಅಳುಪಿಂದ ನೋಡಿದ ಕಾರಣದಿಂದ, ಮರ್ತ್ಯದಲ್ಲಿ ಅಲ್ಲಮನೆಂಬ ಹೆಸರಿನಿಂದ ಜನಿಸುವ ಆದೇಶ ವನ್ನು ಪಡೆಯುತ್ತಾನೆ. ಹೀಗೆ ಹುಟ್ಟಿದವನೇ ಅಲ್ಲಮಪ್ರಭು. ಬಸವ, ಅಲ್ಲಮ ಅಕ್ಕಮಹಾದೇವಿ ಇಂತಹ ಚಾರಿತ್ರಿಕ ವ್ಯಕ್ತಿಗಳ ಜನನಕ್ಕೆ ಹರಿಹರನು ತನ್ನ ಕಾವ್ಯ ಸಂದರ್ಭದಲ್ಲಿ ಕಲ್ಪಿಸಿದ ಪೌರಾಣಿಕ ಹಿನ್ನೆಲೆ ಇಂಥದು. ಹರಿಹರನ ಈ ಕಲ್ಪನೆ ಯನ್ನು ಮುಂದಿನ ಶೂನ್ಯಸಂಪಾದನೆಕಾರರು ಪ್ರತ್ಯಕ್ಷವಾಗಿ ಪ್ರತಿಭಟಿಸಿದ್ದಾರೆ; ಮತ್ತೆ ಕೆಲವರು ತಮ್ಮ ವಿರೋಧವನ್ನು ಪರೋಕ್ಷವಾಗಿ ಪ್ರಕಟಿಸಿದ್ದಾರೆ. ಆದರೆ ನಮಗೆ ತೋರುವಮಟ್ಟಿಗೆ ಹರಿಹರನ ಕಲ್ಪನೆ ಪ್ರತಿಭಟನಾರ್ಹವಾದದ್ದೆಂದೇನೂ ಅನಿಸುವುದಿಲ್ಲ; ಅದರ ಬದಲು ಹರಿಹರನ ಜೀವನದರ್ಶನದ ಬಹು ಮುಖ್ಯವಾದ ಅಂಶವೊಂದು ಈ ಕೆಲವು ರಗಳೆಗಳ ಪೂರ್ವಪೀಠಿಕೆಯಲ್ಲಿ ಅಭಿವ್ಯಕ್ತವಾಗಿದೆ ಎಂದು ತೋರುತ್ತದೆ :

"ಮೂಲತಹ ಅಮರ್ತ್ಯಚೇತನಗಳಾದ ಬಸವಾದಿಗಳು ಕೈಲಾಸದಲ್ಲಿ ಮಾಡಿದ ಯಾವುದೋ ತಪ್ಪಿನ ಕಾರಣದಿಂದ ಈ ನೆಲಕ್ಕೆ ಅವತರಿಸಿದರೆಂಬ ಹರಿಹರನ ಮಾತಿನಲ್ಲಿ, ಈ ಮರ್ತ್ಯವೆಂಬುದು, ವ್ಯಕ್ತಿಗಳು ಕೈಲಾಸದಂಥ ಅಮರ್ತ್ಯ ಭೂಮಿಕೆಯಲ್ಲಿ ಮಾಡಿದ ತಪ್ಪನ್ನು ತಿದ್ದಿಕೊಳ್ಳುವ ಸಾಧನಾರಂಗ, ಸಂಸ್ಕಾರಕ್ಷೇತ್ರ ಎನ್ನುವ ಅರ್ಥ ಧ್ವನಿತವಾಗುತ್ತದೆ. ಇದು ವೀರಶೈವ ಧರ್ಮವು ಮರ್ತ್ಯವನ್ನು ಕುರಿತು ತಾಳುವ ನಿಲುವಿಗೂ ಸಮ್ಮತವಾಗಿದೆ. ವೀರಶೈವ ಧರ್ಮದ ಪ್ರಕಾರ ಈ ಮರ್ತ್ಯವೆಂಬುದು ಕೇವಲ ಮಿಥ್ಯೆಯಲ್ಲ, ಮತ್ತು ಜೀವ ತಪ್ಪಿಸಿಕೊಂಡು ಓಡಬೇಕಾದ ಸ್ಥಳವಲ್ಲ ; ಇದೊಂದು ಆತ್ಮಸಂಸ್ಕಾರಕ್ಷೇತ್ರ. ಬಸವಣ್ಣನವರ ಮಾತಿನಲ್ಲಿ ಹೇಳಬೇಕಾದರೆ 'ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟ.' ಇಲ್ಲಿ ಜೀವವು ಪುಟಗೊಂಡು ಕಾಳಿಕೆಯನ್ನು ಕಳೆದುಕೊಂಡು, ಶಿವಚಾರಿತ್ರ್ಯದ ಮುದ್ರೆಯನ್ನೊತ್ತಿಸಿಕೊಂಡು ಇಲ್ಲಿಯೂ ಸಲ್ಲುವ ಅಲ್ಲಿಯೂ ಸಲ್ಲುವ ಯೋಗ್ಯತೆಯನ್ನು ಪಡೆಯಬೇಕು. ಅದಕಾರಣ ಕೈಲಾಸದಲ್ಲಿ ಮಾಡಿದ ತಪ್ಪನ್ನು ತಿದ್ದಿಕೊಳ್ಳಲೆಂದು ಬಸವಾದಿಗಳು ಈ ಮರ್ತ್ಯಕ್ಕೆ ಬಂದರೆಂದು ಭಾವಿಸುವುದರಿಂದ, ಈ ಮರ್ತ್ಯದ ಬೆಲೆ ಹೆಚ್ಚುತ್ತದೆ. ಈ ಜೀವ ತನ್ನ ಸಂಸ್ಕಾರಕ್ಕೆ, ಆಧ್ಯಾತ್ಮಿಕ ಸಾಧನೆಗೆ ಈ ಮರ್ತ್ಯವನ್ನು ಒಪ್ಪಿಕೊಳ್ಳಬೇಕಾಗುತ್ತದೆ ಎನ್ನುವುದು ಬಹು ಮಹತ್ವದ ಸಂಗತಿ"[2]

ಈ ಮರ್ತ್ಯದ ಮಹತ್ವವನ್ನು ಹರಿಹರನ ರಗಳೆಯ ಎಲ್ಲಾ ಕಥಾನಾಯಕರೂ ಒಪ್ಪಿಕೊಳ್ಳುತ್ತಾರೆ. ಹಾಗೆ ನೋಡಿದರೆ ಹರಿಹರನ ರಗಳೆಗಳ ಮುಖ್ಯ ಪಾತ್ರಗಳೆಲ್ಲಾ ಸಂಸಾರಿಗಳೇ, ಗೃಹಸ್ಥರೇ. ಅವರು ಯಾರೂ ಶಿವಭಕ್ತಿಯ ಹೆಸರಿನಲ್ಲಿ ಹೆಣ್ಣನ್ನಾಗಲೀ, ಹೊನ್ನನ್ನಾಗಲಿ ಕಡೆಗಣಿಸಿ ನಡೆದವರಲ್ಲ ; ಹಾಗೆಂದು ಅವುಗಳಲ್ಲಿ ನಿಮಗ್ನರಾದವರೂ ಅಲ್ಲ. ಈ ಲೋಕದ ರೂಪ, ರಂಗು, ಅದು ತರುವ ಸುಖ ಇದೆಲ್ಲವನ್ನೂ ತಿರಸ್ಕರಣೀಯವೆಂದು–ಜೈನ ಕಾವ್ಯಗಳಲ್ಲಿ ವೈರಾಗ್ಯಪರವಾದ ಪಾತ್ರಗಳಂತೆ—ಪ್ರತಿಭಟಿಸುವ, ನಿಕೃಷ್ಟವಾಗಿ ನೋಡುವ ರಭಸ ಇಲ್ಲಿಲ್ಲ. ಇವರಾರೂ ಪರದ ಹೆಸರಿನಲ್ಲಿ ಇಹವನ್ನು ನಿರಾಕರಿಸುವುದಿಲ್ಲ. ಹರಿಹರನು ತನ್ನ ಪುಷ್ಪರಗಳೆಯಲ್ಲಿ ಎಷ್ಟೊಂದು ವಿರಾಮವಾಗಿ, ಹೂದೋಟದ ಸೊಗಸನ್ನು, ಒಂದೊಂದು ಹೂವಿನ ಸೊಗಸು ಸ್ವಭಾವಗಳನ್ನು ಬಿಡುಗಣ್ಣಿನಿಂದ ಬಣ್ಣಿಸುತ್ತಾನೆ ! 'ಗಿರಿಜಾ ಕಲ್ಯಾಣ'ದಲ್ಲಿ ತಪಸ್ಸಿಗೆ ಕುಳಿತ ಪಾರ್ವತಿಯ ಸುತ್ತ ಬಂದು ಹೋಗುವ ಋತುಗಳ ರಿಂಗಣಗುಣಿತವನ್ನೂ, ಅವುಗಳ ವೈವಿಧ್ಯವನ್ನೂ ಉತ್ಸಾಹದಿಂದ ವರ್ಣಿಸುತ್ತಾನೆ. ಆದರೆ ಹೂವುಗಳ ಸೊಗಸೆಲ್ಲವೂ ಭೋಗಿಗಳ ಸುಖಕಲ್ಲ, ಅದೇನಿದ್ದರೂ ಮಹಾದೇವನ ಸಿರಿಮುಡಿಯ ಸಿಂಗಾರಕ್ಕಾಗಿ ; ಋತುಗಳ ರಿಂಗಣಗುಣಿತವೆಲ್ಲವೂ ಪಾರ್ವತಿಯನ್ನು

2. ಕವಿ ಹೃದಯ : ಪ್ರ : ಕನ್ನಡ ಸಾಹಿತ್ಯ ಪರಿಷತ್ತು : ಹರಿಹರನ ಬಸವರಾಜ ದೇವರ ರಗಳೆ : ಜಿ. ಎಸ್. ಶಿವರುದ್ರಪ್ಪ. ಪು. 8-9.

ಶಿವಸಾಕ್ಷಾತ್ಕಾರಕ್ಕೆ ಅನುಗೊಳಿಸುವ ಪೂರ್ವಸಿದ್ಧತೆಗಾಗಿ–ಎನ್ನುವುದೇ ಅವನ ನಿಲುವು. ನಂಬಿಯಣ್ಣನ ರಗಳೆ ಮತ್ತು ಮಲುಹಣನ ರಗಳೆಗಳಲ್ಲಿ ಕವಿ ರಮಣೀಯವಾದ ಭೋಗದ ವರ್ಣನೆಯನ್ನು ನಿಸ್ಸಂಕೋಚವಾಗಿ ತಂದಿದ್ದಾನೆ. ಆದರೆ ಈ ಎಲ್ಲ ಭೋಗವೂ ಕ್ರಮಕ್ರಮೇಣವಾಗಿ 'ಯೋಗ'ವಾಗಿ ಪರಿವರ್ತಿತವಾಗುವ ಕ್ರಿಯೆಯನ್ನು ಕವಿ ಅತ್ಯಂತ ಸಹಜವಾಗಿ ಚಿತ್ರಿಸುತ್ತಾನೆ. ತಿರುನೀಲಕಂಠರ ರಗಳೆಯಲ್ಲಿ ತೊಂಬತ್ತು ವರ್ಷಗಳವರೆಗೆ ಸತಿಪತಿಯರು ಪರಸ್ಪರ 'ಮುಟ್ಟಿದರೆ ಶಿವನಾಣೆ' ಎಂಬುದನ್ನು ಅಖಂಡವಾಗಿ ಕಾಯ್ದುಕೊಂಡು ಬಂದು, ಮುಪ್ಪಿನ ಮುದುಕರಾದಾಗ, ಶಿವ ಅವರನ್ನು ಪರೀಕ್ಷೆಗೆ ಒಡ್ಡಿ ಅವರ ಮಹತ್ವವನ್ನು ಲೋಕಕ್ಕೆ ಪ್ರಕಟ ಮಾಡುತ್ತಾನೆ. ಆದರೆ ಈ ಸಂದರ್ಭದಲ್ಲಿ, ಉಳಿದ ಅನೇಕ ಶರಣರ ವಿಚಾರದಲ್ಲಿ ನಡೆದುಕೊಂಡಂತೆ ಅವರನ್ನೂ ವಿಮಾನವೇರಿಸಿ ಕೈಲಾಸಕ್ಕೆ ಕರೆದುಕೊಂಡು ಹೋಗಬಹುದಾಗಿತ್ತು; ಆದರೆ ಶಿವ ಹಾಗೆ ಮಾಡಲಿಲ್ಲ. ಯೌವನದಿಂದ ಮೊದಲುಗೊಂಡು ಅನೇಕ ವರ್ಷಗಳವರೆಗೆ ಅನುಭವಿಸಬಹುದಾಗಿದ್ದ ದಾಂಪತ್ಯ ಸುಖವನ್ನೆ ಬಿಟ್ಟುಕೊಟ್ಟು, ಒಬ್ಬರನ್ನೊಬ್ಬರು ಮುಟ್ಟದಂತೆ 'ಆಣೆ'ಗಾಗಿ ಬದುಕಿದ ಈ ದಂಪತಿಗಳ ಮೇಲಿನ ಕನಿಕರದಿಂದ, ಶಿವ ಅವರಿಗೆ ನವಯೌವನವನ್ನು ಕರುಣಿಸಿ, 'ಇನ್ನಷ್ಟು ವರ್ಷ ಈ ಭೂಮಿಯಮೇಲೆ ಸುಖವಾಗಿ ಇದ್ದು ಅನಂತರ ನಮ್ಮಲ್ಲಿಗೆ ಬನ್ನಿ' ಎನ್ನುತ್ತಾನೆ. ಇಲ್ಲಿ ಕಾಣುವ ಶಿವನ ನಿಲುವು ಗಮನಿಸಬೇಕಾದದ್ದು. ಅಲ್ಲದೆ ಈ ಮರ್ತ್ಯ ಭೋಗದ ವಿಚಾರದಲ್ಲಿ ಹರಿಹರನು ತಾಳಿದ ನಿಲವು ಇದು ಎಂಬುದನ್ನೂ ಗುರುತಿಸಿಕೊಳ್ಳಬೇಕಾಗಿದೆ. ಭಕ್ತಿ ವೈರಾಗ್ಯಗಳ ಹೆಸರಿನಲ್ಲಿ, ಈ ಲೋಕದ ಭೋಗವೈಭವಗಳನ್ನು ಉದ್ದೇಶಪೂರ್ವಕವಾಗಿ ಕೀಳ್ಗಳೆದು ನೋಡುವ ಜೀವನವಿರೋಧಿಯಾದ ನಿಲುವನ್ನು ಹರಿಹರನು ಎತ್ತಿಹಿಡಿಯಲಿಲ್ಲ. ಆದರ ಬದಲು ಇಹದ ಬದುಕಿನಲ್ಲೆ ಜೀವ ಪಕ್ವವಾಗುತ್ತ ಲೋಕದ ಭೋಗವನ್ನು ಯೋಗವನ್ನಾಗಿ ಪರಿವರ್ತಿಸುವುದು ಸಾಧ್ಯ ಎಂಬ ದರ್ಶನವನ್ನು ಪ್ರಕಟಿಸಿದ್ದಾನೆ.

ಹರಿಹರನ ಸಾಧನೆಯ ವಿಶೇಷತೆಯೆಂದರೆ ಭಕ್ತಿಯ ಒರೆಗಲ್ಲಿನಲ್ಲಿ ವರ್ಣ–ವರ್ಗಗಳ ಮೂಲವನ್ನು ತಿಕ್ಕಿ ಪರೀಕ್ಷಿಸಿ, ಎಲ್ಲಕ್ಕಿಂತ ಮಿಗಿಲಾದದ್ದು 'ಭಕ್ತನಾಗಿರುವಿಕೆ' ಎನ್ನುವುದನ್ನು ಎತ್ತಿ ಹಿಡಿದದ್ದು. ನಿಜವಾದ ಭಕ್ತನಾಗುವುದು, ಅಥವಾ ಶಿವನಿಗೆ ಪ್ರಿಯವಾಗುವುದು ಎಲ್ಲಕ್ಕಿಂತ ಶ್ರೇಷ್ಠವಾದ ಪದವಿ ಎಂಬುದನ್ನು ಹರಿಹರನು ತನ್ನ ಎಲ್ಲ ರಗಳೆಗಳ ಮೂಲಕ ಪ್ರತಿಪಾದಿಸಿದ್ದಾನೆ. ಈ ಪದವಿಯ ಎದುರಿನಲ್ಲಿ ವರ್ಣ ವರ್ಗಗಳ ತರ-ತಮಗಳು ಯಾವ ಲೆಕ್ಕಕ್ಕೂ ಬರುವುದಿಲ್ಲ. ಆದುದರಿಂದಲೆ ಹರಿಹರನು ವರ್ಣ ಹಾಗೂ ವರ್ಗಗಳನ್ನು ಸಾಮಾಜಿಕ ನೆಲೆಯಲ್ಲಿ ನೋಡುವುದೇ ಇಲ್ಲ. ಆದರೆ ವಿವಿಧ ವರ್ಣ ಹಾಗೂ ವರ್ಗದಿಂದಲೇ ತನ್ನ ಕಥಾನಾಯಕರನ್ನು ಆರಿಸಿಕೊಂಡ ಹರಿಹರ, ಒಂದು ಅದ್ಭುತವಾದ ಸಾಮಾಜಿಕ ಕ್ರಾಂತಿಯನ್ನು ತನ್ನ ಕಾವ್ಯವಸ್ತುವಿನ ಮೂಲಕ ತಂದನೇನೋ ಎಂದು ಭಾಸವಾಗುತ್ತದೆ. ಅವನ

ರಗಳೆಗಳ ಕಥಾನಾಯಕರೆಲ್ಲಾ ಸಾಮಾನ್ಯ ಸಾಮಾಜಿಕ ಸ್ತರದಿಂದ ಬಂದ ಜನಸಾಮಾನ್ಯರೇ. ತಿರುನೀಲಕಂಠ ಕುಶವ; ಚನ್ನಯ್ಯ ಮಾದಾರ ಕುಲದವನು; ಇಳೆಯಾಂಡ ಗುಡಿಮಾರ ಒಕ್ಕಲಿಗ; ಕಣ್ಣಪ್ಪ ಬೇಡರವನು; ಗುಂಡಯ್ಯ ಕುಂಬಾರ; ಅತಿಭಕ್ತ ಬೆಸ್ತರವನು; ತಿರುಕುರುಂಪೆ ತೊಂಡ ಅಗಸರವನು; ಅರಿವಾಳ್ತಾಂಡ ಕೂಲಿಯುವನು. ಕನ್ನಡ ಸಾಹಿತ್ಯದಲ್ಲೇ, ಒಬ್ಬ ಬೇಡರವನು, ಕೂಲಿಯುವನು, ಬೆಸ್ತರವನು, ಮಾದಾರ, ಕುಂಬಾರ, ಅಗಸ ಇತ್ಯಾದಿ 'ಜನ'ಗಳು ಕಾವ್ಯದ ಕಥಾನಾಯಕರಾದದ್ದು ಮೊಟ್ಟ ಮೊದಲಿಗೆ ದಂಗು ಬಡಿಸುವ ಸಂಗತಿ ಯಾಗಿದೆ. ರಾಜಾಧಿರಾಜರೂ, ವೀರಾಧಿವೀರರೂ, ಪೌರಾಣಿಕ ವ್ಯಕ್ತಿಗಳೂ, ದೇವಾನು ದೇವತೆಗಳೂ—ಕಾವ್ಯದ ನಾಯಕರಾಗಲು ಮಾತ್ರ ಅರ್ಹರೆಂಬ ಪರಂಪರಾಗತವಾದ ಸಾಹಿತ್ಯಕ ಧೋರಣೆಯನ್ನು ತಲೆ ಕೆಳಗುಮಾಡಿ, ಹರಿಹರನು ಮೊಟ್ಟಮೊದಲಿಗೆ ಜನಸಾಮಾನ್ಯರನ್ನು, ಅದರಲ್ಲೂ 'ದಲಿತವರ್ಗ'ದವರನ್ನು ತನ್ನ ಕಥಾನಾಯಕರನ್ನಾಗಿ ಮಾಡಿಕೊಂಡದ್ದು ನಿಜಕ್ಕೂ ಕ್ರಾಂತಿಕಾರಕವಾದ ಬದಲಾವಣೆ ಎಂಬುದೇನೋ ನಿಜವೆ. ಆದರೆ ಈ ವ್ಯಕ್ತಿಗಳೆಲ್ಲಾ ಸಾಮಾಜಿಕವಾಗಿ ಸಾಮಾನ್ಯ ರಾದರೂ, ತಮ್ಮ ನಡವಳಿಕೆಯಿಂದ ಅಸಾಮಾನ್ಯರೇ; ಅಲ್ಲದೆ ಇವರು ಯಾವ ಸಾಮಾಜಿಕ ಸ್ತರಗಳಿಂದ ಬಂದಿದ್ದಾರೋ, ಆ 'ವರ್ಗ'ವನ್ನು ಕೇವಲ ಹೆಸರಿಗೆ ಮಾತ್ರ ಪ್ರತಿನಿಧಿಸುತ್ತಾರೆಯೆ ಹೊರತು, ಆ ವರ್ಗದ ಉಸಿರನ್ನು ಖಂಡಿತವಾಗಿಯೂ ಪ್ರತಿನಿಧಿಸುವುದಿಲ್ಲ. ಅವರು ತಮ್ಮ 'ವರ್ಗ' ಸಾಮಾಜಿಕವಾಗಿ **ಶೋಷಣೆ**ಗೆ ಒಳಗಾದದ್ದನ್ನಾಗಲಿ, ಶೋಷಕರ ಮೇಲಿನ ಆಗ್ರಹವನ್ನಾಗಲೀ, ತತ್ಪರಿಣಾಮವಾದ ನೋವು-ಸಂಕಟ-ಬಡತನ ಇತ್ಯಾದಿಗಳನ್ನಾಗಲಿ ಹೇಳಿಕೊಳ್ಳುವುದೇ ಇಲ್ಲ. ಒಟ್ಟಿನಲ್ಲಿ ಅವರು ತಮ್ಮ ವರ್ಗದ ವೇದನೆಗಳ, ಸಂವೇದನೆಗಳ ಪ್ರತಿನಿಧಿಗಳಾಗುವುದೇ ಇಲ್ಲ. ಅವರ ವೇದನೆ-ಸಂವೇದನೆಗಳೇನಿದ್ದರೂ, ಶಿವಭಕ್ತಿಗೆ ಸೀಮಿತವಾದದ್ದು. ಹೀಗಾಗಿ ಹರಿಹರನ ರಗಳೆಗಳ ನಾಯಕರು, ಸಾಮಾನ್ಯ ಸಾಮಾಜಿಕ ಸ್ತರಗಳಿಂದ ಬಂದವರೆಂಬ ಒಂದು ಕಾರಣದಿಂದ, ಅವನಲ್ಲಿ ಉಳಿದ ಕವಿಗಳಲ್ಲಿ ಕಾಣದ ಸಾಮಾಜಿಕ ಪ್ರಜ್ಞೆಯನ್ನು ಕಾಣಬಹುದೆಂದು ಹೊರಟವರಿಗೆ ನಿರಾಸೆ ಕಟ್ಟಿಟ್ಟ ಬುತ್ತಿ. ಸಾಹಿತ್ಯದಲ್ಲಿ ಸಾಮಾಜಿಕ ಪ್ರಜ್ಞೆಯನ್ನು ಗುರುತಿಸಲು ಹೊರಡುವ ಸಂಶೋಧಕರಿಗೆ ಹರಿಹರನಷ್ಟು ನಿರಾಶೆಯನ್ನು ಇನ್ನು ಯಾರೂ ಉಂಟುಮಾಡಲಾರರು!

ಹರಿಹರನಿಗೆ ಸಾಮಾಜಿಕ ಪ್ರಜ್ಞೆ. ಸಾಮಾಜಿಕ ಸಮಸ್ಯೆಗಳು ಮುಖ್ಯವೇ ಅಲ್ಲ. ಅವನ ಭಕ್ತಿ ಸಾಧನೆ ಹೇಗೆ ಒಂದು ವಯ್ಯಕ್ತಿಕ ಸಂಗತಿಯೋ, ಸಮಸ್ಯೆಯೋ, ಹಾಗೆಯೆ ಅವನ ರಗಳೆಗಳ ನಾಯಕರ ಸಮಸ್ಯೆ ಕೂಡಾ ವ್ಯಕ್ತಿನಿಷ್ಠವಾದದ್ದು. ಸಾಮಾನ್ಯ ಸಾಮಾಜಿಕ ನೆಲೆಗಳಿಂದ ಬಂದ ಅವನ ರಗಳೆಯ ನಾಯಕರ ಗಮನವೆಲ್ಲಾ, ತಾವು ಬದುಕುವ ಸಮಾಜದ ಕಡೆಗೆ ಇಲ್ಲವೇ ಇಲ್ಲ; ಅದೇನಿದ್ದರೂ

ಶಿವನಿಗೂ ತಮಗೂ ಇರುವ ವಯ್ಯಕ್ತಿಕ ಗುಪ್ತ ಭಕ್ತಿಯು ಕಡೆಗೆ ಮಾತ್ರ.* ತಾವಾಯಿತು, ತಮ್ಮ ದೇವರಾಯಿತು. ಇದಲ್ಲದೆ ಬೇರೆ ಚಿಂತೆಯೆ ಅವರಿಗಿಲ್ಲ. ಶಿವನು ಒಲಿವನೋ ಒಲಿಯನೋ ಎಂಬ ಚಿಂತೆಯೇ ಅವರಿಗೆ 'ಹಾಸಲುಂಟು ಹೊದಿಯಲುಂಟು'. ಹೀಗಿರುವಾಗ ಅವರ ಗಮನ ಹಾಗೂ ಗುರಿಯೆಲ್ಲ ಶಿವಪರವಾಗಿ ಅಥವಾ ಶಿವಶರಣರಿಗಾಗಿ ಮತ್ತು ಅವರ ಸೇವೆಗಾಗಿ. ಯಾವ ಹೊತ್ತಿನಲ್ಲಿ ಯಾವ ಭಕ್ತ ಬಂದು ಕೇಳಿದರೂ ಅವರು ಇಲ್ಲ ಎನ್ನುವವರಲ್ಲ. ಇಳೆಯಾಂಡ ಗುಡಿಮಾರನಂಥ ಬಡ ಒಕ್ಕಲಿಗನೂ ಮನೆಗೆ ಬಂದ ಶರಣರ ಸಂತೃಪ್ತಿಗಾಗಿ, ಅವನ ಛಳಿಯನ್ನು ನೀಗಲೆಂದು ಮನೆಯ ಮಾಳಿಗೆಯ ಜಂತೆಯನ್ನೆ ಕಡಿದು ಬೆಂಕಿಮಾಡುತ್ತಾನೆ; ಭೋರ್ಗರೆವ ಮಳೆಯಲ್ಲಿ ತನ್ನ ಗದ್ದೆಗೆ ಹೋಗಿ ಮೊಳೆವ ನೆಲ್ಲನ್ನು ಕಿತ್ತು ತಂದು ಅಂಬಲಿ ಮಾಡಿ ಬಡಿಸುತ್ತಾನೆ. ಮಾನಕಂಜರನೆಂಬ ಭಕ್ತನೊಬ್ಬ, ಶಿವಶರಣನ ಬಯಕೆಯಂತೆ, ಹಸೆಮಣೆಯ ಮೇಲಣ ಮಗಳ ತಲೆಗೂದಲನ್ನೆ ಕತ್ತರಿಸಿ ದಾನಮಾಡುತ್ತಾನೆ. ಅತಿಭಕ್ತನೆಂಬ ಬೆಸ್ತ, ತನ್ನ ಮೀಸಲು ನಿಯಮದ ಪ್ರಕಾರ ಮೊದಲು ಬಲೆಗೆ ಬಿದ್ದ ಮೀನನ್ನು ಮತ್ತೆ ನೀರಿಗೆ ಬಿಡುವುದು ಅವನ ವ್ರತ; ಆದರೆ ಒಂದು ದಿನ ಮೊದಲು ಸಿಕ್ಕಿದ ಮೀನೇ ಮತ್ತೆ ಮತ್ತೆ ಸಿಕ್ಕಿದಾಗ, ಅದನ್ನು ಶಿವನಿಗೆ ಮೀಸಲು ಬಿಟ್ಟು ತಾನು ಉಪವಾಸ ನಿಲ್ಲುತ್ತಾನೆ. ಬೇಡರ ಕಣ್ಣಪ್ಪ ಶಿವಲಿಂಗದ ಕಣ್ಣಿಗೆ ಬದಲು ತನ್ನ ಕಣ್ಣನ್ನೆ ಕಿತ್ತು ಜೋಡಿಸುತ್ತಾನೆ. ಒಲಘಾಂಡ ಮೂರ್ತಿಗಳು ತಮ್ಮ ಮೊಳ ಕೈಯನ್ನೆ ಗಂಧವಾಗಿ ತೇದು ಶಿವನಿಗೆ ಅರ್ಪಿಸುತ್ತಾರೆ. ಕಾರಿಕಾಲಮ್ಮ ತಲೆ ಕೆಳಗಾಗಿ ನಡೆದು ಕೈಲಾಸದ ಕಡೆ ಹೋಗುತ್ತಾಳೆ. ಭಕ್ತರ ಈ ನಡವಳಿಕೆಗಳನ್ನು ನೋಡಿ-ಅವರ ವ್ಯವಹಾರ ಜ್ಞಾನ ಶೂನ್ಯತೆಗೆ—ಒಂದೆಡೆ ನಗುಬಂದರೂ, ಮತ್ತೊಂದೆಡೆ ಆ ನಡವಳಿಕೆಯ ಹಿಂದಿರುವ ನಿಷ್ಠೆಯನ್ನು ನೋಡಿ ಆಶ್ಚರ್ಯವಾಗುತ್ತದೆ. ಈ ಭಕ್ತರು, ಶಿವನಿಗಾಗಿ, ಶಿವ ಶರಣರಿಗಾಗಿ ಏನು ಬೇಕಾದರೂ ಮಾಡಲು ಸಿದ್ಧರು. ಅವರಿಗೆ ಕಷ್ಟ, ದಾರಿದ್ರ್ಯ ಇತ್ಯಾದಿಗಳು ಸಾಮಾಜಿಕ ಸಮಸ್ಯೆಗಳಾಗಿ ಕಾಣುವುದೇ ಇಲ್ಲ. ಅವೆಲ್ಲಾ ಆಧ್ಯಾತ್ಮಿಕ ಸಾಧನೆಗೆ ಒದಗಿ ಬಂದ 'ವರ'ಗಳೆಂದೇ ಅವರ ನಂಬಿಕೆ. ದಾರಿದ್ರ್ಯ, ದುಃಖ ಇತ್ಯಾದಿಗಳನ್ನು ಭಕ್ತಿಯ ಹೆಸರಿನಲ್ಲಿ ವೈಭವಿಸುವುದೇ ಈ ದೇಶದ ತತ್ವದೃಷ್ಟಿ ಯಾಗಿರುವುದರಿಂದ, ಹರಿಹರನ ಭಕ್ತರೂ ಈ ಪರಂಪರೆಗೆ ಹೊರತಲ್ಲ. ಆದುದರಿಂದ ಈ ಭಕ್ತಾದಿಗಳು, ತಾವು ಬದುಕುವ ಸಮಾಜವನ್ನು ಪ್ರತಿನಿಧಿಸುವ ರೆಂದಾಗಲಿ, ತಮ್ಮ ಸಾಮಾಜಿಕ ಸಮಸ್ಯೆಗಳಿಗೆ ಪ್ರತಿಕ್ರಿಯೆಗಳನ್ನು ದಾಖಲು ಮಾಡುತ್ತಾರೆಂದಾಗಲಿ, ನಿರೀಕ್ಷಿಸುವುದೇ ಸರಿಯಲ್ಲ.

---

*ಹೀಗಾದುದಕ್ಕೆ ಕಾರಣ, ಬಹುಶಃ ಹರಿಹರನು. ಹುಟ್ಟಿನಿಂದ ಉಚ್ಚವರ್ಣದವನಾಗಿದ್ದು, ತನ್ನ ಕಾವ್ಯದ ಕಥಾನಾಯಕರು ಪ್ರತಿನಿಧಿಸುವ ವರ್ಗದೊಂದಿಗೆ ತೀವ್ರವಾದ ಸಾಮಾಜಿಕ ಸಂಬಂಧವನ್ನು ಹೊಂದದೆ ಇದ್ದುದೆ–ಎಂದು ಹೇಳಬಹುದು.

ತಮ್ಮ ಸಾಮಾಜಿಕ ಪರಿಸರದ ಬಗೆಗೆ ‹ದಿವ್ಯ ನಿರ್ಲಕ್ಷ್ಯತೆ'ಯನ್ನು ತಾಳಿದ ಈ 'ಅಸಾಮಾನ್ಯ ಸಾಮಾನ್ಯ' ವ್ಯಕ್ತಿಗಳನ್ನು ಕುರಿತು ಬರೆದ ಹರಿಹರ, ವರ್ಣ ಹಾಗೂ ವರ್ಗಗಳ ಬಗೆಗೆ ತನ್ನ ಪ್ರತಿಕ್ರಿಯೆಯನ್ನು ಪರೋಕ್ಷವಾಗಿ ಮತ್ತು ಪ್ರಾಸಂಗಿಕವಾಗಿ ದಾಖಲು ಮಾಡಿದ್ದಾನೆಂಬುದು ಗಮನಿಸಬೇಕಾದ ಸಂಗತಿಯಾಗಿದೆ. ಒಂದೆಡೆ ಐಶ್ವರ್ಯ–ಅಧಿಕಾರಗಳಿಂದ ಪ್ರತಿಷ್ಠಿತರಾದ ಉಚ್ಚ ‹ವರ್ಗ'ದ ವ್ಯಕ್ತಿಯನ್ನು, ಅದಾವುದೂ ಇಲ್ಲದ 'ಹೀನಕುಲ'ದ ವ್ಯಕ್ತಿಯೊಂದಿಗೆ; ಉಚ್ಚವರ್ಣದಲ್ಲಿ ಹುಟ್ಟಿ, ವೇದಶಾಸ್ತ್ರ ಪಾರಂಗತರಾದ ವ್ಯಕ್ತಿಗಳನ್ನು, ಸಾಮಾಜಿಕವಾಗಿ ಕೆಳವರ್ಣಕ್ಕೆ ಸೇರಿದ, 'ಅವಿದ್ಯಾವಂತ' ವ್ಯಕ್ತಿಗಳೊಂದಿಗೆ ಹೋಲಿಸಿ, ಅವರ ವರ್ಣ ಹಾಗೂ ವರ್ಗ ಪ್ರತಿಷ್ಠೆಗಳನ್ನು, ಶಿವಭಕ್ತಿಯ ಒರೆಗಲ್ಲಿನಲ್ಲಿ ಹರಿಹರ ಉಜ್ಜಿ ನೋಡಿದ್ದಾನೆ. ಇದಕ್ಕೆ ನಿದರ್ಶನವಾಗಿವೆ, ಮಾದಾರ ಚನ್ನಯ್ಯನ ರಗಳೆ, ಬೇಡರ ಕಣ್ಣಪ್ಪ ಮತ್ತು ಸಾಮವೇದಿಗಳ ರಗಳೆಗಳು.

ಬೇಡರ ಕಣ್ಣಪ್ಪನ ರಗಳೆಯಲ್ಲಿ ಹರಿಹರ ಮುಖ್ಯವಾಗಿ ‹ವರ್ಣ'ದ ಬಗ್ಗೆ ಯೋಚನೆ ಮಾಡಿದರೆ, ಮಾದಾರ ಚನ್ನಯ್ಯನ ರಗಳೆಯಲ್ಲಿ ‹ವರ್ಗ'ದ ಬಗ್ಗೆ ಯೋಚನೆ ಮಾಡಿದ್ದಾನೆ. ಮತ್ತು ಶ್ವಪಚಯ್ಯಗಳ ರಗಳೆಯಲ್ಲಿ ವೇದ ಶಾಸ್ತ್ರಾಗಮ ಪರಿಣತನಾದ ವ್ಯಕ್ತಿಯ ವಿದ್ವತ್ತಿನ ಬಗೆಗೆ ಯೋಚನೆ ಮಾಡಿದ್ದಾನೆ. ವ್ಯಕ್ತಿಗಳಿಗೆ ಪ್ರತಿಷ್ಠೆಯನ್ನು ತಂದುಕೊಟ್ಟು, ತಾವು ಎಲ್ಲರಿಗಿಂತ ಶ್ರೇಷ್ಠರೆಂಬ ಭಾವನೆಯನ್ನು ಸಾಮಾಜಿಕವಾಗಿ ಉಂಟುಮಾಡುವ ಅಂಶಗಳು ಇವು: ತಾನು ಹುಟ್ಟಿನಿಂದ ಶ್ರೇಷ್ಠನೆಂಬ ವರ್ಣ ಪ್ರತಿಷ್ಠೆ; ಐಶ್ವರ್ಯ ಅಧಿಕಾರಗಳಿಂದ ಶ್ರೇಷ್ಠನೆಂಬ ವರ್ಗ ಪ್ರತಿಷ್ಠೆ; ವೇದ ವೇದಾಂಗ ಪಾರಂಗತತ್ವದಿಂದ ಇತರರಿಗಿಂತ ಶ್ರೇಷ್ಠನೆಂಬ ವಿದ್ವತ್ ಪ್ರತಿಷ್ಠೆ. ಈ ಮೂರೂ ಪ್ರತಿಷ್ಠೆಗಳು, ಶಿವಭಕ್ತಿಯ ಒರೆಗಲ್ಲಿನಲ್ಲಿ ಎಷ್ಟು ಜಳ್ಳು. ಎಂಬುದನ್ನು ಹರಿಹರನು ಈಗ ಹೇಳಿದ ಮೂರು ರಗಳೆಗಳ ಮೂಲಕ ತೋರಿಸಿಕೊಟ್ಟಿದ್ದಾನೆ. ಬೇಡರ ಕಣ್ಣಪ್ಪನ ರಗಳೆಯಲ್ಲಿ, ವ್ಯಾಧವೃತ್ತಿಯಲ್ಲಿರುವ ಬೇಡರವನ ಅಶಾಸ್ತ್ರೀಯ ಆರಾಧನೆಗೂ, ಉಚ್ಚವರ್ಣದ ಶಿವ ಬ್ರಾಹ್ಮಣನ ಸಾಂಪ್ರದಾಯಿಕ ಪೂಜೆಗೂ ಇರುವ ವ್ಯತ್ಯಾಸವನ್ನು ಗುರುತಿಸಿ, ಶಿವನಿಗೆ ಕಣ್ಣಪ್ಪನ ಆರಾಧನೆಯೇ ಯಾಕೆ ಇಷ್ಟವಾಯಿತೆಂಬುದನ್ನು ಹರಿಹರ ಎತ್ತಿ ಹಿಡಿಯುತ್ತಾನೆ. ಉತ್ತಮ ವರ್ಣದಲ್ಲಿ ಹುಟ್ಟಿದವನು ಮಾಡಿದರೆ, ಶಾಸ್ತ್ರಾನುಸಾರಿಯಾಗಿಮಾಡಿದ ಮಾತ್ರಕ್ಕೆ ಆ ಪೂಜೆ ಶ್ರೇಷ್ಠವಲ್ಲ; ಹಾಗೆಯೆ ಜಾತಿಯಲ್ಲಿ ಕೀಳಾದರೂ, ಆರಾಧನೆಯ ವಿಧಾನ ಅಶಾಸ್ತ್ರೀಯವೂ, ರೂಕ್ಷವೂ ಆದಮಾತ್ರಕ್ಕೆ, ಆ ಪೂಜೆ ಕನಿಷ್ಠವಲ್ಲ. ಯಾಕೆಂದರೆ ಆಯಾ ಆರಾಧನೆಗಳನ್ನು ಅಳೆಯ ಬೇಕಾದದ್ದು, ಪೂಜಿಸುವ ವ್ಯಕ್ತಿಗಳ ಅಂತರಂಗದ ನಿಷ್ಠೆಯಿಂದ ಮಾತ್ರ. ಇದು ಶಿವನು ಆ ಇಬ್ಬರು ಆರಾಧಕರನ್ನು ಪರೀಕ್ಷಿಸುವ ಸಂದರ್ಭದಿಂದ ಸ್ಪಷ್ಟವಾಗುತ್ತದೆ. ಶಿವಲಿಂಗದ ಕಣ್ಣಲ್ಲಿ ರಕ್ತಸುರಿಯಲು ಶುರುವಾದಾಗ, ಶಾಸ್ತ್ರೀಯವಾಗಿ ಪೂಜಿಸುತ್ತಿದ್ದ ಶಿವ ಬ್ರಾಹ್ಮಣ, ತನ್ನ ಶಾಸ್ತ್ರಜ್ಞಾನ

ದಿಂದ 'ಇದು ಅರಸಿಂಗೆ ಕೇಡಿತ್ತೋ ದೇಶಕ್ಕೆ ಪೊಲ್ಲದೋ' ಎಂದು, ಅದೊಂದು ಉತ್ಪಾತವೆಂದು ತರ್ಕಿಸುತ್ತಾನೆ. ಆದರೆ ಅದೇ ದೃಶ್ಯವನ್ನು ಕಣ್ಣಪ್ಪನು ಕಂಡಾಗ 'ಎಲೆ ತಂದೆ, ಎನ್ನವನೆ ಏನಾದುದೈ' ಎಂದು ತಳಮಳಿಸಿ, ತನ್ನ ಕಣ್ಣನ್ನೆ ಕಿತ್ತು ಶಿವಲಿಂಗದ ಕಣ್ಣಿಗೆ ಬದಲಾಗಿ ಜೋಡಿಸುತ್ತಾನೆ. ಈ ನಡವಳಿಕೆ ತಾನೊಲಿದ ದೈವದ ವಿಚಾರದಲ್ಲಿ ಮುಗ್ಧವಾದ ಹಾಗೂ ಗಾಢವಾದ ಅನುರಕ್ತಿ ಇದ್ದವರಿಗೆ ಮಾತ್ರ ಸಾಧ್ಯ. ನಿಜವಾದ ಭಕ್ತಿ, ನಿಜವಾದ ಪ್ರೀತಿಯಂತೆ ತನ್ನನ್ನು ತಾನು ಸಂಪೂರ್ಣವಾಗಿ ಸಮರ್ಪಿಸಿಕೊಳ್ಳಲು ಸಿದ್ಧವಾಗುತ್ತದೆ. ಈ ಕಾರಣದಿಂದಲೆ ಕಣ್ಣಪ್ಪನ ಪೂಜೆ, ಶಿವ ಬ್ರಾಹ್ಮಣನ ಪೂಜೆಗಿಂತ ಶಿವನಿಗೆ ಹೆಚ್ಚು ಪ್ರಿಯವಾಗುತ್ತದೆ. ಈ ಒಂದು ಸಂಗತಿಯನ್ನೆ ವೈಭವಿಸಿ, ಶಿವನು ಪಾರ್ವತಿಗೆ ಒಂದು ಪುಟ್ಟ ಉಪನ್ಯಾಸವನ್ನೇ ಕೊಡುತ್ತಾನೆ.

ಮಾದಾರ ಚನ್ನಯ್ಯನ ರಗಳೆ ಮುಖ್ಯವಾಗಿ 'ವರ್ಗ ಪ್ರತಿಷ್ಠೆ'ಯನ್ನು ಕುರಿತದ್ದು. ಹುಲ್ಲು ಮಾರುವ ಮಾದಾರ ಚನ್ನಯ್ಯ, ರಾಜಾಧಿರಾಜನಾದ ಕರಿಕಾಲ ಚೋಳ—ಇವರಲ್ಲಿ ಒಬ್ಬ ಸಾಮಾಜಿಕವಾಗಿ ಕೆಳವರ್ಗದವನು, ಇನ್ನೊಬ್ಬ ಮೇಲುವರ್ಗದವನು. ಆದರೆ ಆಧ್ಯಾತ್ಮಿಕವಾಗಿ 'ಕೆಳವರ್ಗ'ದ ಮಾದಾರ ಚೆನ್ನಯ್ಯನೇ ಶ್ರೇಷ್ಠನೆಂದು ಎತ್ತಿ ಹಿಡಿಯಲ್ಪಟ್ಟಿದ್ದಾನೆ. ಕರಿಕಾಲ ಚೋಳನೂ ಶಿವಭಕ್ತ, ಮಾದಾರ ಚೆನ್ನನೂ ಶಿವಭಕ್ತ. ಚೆನ್ನಯ್ಯನದು ಅತ್ಯಂತ ಗುಪ್ತವಾದ ಭಕ್ತಿ, ಕರಿಕಾಲ ಚೋಳನದು ಎಲ್ಲರಿಗೂ ಕಾಣಿಸುವ ವೈಭವದ ಆರಾಧನೆ. ಒಂದು ದಿನ ಚನ್ನಯ್ಯ ತನ್ನ ಗುಡಿಸಲಿನಲ್ಲಿ ಅಂಬಲಿಯನ್ನು ಶಿವಾರ್ಪಿತ ಮಾಡಿ ಉಣ್ಣುವ ಹೊತ್ತಿನಲ್ಲಿ, ಇತ್ತ ಕರಿಕಾಲ ಚೋಳನ ಅರಮನೆಯ ಪೂಜಾಮಂದಿರದಲ್ಲಿ ಅವನು ಸಮರ್ಪಿಸಿದ ದಿವ್ಯಾನ್ನವನ್ನು ಶಿವನು ಸ್ವೀಕರಿಸದೆ, ಮಾದಾರ ಚನ್ನಯ್ಯನು ಶಿವಾರ್ಪಿತ ಮಾಡಿದ ಅಂಬಲಿಯ ಸವಿಯುಂಡ ಪರಿಯನ್ನು ಶಿವನು ರಾಜನಾದ ಕರಿಕಾಲ ಚೋಳನಿಗೆ ಬಣ್ಣಿಸಿ ಹೇಳುತ್ತಾನೆ, ಆಗ ರಾಜನಾದ ಕರಿಕಾಲ ಚೋಳನು ಆಶ್ಚರ್ಯಪಟ್ಟು 'ಪರಮನಿಗೆ ಉಣಲಿತ್ತ ಶರಣನಂ ನೋಡುವೆಂ' ಎನ್ನುತ್ತ, ಚನ್ನಯ್ಯನ ಗುಡಿಸಲಿಗೇ ಬರುತ್ತಾನೆ. ಚನ್ನನು ಬೆದರಿ 'ಎನ್ನ ಕುಲಮಂ ನೋಡದೆ ಇಂತು ಬರ್ಪರೆ' ಎಂದು ಬಿನ್ನವಿಸಿಕೊಂಡಾಗ, ರಾಜನಾದ ಚೋಳನು 'ಶರ್ವನೊಡಸುಂಡ ನಿಮ್ಮ ಜಾತಿಗಾಂ ಸರಿಯೆ ? ಸರ್ವಜ್ಞ ನಿಮ್ಮ ಕೆರವಿಂಗೆನ್ನ ಶಿರ ಸರಿಯೆ' ಎನ್ನುತ್ತಾನೆ. ಇದೊಂದು ಅಪೂರ್ವ ಸಂದರ್ಭ; ಅರಮನೆಯೇ ಬಡಗುಡಿಸಲ ಬಳಿಗೆ ಬಂದ ಸಂದರ್ಭ. ರಾಜಾಧಿ ರಾಜನ ವರ್ಣ ಹಾಗೂ ವರ್ಗ ಪ್ರತಿಷ್ಠೆಗಳು, ಶಿವನೊಲಿದ ಮಾದಾರ ಚನ್ನಯ್ಯನ ಶಿವಭಕ್ತಿಯ ಪೆಂಪಿಗೆ ಶರಣಾದ ಈ ಪ್ರಸಂಗ, ಸಮಸ್ತ ಭೋಗ ವೈಭವಗಳ ಬಗೆಗೆ ಹರಿಹರನು ತಾಳಿದ ನಿಲುವನ್ನು ಸೂಚಿಸುತ್ತದೆ. ನಿಜವಾಗಿಯೂ ಯಾವುದು ದೊಡ್ಡದು ಎಂಬ ಪ್ರಶ್ನೆಗೆ ಹರಿಹರನು ಕೊಟ್ಟ ಉತ್ತರ ಇದು. ಐಶ್ವರ್ಯ, ವೈಭವ, ಸದ್ವಂಶ—ಇತ್ಯಾದಿಗಳೆಲ್ಲವೂ, ಆಧ್ಯಾತ್ಮಿಕ ನೆಲೆಯಲ್ಲಿ

ಎಷ್ಟೊಂದು ಅರ್ಥಹೀನವೂ, ಅಲ್ಪವೂ ಆಗುತ್ತವೆಯೆಂಬುದನ್ನು ಇಲ್ಲಿ ಹರಿಹರನು ಎತ್ತಿ ಹಿಡಿದಿದ್ದಾನೆ. ಶಿವ ಕೃಪೆಗೆ ಪಾತ್ರನಾದವನು, ಅವನನ್ನು ಒಮ್ಮನಸ್ಸಿನಿಂದ ಆರಾಧಿಸುವವನು ಇವನೇ ನಿಜವಾದ ಶ್ರೀಮಂತ, ಜಾತಿವಂತ ಎನ್ನುವುದರ ಮೂಲಕ 'ವರ್ಗ' ಹಾಗೂ 'ವರ್ಣ'ಗಳ ಬಗೆಗೆ ಹರಿಹರನು ಹೊಸತೊಂದು ವ್ಯಾಖ್ಯಾನವನ್ನೆ ಇಲ್ಲಿ ಮಾಡಿದ್ದಾನೆ.

ಇದೇ 'ದರ್ಶನ'ವನ್ನು ಪ್ರತಿಮಿಸುವ ಇನ್ನೊಂದು ರಗಳೆ ಸಾಮವೇದಿಗಳನ್ನು ಕುರಿತದ್ದು. ಸಾಮವೇದಿ ಒಬ್ಬ ಮಹಾಬ್ರಾಹ್ಮಣ, ಸಕಲವೇದ ಶಾಸ್ತ್ರ ಪಾರಂಗತನಾದ ಮಹಾವಿದ್ವಾಂಸ. ಇವನು ಮೂರು ಸಾವಿರದ ಐದುನೂರು ಶಿಷ್ಯರಿಗೆ ದಿನವೂ ಅರಣ್ಯದಲ್ಲಿ ಪಾಠಮಾಡಿ, ತನ್ನ ಸಿದ್ಧಿಯ ಬಲದಿಂದ ಗಗನ ಮಾರ್ಗದಲ್ಲಿ ತನ್ನ ಊರಾದ ಛತ್ತೀಸಪುರಕ್ಕೆ ಹಿಂದಿರುಗುತ್ತಾನೆ. ಒಂದು ದಿನ ಶ್ವಪಚಯ್ಯನೆಂಬ ಹೆಸರಿನ ಗುಪ್ತ ಶಿವಭಕ್ತನು – ಆತನ ಹೆಸರೇ ಸೂಚಿಸುವಂತೆ ಆತ ಶ್ವಪಚ ಕುಲದವನು —ಭವಿಗಳಾರೂ ಸುಳಿಯಬಾರದೆಂದು ಅರಣ್ಯದಲ್ಲಿ ಒಂದೆಡೆ ಶಿವನ ಆರಾಧನೆಯನ್ನು ಮಾಡಿ, ಮಧ್ಯಾಹ್ನ ಪರ್ಯಂತ ಶಿವ ಪೂಜಾ ಸುಖದೊಳೋಲಾಡಿ, ಮೂರು ಕಲ್ಲುಗಳನ್ನು ಹೂಡಿ ಅಡುಗೆಗೆ ಇರಿಸುತ್ತಾನೆ. ಆಗ ಆ ಮಾರ್ಗವಾಗಿ ಸಾಮವೇದಿಗಳು ಬರುತ್ತಿರಲಾಗಿ, ಅವರ ನೆರಳು ತನ್ನ ಅಡುಗೆಯ ಮೇಲೆ ಬಿದ್ದೀತೆಂದು, ಶ್ವಪಚಯ್ಯನು ಪಾಕವನ್ನು ಮುಚ್ಚಲು ಬೇರೇನೂ ದಾರಿತೋರದೆ, ತನ್ನ ಕಾಲಿನ ಕೆರದಿಂದಲೇ ಆ ಪಾಕವನ್ನು ಮುಚ್ಚುತ್ತಾನೆ. ಅದನ್ನು ಕಂಡು ಬೆರಗಾದ ಸಾಮವೇದಿಗಳು, ಊರಿಗೆ ಮರಳಿದಾಗ, ಶಿವನು ಅವರ ಕನಸಿನಲ್ಲಿ ಕಾಣಿಸಿಕೊಂಡು "ಕುಲದ ಗರ್ವದೊಳಿಂತು ಕೆಟ್ಟು ಹಾಳಾದಪ್ಪೆ" ನಾನೂ ಶ್ವಪಚಯ್ಯ ಇಬ್ಬರೂ ಅಭಿನ್ನರು ; ನೀನೇ ಹೋಗಿ ಅವರಲ್ಲಿ ದೀಕ್ಷೆಪಡೆದು ಭಕ್ತಿಯನ್ನು ಸಾಧಿಸು ಎಂದು ಆದೇಶ ನೀಡುತ್ತಾನೆ. ಈ ಸಂದರ್ಭದಲ್ಲಿ ಹರಿಹರನು, ಹುಟ್ಟಿನಿಂದ ಬ್ರಾಹ್ಮಣನಾದ ಮತ್ತು ವೇದ ವೇದಾಂತ ಪಾರಂಗತನಾದ ವಿದ್ವಾಂಸನ ವಿದ್ವತ್ತಿನ ನಿಷ್ಪ್ರಯೋಜಕತೆಯನ್ನು ಚಿತ್ರಿಸಿದ್ದಾನೆ. ಸಾಮವೇದಿಯಂಥ, ಮಹಾ ವಿದ್ವಾಂಸನ ನೆರಳು, ತಾನು ಮಾಡಿದ ಪಾಕದ ಮೇಲೆ ಬಿದ್ದೀತೆಂದು, ತನ್ನ ಕಾಲಿನ ಕೆರದಿಂದಲೇ ಪಾಕವನ್ನು ಮುಚ್ಚಿದ ಶ್ವಪಚಯ್ಯಗಳ ನಡವಳಿಕೆಯ ಮೂಲಕ, ಹರಿಹರ ವೇದ-ಶಾಸ್ತ್ರ ಪಾರಂಗತರ ಬಗೆಗಿನ ತನ್ನ ತಿರಸ್ಕಾರವನ್ನು ಅತ್ಯಂತ ರಭಸದಿಂದ ಪ್ರಕಟಿಸಿದ್ದಾನೆ. ಶಿವನ ಒಲುಮೆ ಕೇವಲ ಸಾಂಪ್ರದಾಯಿಕ ಪೂಜಾ ವಿಧಾನಗಳಿಂದಾಗಲಿ, ಐಶ್ವರ್ಯ ಆಡಂಬರಗಳಿಂದಾಗಲಿ, ಅಥವಾ ವೇದ ವೇದಾಂತಾದಿ ಶಾಸ್ತ್ರಜ್ಞಾನದಿಂದಾಗಲಿ ಸಾಧ್ಯವಿಲ್ಲ ; ಶಿವನನ್ನು ಒಲಿಸಬೇಕಾದರೆ, ಮುಗ್ಧವಾದ, ನಿರಾಡಂಬರವಾದ, ನಿಷ್ಠಾಭಕ್ತಿಯೊಂದೇ ಸಾಕು ಎಂಬ ನಿಲುವನ್ನು ಈ ರಗಳೆಗಳ ಮೂಲಕ ಪ್ರತಿಪಾದಿಸಿದ್ದಾನೆ.

ಹರಿಹರನ ದೃಷ್ಟಿಗೆ ಭಕ್ತಿ ಎಂಬುದು ಪ್ರದರ್ಶನದ ವಸ್ತುವಲ್ಲ ; ಅದೊಂದು 'ಅಂತರಂಗದ ರತ್ನ'. ಅದು ಸತಿಪತಿಯರ ಪ್ರೇಮದಂತೆ ಒಳಗಿನದು ಮತ್ತು ಏಕಾಂತ ವಾದದ್ದು. ಅವನ ರಗಳೆಗಳ ಬಹುಪಾಲು ಭಕ್ತರ ನಿಲುವು ಇದು. ಅವರೆಲ್ಲಾ ಬಹುಮಟ್ಟಿಗೆ ಗುಪ್ತ ಭಕ್ತರು. ಅವರೆಂತಹ ಉತ್ಕಟ ಭಕ್ತರೆಂಬುದು ಅವರಿಗೆ ಗೊತ್ತು ಮತ್ತು ಅವರ ಇಷ್ಟ ದೈವಕ್ಕೆ ಗೊತ್ತು. ಈ ಒಳಮನೆಯ ಕೊಡು ಕೊಳೆಯ ವ್ಯವಹಾರಕ್ಕೆ ಅವರ ಭಕ್ತಿ ಸೀಮಿತವಾಗುತ್ತದೆ. ನಿಸರ್ಗದಲ್ಲಿ ಹೂವೊಂದು ಸದ್ದಿಲ್ಲದೆ ಹಣ್ಣಾಗುವ ಕ್ರಿಯೆಯಂಥದು ಇವರ ಭಕ್ತಿಯ ರೀತಿ. ತಿರುನೀಲಕಂಠರು ಮತ್ತು ಅವರ ಹೆಂಡತಿ ತಾವು ಮಾಡಿಕೊಂಡ ಆಣೆಯನ್ನು ತೊಂಬತ್ತು ವರ್ಷದ ಮುಪ್ಪಿನ ಮುದುಕರಾಗುವ ತನಕ ಯಾರಿಗೂ ತಿಳಿಯದಂತೆ ಕಾಪಾಡಿಕೊಂಡವರು. ಮಾದಾರ ಚೆನ್ನಯ್ಯ, ಇಳೆಯಾಂಡಗುಡಿಮಾರ, ಶ್ವಪಚಯ್ಯ, ಕಾರಿಕಾಲಮ್ಮ— ಇಂಥವರೆಲ್ಲಾ ಅತ್ಯಂತ ಗುಪ್ತವಾಗಿ ಅನೇಕವರ್ಷಗಳ ಕಾಲ ಸಾಧಿಸಿದವರು. ಇವರ ಈ ಗುಪ್ತ ಭಕ್ತಿಯನ್ನು ಶಿವನು ಲೋಕಕ್ಕೆ ಪ್ರಕಟಿಸುವ ಸಂದರ್ಭವೆ ಹರಿಹರನ ರಗಳೆಗಳಲ್ಲಿ ಕಥೆಯ ಶಿಖರವೂ, ಅತ್ಯಂತ ಕ್ರಿಯಾತ್ಮಕ ಹಾಗೂ ನಾಟ್ಯಮಯವೂ ಆಗುತ್ತದೆ. ತಮ್ಮ ಗುಪ್ತ ಭಕ್ತಿ ಲೋಕಕ್ಕೆ ಯಾವ ಕಾರಣಕ್ಕೂ ಪ್ರಕಟವಾಗದಂತೆ, ಅತ್ಯಂತ ಎಚ್ಚರಿಕೆ ವಹಿಸಿದ ಈ ಶಿವಭಕ್ತರಿಗೆ, ತಮ್ಮ ಭಕ್ತಿ, ತಮಗರಿವಿಲ್ಲದೆಯೆ, ಅನಿವಾರ್ಯವಾಗಿ ಪ್ರಕಟವಾಗಬೇಕಾಗಿ ಬಂದಾಗ, ಅವರು ಅತ್ಯಂತ ದುಃಖಿಗಳಾಗು ತ್ತಾರೆ, ಶಿವನಿಗೂ ತಮಗೂ ಇರುವ ಅಂತರಂಗದ ಈ ಸಂಬಂಧ ಬಯಲಿಗೆ ಬರುವಂತಾಯಿತಲ್ಲಾ ಎಂದು ಕೊರಗುತ್ತಾರೆ. ಆದರೆ ಈ ಕೊರಗಿನ, ದುಃಖದ ತುದಿಯಲ್ಲೆ ಕಾದಿರುತ್ತದೆ ಶಿವ ಸಾಕ್ಷಾತ್ಕಾರದ ನಿಬ್ಬೆರಗಿನ ಬೆಳಗು.

ಹರಿಹರನ ಭಕ್ತರ ಪಾಲಿಗೆ ದೇವರೆಂಬುದು ಒಂದು ಅಮೂರ್ತವಾದ ವಸ್ತು ವಲ್ಲ. ಅದೊಂದು ಜೀವಂತವಾದ ನಂಬಿಕೆ ಹಾಗೂ ಜೀವಂತವಾದ ಕಾಣ್ಕೆ. ದೇವರೆಂಬುದು ಒಂದು ವ್ಯಕ್ತಿತ್ವವೆಂಬಂತೆ, ಉದ್ದಕ್ಕೂ ತನ್ನೊಡನೆ, ತನ್ನ ಯೋಗ ಕ್ಷೇಮ, ಹಾನಿ-ವೃದ್ಧಿಗಳನ್ನು ನಿಯಂತ್ರಿಸುವ ಶಕ್ತಿಯೆಂಬಂತೆ, ಅದನ್ನು ಬಹು ಬಗೆಯಾಗಿ ಗುರುತಿಸುವ, ಅರ್ಚಿಸುವ, ಹಾಡುವ, ಹೊಗಳುವ, ನೋಡುವ, ಕೂಡುವ ಸಂಭ್ರಮಗಳಿಂದ ಈ ಭಕ್ತರ ನಡವಳಿಕೆಗಳು ತರಂಗಿತವಾಗಿವೆ.

ಹರಿಹರನ ಭಕ್ತರಿಗೆ, ಭಕ್ತಿನಿಷ್ಠೆಗಳು ಗುಪ್ತವಾಗಿ ಏಕಾಂತವಾಗಿದ್ದರೂ, ಅವು ಕ್ರಮಕ್ರಮವಾಗಿ ಅವರ ವ್ಯಕ್ತಿತ್ವದ ವ್ಯವಹಾರಗಳಲ್ಲೂ ಸಹಜವಾಗಿ, ತಾನೇ ತಾನಾಗಿ ಅನುಭೂತವಾಗುವ ರೀತಿಯನ್ನು ಹರಿಹರ ನಿರೂಪಿಸುವ ಕ್ರಮ ವಿಶೇಷ ವಾದದ್ದು. ಅವರ ಅಂತರಂಗದ ಪ್ರವೃತ್ತಿ ಬಹಿರಂಗದ ವೃತ್ತಿಯಲ್ಲಿ ತಾದಾತ್ಮ್ಯ ವನ್ನು ಹೊಂದುವರೀತಿ ಗಮನಿಸತಕ್ಕದ್ದಾಗಿದೆ. ಇಳೆಯಾಂಡ ಗುಡಿಮಾರ ವೃತ್ತಿ ಯಲ್ಲಿ ಒಕ್ಕಲಿಗ ; ಆದರೆ ಅವನ ಅಂತರಂಗದ ಪ್ರವೃತ್ತಿಗೂ, ಅವನ ಬಹಿರಂಗದ

ಒಕ್ಕಲುತನಕ್ಕೂ ಅಭೇದವೇರ್ಪಡುವ ರೀತಿ ವಿಶೇಷವಾದದ್ದು. ಅವನು ಬಹಿರಂಗದಲ್ಲಿ ಹೊಲ ಉಳುವ ಒಂದೊಂದು ಕ್ರಿಯೆಯೂ, ಆತನ ಆಧ್ಯಾತ್ಮಿಕ ವ್ಯವಸಾಯಕ್ಕೆ ಸಂಕೇತವಾಗುತ್ತದೆ.[3] ಕುಂಬರ ಗುಂಡಯ್ಯನು ಮಡಕೆಯನ್ನು ಮಾಡುವ ಬಹಿರಂಗದ ವೃತ್ತಿಯಲ್ಲಿನ ಕ್ರಿಯೆ, ಆತ ತನ್ನ ಅಂತರಂಗವನ್ನು 'ಘಟ'ವನ್ನಾಗಿ ಮಾಡುವ ಕ್ರಿಯೆಗೆ ಸಂಕೇತವಾಗುತ್ತದೆ. ಆನಯನಾರನೆಂಬ ಗೋವಳಿಗ ಹೊರಗೆ ಗೋವುಗಳನ್ನು ಕಾಯುವ ವೃತ್ತಿಯೇ, ಅವನು ತನ್ನ ಒಳಗಿನ ಸ್ವಭಾವಗಳನ್ನು ಹದಗೊಳಿಸುವ ಪ್ರವೃತ್ತಿಗೆ ಸಂಕೇತವಾಗುತ್ತದೆ. ತಿರುಕುರುಂಪೆ ತೊಂಡನೆಂಬ ಅಗಸರವನು, ಊರಜನದ ಬಟ್ಟೆಗಳನ್ನು ಒಗೆದು ಮಡಿಮಾಡುವ ಕ್ರಿಯೆಯೇ, ಅವನು ತನ್ನ ಅಂತರಂಗದ ಮಾಲಿನ್ಯವನ್ನು ತೊಳೆದು ಮಡಿಮಾಡುವ ಕ್ರಿಯೆಗೆ ಸಂಕೇತವಾಗುತ್ತದೆ.[4] ಹೀಗೆ ನಿಜವಾದ ಭಕ್ತಿಯೆಂಬುದು ಮೂಲತಃ ಅಂತರಂಗದ್ದಾದರೂ ಅದು ಬಹಿರಂಗದ ನಡವಳಿಕೆಯನ್ನು ವ್ಯಾಪಿಸಬೇಕು. ವೃತ್ತಿ ಹಾಗೂ ಪ್ರವೃತ್ತಿಗಳ ಸಾಮರಸ್ಯವೇ ಭಕ್ತಿಯ ಅತ್ಯುತ್ತಮ ಸ್ಥಿತಿ ಎಂಬುದು ಹರಿಹರನ ನಿಲುವೆಂದು ಹೇಳಬಹುದು.

---

3 ಸಮಚಿತ್ತವೆಂಬ ಭೂಮಿಯನೆ ಹಸನಾಗಿರಿಸಿ
ಅಮರ್ದ ಶಂಕರನ ನೆನಹೆಂಬ ನೇಗಿಲನಿರಿಸಿ
ಅರಿಷಟ್ಕಮಂ ತಂದು ಹೂಡುವೆತ್ತಂಮಾಡಿ
ಹರಿವಮನಮಂ ಕಟ್ಟಿ ಹಿಡಿವ ಹಗ್ಗಂಮಾಡಿ
ಗರ್ವಿಸುವಹಂಕಾರಮುಮನಚ್ಚುವಂ ಮಾಡಿ
ಸರ್ವೇಶ ನಿಷ್ಠೆಯ ತಳಿವ ಬೀಜಂ ಮಾಡಿ
ಸುರುಚಿರ ಶಿವಜ್ಞಾನ ಸಸಿಗಳಂಕುರಿಸುತಿರೆ
ಹರನಪರಮಾನಂದ ರಸದ ಮಳೆ ಕರೆವುತಿರೆ
ಬಿತ್ತಿ ಬೆಳೆವಂ ಶಿವನ ಸದ್ಭಕ್ತಿ ಸಸಿಗಳಂ
ಇಂತೊಳಗೆ ಭವನ ಭಕ್ತ್ಯಾರಂಭಮಂ ಮಾಳ್ಪ
ಅಂತೆಲ್ಲರರಿಯೆ ಹೊರಗಾರಂಭಮಂ ಮಾಳ್ಪ
ಹರಿಹರನ ರಗಳೆಗಳು : ಭಾಗ 1. ಸಂ: ಫ. ಗು ಹಳಕಟ್ಟಿ, ಪು. 76. ಸಂ. 13-23

4 ಪಾಪವೆಂಬ ಮಲಿನಮನದ ಸೀರೆಯಂ ತೆರಳ್ಚಿ ಕಟ್ಟಿ
ಕೋಪವೆಂಬ ಕತ್ತೆನಿಲಲು ಬೆನ್ನಮೇಲೆ ಮಾಣದೊಟ್ಟಿ
ನಡೆದು ಭವನ ಭಕ್ತಿರಸದ ಹೊಳೆಯ ತಡಿಯ ಬಳಿಗೆ ಬಂದು
ಮೃಡನೆ ಶರಣೆನುತ್ತ ದೇಹಮೆಂಬ ಕಲ್ಲಬಳಿಗೆ ಬಂದು
ತಾಪತ್ರಯಗಳೆಂಬ ಕಿಚ್ಚಿನಿಂದ ಕುದಿಸೆ ಕುದಿವುತಿರಲು
ತಾಪಪಾರೆ ವಸ್ತ್ರಕುಲಮನಲ್ಲಿ ಒಡಿದು ತೊಳೆವುತಿರಲು
ಒಗೆದನೊಗೆದ ನಮಮ ಹರನ ಪರಮಭಕ್ತಿರಸದೊಳೊಗೆದ
ಒಗೆದ ನೊಗೆದ ನಾಹ ದೇಹಭಾವವಳಿದು ಸುಖದೊಳೊಗೆದ
ಒಗೆದ ಧನಿಯ ನಾಲಿಸಿದವರ ಪಾಪ ಒಡಿಹೋಗಲೊಗೆದ

(14ನೇ ಪುಟಕ್ಕೆ)

ಹರಿಹರನು ಭಕ್ತಿಯ ಪರಿಕಲ್ಪನೆಯನ್ನು ಇದಕ್ಕೂ ಮಿಗಿಲಾದ ಇನ್ನೊಂದು ಮಜಲಿಗೆ ಒಯ್ಯುತ್ತಾನೆ. ಭಕ್ತನ ಪಾಲಿಗೆ ಸರ್ವವೂ ಶಿವಮಯವಾಗುವಂಥ ಸ್ಥಿತಿ ಅದು. ಇದು ತಿರುನೀಲಕಂಠರಿಗೆ ಬಂದ ಮುಪ್ಪಿನ ವರ್ಣನೆಯಲ್ಲಿ ಒಂದು ರೀತಿಯಲ್ಲಿ ಚಿತ್ರಿತವಾಗಿದ್ದರೆ, 'ಮುರಘರ ಮಹಾತ್ಮೆ' ಯಲ್ಲಿ ಅದು ತನ್ನ ಶಿಖರವನ್ನು ಮುಟ್ಟಿದೆ. ಮುರುಘರು ಪಂಚಾಕ್ಷರೀ ಮಂತ್ರವನ್ನು ಜಪಿಸುತ್ತಾ ಎಂಥ ನಿಲುವನ್ನು ತಲುಪಿದರೆಂದರೆ—

ಲೋಗರೇನೆಂದೊಡಂ ನಮಃ ಶಿವಾಯವಾಗೆ ತನಗೆ
ಆಗಳೇನಂದೊಡಂ ನಮಃ ಶಿವಾಯ ಮಾಗೆ ತನಗೆ
ಉಲಿವ ಹಕ್ಕಿಯುಲಿವು ಪಂಚವರ್ಣದಂತೆ ತಾಗೆ ಕಿವಿಗೆ
ಕೆಲೆವ ವೃಷಭ ನಾದಮುಂ ನಮಃಶಿವಾಯಮಾಗೆ ತನಗೆ
ಕಣ್ಣೊಳಂ ನಮಃಶಿವಾಯವೆಂಬ ಲಿಖಿತವಿರ್ದತೆರದೆ
ಕಣ್ಣ ಮೊದಲ ರೂಪು ಪಂಚವರ್ಣವಾಗಿ ತೋರಲುರದೆ[5]

ಜನ ಏನು ಮಾತನಾಡಿದರೂ ಅದು ಅವರಿಗೆ ಪಂಚಾಕ್ಷರೀ ಮಂತ್ರದಂತೆ ಕೇಳತೊಡಗಿತು ; ಹಕ್ಕಿಯ ದನಿಯಲ್ಲಿ, ಗೂಳಿಯ ಗುಟುರಿನಲ್ಲಿ, ಹೀಗೆ ಕಿವಿಗೆ ಕೇಳಿದ್ದು, ಕಣ್ಣಿಗೆ ಕಂಡದ್ದು — ನಮಃಶಿವಾಯವೆಂಬ ಪಂಚಾಕ್ಷರೀ ಮಂತ್ರವಾಗಿಯೇ ಅನುಭೂತವಾಗುವ ಒಂದು ಸ್ಥಿತಿ ಇದು. ಇಂಥ, ಲೌಕಿಕವೇ ಅಲೌಕಿಕವಾಗಿ ಅನುಭವಕ್ಕೆ ಬಂದ ಸ್ಥಿತಿಯನ್ನು ಬದುಕಿದ ಮುರಘರನ್ನು ಶಿವನು — ಹರಿಹರನ ಇತರ ರಗಳೆಗಳಿಗಿಂತ ಬೇರೆಯಾಗಿ — ಏನೂ ಪರೀಕ್ಷೆ ಮಾಡದೆ ನೇರವಾಗಿ ಕೈಲಾಸಕ್ಕೆ ಕರೆದುಕೊಂಡು ಹೋದನೆಂದು ಹರಿಹರನು ಚಿತ್ರಿಸಿದ್ದಾನೆ.

ಹರಿಹರನ ರಗಳೆಗಳು ಮುಖ್ಯವಾಗಿ ಭಕ್ತಜೀವನದ ಅಂತರಂಗದ ಕೈಪಿಡಿಗಳು. ಅವನ ದರ್ಶನಕ್ಕೆ ನಿದರ್ಶನವಾಗಿ ಒಡ್ಡಿದ ಕಥಾಪ್ರತಿಮೆಗಳು. ವಚನಕಾರರ ಜೀವನ ಹಾಗೂ ಮೌಲ್ಯಗಳಿಗೆ ಬರೆದ ಭಾಷ್ಯಗಳು.

(ಪುಟ 13 ರಿಂದ)

4 ಒಗೆಯೆ ಸಿಡಿದ ಹನಿಗಳೆಯ್ದಿದವರೆ ಮುಕ್ತರಾಗಲೊಗೆದ
ಏಕನಿಷ್ಠೆಯಿಂದ ತಿರುಹಿ ಮುರುಹಿ ಹಿಳಿದುಹಿಂಡಿ ಮತ್ತೆ
ಏಕನಭವನೆಂಬ ದಿಟದ ಬಿಸಿಲೊಳೊಣಗಿಸುತ್ತ ಮತ್ತೆ
ಪುರಹರ ಪ್ರಸಾದದಿಂದ ರಂಜಿಸಲ್ಕೆ ಗಂಜಿ ಇಟ್ಟು
ಶರಣ ಸಂಗದಿಂದೆ ಘಟ್ಟಿಸುತ್ತ ಹೊಳಹನೊಪ್ಪವಿಟ್ಟು
ಪರಮನಂಘ್ರಿಗಳ್ಗೆ ಇಚ್ಛೆಯಂತೆ ಮಡಿಸಿ ಗಳಿಗೆಮಾಡಿ
ತಿರುಕುರುಂಪೆ ತೊಂಡರೆಸೆವ ಮನದಮಡಿಯನೊಂದುಗೂಡಿ
ಸಕಲಭಕ್ತ ಜನಕೆ ಮನದ ಮಡಿಯನೀವುತಿರ್ಪನಲ್ಲಿ

ಹರಿಹರನ ರಗಳೆಗಳು : ಭಾಗ 4. ಸಂ.: ಫ. ಗು. ಹಳಕಟ್ಟಿ, ಪು. 41-42 ಪಂ. 22-39

5 ಹರಿಹರನ ರಗಳೆಗಳು: ಭಾಗ-4. ಸಂ.: ಫ. ಗು. ಹಳಕಟ್ಟಿ, ಪು. 64. ಪಂ. 2-7

ಜಪಾನಿನ ಲೋಕನಾಟ್ಯ 'ನೋ'

ಬಿ. ವೈ. ಲಲಿತಾಂಬ

ವಿಶ್ವದ ಹಲವಾರು ರಾಷ್ಟ್ರಗಳಲ್ಲಿ ಪ್ರಾಚೀನ ನಾಗರಿಕತೆಯ ಕುರುಹಾಗಿ ಲೋಕ ಸಾಹಿತ್ಯ ಉಳಿದುಕೊಂಡು ಬಂದಿದೆ. ಕೆಲವು ಕಡೆಗಳಲ್ಲಿ ಅದೇ ಲೋಕ ಸಾಹಿತ್ಯ ಕಾಲಾಂತರದಲ್ಲಿ ಸಾಹಿತ್ಯವಾಗಿಯೂ ಪರಿಣಮಿಸಿದೆ. ಕರ್ನಾಟಕದಲ್ಲಿ 'ಯಕ್ಷಗಾನ' ಜನತೆಯ ಸಂಸ್ಕೃತಿಯ, ವಿಚಾರಧಾರೆಯ, ಜೀವನದ ಪ್ರತೀಕವಾಗಿದ್ದು ಇಂದು ಶ್ರೇಷ್ಠ ಸಾಹಿತ್ಯವಾಗಿ ಪರಿಣಮಿಸಿರುವಂತೆ ಜಪಾನಿ ಸಾಹಿತ್ಯದಲ್ಲಿ 'ನೋ' ಸಹ ಅಂತಹುದೇ ಸ್ಥಾನ ಪಡೆದಿದೆ. ಹಿಂದಣ ಶತಮಾನಗಳಲ್ಲಿ ಲೋಕ ಸಾಹಿತ್ಯವಾಗಿದ್ದು ಈ ಶತಮಾನದ ಆರಂಭದಲ್ಲಿ ಆಧುನಿಕ ಸಭ್ಯ ಜೀವನದ ನಡುವೆ ನಶಿಸಿ ಹೋಗುವುದೇನೋ ಎಂಬ ಸಂದೇಹಕ್ಕೆ ಒಳಗಾಗಿದ್ದ 'ನೋ' ಇಂದು ವಿಶ್ವದ ಶ್ರೇಷ್ಠ ಸಾಹಿತ್ಯ ಪ್ರಕಾರಗಳಲ್ಲಿ ಒಂದಾಗಿ ಗಣ್ಯಮಾನ್ಯ ಸ್ಥಾನ ಪಡೆದುಕೊಂಡಿದೆ.

'ನೋ' ಒಂದು ವಿಶಿಷ್ಟ ನೃತ್ಯ ನಾಟ್ಯ. ಜಪಾನಿನ ಜನಜೀವನದ, ಚಿಂತನೆಯ ಪ್ರತಿಚ್ಛಾಯೆ 'ನೋ' ಆಗಿದೆ. 'ಇಕಬೆನಾ' ಹೂಗಳ ಜೋಡಣೆಯಲ್ಲಿ ಹಾಗೂ ಹೈಕೂ ಕವನದಲ್ಲಿ ಅವರ ಜೀವನದ ದಾರ್ಶನಿಕ ತತ್ವ, ಸ್ವರ್ಗ, ಮರ್ತ್ಯ, ನರಕಗಳ ಕಲ್ಪನೆ ಪ್ರಕಟವಾಗುವಂತೆ 'ನೋ'ನ ಸಂಗೀತ ನೃತ್ಯಗಳಲ್ಲಿ ಇವೇ ತತ್ವಗಳು ಆದಿಯಿಂದ ಅಂತ್ಯದವರೆವಿಗೆ ಹಾಸುಹೊಕ್ಕಾಗಿ ಕಾಣಬರುತ್ತವೆ. ಜಪಾನಿನ ಪ್ರಮುಖ ಧರ್ಮಗಳಾದ ಜೀವನದ ಬಗೆಗಿನ ಪ್ರೇಮವೇ ಆಧಾರವಾದ ಶಿಂಟೋ ಹಾಗೂ ಬೌದ್ಧ ಧರ್ಮದ ಜಪಾನೀ ರೂಪವಾದ ಜನಗಳ ಸಮ್ಮಿಶ್ರ ತಳಿ ನಾಟಕೀಯ ರಚನೆಯಲ್ಲಿ 'ನೋ' ಆಗಿ ಪ್ರಕಟಗೊಂಡಿದೆ. ಒಬ್ಬ ಲೇಖಕ ಹೇಳುವಂತೆ, 'ನೋ'ನ ಪ್ರಮುಖ ಲಕ್ಷ್ಯ ವಿಚಾರಾಪಾರ ಸ್ಥಿತಿ. ಅದರಲ್ಲಿ ನಟ ಹಾಗೂ ನಟನೆ ಸೇರಿಹೋಗಿ ಭೇದ ಇಲ್ಲವಾಗುತ್ತದೆ.

'ನೋ' ನಡೆದು ಬಂದ ದಾರಿ

'ನೋ' ಆರಂಭ ಎಂದಿನಿಂದ ಆಯಿತೆಂದು ಹೇಳುವುದು ಕಷ್ಟಸಾಧ್ಯವಾದರೂ ವಾತಾವರಣ ವಸ್ತುವನ್ನು ನೋಡಿ ಊಹೆಯಿಂದ ಕಾಲವನ್ನು ನಿರ್ಧರಿಸಬಹುದು. ಆರಂಭದಲ್ಲಿ 'ನೋ' ಜಪಾನಿನ ಗುಡ್ಡಗಾಡುಗಳ ನಡುವೆ ವಿಶೇಷ ಸಮಾರೋಹ, ಹಾಗೂ ಹಬ್ಬಹರಿದಿನಗಳಲ್ಲಿ ದೇವರನ್ನು ತೃಪ್ತಿಪಡಿಸಬೇಕೆಂಬ ಭಜನೆಯಿಂದ, ಜನರ ಮನರಂಜನೆಗಾಗಿ ಸಿದ್ಧಪಡಿಸಲಾಗುತ್ತಿದ್ದ ಕುಣಿತವಿದ್ದಿರಬೇಕು. ಜಪಾನಿನ ವಿಶೇಷ

ಧರ್ಮವಾದ ಶಿಂಟೋಗೆ ಪವಿತ್ರ ಕ್ಷೇತ್ರ 'ನಾರಾ' ಆಗಿತ್ತು. ಆ ಸ್ಥಾನದಲ್ಲಿ ಇಂತಹ ವಿಶೇಷ ಸಮಾರೋಪಗಳಲ್ಲಿ ಜನ ಸೇರುತ್ತಿದ್ದಾಗ ಅಲ್ಲಿನ ಯೋಗೊ ವೃಕ್ಷದ ಕೆಳಗೆ 'ದೇವರ' ಸಂದೇಶ ನೃತ್ಯದ ಮೂಲಕ ಕೊಡಲಾಗುತ್ತಿತ್ತು. ಹಳ್ಳಿಯ ಜನರ ನಡುವೆ ಯಾರಾದರೊಬ್ಬ ವ್ಯಕ್ತಿ ಮುಂದೆ ಬಂದು ಹಬ್ಬದ ಪ್ರತಿನಿಧಿಯಾಗಿ ದೇವರ ಅದೃಶ್ಯಮೂರ್ತಿ ಸ್ವರೂಪವನ್ನು ಪ್ರತಿಬಿಂಬಿಸುತ್ತಿದ್ದ, ಹಾಗೂ ಆತ ತನ್ನ ನರ್ತನ ದಿಂದ ದೇವರನ್ನು ಪ್ರತಿನಿಧಿಸಿ ಆತನಿಂದ ದೀರ್ಘಾಯುಸ್ಸು ಪ್ರಗತಿ ಪಡೆಯ ಬಯಸುತ್ತಿದ್ದ. ಈ ನೃತ್ಯಗಳೇ 'ನೋ'ನ ಮೂಲವಾಗಿದ್ದಿರಬೇಕೆಂಬುದು ಸಮೀಕ್ಷಕರ ನಂಬಿಕೆ.

ಹೀಗೆ ಆರಂಭವಾದ ನೃತ್ಯಗಳು ಮುಂದೆ ವಿಶೇಷ ಸೌಂದರ್ಯ ತತ್ವಗಳಿಂದ ಕೂಡಿ ರಂಗಮಂಟಪದ ಆವಶ್ಯಕತೆಯನ್ನು ಮುಂದೆ ಒಡ್ಡಿರಬೇಕು. 12ನೆಯ ಶತಮಾನದವೇಳೆಗಂತೂ 'ನೋ'ನ ಅತಿ ವಿಶಿಷ್ಟವಾದ ನಾಟಕ 'ಒಕಿನಾ' ಪ್ರದರ್ಶಿತ ವಾಗುತ್ತಿದ್ದಿರಬೇಕೆನ್ನಲು ದಾಖಲೆಗಳು ಸಿಗುತ್ತವೆ. ಒಕಿನಾದಲ್ಲಿ ಬೌದ್ಧ ಹಾಗೂ ಶಿಂಟೊ ತತ್ವಗಳು ಬೇರ್ಪಡಿಸಲಾಗದಂತೆ ಮಿಳಿತಗೊಂಡಿವೆ. ಎರಡು ಧರ್ಮಗಳ ನಡುವಿನ ಅಂತರ ಜೆನ್‌ನ ನಿರಾಶಾವಾದಿ ಬೌದ್ಧಭಾವಗಳು ಹಾಗೂ ಶಿಂಟೋದ ಆಶಾವಾದಿ ದೃಷ್ಟಿ ದೂರವಾಗಿ ಎರಡರ ನಡುವಣ ಸಾಮಂಜಸ್ಯ ಇಲ್ಲಿ ಪ್ರಕಟವಾಗಿದೆ. ಈ 'ಒಕಿನಾ' ಈ ವೇಳೆಗಾಗಲೇ ಶಿಂಟೋ ಹಾಗೂ ಬೌದ್ಧ ದೇವಾಲಯುಗಳೆರಡ ರಲ್ಲಿಯೂ ಪ್ರದರ್ಶಿತವಾಗುತ್ತಿದ್ದಿರಬೇಕು. ಕಾಸುಗಾದ ಕೋಫುಕುಜಿ ದೇವಾಲಯ ದಲ್ಲಿಯೂ ಆರಂಭದ ಹಲವಾರು ಪ್ರದರ್ಶನಗಳು ನಡೆದಿದ್ದವು. ಬೌದ್ಧಧರ್ಮದ ಶುಶಿ (Shushi) ಅರ್ಚಕರು ಜನರನ್ನು ಪ್ರಭಾವಗೊಳಿಸಬೇಕೆಂದು ಹಾಡು ನೃತ್ಯಗಳ ಮೂಲಕ ಪವಾಡ ಪ್ರದರ್ಶನ ಮಾಡುತ್ತಿದ್ದ ಕಾಲ ಅದು. ಆಗ ಶುಶಿ ಅರ್ಚಕರ ಈ ನೃತ್ಯಗಳು ದೊಂಬರ ಕುಣಿತದಂತೆ ಆರಂಭವಾದವು. ಅವುಗಳ ಸರುಗಕು (Saragaku) ವೃತ್ತಿನಟರು ಕೋಫುಕುಜಿ (Kofukugi) ದೇವಾಲಯುಗಳಿಂದ ಧನ ಸಹಾಯ ಪಡೆದು ನರ್ತಿಸುತ್ತಿದ್ದರೂ ಸಹ ಅವರ ನರ್ತನ ಧರ್ಮನಿರಪೇಕ್ಷವಾಗಿರು ತ್ತಿದ್ದವು. ಕೆಲವರು ವಿದ್ವಾಂಸರು ಚೀನದ ಗಿಗಕು (Gigaku) ನೃತ್ಯಗಳನ್ನು ಈ ನೃತ್ಯಗಳ ಮೂಲವೆಂದು ಭಾವಿಸುತ್ತಾರೆ. ಇದಕ್ಕೆ ಕಾರಣವೇನೆಂದರೆ 'ನೋ'ನ ಜೀವಾಳ ಅದರ ಮುಖವಾಡಗಳು. ಗಿಗಕು ಮುಖವಾಡಗಳು 220ಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಇಂದಿಗೂ ರಚಿಸಲ್ಪಟ್ಟಿವೆ. 'ನೋ'ನಲ್ಲಿ ಪಕ್ಷಿ, ಪಿಶಾಚಿ, ವೃದ್ಧ ಇತ್ಯಾದಿ ಮುಖವಾಡಗಳ ಮಹತ್ವ ಹೆಚ್ಚು. ಗಿಗಕು ನೃತ್ಯಗಳಲ್ಲಿ ಸಿಂಹ, ಪಕ್ಷಿ, ಬಲಿಷ್ಠರು, ಅನಾಗರಿಕರು ಇತ್ಯಾದಿ ಹನ್ನೆರಡು ತರಹೆಯ ಮುಖವಾಡಗಳಿರು ತ್ತಿದ್ದವು. ಆದುದರಿಂದ ಸ್ವಾಭಾವಿಕವಾಗಿಯೇ 'ಸರುಗಕು' ನಟರ ನರ್ತನದಲ್ಲಿ ನಾಟಕೀಯ ತತ್ವಗಳು ಕೂಡಿರುತ್ತಿದ್ದವು. ಇಂದಿಗೂ ಅವುಗಳಲ್ಲಿ ಪಕ್ಷಿಯ ಮುಖವಾಡ ಹಾಕಿಕೊಂಡ ನಟ ಪಕ್ಷಿಯ ಸ್ವಭಾವಕ್ಕನುಗುಣವಾಗಿಯೇ ಹುಳುಗಳನ್ನು

ಹಿಡಿಯಲು ಹೋಗುತ್ತಿರುವಂತೆ; ಬಲಿಷ್ಠನ, ನಾಗರಿಕನ ಮುಖವಾಡದವನು ಒಬ್ಬ ಸುಂದರವಾದ ತರುಣಿಯು ಬೆನ್ನಟ್ಟಿ ಹೋಗುತ್ತಿರುವಂತೆ, ಕೊನೆಯಲ್ಲಿ ಬಲಿಷ್ಠನಿಗೆ ವಿಜಯ ಸಿಕ್ಕಿ ತರುಣಿ ಅವನ ಪತ್ನಿಯಾಗುವಂತಹ ನೃತ್ಯಗಳು ಕಾಣಸಿಗುತ್ತವೆ.


'ನೋ' ನೃತ್ಯಗಳು ಗಿಗಕು, ಡೆಂಗಾಕು ಇತ್ಯಾದಿ ಹಲವಾರು ನೃತ್ಯಗಳಿಂದ ಪ್ರಭಾವಿತವಾಗಿ ಹೊರಬಂದ ಸುಪುಷ್ಟ ಕಲೆಯೆಂದು ಹಲವರ ಭಾವನೆ. ಡೊನಾಲ್ಡ್ ಕೀನರು ಹೇಳುವಂತೆ 'ನೋ' ಮೊದಲು ಉದ್ದನೆಯ ನೃತ್ಯಗಳಾಗಿದ್ದು ಹದಿನಾಲ್ಕನೆಯ ಶತಮಾನದ ವೇಳೆಗೆ ನಾಟಕದ ರೂಪ ತಳೆದಿದ್ದವು.

ರಾಜಾಶ್ರಯದಲ್ಲಿ 'ನೋ'

ಮೊದಲು ಲೋಕ ನಾಟ್ಯವಾಗಿ ಉದಯಿಸಿದ 'ನೋ' 13ನೆಯ ಶತಮಾನದ ವೇಳೆಗೆ ರಾಜಾಶ್ರಯವನ್ನು ಪಡೆದು ಒಂದು ನಿಶ್ಚಿತವಾದ ರಂಗ ಮಂಟಪವಾಗಿ ಸಿದ್ಧವಾಯಿತು. ರಾಜ ಅಶಿಕಾಗ ಯೊಶಿಮಿತ್ಸು ಕ್ಯೋಟೋದಲ್ಲಿ ಇಮಾಕುಮಾನೋದ ಪವಿತ್ರ ಕ್ಷೇತ್ರದಲ್ಲಿ 'ನೋ' ನೋಡಿದ್ದ. ಆತನ ಕಾಲದಲ್ಲಿ ಸಾಹಿತ್ಯ ಹಾಗೂ ಕಲೆಗೆ ಪ್ರೋತ್ಸಾಹ ಸಿಕ್ಕಿತು. ಆತನ ಸಾಹಿತ್ಯ ಪ್ರಜ್ಞೆ ಅತ್ಯಂತ ಉನ್ನತ ಮಟ್ಟದ್ದಾಗಿದ್ದು, ಆತನ ಆಶ್ರಿತ ಜಿಯಾಮಿಯ ನಾಟಕಗಳಲ್ಲಿನ ಪ್ರಾಚೀನ ಭಾಷಾ ಸೌಂದರ್ಯಕ್ಕೆ ಪ್ರೇರಕವಾಯಿತು. ಇಲ್ಲಿಯವರೆವಿಗೂ ಹಳ್ಳಿಗರಿಗಾಗಿ ಪ್ರದರ್ಶಿತವಾಗುತ್ತಿದ್ದ ಲೋಕನಾಟ್ಯ ಯೊಶಿಮಿತ್ಸುವಿನಿಂದಾಗಿ ಶುದ್ಧ ನಾಟಕವಾಗಿ ಪರಿಣಮಿಸಿತು.

ಆ ಕಾಲದ ಪ್ರಮುಖ ನಾಟಕಕಾರನೆಂದರೆ ಮಿಯಾಮಿ, ಆತನ ಪುತ್ರ ಜಿಯಾಮಿ ಹಾಗೂ ದೊಆಮಿ, ಜೊಆಮಿ ಇವರುಗಳು. ಜಿಯಾಮಿ ಪ್ರಮುಖ ನಾಟಕಕಾರನಷ್ಟೇ ಅಲ್ಲದೆ, 'ನೋ' ನ ಶ್ರೇಷ್ಠ ವಿಮರ್ಶಕ ಆಗಿದ್ದ. 'ನೋ' ನಾಟಕಗಳಲ್ಲಿನ ಸೌಂದರ್ಯ ತತ್ವಕ್ಕೆ ಆತನ ಕೊಡುಗೆ ಮಹತ್ವದ್ದು.

ಜಿಯಾಮಿಯಿಂದ ಸಾಹಿತ್ಯ ರೂಪ ಪಡೆದ 'ನೋ' 20ನೆಯ ಶತಮಾನದವರೆಗಿನ ಈ ದೀರ್ಘ ಅವಧಿಯಲ್ಲಿ ರಾಜವಂಶಗಳ ಉಳಿವು ಅಳಿವಿನ 'ಏರಿಳಿತ'ಗಳೊಂದಿಗೆ ಹಲವಾರು ಹಂತಗಳನ್ನು ಕಂಡಿದೆ. ನಾಟಕಕಾರ ಜೆಜಿರು 'ನೋ'ನ ಖಾಲಿ ರಂಗಮಂಟಪ, ಮಹತ್ವಹೀನವಾದ ಆಧಾರ, ನಟರ ಚಲನ ವಲನ ಇತ್ಯಾದಿಗಳ ಮೂಲಕ ಜೆನ್ ಧರ್ಮದಲ್ಲಿನ ಪ್ರತೀಕಾತ್ಮಕತೆಯನ್ನು ಮೂರ್ತಗೊಳಿಸಿದ, ಮಿಯಾಮುಸುಮೆಂಬ ನಾಟಕಕಾರ ಅದಕ್ಕೆ ಯುದ್ಧದ ಘಟನೆಗಳನ್ನು ಜೋಡಿಸಿ ಸಂಘರ್ಷ ತತ್ವವನ್ನು ಮೇಳಯಿಸಿದ. ನೊಜಿಮಿತ್ಸು ತನ್ನ ನಾಟಕಗಳಲ್ಲಿ ಭೂತ, ಪ್ರೇತಗಳಿಗೆ ಸ್ಥಾನ ನೀಡಿದ.




ನೋ' ರಂಗಮಂಟಪ

16ನೆಯ ಶತಮಾನದ ವೇಳೆಗೆ 'ನೋ' ಅತ್ಯಂತ ಜನಪ್ರಿಯವಾಗಿ ಪರಿಣಮಿಸಿತು. ಇಲ್ಲಿಯವರೆವಿಗೂ ಪುರುಷರೇ ಸ್ತ್ರೀ ಪಾತ್ರಗಳನ್ನು ವಹಿಸುತ್ತಿದ್ದರಾದರೂ ಇನ್ನುಮುಂದೆ ಸ್ತ್ರೀಯರೇ ತಮ್ಮ ಪಾತ್ರಗಳನ್ನು ವಹಿಸತೊಡಗಿದರು. ಟೊಯೋಟೋಮಿ ಹಿದೆಯೋಶಿ ರಾಜ ನೋನ ಗಹನವಾದ ಅಧ್ಯಯನ ನಡೆಸಿ 15 ದಿನಗಳಲ್ಲಿ 15 ಪಾತ್ರಗಳ ಅಭಿನಯ ಕಲಿತಿದ್ದ ಹಾಗೂ ನಟನಾಗಿ ಪಾತ್ರ ವಹಿಸುತ್ತಿದ್ದ, ಒಟ್ಟಿನಲ್ಲಿ ಆತ ಹದಿನಾರು ನಾಟಕಗಳಲ್ಲಿ ಪಾತ್ರವಹಿಸಿದ್ದ. 17ನೆಯ ಶತಮಾನದ ಆದಿಯಲ್ಲಿ ರಾಜ ಶೋಗುನ್ 'ನೋ' ನಟರ ಬಗ್ಗೆ ನಿಶ್ಚಿತವಾದ ಕಾನೂನುಗಳನ್ನೇ ಹೊರಡಿಸಿದ್ದ. ಆತ ನಟರು ಹಿಂದಿನ ದಿನ ಮುಖಂಡನ ಮನೆಯಲ್ಲಿ ಸೇರಬೇಕೆಂದೂ, ರಂಗಮಂಟಪದ ಮೇಲೆ ತಪ್ಪುಗಳು ಬರುವುದಿಲ್ಲವೆಂದು ನಿಶ್ಚಿತಪಡಿಸಿಕೊಳ್ಳಬೇಕೆಂದೂ, ನಟರು ಆಡಂಬರರಹಿತರಾಗಿರಬೇಕೆಂದೂ, ಮಿತವ್ಯಯಿಗಳಾಗಿರಬೇಕೆಂದೂ, ರಾಜರು ಶ್ರೀಮಂತರು ಅವರನ್ನು ಪ್ರದರ್ಶನಕ್ಕಾಗಿ ಕರೆದಾಗ ಅತಿಥಿಗಳಾಗಿ ಅವರೊಡನೆ ಹೋಗಬಾರದೆಂದು ಹಲವಾರು ಕಟ್ಟುಪಾಡುಗಳನ್ನು ವಿಧಿಸಿದ್ದ. ಹೀಗಾಗಿ ರಾಜ ಶೋಗುನನ ಕಾಲದಲ್ಲಿ ಅರ್ಚಕರು ಸಾಂಪ್ರದಾಯಿಕವಾಗಿ ಮಂತ್ರೋಚ್ಚಾರ ಮಾಡುವಂತೆ ಇದೂ ಸಹ ಸಾಂಪ್ರದಾಯಿಕ ಕಲೆಯಾಗಿ ರೂಪುಗೊಂಡಿತು. 19ನೆಯ ಶತಮಾನದ ವೇಳೆಗೆ ನೋ ಸರಕಾರಿ ಆಸ್ತಿಯಾಯಿತು. ಪ್ರದರ್ಶನ ನಡೆಸುವವರು ಸರ್ಕಾರಿ ಅನುಮತಿ ಇಲ್ಲದೆ ನಡೆಸಬಾರದಂತಾಯಿತು. 'ನೋ' ರಾಜ ಪರಿವಾರ ಹಾಗೂ ಶ್ರೀಮಂತರ ಆಸ್ತಿಯಾಯಿತು. ದೇವಾಲಯ ನಿರ್ಮಾಣ, ಧಾರ್ಮಿಕ ಕಾರ್ಯಗಳಿಗಾಗಿ ಧನ ಸಹಾಯ ಅನಿವಾರ್ಯವಾದಾಗ ಸರ್ಕಾರದ ಅನುಮತಿಯಿಂದ ಸಹ 'ನೋ'ನ ಪ್ರದರ್ಶನಗಳು ನಡೆದವು. 'ನೋ' ಕೆಲವೇ ಧನಿಕ ವ್ಯಕ್ತಿಗಳ ಸ್ವತ್ತಾಗಿ ಅದೊಂದು ವ್ಯವಸಾಯವೆಂಬ ಭಾವನೆ ಮೂಡಿ 20ನೆಯ ಶತಮಾನದ ಆರಂಭದಲ್ಲಿ ಇದು ನಶಿಸಿಹೋಗುವ ಕಲೆಯೇನೋ ಎಂಬ ಭಾವ ಹುಟ್ಟಿಸಿತ್ತು. ಎರಡನೆಯ ಮಹಾಯುದ್ಧದ ಕಾಲದಲ್ಲಿ ಬಾಂಬಿನ ಸಿಡಿತದಿಂದಾಗಿ 'ನೋ' ರಂಗಶಾಲೆಗಳು ನಷ್ಟವಾದಮೇಲೆ ಆ ಭೀತಿ ಅತಿಯಾಗಿತ್ತು. ಸರಕಾರದ ವ್ಯವಸ್ಥೆಯಲ್ಲಿ ಅದರ ಪುನರುಜ್ಜೀವನ ಕಾರ್ಯ ನಡೆದು ಇಂದು ವಿಶ್ವ ರಂಗಮಂಟಪದಲ್ಲಿ 'ನೋ' ತನ್ನದೇ ಒಂದು ವಿಶೇಷ ಸ್ಥಾನವನ್ನು ನಿರ್ಮಿಸಿಕೊಂಡಿದೆ.

ಜಿಯಾಮಿಯ ಕಾಲದಿಂದಲೇ 'ನೋ' ನ ರಂಗಮಂಟಪ ರಚನೆಯ ಬಗ್ಗೆಯೂ ನಿರ್ದಿಷ್ಟತೆ ಕಂಡುಬರುತ್ತದೆ. ಅಷ್ಟೇ ಅಲ್ಲ, ಹಿಂದಿನಿಂದ ಅದಕ್ಕಾಗಿಯೇ ನಿರ್ಮಿಸಲಾದ ಒಂದೆರಡು ರಂಗಮಂಟಪಗಳು ಇಂದಿಗೂ ಉಳಿದುಕೊಂಡೂ ಬಂದಿವೆ. ಉಳಿದಿರುವ ಹಳೆಯ ರಂಗಮಂಟಪಗಳಲ್ಲಿ'ಮಿಯಾಜಿಮಾ'ಹಾಗೂ 'ನಿಶಿ ಹೊಂಗಂಜಿ' ಗಳನ್ನು ಉದಾಹರಿಸಬಹುದು. 'ನೋ' ರಂಗಮಂಟಪ ಹದಿನೆಂಟು ಅಡಿಯ ಚೌಕಟ್ಟಾದ ಅಂಗಳ. ಇದನ್ನು ಬಣ್ಣ ಹಾಕದ ಪಾಲೀಷು ಮಾಡಿದ ಹಿನೋಕಿ

ಮರದಿಂದ ಆವರಿಸಲಾಗುತ್ತದೆ. ಅದರಮೇಲೆ ನಾಲ್ಕೂ ಕಡೆ ವಕ್ರವಾದ ಛಾವಣಿ ಹಾಗೂ ಅದಕ್ಕೆ ಆಸರೆಯಾಗಿ ಕಂಬಗಳು ಇರುತ್ತವೆ. ಈ ರಂಗಮಂಟಪಕ್ಕೆ ಸರಿಯಾಗಿ ಹಿಂಭಾಗದಲ್ಲಿ 5 ಅಡಿ ಕೆಳಭಾಗದಲ್ಲಿ ಒಂದು ಅಟೋಜಾ (Atoza) ಅಥವಾ ಅಟ್ಟಣೆ ಇರುತ್ತದೆ. ಈ ಭಾಗದಲ್ಲಿ ರಂಗ ಸಹಾಯಕರು ಹಾಗೂ ಸಂಗೀತ ಗಾರರು ಕುಳಿತುಕೊಳ್ಳುತ್ತಾರೆ. ರಂಗದ ಎಡ ಭಾಗದಲ್ಲಿ ಮೂರು ಅಡಿಯ ವಿಸ್ತಾರ ವಿದ್ದು ಅಲ್ಲಿ ಕೋರಸ್ ಎರಡು ಪಂಕ್ತಿಗಳಲ್ಲಿ ಕುಳಿತುಕೊಳ್ಳುತ್ತದೆ. ಇದು ಮಂಟ ಪದ ಮಟ್ಟಕ್ಕೆ ಸರಿಸಮಾನಾಗಿರುತ್ತದೆ. 'ಕಾಗಾಮಿ–ಇತಾ' ಕನ್ನಡಿಯ ಹಲಗೆಗಳು ಇವು ಈ ಸ್ಥಾನದಲ್ಲಿ 'ನೋ' ರಂಗಮಂಟಪದ ಗೋಡೆಗಳು. ನಾಟಕದ ಪ್ರತೀಕಾತ್ಮ ಕತೆಯನ್ನು ತೀವ್ರಗೊಳಿಸುವ ಉದ್ದೇಶದಿಂದ ಇವು ನಾರಾದ ಕಾಸಾಗಾವಂಶದ ಯೋಗೋವೃಕ್ಷದ ಚಿತ್ರದಿಂದ ಚಿತ್ರಿತವಾಗಿರುತ್ತವೆ. ಮಂಟಪದ ಹಿಂದಿನಿಂದ ಪ್ರಮುಖ ಮಂಟಪದ ಕಡೆಗೆ ಹಾದುಹೋಗಲು 18ರಿಂದ 45 ಅಡಿಗಳ ಉದ್ದ ನೆಯ ದಾರಿ ಇರುತ್ತದೆ. ಇದನ್ನು ಹಾಶಿಗಕಾರಿ ಎನ್ನುತ್ತಾರೆ. ಮಂಟಪದ ಆಕಾರಕ್ಕೆ ತಕ್ಕಂತೆ ಇದರ ವಿಸ್ತಾರವೂ ಇರುತ್ತದೆ. ಮಂಟಪ ರಚನೆಯ ಮಿಕ್ಕ ವಿಶೇಷತೆಗಳೆಂದರೆ, ಅಟೋಜಾನ ಎಡಭಾಗದಲ್ಲಿನ ಕಿರಿದ್ವಾರ (Kirido) ಹಾಗೂ ಮೂರು ಮೆಟ್ಟಲುಗಳು. ಕಿರಿಡೊ ಕೋರಸ್‌ನ ಗಾಯಕರ ಪ್ರವೇಶಕ್ಕಾಗಿ ಇರುತ್ತದೆ; ಮೆಟ್ಟಲುಗಳು ರಂಗಮಂಟಪದ ಮುಂದಣಿಂದ ಪ್ರೇಕ್ಷಕರ ವರ್ಗದ ಕಡೆಗಿರುತ್ತವೆ. ದರ್ಶಕರು ಕುಳಿತುಕೊಳ್ಳುವ ಹಾಗೂ ರಂಗಮಂಟಪದ ನಡುವೆ ಒಂದು ಕಲ್ಲುಜೆಲ್ಲಿ ಹಾಕಿದ ಭಾಗವಿರುತ್ತದೆ. ಹಿಂದೆ ಇದರ ವಿಸ್ತಾರ 3 ಅಡಿಯದಾಗಿರುತ್ತಿತ್ತು. ಹಾಗೂ ಆಗ ಈ ಜೆಲ್ಲಿಯ ಭಾಗದಲ್ಲಿಯೂ ಪ್ರೇಕ್ಷಕರು ಕುಳಿತುಕೊಳ್ಳುತ್ತಿದ್ದುದುಂಟು. ಆದರೆ ಈಗ ನಿಯಮ ರಕ್ಷಣೆಗೆಂಬಂತೆ ಈ ಭಾಗವನ್ನು ಒಂದು ಅಡಿಯ ವಿಸ್ತಾರಕ್ಕೆ ವರೂ ಸೀಮಿತಗೊಳಿಸಿ ಉಳಿಸಿಕೊಂಡು ಬರುತ್ತಿರುವುದು ಕಾಣಿಸುತ್ತದೆ. ಹಾಗೂ ಈ ದಿನಗಳಲ್ಲಿ ಅಲ್ಲಿ ಯಾರೂ ಕುಳಿತುಕೊಳ್ಳುವುದಿಲ್ಲ. ಪಾತ್ರಗಳ ಮಾತು ಮತ್ತು ವಾದ್ಯಗಳ ನಾದ ಪ್ರೇಕ್ಷಕರವರೆವಿಗೆ ತಲುಪುವಂತೆ ಮಾಡಲು ಅವರಿಗೆ ಕಾಣಿಸಿದ ಹಾಗೆ 3 ದೊಡ್ಡ ಜಾಡಿಗಳನ್ನು ಮಂಟಪದ ಕೆಳಗೆ ಇಡಲಾಗಿರುತ್ತದೆ. ಹೀಗೆಯೇ ರಂಗಮಂಟಪದ ಕಂಭಗಳನ್ನು ಕೆಲವು ವಿಶೇಷ ಉದ್ದೇಶ್ಯಗಳಿಗಾಗಿ ಉಪಯೋಗಿಸ ಲಾಗುತ್ತದೆ. ಇಷ್ಟಲ್ಲದೆ ಬೇರೆ ಬೇರೆ ಬಣ್ಣದ ಉದ್ದ ಉದ್ದನೆಯ ಗೆರೆಗಳಿರುವ ಬ್ರೋಕೆಡ್ ಬಟ್ಟೆಯ ಪರದೆ ಪಾತ್ರವರ್ಗ ಪ್ರವೇಶಿಸುವ ಕಡೆ ಇರುತ್ತದೆ. ಪಾತ್ರ ಧಾರಿಗಳ ಪ್ರವೇಶದ ವೇಳೆಯಲ್ಲಿ ಇದನ್ನು ಎತ್ತುವರು. ಹಳೆಯ ರಂಗಮಂಟಪ ವಾದ ನಿಶೀ ಹೊಂಗಂಜಿ (Nishi Hongangi) ಯಲ್ಲಿ ಹಿಂದೆ ಮುಂದೆ ಮಾಡಬಹು ದಾದ ಚಿನ್ನದ ರೇಕುಗಳಿಂದ ನೆಯಿದ ತೆರೆಗಳು ನಾಲ್ಕೂ ಕಡೆ ಹೊದೆಸಿರುತ್ತಾರೆ. ಹಾಗೂ ಅದರಲ್ಲಿ ನಾಟಕವನ್ನು ಬೇರೆಯದೇ ಕಟ್ಟಡದಲ್ಲಿ ಕುಳಿತು ನೋಡಬೇಕು. ಪುರಾತನ ಮಿಯಾಜಿಮಾ ರಂಗಮಂಟಪ ಸಮುದ್ರದ ದಂಡೆಯಲ್ಲಿ ಕಟ್ಟಲಾಗಿದ್ದು


ಕಿರಿಡೊ
ಹಶಿಗಕಾರಿ
ಅಟೊಜ
ರಂಗಮಂಟಪ
1 ಮೊದಲನೆಯ ವೃಕ್ಷ
2 ಎರಡನೆಯ ವೃಕ್ಷ
3 ಮೂರನೆಯ ವೃಕ್ಷ
4. ಕೊಕೆನ್‌ನ ಸ್ಥಾನ
5 ಕನ್ನಡಿಯ ಹಲಗೆಗಳು
6. ಟೈಕೊ ತಮಟೆಯವನ ಸ್ಥಾನ
7. ಒಕಾವ ತಮಟೆಯವನ ಸ್ಥಾನ
8 ಕೊತ್ಸುಜುಮಿಯ ಸ್ಥಾನ
9. ಕೊಳಲುವಾದಕನ ಸ್ಥಾನ
10. ಶಿಟೆ ಕಂಬ
11. ಶಿಟೆ ಪಾತ್ರಧಾರಿಯ ಸ್ಥಾನ
12 ವಾಕಿ ಕಂಬ
13. ವಾಕಿ ಪಾತ್ರಧಾರಿಯ ಸ್ಥಾನ
14. ಕೋರಸ್‌ನ ಸ್ಥಾನ
15 ಕೊಳಲು ಕಂಬ

'ನೊ' ರಂಗಮಂಟಪದ ನಕ್ಷೆ

ಇಂದಿಗೂ ಸಹ ಪ್ರತಿದಿನ ಹಲವು ಗಂಟೆಗಳ ಕಾಲ ಸಮುದ್ರದ ಅಲೆಗಳು ಪ್ರೇಕ್ಷಕರು ಕುಳಿತುಕೊಳ್ಳುವ ಸ್ಥಾನ ಹಾಗೂ ಮುಖ್ಯ ರಂಗಮಂಟಪದ ನಡುವೆ ಹರಿದು ಬಂದು ಒಂದು ವಿಚಿತ್ರ ರಹಸ್ಯಾತ್ಮಕತೆಯನ್ನು ನಿರ್ಮಿಸುತ್ತದೆ.

'ನೋ' ನಾಟಕ ತತ್ವಗಳು


'ನೋ' ನಾಟಕ ಹಲವಾರು ತೆರನಾಗಿದ್ದರೂ, ನೋ ಲೋಕಕ್ಕೆ ದೀಕ್ಷೆ 'ಒಕಿನಾ'ದಿಂದ ಎಂದು ಹೇಳಬಹುದು. 'ನೋ' ರಂಗಮಂಟಪಕ್ಕೆ 'ಒಕಿನಾ' ಮಂಗಳಾಚರಣೆಯೆಂಬಂತೆ ಕಂಡು ಬರುತ್ತದೆ. ಯಾವ 'ನೋ' ನಾಟಕವನ್ನೇ ಪ್ರದರ್ಶಿಸಬೇಕಾದರೂ ದೈವಾನುಗ್ರಹಕ್ಕಾಗಿ 'ಒಕಿನಾ'ವನ್ನು ಪ್ರದರ್ಶಿಸಿಯೇ ಪ್ರದರ್ಶಿಸುತ್ತಾರೆ. ಹೀಗಾಗಿ 'ಒಕಿನಾ' ಜಪಾನಿನಲ್ಲಿ ಅತಿ ಹೆಚ್ಚಾಗಿ ಪ್ರದರ್ಶಿತ ವಾಗುವ 'ನೋ' ನಾಟಕ.

'ಒಕಿನಾ'ದ ಮೊದಲ ವಿಶೇಷತೆಯೆಂದರೆ ಅದರಲ್ಲಿ 'ಕಥಾಪ್ರಸಂಗವೇ' ಇಲ್ಲದಿರುವುದು. ಒಕಿನಾದ ಪಾತ್ರ ದೇವರ ಪ್ರತಿಬಿಂಬವಷ್ಟೇ. ಇದರಲ್ಲಿ ನಟ ಒಕಿನಾದ ಮುಖವಾಡ ಧರಿಸಿ ದೇವರ ಪ್ರತೀಕವಾಗಿ ತನಗೇ ಅರ್ಥವಾಗದ ಶಬ್ದಗಳನ್ನುಚ್ಚರಿಸುತ್ತ ಅವತರಿಸುತ್ತಾನೆ. ಆತನ ನರ್ತನ ಸಂತೋಷದಿಂದ ಕೂಡಿದ ವಿಸ್ತೃತ ಜೀವನದ ಚಿತ್ರವನ್ನು ಪ್ರತಿಬಿಂಬಿಸುತ್ತದೆ. ಇದೊಂದು ಸುಖಾಂತವಾದ ನಾಟಕ. ಕಲಾತ್ಮಕತೆಯ ದೃಷ್ಟಿಯಿಂದ ನೋಡುವಲ್ಲಿ ಒಕಿನಾದಲ್ಲಿ ಯಾವತರಹೆಯ ತಥ್ಯವೂ ಕಾಣಸಿಗುವುದಿಲ್ಲ. ಮನರಂಜನೆ ಸಹ ಸಿಗಲಾರದು. ಕರಗದ ವೀರನಂತೆ ನಟ ಭಾವಾವೇಶದಿಂದಂತೂ ಕೂಡಿ ಇಹಲೋಕದ ತನ್ನ ಅಸ್ತಿತ್ವವನ್ನು ಮರೆತಿರಬೇಕು.

ಒಕಿನಾದ ಕಲಾತ್ಮಕ ತತ್ವ ಈ ರೀತಿ ಇದೆ :

ಮೊದಲಿಗೆ, ನಟರು ಮಂಟಪದ ಮೇಲೆ ಪ್ರವೇಶಿಸಿ ತಮಗಾಗಿ ನಿರ್ದಿಷ್ಟವಾದ ಆಸನಗಳನ್ನು ಸ್ವೀಕರಿಸಿದ ಮೇಲೆ ಮುಖವಾಡ ಧಾರಿ ಎನಿಸುವವನು ನಿಶ್ಚಿತವಾದ ವ್ಯಕ್ತಿಗೆ ಒಕಿನಾದ ಮುಖವಾಡವನ್ನು ಧಾರೆಯೆರೆಯುತ್ತಾನೆ. ಒಕಿನಾದ ಮುಖವಾಡ ಇತರ 'ನೋ' ನಾಟಕಗಳ ಪ್ರಧಾನ ಪಾತ್ರಕ್ಕಿಂತ ಭಿನ್ನವಾದುದು. ಇದರ ರೂಪಾಕೃತಿ ಒಬ್ಬ ವೃದ್ಧ ಸಂತನದು, ಹಾಗೂ ದೇವರನ್ನು ಪ್ರತಿಬಿಂಬಿಸುತ್ತದೆ.

ಕ್ರಮದ ದೃಷ್ಟಿಯಿಂದ ವಿಚಾರಮಾಡಿ ನೋಡಿದಲ್ಲಿ ದೇವರ ದೀಕ್ಷೆ ಅಥವಾ ಪ್ರತೀಕವಾಗುವ ಕಲೆಗಾರ ಈ ಮುಖವಾಡವನ್ನು ಧರಿಸಿ ತನ್ನ ಮನುಷ್ಯನ ವ್ಯಕ್ತಿತ್ವವನ್ನು ಮರೆತಿರಬೇಕು. ಅದಕ್ಕಾಗಿ ಕಲಾತಜ್ಞರು ಇದಕ್ಕೆ ಒಂದು ನಿಶ್ಚಿತವಾದ ಕ್ರಮವನ್ನೇ ವಿಧಿಸಿದ್ದಾರೆ. ಒಕಿನಾದ ಈ ದೈವೀ ನಟ ರಂಗಮಂಟಪದ ಹೊರ ಆವರಣವನ್ನು ಪ್ರವೇಶಿಸಲು ಮೊದಲು ಒಳಗಣ ಬಣ್ಣದ ಕೊಠಡಿಯಲ್ಲಿ ಮುಖವಾಡ ಧರಿಸಿ ಕನ್ನಡಿಯಲ್ಲಿ ತನ್ನ ಆ ಮುಖವನ್ನು ನೋಡಿ, ಮುಖದೊಳಗಡಗಿರುವ



ಜ಼ೋ ಒನ್ನ ಮುಖವಾಡ

ದೈವತ್ವದೊಡನೆ ತಾದಾತ್ಮ್ಯ ಸಾಧಿಸಲು ಪ್ರಯತ್ನಿಸುತ್ತಾನೆ. "ಸಾಮಾನ್ಯವಾಗಿ ಇತರ ರಂಗಮಂಟಪಗಳನ್ನು ಜೀವನದ ಪ್ರತಿಬಿಂಬವೆಂದು ಕರೆದರೆ 'ನೋ' ಜೀವನಕ್ಕೆ ಇನ್ನೂ ಸಮೀಪವಾಗಿರುವ ಪ್ರತಿಬಿಂಬ."

'ಒಕಿನಾ'ದ ಹಿಂದೆ ಶ್ರದ್ಧಾ-ಭಕ್ತಿಗಳ ಪ್ರೇರಣೆ ಇರುವುದರಿಂದಾಗಿ ಹಬ್ಬ ಹರಿದಿನಗಳ, ಸುಗ್ಗಿಯ ಕಾಲದಲ್ಲಿ ಒಕಿನಾದ ಪ್ರದರ್ಶನದ ಬಿಸಿ ಹೆಚ್ಚು.

ಪೌರಾಣಿಕ ಕಥಾವಸ್ತುವಿನ ದೃಷ್ಟಿಯಿಂದ 'ಒಕಿನಾ'ವನ್ನು ಯಕ್ಷಗಾನಗಳಿಗೆ ಹೋಲಿಸಬಹುದಾದರೂ ಇನ್ನುಳಿದ 'ನೋ' ನಾಟಕಗಳಲ್ಲಿ ಕಥಾ ವಸ್ತುವಿನ ವೈವಿಧ್ಯವನ್ನು ಕಾಣಬಹುದು. ಇತರೆ 'ನೋ' ನಾಟಕಗಳಲ್ಲಿನ ಕಥಾವಸ್ತು ಕೆಲವೊಮ್ಮೆ ಇತಿಹಾಸ ಕಾಲದ್ದಾಗಿದ್ದು 10—11ನೆಯ ಶತಮಾನದ ಕಥೆಗಳಿಂದ ಸಹ ಆರಿಸಿರಲಾಗಿರುತ್ತದೆ. ಮತ್ತು ಕೆಲವು ಯುದ್ಧವೀರರಿಗೆ ಮಾತ್ರವೇ; ಕೆಲವು ರಾಜ್ಯ ಅಥವಾ ರಾಜ್ಯಕ್ಕೆ ಸಂಬಂಧಪಟ್ಟ ಘಟನೆಗಳಿರುತ್ತವೆ; ರಾಜ್ಯಕ್ಕೆ ಸಂಬಂಧ ಪಟ್ಟ ಕೆಲವು ಸಣ್ಣ ಪುಟ್ಟ ಉಪದ್ರವಗಳಿರುತ್ತವೆ; ತಾಮಸ ಜೀವಿಗಳ ಶಕ್ತಿ ಪ್ರದರ್ಶನವಿರುತ್ತದೆ; ಹಾಗೂ ಇನ್ನೂ ಕೆಲವು ಸ್ತ್ರೀಯರಿಗೆ ಸಂಬಂಧಿಸಿದ ಕಥಾ ವಸ್ತುಗಳೂ ಸಹ ಇರುತ್ತವೆ.

ಹೀಗಾಗಿ ಹಿಂದಣ ಗ್ರಂಥಗಳಲ್ಲಿ 'ನೋ' ನಾಟಕಗಳನ್ನು ಐದು ಭಾಗಗಳಾಗಿ ಸಹ ವಿಂಗಡಿಸಲಾಗಿತ್ತು.

ಮೊದಲನೆಯದು :— ದೇವರಿಗೆ ಸಂಬಂಧಪಟ್ಟ ನಾಟಕಗಳು—ವಾಕಿನೊ (Wakino)

ಎರಡನೆಯದು :— ಯುದ್ಧವೀರನಿಗೆ ಸಂಬಂಧಿಸಿದ ನಾಟಕಗಳು—ಶುರಮೊನೊ (Shuramono)

ಮೂರನೆಯದು :— ಸ್ತ್ರೀಯರಿಗೆ ಸಂಬಂಧಪಟ್ಟ ನಾಟಕಗಳು— ಕಜುರ ಮೊನೊ (Kazuramono)

ನಾಲ್ಕನೆಯದು :— ಇತರೆ ಅಥವಾ ಸಮಕಾಲೀನ ಪಾತ್ರಗಳ ಕಥಾ ವಸ್ತುಗಳು—ಗೆಂಜೈಮೊನೊ (Genzaimono)

ಐದನೆಯದು :— ಭೂತ ಪ್ರೇತಗಳಿಗೆ ಸಂಬಂಧ ಪಟ್ಟ ನಾಟಕಗಳು— ಕಿರಿನೊ (Kirino)

'ನೋ' ನಾಟಕಗಳಲ್ಲಿ ವಸ್ತುವಿಗಿಂತ ಪಾತ್ರಗಳ ನೃತ್ಯ ಮುಖ್ಯವಾದುದು. ವಸ್ತು ನೃತ್ಯದಲ್ಲಿ ಬೀಜಾಕೃತಿಯಲ್ಲಿ ಅವತರಿಸಿ ವೃಕ್ಷಾಕೃತಿಯಲ್ಲಿ ಮುಂದುವರಿಯು ತ್ತದೆ. ಆದುದರಿಂದ ನೃತ್ಯಗಳ ಉದ್ದಕ್ಕನುಗುಣವಾಗಿ ನಾಟಕಗಳ ಕಾಲಾವಧಿ ಸಹ

ನಿರ್ದಿಷ್ಟವಾಗುತ್ತದೆ. ವಾರ್ತಾಲಾಪವನ್ನು ಗಮನದಲ್ಲಿಟ್ಟುಕೊಂಡು ನೋಡಿದಲ್ಲಿ, ಅತಿ ಹೆಚ್ಚಿನ ವಾರ್ತಾಲಾಪವಿರುವ ನಾಟಕವೆಂದರೂ ಸಹ ಮುದ್ರಣದಲ್ಲಿ ಅದು 8–10 ಪುಟಗಳಿಗೂ ಮಿರಿದುದಾಗಿರುವುದಿಲ್ಲ. ಇದಕ್ಕೆ ಕಾರಣವೇನೆಂದರೆ, 'ನೋ' ನಾಟಕಗಳ ಬಹುಭಾಗ ನೃತ್ಯಗಳಿಂದಲೇ ಆವೃತ್ತವಾಗಿರುತ್ತದೆ. ಹೀಗೆ ನೃತ್ಯಗಳ ಉದ್ದಕ್ಕನುಗುಣವಾಗಿ 'ನೋ' ನಾಟಕಗಳು ಒಂದರಿಂದ ಎರಡು ಗಂಟೆಗಳ ಕಾಲ ಪ್ರದರ್ಶಿತವಾಗುತ್ತವೆ. ಯಕ್ಷಗಾನಗಳ ಪ್ರಭಾವಾನ್ವಿತಿಯಲ್ಲಿ ಕಾಲಿನ ಸಪ್ಪಳ, ತೀವ್ರವಾದ ಕುಣಿತ, ಧ್ವನಿಯ ಮಾರ್ದವಗಳು ಪೂರಕವಾಗುವಂತೆ 'ನೋ' ನಾಟಕಗಳಲ್ಲಿ ಪ್ರಭಾವಶಾಲಿ ಪಾತ್ರವಾದ ಶಿಟೆಯ ತೀವ್ರ ಗತಿಯ ನರ್ತನ, ಅತನ ಇಂಗಿತಗಳು ಪ್ರೇಕ್ಷಕರ ತಾದಾತ್ಮ್ಯಕ್ಕೆ ಸಹಾಯಕವಾಗುತ್ತವೆ. ಆದುದರಿಂದಲೇ ಇತರೇ ನಾಟಕಗಳಿಗಿಂತಲೂ 'ನೋ'ನ ದರ್ಶಕ ಹೆಚ್ಚು ವಿದ್ವಾಂಸನಾಗಿರಬೇಕಾಗುತ್ತದೆ. ಪಾತ್ರಗಳ ಪ್ರತಿಯೊಂದು ಚಲನ ವಲನೆಯ ಕಡೆಗೂ ಅವನು ಅತಿ ಜಾಗರೂಕನಾಗಿರಬೇಕಾಗುತ್ತದೆ. ಈ ಸಂದರ್ಭದಲ್ಲಿ 'ನೋನೋಮಿಯಾ' ನಾಟಕದ ಒಂದಂಶವನ್ನು ಸ್ಮರಿಸಬಹುದು. 'ನೋನೋಮಿಯಾ' ಒಂದು ಸುಂದರವಾದ 'ನೋ' ನಾಟಕ. ಆದರೆ ಓದುಗ ಅದನ್ನು ಓದುವುದರ ಮೂಲಕ ಅದರ ಸೌಂದರ್ಯ ಹಾಗೂ ಪ್ರತೀಕಾತ್ಮಕತೆಯನ್ನು ಅರ್ಥಮಾಡಿಕೊಳ್ಳಲಾರ. ಅದರ ಪ್ರತೀಕ ಪಾತ್ರಧಾರಿಯ ನಟನೆಯಲ್ಲಿ ಅಡಗಿರುತ್ತದೆ. ರೋಕುಜೋ ಇಲ್ಲಿಯ ಸ್ತ್ರೀ ಪಾತ್ರದ ಹೆಸರು. ಅವಳು ರಾಜಕುಮಾರ ಗೆಂಜಿ ಹಾಗೂ ಸಂಸಾರವನ್ನು ತ್ಯಜಿಸಲು ಹೊರಟಿದ್ದಾಳೆನ್ನುವುದು ಅವಳು ಹೆಜ್ಜೆ ಮುಂದಿಡುವ ರೀತಿಯಲ್ಲಿ ಪ್ರಕಟವಾಗಬೇಕು; ಅವಳು ತನ್ನ ಹೆಜ್ಜೆಯನ್ನು ಹಿಂದಕ್ಕೆ ಸರಿಸುವ ವೈಖರಿಯಲ್ಲಿ, ರಾಜ ಗೆಂಜಿಯ ಇಚ್ಛೆಗೆ ಬಾಗಿ ತನ್ನ ನಿರ್ಣಯವನ್ನು ಬದಲಿಸಿದಳೆಂಬುದೂ ಮೂಡಿಬರಬೇಕು. ದರ್ಶಕ ಒಂದು ವೇಳೆ ಅಜಾಗರೂಕನಾಗಿದ್ದಲ್ಲಿ ಈ ಪ್ರತೀಕವನ್ನು ಅರ್ಥ ಮಾಡಿಕೊಳ್ಳಲಾಗದೆ ಅಸಫಲನಾಗಬಹುದು!

ನಾಟಕದ ಓಟದ ದೃಷ್ಟಿಯಿಂದ 'ನೋ' ನಾಟಕಗಳನ್ನು ಮೂರು ಹಂತಗಳಾಗಿ ವಿಂಗಡಿಸುತ್ತಾರೆ. ಜೋ (jo) ಪೀಠಿಕಾ ಭಾಗ; ಹಾ (ha) ವಿಕಾಸ; ಕ್ಯೂ (kyo) ಪರಾಕಾಷ್ಠೆ.

'ಹಾ' ಹಂತದಲ್ಲಿ ನೃತ್ಯದ ತೀವ್ರತೆ ಸತತೋತ್ಸಾಹದೊಂದಿಗೆ ಸಾಗುತ್ತದೆ. ಪಾತ್ರಧಾರಿಯಾದವನು ಅಭಿವ್ಯಕ್ತಿಯ ಪರಾಕಾಷ್ಠೆಯನ್ನು ತಲಪಬೇಕಾಗುತ್ತದೆ. ಏಕಾಂಗಿಯಾದ ಕೈಮೇಳದಿಂದ ಅವನು ಉದ್ರಿಕ್ತನಾಗಿ ನರ್ತಿಸಬೇಕು. ಇಲ್ಲದಿದ್ದಲ್ಲಿ 'ನೋ'ನ ವಸ್ತು ಅತಿ ಸಪ್ಪೆಯಾದಂತೆಯೇ ಸರಿ.

ರೂಪಕದ ಪರಂಪರಾಗತ ತತ್ವಗಳು 'ನೋ' ನಾಟಕಗಳಿಗೆ ಸರಿಹೋಲುವುದಿಲ್ಲ. ನಾಟಕಗಳಲ್ಲಿ, ಅಷ್ಟೇ ಏಕೆ ಲೋಕನಾಟ್ಯವಾದ ಯಕ್ಷಗಾನದಲ್ಲಿ

ನೋಡಿದರೂ ಏಕ ಪಾತ್ರದ ಮಹತ್ವ ಯಾವ ಸಾಹಿತ್ಯದಲ್ಲಿಯೂ ವಿಶೇಷವೂ ಕಂಡು ಬರುವುದಿಲ್ಲ. ಆದರೆ 'ನೋ' ನಾಟಕಗಳ ವೈಶಿಷ್ಟ್ಯ ಅದರ ಏಕ ಪಾತ್ರಗಳು. ಅಂದರೆ 'ನೋ' ನಾಟಕಗಳಲ್ಲಿ ಆದಿಯಿಂದ ಅಂತ್ಯದವರೆವಿಗೆ ಇರುವ ಒಂದೇ ಒಂದು ಪಾತ್ರವೆಂದರೆ ಅದು 'ಶಿಟೆ'. ಹಾಗೂ ಸಾಮಾನ್ಯವಾಗಿ ಈ ಪಾತ್ರ ಈ ಲೋಕಕ್ಕೆ ಸಂಬಂಧಿಸಿದುದಾಗಿರುವುದಿಲ್ಲ. ಈತ ಇತರೇ ಲೋಕಗಳ ಪಾತ್ರಗಳನ್ನು ಪ್ರತಿನಿಧಿಸಿ ಬರುವಾಗ ದೇವರು ಹಾಗೂ ಭೂತ–ಪ್ರೇತಗಳನ್ನೂ ; ಈ ಲೋಕದ ವ್ಯಕ್ತಿಗಳನ್ನು ಪ್ರತಿನಿಧಿಸುವಾಗ ರಾಜರು, ಹಾಗೂ ಯೋಧರನ್ನೂ ಪ್ರತಿನಿಧಿಸುತ್ತಾನೆ; ಪಕ್ಷಿ–ಪ್ರಾಣಿಗಳ ಪಾತ್ರದ ಹಿನ್ನೆಲೆಯಲ್ಲಿಯೂ ಸಹ ಈತ ಬರುತ್ತಾನೆ. ಅನೇಕಸಾರಿ ಈತ ಮನುಷ್ಯನ ಸಹಜ ವಿಷಯ–ವಾಸನೆಗಳ ಪ್ರತೀಕವಾಗಿಯೂ ಕಂಡು ಹೊಟ್ಟೆಕಿಚ್ಚು, ಕರುಬುವಿಕೆ ಇದರಿಂದಾಗಿ ದೈತ್ಯ ಕೃತ್ಯಗಳಲ್ಲಿ ನಿರತನಾಗಿರುವಂತೆ ಸಹ ಕಾಣಿಸುತ್ತಾನೆ. ಈತನ ಪ್ರಧಾನ ತತ್ವ ಪ್ರತೀಕಾತ್ಮಕತೆ. 'ಶಿಮಾಯಿ' ಈತ ನರ್ತಿಸುವ ಕೊನೆಯ ಹಾಗೂ ಪ್ರಮುಖ ನೃತ್ಯ. ಇದು ನಾಟಕದ 1/3 ಭಾಗವನ್ನೇ ಆವರಿಸಿಕೊಂಡಿರುತ್ತದೆ. ನಾಟಕದ ಮಿಕ್ಕ ಅಂಶಗಳು ಅವಶ್ಯಕವಾದ ವಾತಾವರಣ ನಿರ್ಮಾಣದಲ್ಲಿ ಸಹಾಯವಾಗುತ್ತದೆ.

''ಶಿಟೆ'' 'ನೋ' ನಾಟಕಗಳ ಪಾತ್ರವಾದರೂ 'ನೋ' ಏಕ ವ್ಯಕ್ತಿಯ ನಾಟಕವಲ್ಲ, ರಂಗಮಂಟಪವಲ್ಲ. 'ಶಿಟೆ'ಯೊಂದಿಗೆ ಹಲವಾರು ಇತರ ವ್ಯಕ್ತಿತ್ವವುಳ್ಳ ಪಾತ್ರಗಳೂ 'ನೋ'ನಲ್ಲಿ ಕಂಡುಬರುತ್ತವೆ. ಈ ಸಂದರ್ಭದಲ್ಲಿ ಮಹತ್ವಪೂರ್ಣವಾದ ಅಂಶವೆಂದರೆ 'ಶಿಟೆ' ಅಲ್ಲದ ಈ ಮಿಕ್ಕ ಪಾತ್ರಗಳು 'ನೋ' ನಾಟಕಗಳಲ್ಲಿ ಸೂಕ್ಷ್ಮ ದರ್ಶಕರು ಹಾಗೂ ಛಾಯೆಗಳಾಗಿ ಮಾತ್ರ ಕಂಡುಬರುತ್ತವೆ. ಕೆಲವೊಮ್ಮೆ ಇಂತಹ ಪಾತ್ರಗಳಲ್ಲಿ 'ಶಿಟೆ'ಯ ಸರಿಸಮಾನವಾದ ಪಾತ್ರ 'ವಾಕಿ'; 'ವಾಕಿ' ಈ ಲೋಕವನ್ನು ಪ್ರತಿನಿಧಿಸುವ ಪಾತ್ರ. 'ಶಿಟೆ'ಯ ಸರಿಸಮಾನವಾದ ಪಾತ್ರವೆನ್ನಲು ಕಾರಣವೇನೆಂದರೆ, ಕೆಲವೊಂದು 'ನೋ' ನಾಟಕಗಳಲ್ಲಿ 'ವಾಕಿ'ಯೇ 'ಶಿಟೆ'ಗಿಂತಲೂ ಪ್ರಧಾನವಾಗಿ ಕಾಣುವುದೂ ಉಂಟು. ಎಷ್ಟೋ ಸಾರಿ ಶಿಟೆ ಹಾಗೂ ವಾಕಿಯ ನಡುವಿನ ಸಂಘರ್ಷ ಸಹ ನೊ ನಾಟಕಗಳಲ್ಲಿ ಪ್ರಕಟವಾಗುತ್ತದೆ. ಅಂತರವೆಂದರೆ 'ಶಿಟೆ' ಅಮಾನವೀಯ ಅಸಾಮಾನ್ಯ ಕಾರ್ಯೋಚ್ಛುವೆಂಬಂತೆ ಕಾಣಿಸುತ್ತದೆ. ಹಾಗೂ ವಾಕಿ ದರ್ಶಕರ ಪ್ರತಿನಿಧಿ ಅಥವಾ ವಕೀಲನಾಗಿ ಮುಂದೆ ಬಂದು ಶಿಟೆಯೊಂದಿಗೆ ವಿವಾದ ನಡೆಸುತ್ತಾನೆ. ವಾಕಿ ತನ್ನದಾದ ವಿಶೇಷ ವ್ಯಕ್ತಿತ್ವವನ್ನಾಗಲೀ, ಹೆಸರಾಗಲೀ ಇಟ್ಟುಕೊಂಡಿರುವುದಿಲ್ಲ. ಐತಿಹಾಸಿಕವಾಗಿ ನೋಡಿದಲ್ಲಿ ಸಹ 'ನೋ'ನ ಆರಂಭ ಕಾಲದಲ್ಲಿ, ಹದಿನೈದನೆಯ ಶತಮಾನಕ್ಕೂ ಮೊದಲಿನ ಕೆಲವು ನೋ ನಾಟಕಗಳನ್ನು 'ವಾಕಿ'ಯೇ ಶಿಟೆಗಿಂತ ಪ್ರಧಾನವಾಗಿ ಕಂಡು, ಶಿಟೆ ಹಾಗೂ ವಾಕಿಯಲ್ಲಿ ಅಂತರ ಕಂಡುಹಿಡಿಯುವುದೂ ಕಷ್ಟಕರವಾಗಿತ್ತು. 15ನೆಯ ಶತಮಾನದಿಂದೀಚಿನ ನಾಟಕಗಳಲ್ಲಿ ಇವೆರಡು ಪಾತ್ರಗಳ ನಡುವಣ ಭೇದ ಸ್ಪಷ್ಟವಾಯಿತು.

ರಂಗಮಂಟಪದಲ್ಲಿ, ಶಿಟೆ ನಾಟಕದಲ್ಲಿ ಪ್ರಧಾನವಾಗಿ ಪ್ರದರ್ಶಿತವಾಗುವ ಪಾತ್ರವಾದರೆ, ವಾಕಿ ಪಕ್ಕದಲ್ಲಿದ್ದು ತನ್ನ ಸಾಧಾರಣವಾದ ಸ್ಥಿತಿಯನ್ನು ಪ್ರಕಟ ಪಡಿಸುತ್ತಾನೆ. ರಂಗಮಂಟಪದ ಬಲಗಡೆಯ ಕಂಬ 'ವಾಕಿ ಕಂಬ' ವೆಂಬ ಹೆಸರನ್ನೇ ಪಡೆದಿದೆ. ಕೆಲವು ನಾಟಕಗಳಲ್ಲಿ ಶಿಟೆಯ ಪ್ರವೇಶಕ್ಕೂ ಮೊದಲೇ ವಾಕಿ ತಾನೊಬ್ಬ



ಉಸೊಬುಕಿ ಮುಖವಾಡ

ತೀರ್ಥಯಾತ್ರೆ ಸನ್ಯಾಸಿಯಂತೆ ದರ್ಶಕರ ಮುಂದೆ ಬರುವುದುಂಟು. ಕೆಲವು ನಾಟಕ ಗಳಲ್ಲಿ ಆತ ತನ್ನ ಯಾತ್ರೆಯ ಉದ್ದೇಶವನ್ನು ಪ್ರಕಟಪಡಿಸುವನಾದರೂ, ಮಿಕ್ಕವು ಗಳಲ್ಲಿ ಆತ ತನ್ನ ನಡಿಗೆಯ ಗಾಂಭೀರ್ಯ ಶಾಂತತೆಯಿಂದಾಗಿ ಈ ಭಾವವನ್ನು

ಸೂಚ್ಯಗೊಳಿಸುತ್ತಾನೆ. ತಜ್ಞನಾದವನು ಶಿಟೆ ಹಾಗೂ ವಾಕಿಯ ಅಂತರವನ್ನು ಕೆಲವು ಪ್ರಮುಖ ಅಂಶಗಳಿಂದ ಕಂಡುಹಿಡಿಯಬಲ್ಲ.

ಶಿಟೆ ಆಡಂಬರ ಪೂರ್ಣವಾದ ಬ್ರೊಕೆಡ್ ಇತ್ಯಾದಿಯಿಂದ ಕೂಡಿದ ಉಡುಪಿನಲ್ಲಿ ರಂಗಮಂಟಪದಮೇಲೆ ಅವತರಿಸುತ್ತದೆ. ಆದರೆ ವಾಕಿಯ ಉಡುಪು ಎಂದೆಂದಿಗೂ ಒಂದೇ, ಜಪಾನಿನ ಶಿಂಟೋ ಪಂಗಡದ ಪೂಜಾರಿಗಳ ಸಾಧಾರಣವಾದ ಕರಿಯ ಕಿಮೊನೋ ಆತನ ಉಡುಪು.

ಶಿಟೆ ದೇವರ ಹಾಗೂ ಇತರೆ ಪಾತ್ರಗಳ ಪ್ರತೀಕವಾಗಿ ಬಂದಾಗ ತನ್ನ ಪಾತ್ರದ ಮಹತ್ವವನ್ನು ತನ್ನ ಮುಖವಾಡದಿಂದ ಪ್ರಕಟಪಡಿಸುತ್ತದೆ. ತನ್ನ ಕಾಲದ ಪಾತ್ರವನ್ನೇ ಪ್ರತಿನಿಧಿಸುವಲ್ಲಿ ಮಾತ್ರ ಮುಖವಾಡವಿಲ್ಲದೆಯೇ ಬರುತ್ತದೆ. ಆದರೆ ಎರಡು ದೃಶ್ಯಗಳಿರುವ ನಾಟಕಗಳಲ್ಲಿ ಶಿಟೆ ಕೆಲವೊಮ್ಮೆ ಮೊದಲನೆಯ ದೃಶ್ಯದಲ್ಲಿ ಮುಖವಾಡ ಧರಿಸದೆಯೂ, ಎರಡನೆಯದರಲ್ಲಿ ಮುಖವಾಡ ಧರಿಸಿಯೂ ಬರುವುದೂ ಉಂಟು. ಆದರೆ ವಾಕಿ ಮಾತ್ರ ಎಂದೂ ಮುಖವಾಡ ಧರಿಸುವುದಿಲ್ಲ. ಕೆಲವು ನೋ ನಾಟಕಗಳಲ್ಲಿ ವಾಕಿಯ ವಾರ್ತಾಲಾಪ ಶಿಟೆಗಿಂತ ಅಧಿಕವಾಗಿದ್ದು, ವಾಕಿಯೇ ಶಿಟೆಗಿಂತ ಮಹತ್ವಪೂರ್ಣವಾದ ಪಾತ್ರವೇನೋ ಎಂಬ ಭ್ರಮೆಗೂ ಕಾರಣವಾಗುವುದುಂಟು. ಆದರೆ ಶಿಟೆಯ ಪಾತ್ರದಲ್ಲಿ ಎಂದೂ ವಾರ್ತಾಲಾಪ ಮಹತ್ವವಾದುದಲ್ಲ. ನೃತ್ಯವೇ ಶಿಟೆ ಪಾತ್ರದ ಮಹತ್ವಪೂರ್ಣ ಅಂಶ.

'ಕೊಕೆನ್' ಮೊದಲೇ ಹೇಳಿದಂತೆ ಛಾಯಾ ಪಾತ್ರ. ಇವು ನಕಲು ಪಾತ್ರಗಳು. ಇವು ನಾಟಕದ ಆದಿಯಿಂದ ಅಂತ್ಯದವರೆವಿಗೆ ರಂಗದ ಹಿಂದುಗಡೆ ಇರುತ್ತವೆ. ಶಿಟೆ ಅಸ್ವಸ್ಥನಾದಾಗ, ತಾವು ಪಾತ್ರ ವಹಿಸಿ ನಾಟಕದ ಕಾರ್ಯಕ್ರಮ ಮುಂದೆ ಸಾಗಿಸಲು, ಹಾಗೂ ಶಿಟೆ ತನ್ನ ಪಾತ್ರ ಭಾಗವನ್ನು ಮರೆತಾಗ ಅದನ್ನು ಪಿಸುರಿ ನೆನಪು ಮಾಡಲು ಇರುವ ಛಾಯಾ ಪಾತ್ರಗಳು. ಕೆಲವೊಮ್ಮೆ ಶಿಟೆಯ ಉಡುಪು ಅಸ್ತವ್ಯಸ್ತವಾದಾಗ ರಂಗದ ಮೇಲೆ ಬಂದು ಅವನ ಉಡುಪನ್ನೂ ಸರಿಪಡಿಸುತ್ತವೆ. ರಂಗದ ವಾಸ್ತವಿಕ ಮಹತ್ವದ ದೃಷ್ಟಿಯಿಂದ ಇವು ಅಸ್ತಿತ್ವಶೂನ್ಯವಾದ ಪಾತ್ರಗಳು. ಇವರ ಉಡುಪು ಸಹ ಸಾಧಾರಣವಾದ ಕರಿಯ ಕಿಮಾನೋ.

ಸುರೆ (Tsure) ಶಿಟೆಯ ಸಹಾಯಕ ಪಾತ್ರ. ಇದು ಸಂಖ್ಯೆಯಲ್ಲಿ ಒಂದು ಅಥವಾ ಅದಕ್ಕೂ ಹೆಚ್ಚಾಗಿ ಸಹ ಇದ್ದು ಶಿಟೆಯೊಂದಿಗೆ ಬರಬಹುದಾದರೂ ಇವೂ ಸಹ ಛಯಾ ಪಾತ್ರಗಳೇ.

ಕೊಕಾಟ (Kokata) ಇವು ಮಕ್ಕಳ ಪಾತ್ರಗಳು ಹಾಗೂ ಸುರೆಯ ಒಂದು ಭೇದವಾಗಿ 'ನೋ' ನಲ್ಲಿ ಅವತರಿಸುತ್ತವೆ. ಈ ಪಾತ್ರಗಳು ಸಾಮಾನ್ಯವಾಗಿ ಮಕ್ಕಳ ಪಾತ್ರಗಳ ಹಿನ್ನೆಲೆಯಲ್ಲಿ ಬಂದರೂ ಕೆಲವೊಮ್ಮೆ ದೊಡ್ಡವರ, ಮುದುಕರ,

ಭೂತ-ಪ್ರೇತಗಳ ಹಿನ್ನೆಲೆಯಲ್ಲಿಯೂ ಬಂದು ಜನತೆಗೆ ಭಯ ಹೀನತೆಯ ಸಂದೇಶ, ಆದೇಶ ಸಹ ನೀಡುತ್ತವೆ.

ಈ ಸಂದರ್ಭದಲ್ಲಿ ನಾವು ಭಾರತೀಯ ನಾಟ್ಯಶಾಸ್ತ್ರದ ಕೆಲವಂಶಗಳೊಡನೆ 'ನೋ'ನ ಹೋಲಿಕೆ ಕಾಣಬಹುದು. ಭಾ. ನಾ. ದಲ್ಲಿ ನಾಟಕದ ಪ್ರಧಾನ ಪಾತ್ರ ನಾಯಕನಾಗಿದ್ದರೂ, ಅಲ್ಲಿ ಸಹಾಯಕ ಪಾತ್ರಗಳ ಅಸ್ತಿತ್ವಕ್ಕೇನೂ ಕೊರತೆ ಇಲ್ಲ. ಆದರೆ ಮಹತ್ವದ ದೃಷ್ಟಿಯಿಂದ ನೋಡಿದಲ್ಲಿ ಉತ್ತಮ, ಮಧ್ಯಮ, ಅಧಮ ಇಂತಹ ವಿಂಗಡಣೆಯಲ್ಲಿ ಗ್ರಾಮಿಣ ಹಾಗೂ ನೌಕರರ ಪಾತ್ರಗಳು ಅಧಮ ಪಾತ್ರಗಳಾಗಿದ್ದು ಘಟನೆಯ ವರ್ಣನೆಯಲ್ಲಿ, ದೇಶಕಾಲ ವಾತಾವರಣ ನಿರ್ಮಾಣದಲ್ಲಿ



ಉಗ್ರ ದೇವತೆಯ ಉಡುಪು



'ವಾಕಿ'ಯ ಉಡುಪು

ಸಹಾಯಕವಾಗುವಂತೆ, 'ನೋ' ನಾಟಕಗಳಲ್ಲಿ 'ಶಿಟೆಯನ್ನು' ಬಿಟ್ಟು ಮಿಕ್ಕವು ಮಧ್ಯಮ ಅಧಮ ಕೋಟಿಯವು. ಈ ರೀತಿಯಲ್ಲಿ ಹೇಳಲು ಒಂದೇ ಪಾತ್ರವಾದರೂ 'ನೋ' ನಾಟಕಗಳಲ್ಲಿ ಮಿಕ್ಕ ಪಾತ್ರಗಳು ತಮ್ಮ ವರ್ಗಗಳಿಂದಲೇ ಅರಿಯಲಾಗುತ್ತವೆ. ದೃಶ್ಯ ನಿರ್ಮಾಣದ ಬಗ್ಗೆ ಹೇಳುವುದಾದರೆ, 'ನೋ' ನಾಟಕಗಳನ್ನು ಎರಡು ಭಾಗಗಳಾಗಿ ವಿಂಗಡಿಸುತ್ತಾರೆ. ವಸ್ತು ವಾಸ್ತವಿಕ ಜೀವನಕ್ಕೆ ಸಂಬಂಧಿಸಿದ್ದರೆ

ಅವುಗಳಲ್ಲಿ ಒಂದೇ ದೃಶ್ಯವೂ, ಭೂತ-ಪ್ರೇತಗಳಿಗೆ ಸಂಬಂಧಿಸಿದ್ದಾಗಿದ್ದರೆ ಅವುಗಳಲ್ಲಿ ಎರಡು ದೃಶ್ಯಗಳೂ ಇರುತ್ತವೆ. ಎರಡು ದೃಶ್ಯಗಳಿರುವ ನಾಟಕಗಳ ತಾತ್ವಿಕ ವಿಶೇಷತೆಯೆಂದರೆ 'ನೋ' ನಾಟಕದ ಒಂದೇ ಪಾತ್ರವಾದ ಶಿಟೆ ಎರಡೂ ದೃಶ್ಯಗಳಲ್ಲಿ ಎರಡು ವಿಭಿನ್ನ ಪಾತ್ರಗಳನ್ನು ಧರಿಸಿ ಬರುತ್ತಾನೆ. ಮೊದಲನೆಯ ದೃಶ್ಯದಲ್ಲಿ ಭೂತ-ಪ್ರೇತವಾಗಿದ್ದ ಶಿಟೆ ಎರಡನೆಯ ದೃಶ್ಯದಲ್ಲಿ ಸಾಮಾನ್ಯ ರೈತನಾಗಿಯೂ ಸಹ ಬರಬಹುದು.

ಕ್ರಿಯೆ ಹಾಗೂ ಪಾತ್ರಗಳು

'ನೋ'ನ ಪ್ರಮುಖ ಉದ್ದೇಶ ಮಾನವ ಭಾವಗಳ ಸ್ಪರ್ಶ. ಈ ಉದ್ದೇಶದ ಪೂರ್ತಿ ಮನರಂಜನೆಯ ಮೂಲಕ ಸಹ ಆಗುತ್ತದೆ. ಆದರೆ ಈ ಮನರಂಜನೆ ಒಂದು ನಿಶ್ಚಿತ ಕ್ರಮದಲ್ಲಿಯೇ ಸಾಗಿ ಪ್ರತಿಯೊಂದು ತತ್ವವೂ ಸೂಚ್ಯವಾಗಿ ಗ್ರಾಹ್ಯವಾಗುತ್ತದೆ. ಮೊದಲಿಗೆ 'ನೋ'ನ ಆರಂಭ ಒಂದು ತೆರನಾದ ಕೀರಲು ಧ್ವನಿಯ ಕೆಲವೊಮ್ಮೆ ಕರ್ಕಶವಾದ ಕೊಳಲ ನುಡಿತದೊಂದಿಗೆ. ಈ ಕೀರಲು ಅಥವಾ ಕರ್ಕಶತೆಯ ಹಿಂದೆ 'ಪಾರಲೌಕಿಕ ಕಾತರತೆ ಹಾಗೂ ದುಃಖ'ದ ಭಾವ ಸೂಚ್ಯ. ಬ್ರೊಕೆಡ್ ಪರದೆ ಮೇಲಕ್ಕೆ ಸರಿಯುತ್ತದೆ ಹಾಗೂ ಜೊತೆಯಲ್ಲಿಯೇ ಕೆಲವರು ವ್ಯಕ್ತಿಗಳು ಬಟ್ಟೆಯಲ್ಲಿ ಸುತ್ತಿದ ಕೋಲುಗಳನ್ನು ಹಿಡಿದುಕೊಂಡು ಗಂಭೀರವಾದ ಮಂದ ಗತಿಯಲ್ಲಿ ರಂಗ ಮಂಟಪದ ಮೇಲಕ್ಕೆ ನಡೆದು ಬರುತ್ತಾರೆ. ಈ ಕ್ರಮ ಎಷ್ಟು ನಿರ್ದಿಷ್ಟವಾಗಿರುತ್ತದೆ ಎಂದರೆ, ನಾಟಕದ ಕಥಾ ವಸ್ತುವು ಯಾವುದೇ ಆಗಿರಲಿ, ಇದರ ಭಾವಾಭಿವ್ಯಕ್ತಿಯಲ್ಲಿ, ಚಲನೆಯಲ್ಲಿ ಗತಿಯಲ್ಲಿ ಯಾವ ತರಹೆಯ ಪರಿವರ್ತನೆಗೂ ಅವಕಾಶವಿಲ್ಲ. ಕೋಲು ಹಿಡಿದ ಭಟರ ಪ್ರವೇಶದ ನಂತರ ಸಂಗೀತಗಾರರ ಪ್ರವೇಶ. ಭಾವಾಭಿವ್ಯಕ್ತಿಯ ದೃಷ್ಟಿಯಿಂದ ಸಂಗೀತಗಾರರ ಮುಖಾಭಿವ್ಯಕ್ತಿ ಸಹ ಮಹತ್ವ ಪೂರ್ಣವಾದದ್ದೇ. ಅವರ ಮುಖದಲ್ಲಿ ಅನಿಚ್ಛೆ, ನಡಿಗೆಯಲ್ಲಿ ಗಾಂಭೀರ್ಯ ಪ್ರಕಟವಾಗಬೇಕು. ಇವರು ಹಾಶಿಗ-ಕಾರಿಯ ತುದಿಯಲ್ಲಿ ನಡೆದು ಬರಬೇಕು. ಇದೇ ಸಮಯಕ್ಕೆ ಸರಿಯಾಗಿ ಕೋರಸ್‌ನ ಎಂಟು ಹತ್ತು ಮಂದಿ ಗಾಯಕರು ಸಹ ಕಿರಿಡೊದಿಂದ ಪ್ರವೇಶಿಸಿ ತಮ್ಮ ಸ್ಥಾನದಲ್ಲಿ ಕುಳಿತು ಕೊಳ್ಳುತ್ತಾರೆ.

ನಂತರದಲ್ಲಿ, ರಂಗದ ಎಡ ತುದಿಯಲ್ಲಿ ಭೂಮಿಯ ಮೇಲೆ ಕೊಳಲು ಊದುವವನು ಹಾಗೂ ಅವನ ಪಕ್ಕದಲ್ಲಿ ಮಡಚುವ ಸ್ಟೂಲುಗಳ ಮೇಲೆ ಕೊತ್ಸುಜುಮಿ (kotsuzumi) ; ಓಕಾವ (okawa) ತಮಟೆವಾದಕರು ಕುಳಿತುಕೊಳ್ಳುತ್ತಾರೆ. ಕೊನೆಯಲ್ಲಿ, ರಂಗಮಂಟಪದ ಮೇಲೆ ಮಿಕ್ಕವರಿಗಿಂತ ಸ್ವಲ್ಪ ಹಿಂದೆ ಮಂಡಿಯ ಆಸರೆಯಲ್ಲಿ ತಮಟೆವಾದಕ (Taiko) ಕುಳಿತು ಕೊಳ್ಳುತ್ತಾನೆ.

ಇಷ್ಟಾದ ಮೇಲೆ, ಈಗ ಎರಡನೆಯ ಬಾರಿಗೆ ಕೊಳಲ ನುಡಿತ ಕೇಳಿ ಬರುತ್ತದೆ. ಈ ಸಾರಿ ಕೊಳಲ ತೃತಿಯ ಜೊತೆಗೆ ಮಿಕ್ಕ ವಾದ್ಯಗಳ ನಾದವೂ ಕೇಳಿಸುತ್ತದೆ. ಪಾತ್ರ ಹಾಗೂ ದರ್ಶಕರನ್ನು ಭಾವಾತ್ಮಕವಾಗಿ ಬೇರ್ಪಡಿಸಬೇಕೆಂಬುದೇ ಈ ಸಾರಿಯ ಕೊಳಲ ನುಡಿತದ ಉದ್ದೇಶ್ಯ. ಇಷ್ಟಾದ ಮೇಲೆ 'ನೋ' ನಾಂದಿಯಾಯಿತೆಂದು ನಾವು ಅರ್ಥ ಮಾಡಿಕೊಳ್ಳಬೇಕು.

'ನೋ'ನ ಭಾಷೆ ಕಾವ್ಯಮಯ ಹಾಗೂ 13–14ನೆಯ ಶತಮಾನದ ಕಾವ್ಯಗಳಿಂದ ಅರಿಸಿದುದ್ದಾಗಿದ್ದು ಪ್ರಾಚೀನ ಭಾಷಾ ಸೌಂದರ್ಯವನ್ನು ಎತ್ತಿ ಹಿಡಿಯುವಂತಹುದಾಗಿರುತ್ತದೆ. ಈ ಸಂದರ್ಭದಲ್ಲಿ ನಾವು ಮತ್ತೊಮ್ಮೆ ನಮ್ಮ ಪ್ರದೇಶದ ಯಕ್ಷಗಾನಗಳನ್ನು ಸ್ಮರಿಸಬಹುದು. ಭಾವೋದ್ರೇಕ, ಹಾಗೂ ಓಟದ ದೃಷ್ಟಿಯಿಂದ ಎರಡೂ ಜಾತಿಯ ಈ ದೃಶ್ಯಕಾವ್ಯಗಳಲ್ಲಿ ಪ್ರಾಚೀನ ಭಾಷಾ ಕಾವ್ಯಗಳಿಂದ ಆಯ್ದ ಪಂಕ್ತಿಗಳನ್ನು ಉದಾಹರಿಸುತ್ತಾರಾದರೂ ಯಕ್ಷಗಾನದ ನಟ, ಹಾಗೂ ದರ್ಶಕನಿಗೆ ಭಾಷೆ ಅಪರಿಚಿತವಾದುದಲ್ಲ, ಹಾಗೂ ಆತ ಪಂಕ್ತಿಗಳ ಅರ್ಥವನ್ನು ತಿಳಿದುಕೊಂಡಿರಬಲ್ಲ. ಆದರೆ 'ನೋ'ನ ವೈಶಿಷ್ಟ್ಯವೆಂದರೆ ದೇವರನ್ನು ಪ್ರತಿನಿಧಿಸುವ ನಟ ದೈವೀ ಭಾಷೆಯ ಪ್ರಯೋಗ ಮಾಡುತ್ತಿದ್ದಾನೆಂಬ ಭಾವನೆ ಒಳಗೊಂಡಿರುತ್ತಾದುದರಿಂದ ನಟನಾಗಲೀ, ದರ್ಶಕರಾಗಲೀ ಶಬ್ದಗಳ ಅರ್ಥ ಅರಿಯದವರಾಗಿರುತ್ತಾರೆ. ನಟ ಇನ್ನೆಷ್ಟೇ ಸ್ಪಷ್ಟವಾಗಿ ಶಬ್ದೋಚ್ಚಾರ ಮಾಡಿದಾಗ್ಯೂ ದರ್ಶಕನಿಗೆ ಅದನ್ನು ಅರ್ಥಮಾಡಿಕೊಳ್ಳುವುದು 'ನೋ'ನಲ್ಲಿ ಕಷ್ಟಸಾಧ್ಯ. ಹೀಗೆ 'ನೋ'ನ ದೀಕ್ಷೆ ಪಡೆದ ದರ್ಶಕ ಅರ್ಥವನ್ನು ರಹಸ್ಯನುಭೂತಿಯೆಂದು ಅನುಭವಿಸಬೇಕು.[1]

ಕೆಲವೊಂದು 'ನೋ' ನಾಟಕಗಳಲ್ಲಿ ನೃತ್ಯ ಇಲ್ಲದೆ ನೃತ್ಯ ಸೂಚನೆ ಮಾತ್ರ ಕಂಡುಬರುವುದು ಸಹ ಉಂಟು. ಚಲನೆ ಸಹ ಇಲ್ಲದಿರುವುದುಂಟು. ಚಲನೆ ಕಡಿಮೆಯಾದಷ್ಟೂ ಅದರ ಮಹತ್ವ ಹೆಚ್ಚು. 'ಸೆಕಿದೆರಾ ಕೊಮಾಚಿ' (Sekidera Komachi) ಎರಡು ಗಂಟೆಗಳ ಕಾಲ ನಡೆಯುವ ಒಂದು ನಾಟಕ. ನಾಟಕದ ಮೊದಲ 2 ಗಂಟೆಯ ಕಾಲ ನಾಟಕದ ಪ್ರಧಾನ ಪಾತ್ರವಾದ ಶಿಟೆ ರಂಗಮಂಟಪದ ಒಂದು ಹುಲ್ಲು ಗುಡಿಸಲು ಒಳಗೆ ಸುಮ್ಮನೆ ಕುಳಿತಿರುತ್ತಾನೆ. ಕ್ರಿಯಾ ಹೀನವಾದ ಈ ಅರ್ಧಗಂಟೆ ದರ್ಶಕರನ್ನು ಬೇಸರಗೊಳಿಸುವುದರ ಬದಲು ಮತ್ತೂ ಪ್ರಭಾವಿತಗೊಳಿಸುತ್ತದೆ. ಪಾತ್ರಧಾರಿ ಅಥವಾ ನಟ ಹೀಗೆ ಕುಳಿತುಕೊಂಡು ತನ್ನಲ್ಲಿನ ಆಂತರಿಕವಾದ ದೈವೀ ಶಕ್ತಿಯನ್ನು ಪ್ರಕಟಗೊಳಿಸಬೇಕೆಂಬುದು ಇದರ ಭಾವ. ಇದರಲ್ಲಿನ ಚಲನಾರಹಿತ ಸ್ಥಿತಿಯಲ್ಲಿನ ನೃತ್ಯ ದರ್ಶಕರ ಮೇಲೆ ಅತಿಯಾಗಿ ಪ್ರಭಾವ ಬೀರುತ್ತದೆ.

ತಾದಾತ್ಮ್ಯ ಅಥವಾ ಸಾಧಾರಣೀಕರಣ 'ನೋ' ನಾಟಕಗಳ ಸಾರ್ಥಕತೆಯೆಂದು ಹೇಳಬಹುದು. ಒಬ್ಬ ತಜ್ಞ ಹೇಳುವಂತೆ "ಇದೊಂದು ದೂರದ ಅಥವಾ

1 ನಮೂನೆಗಾಗಿ ಪರಿಶಿಷ್ಟ ನೋಡಿ

ದೈವೀ ಘಟನೆಗಳಿಗೆ ಸಂಬಂಧಿಸಿದ ನಾಟಕೀಯ ಕಾವ್ಯ ಸಾಮಾನ್ಯವಾಗಿ ಮುಖವಾಡ ಧರಿಸಿಕೊಂಡ ನರ್ತಕನಿಂದ ಪ್ರದರ್ಶಿಸಲ್ಪಡುತ್ತದೆ. ಆತ ಕೋರಸದೊಂದಿಗೆ ನಾಟಕದ ಇತರ ನಿಮ್ನ ಪಾತ್ರಗಳೊಂದಿಗೆ ಆ ಕಾವ್ಯದ ಆವೇಶಯುಕ್ತ ಗಾನದೊಂದಿಗೆ ಸೇರಿಕೊಳ್ಳುತ್ತಾನೆ".

ಹೀಗೆ ಶಿಟೆಯ ಕಾವ್ಯಮಯವಾದ ಭಾಷೆ ಆತನ ನೃತ್ಯದಿಂದ ಪುಷ್ಟಿಗೊಂಡು ನಾಟಕದ ಪ್ರತಿಯೊಂದು ಕ್ಷಣವನ್ನೂ ಸಂಗೀತದಲ್ಲಿ ಮುಳುಗಿಸುತ್ತದೆ.

ಸಂಗೀತ, ನೃತ್ಯ, ಕೋರಸ್‌ನಿಂದ ಕೂಡಿದ 'ನೋ' ರಂಗಮಂಟಪವು ಈ ಕೆಲ ಅಂಶಗಳಲ್ಲಿ ಗ್ರೀಕ್ ನಾಟಕಗಳ ಪರಂಪರೆಯನ್ನು ಹೋಲಿದರೆ ಆಶ್ಚರ್ಯವೇನಿಲ್ಲ. ಗ್ರೀಕ್ ನಾಟಕಗಳಲ್ಲಿ ಆದಿ, ಮಧ್ಯ, ಅಂತ್ಯ ಈ ಮೂರು ಸ್ಥಿತಿಗಳು ಅತ್ಯಂತ ಮಹತ್ವಪೂರ್ಣವಾದವುಗಳು. ಆದರೆ 'ನೋ' ನಾಟಕಗಳಲ್ಲಿ 'ಶಿಮಾಯಿ'ಯಿಂದ ಕೊನೆಯಾಗುವ ಪರಾಕಾಷ್ಠೆಯೇ ಮಹತ್ವದ್ದು. ಸಾಯುವದಕ್ಕಿಂತ ಮುಂಚೆ ಯಾವ ವ್ಯಕ್ತಿಯೂ ತನ್ನನ್ನು ಸುಖಿಯೆಂದು ಕರೆದುಕೊಳ್ಳಲು ಸಾಧ್ಯವಿಲ್ಲ ಎನ್ನುವುದು ಗ್ರೀಕ್ ನಾಟಕಗಳ ತತ್ವ. 'ನೋ' ನಾಟಕಗಳೂ ಸಹ ದುಃಖಾಂತ ಗಳಾದರೂ 'ನೋ'ನ ನಾಯಕ ಸಾಧಾರಣವಾಗಿ ಸೂತ್ರಧಾರನ ಪ್ರವೇಶಕ್ಕೂ ಮೊದಲೇ ಗತಿಸಿ ಹೋಗಿರುತ್ತಾನೆ. ಅಷ್ಟೇ ಅಲ್ಲ ಏಕೆ ಸತ್ತವರು ಕೆಲವೊಮ್ಮೆ ಹಿಂದಿರುಗಿ ಬಂದು ಸಹ ತಮ್ಮ ಕಷ್ಟಸುಖಗಳನ್ನು ರಂಗದಮೇಲೆ ಹೇಳಿಕೊಳ್ಳುವ ದೃಶ್ಯಗಳು ಸಹ 'ನೋ'ನಲ್ಲಿ ಕಾಣಬರುತ್ತವೆ. ಹೀಗೆ 'ನೋ' ನಾಟಕಗಳು ಸತ್ತವರ ಶಾಂತಿ ಕೋರುವ ನಾಟಕಗಳು. ಗ್ರೀಕ್ ನಾಟಕಗಳಂತೆ ಸಾಯುವವರೆಗೆ ಶಾಂತಿಯ ಕಲ್ಪನೆ ಸಹ ತಾರದ ನಾಟಕಗಳಲ್ಲಿ ಗ್ರೀಕ್ ನಾಟಕಗಳ ಪಾತ್ರಗಳೆಲ್ಲ ಜೀವಂತ ಮೂರ್ತಿಗಳು. ಆದರೆ 'ನೋ'ನ ಪಾತ್ರಗಳೆಲ್ಲವೂ ಛಾಯೆಗಳು. ಹೀಗೆ 'ನೋ'ನಲ್ಲಿ 'ಜೆನ್‌ತತ್ವದ' ನಿರಾಶಾವಾದಿತೆ ಹಾಗೂ ನೃತ್ಯಗಳಲ್ಲಿ ಶಿಂಟೋನ ಜೀವದ ಬಗೆಗಿನ ಪ್ರೇಮ ಎರಡೂ ಎದ್ದು ಕಾಣುತ್ತದೆ.

'ನೋ'ನ ಸೌಂದರ್ಯ ತತ್ವ

'ನೋ'ನ ವೈಶಿಷ್ಟ್ಯವೆಂದರೆ ಅದರ ಮುಖವಾಡಗಳು. ಈ ಮುಖವಾಡಗಳು ಕೆತ್ತನೆಕಾರನ ಸೂಕ್ಷ್ಮ ಕಲಾತ್ಮಕ ಪ್ರಜ್ಞೆಯನ್ನು ಎತ್ತಿಹಿಡಿಯುತ್ತವೆ. ಯಾವುದೇ ಪಾತ್ರವನ್ನು ಪ್ರತಿನಿಧಿಸುವ ಮುಖವಾಡವಾಗಿರಲಿ, ಕಲಾತ್ಮಕವಾಗಿ ಆ ಭಾವಾಭಿವ್ಯಕ್ತಿ ಯಲ್ಲಿ ಜಪಾನಿನ ಈ ಮುಖವಾಡಗಳು ಸಂಪೂರ್ಣ ಸಫಲವಾಗಿರುತ್ತವೆ.

ಮುಖವಾಡಗಳನ್ನು ಹಿನೋಕಿ ಮರದಿಂದ ಮಾಡಿರುತ್ತಾರೆ ಮತ್ತು ಅವುಗಳ ಮುಖವನ್ನು ಚೀನೀ ಮಣ್ಣಿನಿಂದ ಮೆತ್ತಿ ಕಣ್ಣು ಮೂಗು ಇತ್ಯಾದಿಗಳನ್ನು ಕೆತ್ತಿರು ತ್ತಾರೆ. ಪಾತ್ರಗಳಿಗೆ ತಕ್ಕಂತೆ ಅವುಗಳ ಮುಖಕ್ಕೆ ಬಣ್ಣ ಹಾಕಿರುತ್ತಾರೆ.

ಈ ಮುಖವಾಡಗಳು ಸಾಮಾನ್ಯವಾಗಿ ಎಂಟರಿಂದ ಹತ್ತು ಅಂಗುಲ ಉದ್ದವೂ ಪಾತ್ರಕ್ಕನುಗುಣವಾಗಿ ಅಗಲವಾಗಿಯೂ ಇರುತ್ತವೆ. ಪಾತ್ರಧಾರಿಯ ಮುಖವನ್ನು ಈ ಮುಖವಾಡದಿಂದ ಪೂರ್ತಿಯಾಗಿ ಮುಚ್ಚಲಾಗುವುದಿಲ್ಲ. ಆದುದರಿಂದ ದರ್ಶಕರಿಗೆ ಕಾಣಿಸಬಹುದಾದ ಕೆನ್ನೆಯ ಭಾಗವನ್ನು ಕೆಂಪು ಅಥವಾ ಹಳದಿ ಬಣ್ಣದಿಂದ ಮೆತ್ತಿರುತ್ತಾರೆ. ಶಕುಮಿ ಬೆಶಿಮಿ, ಕೊಮೊಟ, ಕ್ಯೋಜಿನ್ ಇತ್ಯಾದಿಗಳು ಪ್ರಸಿದ್ಧವಾದ 'ನೋ' ಮುಖವಾಡಗಳು.

ಯಾವ ವಯಸ್ಸಿನ ವ್ಯಕ್ತಿಯೇ ಆಗಲಿ, ಉಡುಪುಗಳ ನಡುವೆ ಈ ಮುಖವಾಡಗಳನ್ನು ಧರಿಸಿ, ತನ್ನ ಸಮಯೋಚಿತವಾದ ನಡಿಗೆ ಹಾಗೂ ಕಣ್ಣಿನ ಚಲನೆಯಿಂದ ಪ್ರಭಾವಾನ್ವಿತಿಯಲ್ಲಿ ಸಫಲತೆಯನ್ನು ಸಾಧಿಸಲು ಪ್ರಯತ್ನಿಸುತ್ತಾನೆ.

ನಮ್ಮ ನಾಡಿನ ಲೋಕ ನಾಟ್ಯವಾದ ಯಕ್ಷಗಾನಗಳಲ್ಲಿಯೂ ಮುಖವಾಡಗಳನ್ನು ಉಪಯೋಗಿಸುವ ಪದ್ಧತಿ ಇದ್ದರೂ ಅದು ಗರುಡ ಇತ್ಯಾದಿ ನಿಮ್ನ ಪಾತ್ರಗಳಿಗೆ ಸೀಮಿತವಾಗಿದೆ.

ಯುಗೆನ್ 'ನೋ' ಸಾಹಿತ್ಯದ ಆಂತರಿಕವಾದ, ಸೌಂದರ್ಯ ತತ್ವ. ಇದನ್ನು ಜಿಯಾಮಿ ಹಾಗೂ ಇನ್ನಿತರ ಸಮೀಕ್ಷಕರು ''flower'' ಹೂ ಎಂದು ಬಣ್ಣಿಸುತ್ತಾರೆ. 'ಯುಗೆನ್' ಶಬ್ದಾರ್ಥ ಕತ್ತಲೆ ಅಥವಾ ರಹಸ್ಯಾತ್ಮಕ ಮಬ್ಬು ಎಂದಾಗುತ್ತದೆ. 'ನೋ' ಸಾಹಿತ್ಯದಲ್ಲಿ ಈ ಶಬ್ದ ಪ್ರತೀಕಾತ್ಮಕವಾಗಿ ಪ್ರಯುಕ್ತವಾಗಿದೆ. ಅಂದರೆ 'ನೋ' ನಾಟಕದ ಪ್ರತಿಯೊಂದು ಅಂಶವೂ ರಹಸ್ಯಾತ್ಮಕತೆಯನ್ನು ಗೌರವಯುತವಾಗಿ ಪ್ರಕಟಪಡಿಸಲಿ ಎಂಬುದು ಅಭಿಪ್ರಾಯ. ಜಿಯಾಮಿಯ ಸಮೀಕ್ಷೆಯಲ್ಲಿ ವಿಕೃತ ಹಾಗೂ ಭಯಂಕರವಾದ ಪಾತ್ರಗಳನ್ನು ಪ್ರದರ್ಶಿಸುವಾಗ ಕೂಡ ಅವು ಯುಗೆನ್ ನಿಂದ ಕೂಡಿರಬೇಕೆಂದು ಹೇಳಲಾಗಿದೆ. "ಕಿತಾ ರೊಪ್ಪಿತಾ" ಎಂಬ ಹೆಸರಿನ ನಾಟಕದಲ್ಲಿ ಸಾಗಿ (ಬಿಳಿ ನಾಯಕ) ಶಿಟೆಯಾಗಿ ನರ್ತಿಸುವಾಗ, ಎಂಭತ್ತು ವರ್ಷದ ವ್ಯಕ್ತಿಯು ಪಕ್ಷಿಯ ಪಾತ್ರ ವಹಿಸಿಬಂದಾಗ, ಯುಗೆನ್ ರಹಸ್ಯಾತ್ಮಕ ತತ್ವ ಸ್ಪಷ್ಟವಾಗಿ ಕಂಡುಬರುತ್ತದೆ.

ಜಪಾನೀ ಸಾಹಿತ್ಯದಲ್ಲಿ 'ನೋ' ಪರಂಪರಾಗತವಾದ ಕಲೆಯಾಗಿ ಬೆಳೆದು ಬಂದಿದೆ. ಹಿಂದೆಯೇ ಹೇಳಿರುವಂತೆ, 'ನೋ'ನ ಕಲಿತು ನಟಿಸುವುದು ರಾಜರ ಕರ್ತವ್ಯವೆಂಬಂತೆ ಪ್ರಕಟಗೊಂಡಿತ್ತು. ಜಿಯಾಮಿಯಂತಹ ಸಮೀಕ್ಷಕರು ಸಹ ನಟನ ಯೋಗ್ಯತೆ ಕಲಿಯುವ ಕಲಾವಧಿಗಳ ಬಗ್ಗೆ ಸಂಪೂರ್ಣವಾಗಿ ವಿಶ್ಲೇಷಣೆಯನ್ನೇ ನೀಡಿದ್ದರು. 'ಮೊನೊಮನೆ' (Monomane) ಶಬ್ದದ ಅರ್ಥ ಸಹ ನಕಲು ಎಂದೇ ಆಗುತ್ತದೆ. ಅದರಲ್ಲಿ ಅವನು ನಿಪುಣನಾಗಿದ್ದಾನೆಂದರೆ, 'ನೋ'ನ ಪ್ರತೀಕಾತ್ಮಕತೆಯನ್ನು ಪ್ರಕಟಿಸುವುದರಲ್ಲಿ ನಿಪುಣ ಎಂದರ್ಥವಾಗುತ್ತದೆ. ಜಿಯಾಮಿಯು

ಅಭಿಪ್ರಾಯದಲ್ಲಿ 30 ವರುಷಗಳ ವಯಸ್ಸಿನೊಳಗಾಗಿ ಕೀರ್ತಿ ಸಂಪಾದಿಸದ ವ್ಯಕ್ತಿ ನಿಪುಣ ಕಲೆಗಾರನಾಗಲಾರನೆಂಬುದಾಗಿತ್ತು.

ಈ ರೀತಿ 'ನೋ' ಜಪಾನಿನ, ಅಷ್ಟೇ ಅಲ್ಲ ವಿಶ್ವದ ವಿಶಿಷ್ಟ ನಾಟ್ಯ ನಾಟಕ ಪ್ರಕಾರ. ಚಿಂತನೆ ಮನರಂಜನೆ ಒಟ್ಟಾಗಿ ಮನತಣಿಸುವ ತಂಪಾದ ಸಾಹಿತ್ಯ ಪ್ರಕಾರ.

ಪರಿಶಿಷ್ಟ

ಘನ ಬೆಂಕಿಯು ನಾಟಕದ ಕೆಲವು ಭಾಗಗಳು :

ಶಿಟೆ (ಮೊದಲ ಭಾಗ) ಶಿಜುಕ (ಎರಡನೆಯ ಭಾಗ) ಟೊಮೊಮೊರಿಯು ಭೂತ

ವಾಕಿ	:	ಬೆಂಕಿ
ವಾಕಿ ಸುರೆ	:	ಒಬ್ಬ ಭೃತ್ಯ
ಕೊಕಟ	:	ಯೊಶಿತ್ಸುನೆ
ಐ	:	ಒಬ್ಬ ನಾವಿಕ

(ಮೊದಲ ಭಾಗ)

ಕಲ್ಯಾಟೊದಿಂದ ಅಮಗಸಕಿಗೆ ಯಾತ್ರೆ

(ಮಿನಮೊಟೊನೊ ಯೊಶಿತ್ಸುನೆ ತನ್ನ ಭೃತ್ಯರೊಡನೆ ಮತ್ತು ಮುಸಶಿಬೋ ಬೆಂಕೈ ಜೊತೆ ರಂಗ ಮಂಟಪದ ಮೇಲಕ್ಕೆ ಪ್ರವೇಶಿಸುತ್ತಾನೆ. ರಂಗದ ಮಧ್ಯ ಭಾಗದಲ್ಲಿ ಯೊಶಿತ್ಸುನೆ ತನ್ನ ಹಿಂಬಾಲಕರ ಎದುರಿಗೆ ನಿಂತುಕೊಳ್ಳುತ್ತಾನೆ).

ಬೆಂಕೈ ಮತ್ತು ಭೃತ್ಯರು :

ಈ ದಿನ ನಾವು ನಮ್ಮ ಯಾತ್ರೆಗೆಂದು ಹೊರಟಿದ್ದೇವೆ
ಈ ದಿನ ನಾವು ನಮ್ಮ ಯಾತ್ರೆಗೆ ಹೊರಟಿದ್ದೇವೆ
ನಮ್ಮ ರಾಜಧಾನಿಗೆ ಯಾವಾಗ ಹಿಂದಿರುಗೋಣ ?

ಕೋರಸ್ :

ಈ ದಿನ ನಾವು ನಮ್ಮ ಯಾತ್ರೆಗೆಂದು ಹೊರಟಿದ್ದೇವೆ
ನಮ್ಮ ರಾಜಧಾನಿಗೆ ಯಾವಾಗ ಹಿಂದಿರುಗೋಣ ?
(ಬೆಂಕೈ ದರ್ಶಕರ ಕಡೆಗೆ ಮುಖಮಾಡಿ ತನ್ನ ಪರಿಚಯ ಮಾಡಿಕೊಡುತ್ತಾನೆ)

ಬೆಂಕ್ಯೆ :

ನಾನು ಪಶ್ಚಿಮ ಪಗೋಡದ ಮುಸಶಿಬೋ ಬೆಂಕ್ಯೆ. ನನ್ನ ಯಜಮಾನ ಹೋಗನ್ ಪಶ್ಚಿಮಕ್ಕೆ ಓಟತೆಗೆದಿದ್ದಾನೆ. ಆದುದರಿಂದ ನಾವೆಲ್ಲ ಈ ದಿನ ಅಮಗಸಕಿಯಲ್ಲಿರುವ ದಯಮೊತ್ಸು ಕೊಲ್ಲಿಗೆ ಹೋಗಬೇಕೆಂದು ರಾತ್ರಿ ಬೆಳಿಗ್ಗೆ ಅವಸರವಾಗಿ ಪ್ರಯಾಣ ನಡೆಸಿದ್ದೇವೆ.

(ಪ್ರಯಾಣ ಮುಗಿಯಿತೆಂದು ನಟನೆ ಮಾಡಲು ಎಲ್ಲರೂ ದರ್ಶಕರ ಕಡೆಗೆ ಮುಖ ಮಾಡುತ್ತಾರೆ).

ಬೆಂಕ್ಯೆ :

ನಾವು ಅವಸರ ಮಾಡಿದುದರಿಂದ ತ್ಸು ಪ್ರದೇಶದ ಅಮಗಸಕಿಯಲ್ಲಿರುವ ದಯಮಾತ್ಸು ಕೊಲ್ಲಿಯನ್ನು ತಲಪಿದ್ದೇವೆ.

(ಯೊಶಿತ್ಸುನೆ ವಾಕಿ ಕಂಭಕ್ಕೆ ತೆರಳಿ ಅಲ್ಲಿ ಕುಳಿತುಕೊಳ್ಳುತ್ತಾನೆ. ಆತನ ಭೃತ್ಯರೂ ಸಹ ಅವನ ಪಕ್ಕದಲ್ಲಿ ಕುಳಿತುಕೊಳ್ಳುತ್ತಾರೆ. ಬೆಂಕ್ಯೆ ಶಿಟೆ ಕಂಭಕ್ಕೆ ತೆರಳುತ್ತಾನೆ.)

ಅಮಗಸಕಿಯಲ್ಲಿ ಯೊಶಿತ್ಸುನೆಯ ವಾಸಸ್ಥಾನ

(ನೃತ್ಯದ ಭೂಮಿಕೆ ಮುಂದುವರಿಯುತ್ತದೆ).

ಕೋರಸ್ :

ನಂಬಿಕೆಯೊಂದಿಡು

(ಶಿಜುಕ ಸಂಗೀತಲಯದ ಜೊತೆಯಲ್ಲಿ ಚೂನೊಮೊಯಿ ನೃತ್ಯವನ್ನು ಸುಂದರ ವಾಗಿ ನರ್ತಿಸುತ್ತಾಳೆ. ಅವಳು ನೃತ್ಯ ಮುಗಿಸುತ್ತಾಳೆ).

ಶಿಜುಕ :

ನಂಬಿಕೆಯೊಂದಿಡು

ಶಿಮೊಜಿಯ ಕದಿರು ಕಡ್ಡಿಗಳಂತೆ ಅಸಹಾಯನಾದರೂ

ಸರಳ

ಕೋರಸ್ :

ನಾನು ಈ ಪ್ರಪಂಚದಲ್ಲಿ ಇರುವಷ್ಟು ದಿನ.

(ಎರಡನೆಯ ಭಾಗ)

ಸಮುದ್ರದ ಮಧ್ಯೆ ಯೊಶಿತ್ಸುನೆಯ ನಾವೆಯಲ್ಲಿ

ಬೆಂಕ್ಯೈ :

ಓ ಗಾಳಿ ಬದಲಾಯಿಸಿದೆ. ಮುಕೊ ಪರ್ವತದಿಂದ ಬೀಸುತ್ತಿರುವ ಚಂಡ ಮಾರುತ ಯಜುರಿಹ ಶಿಖರದಿಂದ ಬೀಸಿ ಬರುತ್ತಿರುವ ಬಿರುಗಾಳಿ ನಮ್ಮ ಈ ನಾವೆ ದಡ ತಲುಪಬಹುದೆಂಬ ಆಸೆ ದೂರಗೊಳಿಸಿದೆ. ಎಲ್ಲರೂ ಒಮ್ಮನದಿಂದ ಪ್ರಾರ್ಥನೆ ಮಾಡಿ.

ಭೃತ್ಯ :

ಮುಸಶಿ ಸ್ವಾಮಿ, ನಾನು ತಮಗೆ ಏನೋ ಹೇಳಬೇಕು.

ಬೆಂಕ್ಯೈ :

ಏನದು ?

ಭೃತ್ಯ :

ಈ ನಾವೆಯಲ್ಲಿ ಒಂದು ಭೂತ ಅಡಗಿಕೊಂಡಿದೆ.

ಬೆಂಕ್ಯೈ :

ಆ್ಹ, ಒಂದು ನಿಮಿಷ ತಡೆ. ನಾವೆಯಲ್ಲಿರುವಾಗ ನೀನು ಇಂತಹ ಮಾತು ಹೇಳಬಾರದು. ನಾನು ನನ್ನ ನಾವಿಕ ಇದನ್ನು ನಿರ್ಣಯಿಸಿಕೊಳ್ಳುತ್ತೇವೆ. ನೀನು ಸುಮ್ಮನಿರು.

ನಾವಿಕ :

(ಸ್ವಲ್ಪ ರೇಗಿ) ಅವನು ಹೀಗೆಯೇ ಹೇಳಬಹುದೆಂದು ನಾನು ತಿಳಿದಿದ್ದೆ. ನಾನು ಅವನ ಮುಖ ನೋಡಿದಾಗಲೇ ಅರ್ಥ ಮಾಡಿಕ್ಕೊಂಡೆ. ನಾವೆಯಲ್ಲಿರು ವಾಗ ಯಾರು ತಾನೆ ತಾನೆ ಇಂತಹ ಮಾತು ಹೇಳುತ್ತಾರೆ.

ಬೆಂಕ್ಯೈ :

(ನಾವಿಕನನ್ನು ಸಮಾಧಾನಗೊಳಿಸುತ್ತಾ) ತಪ್ಪು ಅರ್ಥ ಮಾಡಿಕೊಳ್ಳಬೇಡ. ಅವನಿಗೆ ನಾವೆಗಳ ವಿಷಯ ಏನೂ ತಿಳಿಯದು ಅಷ್ಟೆ. ನನಗಾಗಿ ಅವನನ್ನು ಕ್ಷಮಿಸು.

ನಾವಿಕ :

ಆಗಬಹುದು ಸ್ವಾಮಿ. (ಭೃತ್ಯನ ಕಡೆಗೆ ತಿರುಗಿ) ಆ ರೀತಿ ಮಾತನಾಡಬೇಡ ಲೈ, ಲೈ, (ಸಂಗೀತ ಜೋರಾಗುತ್ತದೆ). ಓ ಒಂದು ದೊಡ್ಡ ಕರಿಯ ಅಲೆ ಆ ಕಡೆಯಿಂದ ಪುನಃ ಬರುತ್ತಲಿದೆ, ಆ–ರ್‍ಯ, ಅ–ರ್‍ಯ, ಅ–ರ್‍ಯ, ಅ–ರ್‍ಯ, ಅ–ರ್‍ಯ, ಅ–ರ್‍ಯ, ಅ–ರ್‍ಯ, ನೋಡಿ ಆ ಅಲೆಗಳನ್ನು, ಆ ಅಲೆಗಳನ್ನು. ಆ ಅಲೆಗಳನ್ನು, ಶಾಂತವಾಗು, ಶಾಂತ, ಶಾಂತ...... (ಅಲೆಗಳು ಶಾಂತವಾಗುತ್ತವೆ) (ಬೆಂಕ್ಯೈ ಸಮುದ್ರದಿಂದಾಚೆ ನೋಡುತ್ತಾನೆ).

ಬೆಂಕೈ :

ಆಶ್ಚರ್ಯಕರ ಅದ್ಭುತ ದೃಶ್ಯ; ಪಶ್ಚಿಮದಲ್ಲಿ ನಾಶವಾಗಿದ್ದ ಹೈಕೆ ಶ್ರಿಮಂತರು ಪ್ರತಿಯೊಬ್ಬರೂ ಸಮುದ್ರದಿಂದ ಮೇಲೆ ಏಳುತ್ತಿರುವುದನ್ನು ನೋಡುತ್ತಿದ್ದೇವೆ. ಆಶ್ಚರ್ಯವಿಲ್ಲ. ಸೇಡುತೀರಿಸಿಕೊಳ್ಳಲು ಇಂತಹ ಗಳಿಗೆಗಾಗಿ ಅವರು ಕಾಯುತ್ತಿರಬೇಕು.

ಯೊಶಿತ್ಸುನೆ :

(ಸ್ಥಿರವಾಗಿ) ಬೆಂಕೈ ಇತ್ತ ಬಾ.

ಬೆಂಕೈ :

(ಮಂಡಿಯೂರಿ) ಸ್ವಾಮಿ, ಏನು ಸೇವೆ ಮಾಡಲಿ.

ಯೊಶಿತ್ಸುನೆ :

ಭೂತ ಎಷ್ಟೇ ಕೆಟ್ಟದ್ದನ್ನು ಬಯಸಿದರೂ, ಹೆದರಲು ಕಾರಣವಿಲ್ಲ. ದೇವರುಗಳನ್ನು, ಬುದ್ಧರನ್ನು, ಧಿಃಕ್ಕರಿಸುವ ಅವುಗಳ ಎಷ್ಟೇ ಕುಚೇಷ್ಟೆಗಳು ಹೈಕೆ ಪಂಗಡದವರೆಲ್ಲ ಸ್ವರ್ಗದ ಇಚ್ಛೆಯಿಂದ ಮುಳುಗಿ ಹೋಗುವಂತೆ ಮಾಡಿವೆ.

ಕೋರಸ್ :

ಈ ಪಂಗಡದ ಪಾಳೆಗಾರರು ನೋಡ, ಇಬ್ಬನಿಗಳ ಹಾಗೆ ಅಲೆಗಳ ಮೇಲೆ ಎದ್ದು ಕಾಣಿಸುತ್ತಾರೆ.

(ತೊಮೊಮೊರಿ, ಅವರ ಕೆದರಿದ ಕೂದಲು, ಅವನ ಬಾಹುವಿನ ಕೆಳಗೆ ಒಂದು ಈಟಿ ಹಿಡಿದುಕೊಂಡು ರಂಗಮಂಟಪದ ಕಡೆಗೆ ಧಾವಿಸುತ್ತಾನೆ).

ತೊಮೊಮರಿ :

ನಾನು ತೈರನೊ ತೊಮೊಮೊರಿಯ ಭೂತ, ಚಕ್ರವರ್ತಿ ಕಮ್ಮುವಿನ ಒಂಭತ್ತನೆಯ ಪೀಳಿಗೆಯ ಉತ್ತರಾಧಿಕಾರಿ.

(ಅವನು ಹೀಗೆ ಹೇಳಿ ನಾವೆಯ ಕಡೆಗೆ ನೋಡುತ್ತಾನೆ).

ಅನಿರೀಕ್ಷಿತ ಸುಖ ಯೊಶಿತ್ಸುನೆ,

ನಿನ್ನನ್ನು ನಾನು ಸಮುದ್ರದಲ್ಲಿ ಕಾಣಬಹುದೆಂದುಕೊಂಡಿರಲಿಲ್ಲ.

ಕೋರಸ್ :

ಅಲೆಗಳ ಶಬ್ದದಿಂದ ನಿರ್ದೇಶಿತನಾಗಿ ನಾನು ನಿನ್ನ ನಾವೆಗೆ ಬಂದೆ.

ದುಃಖಿ

ಬಿ. ರಾಜಣ್ಣ

ಹೇಳಿದರು ಹಾಳಾಗದ, ಹೇಳದಿದ್ದರೆ ಹೆಚ್ಚಿ
ಗೋಳು ಕರೆಯುವ ಈ ಅಳಲಿಗೆ, ದುಃಖಕ್ಕೆ, ಮೂಕವೇದನೆಗೆ
ಈ ನರಪೇತಲ ಕಾಯ, ಪ್ರೇತರೂಪ, ಕೀರಲುಧ್ವನಿ ಕಾರಣವೆ ?
ಇರುವ ಹುಳುಕು ಕೊಳಕನ್ನೆಲ್ಲ ಥಳಕುಮಾತಿನ ತೆರೆಮರೆಸಿ
ಇರಬಹುದಾದಷ್ಟಿಷ್ಟು ಬುದ್ಧಿ ಬಂಡವಾಳದಲ್ಲೆ
ನಾಕು ಬಾಯೊಲ್ಲೊಂದು ಚಲೋ ಸುದ್ದಿಯಾಗದಿರುವುದೆ ?
ಉಂಡು ಮಲಗುವ ಮನೆಯಿಂದ ಹಿಡಿದು ಬದುಕಿನೆಲ್ಲ ರಂಗದಲಿ
ತುಂಬಿ ತುಳುಕುವನ್ಯಾಯ, ಹಿಂಸೆ, ಠಕ್ಕುತನ, ವಂಚನೆಗಳೆ ?
ಅಥವ,
ಬೇಕಾದಕಡೆ ಹೋಗಲು, ಬೇಕಾದ್ದು ನೋಡಲು, ಮಾಡಲು,
ಕೊಳ್ಳಲು
ಕಾಲುಶತಮಾನ ಕಳೆದರೂ ಆಗದಿರುವುದೆ ?
ವಿಶಿಷ್ಟವೆಂದುಕೊಂಡು ನಾ ಹೇಳುವುದನ್ನು, ಮಾಡುವುದನ್ನು
ನಾಕು ಜನ ಅಹುದಹುದೆನ್ನದಿರುವುದೆ ?
ಅಥವ, ನನ್ನ ಅಂಕೆಗೆ ಸಿಗದ, ಘನತೆಗೆ ತಗದ
ಹೆತ್ತುಹುಟ್ಟಿಸಿದ ಹಳ್ಳಿಯ ಅಪ್ಪ-ಅವ್ವಗಳೆ ?
ಅಥವಾ ರಟ್ಟೆ ಮುರಿಯದೆ ಹೊಟ್ಟೆತುಂಬಿಸಿಕೊಳುವ
ಆಸೆಕಾಮನ ಬಿಲ್ಲು ಆಕಾಶದಲ್ಲೆ ಅಂತರ್ಧಾನವಾಗುವುದೆ ?
ಅಥವಾ...?

ಪ್ರಾಚೀನ ಕರ್ನಾಟಕದಲ್ಲಿ ವೃಕ್ಷಾರೋಪಣ*

ಎಂ. ಚಿದಾನಂದ ಮೂರ್ತಿ

ಕಾಲಿದಾಸನ ಶಾಕುಂತಲವನ್ನು ಕೇಳದ ಭಾರತೀಯರು ಯಾರೂ ಇಲ್ಲ. ಆ ನಾಟಕದಲ್ಲಿ ಬರುವ ಶಕುಂತಲೆಯನ್ನು ಓಡಾಡುವ ಬಳ್ಳಿ ಎಂದು ವಿಮರ್ಶಕರು ವರ್ಣಿಸಿದ್ದಾರೆ. ಕಣ್ವರ ಆಶ್ರಮದಲ್ಲಿ ಗಿಡ ಮರ ಬಳ್ಳಿಗಳಿಂದ, ಹೂವು ಹಣ್ಣುಗಳಿಂದ, ಜಿಂಕೆಗಳಿಂದ ನಳ ನಳಿಸುತ್ತಿದ್ದ ಆ ಸುಂದರ ತಪೋವನದಲ್ಲಿ ಶಕುಂತಲೆ ಪ್ರಕೃತಿಯ ಒಂದು ಭಾಗವಾಗಿ ಬೆಳೆದಳು. ಆ ತಪೋವನದ ಗಿಡ ಬಳ್ಳಿಗಳಿಗೆ ಅವಳೇ ನೀರೆರೆಯಬೇಕು. ಇಲ್ಲದಿದ್ದರೆ ಅವಳಿಗೆ ಸಮಾಧಾನವಿಲ್ಲ. ಅಂತಹ ಶಂಕುಂತಲೆ ತನ್ನನ್ನು ಗಾಂಧರ್ವ ರೀತಿಯಲ್ಲಿ ಕೈಹಿಡಿದ ದುಷ್ಯಂತನ ಮನೆಗೆ ಹೊರಟು ನಿಂತಿದ್ದಾಳೆ. ಅವಳ ಸಾಕು ತಂದೆ ಕಣ್ವ ; ಋಷಿಗಳೂ ಸಂಯಮಿಗಳೂ ಲೋಕ ನಿಯಮವನ್ನು ಅರಿತಿದ್ದ ಅಂತಹ ಕಣ್ವರಿಗೂ ದುಃಖ ಒತ್ತರಿಸಿ ಬಂದಿದೆ. ಅದೊಂದು ತೀರ ಭಾವಪೂರ್ಣವಾದ ಸನ್ನಿವೇಶ. ಅವರು ಹೇಳುತ್ತಾರೆ :

> ಪಾತುಂ ನ ಪ್ರಥಮಂ ವ್ಯವಸ್ಯತಿ ಜಲಂ ಯುಷ್ಮಾಸ್ವಪೀತೇಷು ಯಾ
> ನಾದತ್ತೇ ಪ್ರಿಯ ಮಂಡನಾಪಿ ಭವತಾಂ ಸ್ನೇಹೇನ ಯಾ ಪಲ್ಲವಂ
> ಆದ್ಯೇ ವಃ ಕುಸುಮಪ್ರಸೂತಿ ಸಮಯೇ ಯಸ್ಯಾ ಭವತ್ಯುತ್ಸವಃ
> ಸೇಯಂ ಯಾತಿ ಶಕುಂತಲಾ ಪತಿಗೃಹಂ ಸರ್ವೈರನುಜ್ಞಾಯತಾಂ

ಆಶ್ರಮದ ಸಸ್ಯಗಳಿಗೆ ತಾನೇ ಕೈಯಾರೆ ನೀರೆರೆಯದೆ ತನಗೆ ಬಾಯಾರಿಕೆ ಯಾದರೂ ನೀರು ಕುಡಿಯುತ್ತಿರಲಿಲ್ಲ, ಶಕುಂತಲೆ. ಅಲಂಕರಿಸಿಕೊಳ್ಳುವ ಆಸೆ ಯಿದ್ದರೂ ಅವುಗಳ ತಳಿರನ್ನು ಕೊಯ್ಯುತ್ತಿರಲಿಲ್ಲ. ಅವು ಹೂವು ಬಿಟ್ಟಾಗ ಅವಳು ಎಲ್ಲರಿಗೆ ಮೊದಲು ಸಂತೋಷಪಡುತ್ತಿದ್ದಳು. ಅಂತಹ ಶಕುಂತಲೆಗೆ ಗಂಡನ ಮನೆಗೆ ಹೋಗಲು ಅಪ್ಪಣೆ ಕೊಡಿರೆಂದು ಕಣ್ವರು ವನದೇವತೆ ಗಳನ್ನು ಕೇಳಿ ಕೊಳ್ಳುತ್ತಾರೆ. ಶಕುಂತಲೆಯೂ ತಾನು ನೀರೆರೆದು ಸಾಕುತ್ತಿದ್ದ ಗಿಡ ಬಳ್ಳಿಗಳನ್ನು ಗೆಳತಿಯರಿಗೆ ಒಪ್ಪಿಸಿ ಕಣ್ಣೀರು ಸುರಿಸುತ್ತ ಆಶ್ರಮದಿಂದ ಹೊರಡು ತ್ತಾಳೆ. ಆಶ್ರಮದ ಸಸ್ಯಗಳು ಹೂಗಳೆಂಬ ಕಣ್ಣೀರು ಸುರಿಸುತ್ತ ಅವಳನ್ನು ದುಃಖ ತುಂಬಿದ ಹೃದಯದಿಂದ ಬೀಳ್ಕೊಟ್ಟುವು.

---

* 9-4-77ರಂದು ಬೆಂಗಳೂರು ಆಕಾಶವಾಣಿಯಿಂದ ಪ್ರಸಾರಗೊಂಡ ಭಾಷಣ

ಕನ್ನಡದ ಆದಿಕವಿ ಪಂಪನ ಆದಿಪುರಾಣದಲ್ಲಿ ಒಂದು ಲವಲವಿಕೆಯ ಸನ್ನಿವೇಶ. ಭರತ ತನ್ನ ಅನೇಕ ಸಹಸ್ರ ಸಂಖ್ಯೆಯ ರಾಣಿಯರೊಡನೆ ವನವನ್ನು ಪ್ರವೇಶಿಸುತ್ತಾನೆ. ಅವನ ರಾಣಿಯರು ಅಲ್ಲಿನ ಸೊಬಗನ್ನು ಆಸ್ವಾದಿಸಿದರು, ತಳಿರನ್ನು ಮುಡಿದರು, ಹೂವಿನಿಂದ ಸಿಂಗರಿಸಿಕೊಂಡರು. ತಮಗೆ ಇಷ್ಟು ಆನಂದವನ್ನು ಕೊಟ್ಟು ವನವನ್ನು ಇನ್ನು ಅಗಲಬೇಕಾಗಿದೆ. ಆಗ ಆ ತರುಣಿಯರು ತಮ್ಮಿಂದಾಗಿರಬಹುದಾದ ನೋವನ್ನು ಮರೆಯಬೇಕೆಂದು ವಿಪ್ವಲಚಿತ್ತರಾಗಿ ಮರಗಳನ್ನು ಬೇಡಿಕೊಳ್ಳುತ್ತಾರೆ. ಒಬ್ಬಳಂತೂ ಮಾವಿನ ಮರವನ್ನು "ನಾನೂ ನೀನೂ ಕೆಲಕಾಲ ಒಟ್ಟಿಗೆ ಇದ್ದುದನ್ನಾದರೂ ಜ್ಞಾಪಕ ಇಟ್ಟುಕೋ" ಎನ್ನುತ್ತಾಳೆ.

ಚೇತನ ಅಚೇತನ ಎಂಬ ಭೇದವಿಲ್ಲದೆ ಪ್ರಕೃತಿಯನ್ನೂ ಪ್ರಕೃತಿಯ ಅಂಗವಾದ ಸಸ್ಯಗಳನ್ನೂ, ಮನುಷ್ಯರಂತೆಯೇ ಹೀಗೆ ಪ್ರೀತಿಸುವ, ಅವುಗಳನ್ನು ಪಾಲಿಸುವ ಪ್ರಾಚೀನ ಭಾರತೀಯ ಮನೋಭಾವಕ್ಕೆ ಮೇಲಿನ ಎರಡು ಪ್ರಸಂಗಗಳು ಉಜ್ವಲ ಸಾಕ್ಷಿಗಳಾಗಿವೆ. ಭಾರತೀಯರ ವೃಕ್ಷ ಪ್ರೇಮ, ಪುಷ್ಪ ಪ್ರೇಮಗಳು ಎಣೆಯಿಲ್ಲದುವು. ನಮ್ಮವರು ಮರಗಳಿಗೆ ಮದುವೆ ಮಾಡಿಸಿದ್ದಾರೆ, ಮುಂಜಿಯನ್ನೂ ಮಾಡಿಸಿದ್ದಾರೆ. (ಮಂಡ್ಯ ಜಿಲ್ಲೆಯ ಶಾಸನವೊಂದರಲ್ಲಿ ಅರಳಿ ಮರಗಳಿಗೆ ಹಾಗೆ ಮುಂಜಿ ಮಾಡಿಸಿದ ವಿಷಯವಿದೆ).

ಮರಗಳ ಪ್ರಪಂಚ ಮನುಷ್ಯ ಪ್ರಪಂಚಕ್ಕೆ ತೀರ ಹತ್ತಿರವಾದದ್ದು. ಅವು ಅವನಿಗೆ ಆಹಾರಕ್ಕೆ ಹಣ್ಣು ಕೊಟ್ಟುವು. ಅವುಗಳ ಎಲೆ, ತೊಗಟೆಗಳು ಅವನಿಗೆ ಬಟ್ಟೆಯಾದುವು. ಅವನು ಒಣ ಕೊರಡುಗಳನ್ನು ಉಜ್ಜಿ ಬೆಂಕಿ ಮಾಡಿಕೊಂಡ. ಬೇಸಗೆಯಲ್ಲಿ ಅವು ಅವನ ನೆತ್ತಿಯನ್ನು ತಂಪು ಮಾಡಿದುವು. ಒಟ್ಟಿನಲ್ಲಿ ಮನುಷ್ಯನ ಸಂಸ್ಕೃತಿಗೆ ಜೋಗುಳ ಹಾಡಿ ಬೆಳಸಿದ್ದು ಮರ ಗಿಡಗಳು, ತಾಯಿ ಪ್ರಕೃತಿ. ಇಂತಹ ವಾತ್ಸಲ್ಯಮಯಿ ತಾಯಿಯಲ್ಲಿ ಭಾರತೀಯರು ದೈವಿಕ ಶಕ್ತಿಗಳನ್ನು ಕಂಡರು. 'ಶಮೀ' ಅಥವಾ ಬನ್ನಿಯ ಮರ ಅಗ್ನಿಯ ಜನ್ಮಸ್ಥಳವಾಯಿತು. ಅರಳಿ ಮತ್ತು ಆಲಗಳು ಜೀವನಕ್ಕೆ ಸಂಕೇತವಾಗಿ ಪರಿಣಮಿಸಿದುವು. ಬೇಡಿದ್ದನ್ನು ಕೊಡುವ ಕಲ್ಪವೃಕ್ಷವನ್ನೇ ಭಾರತೀಯರು ಕಲ್ಪಿಸಿಕೊಂಡರು. ವೃಕ್ಷಗಳನ್ನು ಪೂಜಿಸುವುದು, ತಮ್ಮ ಇಷ್ಟಾರ್ಥ ಸಿದ್ಧಿಗಾಗಿ ಅವುಗಳಿಗೆ ಹರಕೆ ತೊಡುವುದು, ಅವುಗಳಿಗೆ ಮದುವೆ ಮಾಡುವುದು ಇತ್ಯಾದಿ ಆರಾಧನೆಗಳ ಮೂಲಕ ಅವುಗಳು ತಮ್ಮ ಲೌಕಿಕ ಮತ್ತು ಧಾರ್ಮಿಕ ಜೀವನದ ಭಾಗವಾಗುವಂತೆ ಮಾಡಿಕೊಂಡರು. ಸಾಮಾನ್ಯ ಜನತೆಯ ಮಟ್ಟದಲ್ಲಂತೂ ವೃಕ್ಷಾರಾಧನೆ ಅವರ ಜೀವನದ ಬಹು ಮುಖ್ಯ ಭಾಗವಾಯಿತು. ಬೇವು, ಬಿಲ್ವ, ಹಲಸು, ಹುಣಸೆ, ಲೊಕ್ಕಿ, ಬನ್ನಿ, ಅರಳಿ, ಆಲ ಇತ್ಯಾದಿ ಮರಗಳು ಪವಿತ್ರವೆಂದೂ ಅಲ್ಲಿ ಅಗೋಚರ ಶಕ್ತಿಗಳಿವೆಯೆಂದೂ ನಂಬಿದರು.

ಮರಗಳನ್ನು ಕಡಿಯುವುದು ದುಷ್ಟ 'ಸಾಹಸ' ಕಾರ್ಯವೆಂದು, ಬ್ರಾಹ್ಮಣನೊಬ್ಬನನ್ನು ಕೊಂದ ಪಾಪಕ್ಕೆ ಅದು ಸಮಾನವೆಂದು ಭಾರತೀಯ ಸ್ಮೃತಿಕಾರರು ಹೇಳಿದ್ದರೆ, ಮರ, ಗಿಡ, ಬಳ್ಳಿಗಳನ್ನು ಕಡಿಯುವವರಿಗೆ ಅಥವಾ ಅವುಗಳಿಗೆ ನೋವುಂಟು ಮಾಡುವವರಿಗೆ ದಂಡಗಳನ್ನು ವಿಧಿಸಬೇಕೆಂದು ಯಾಜ್ಞವಲ್ಕ್ಯ, ಕೌಟಿಲ್ಯ ಮೊದಲಾದವರು ವಿಧಿಸಿದ್ದಾರೆ. ಮರಗಳನ್ನು ಬೆಳೆಸುವುದಕ್ಕೆ ನಮ್ಮ ಹಿಂದಿನವರು ಕೊಟ್ಟ ಗಮನದಲ್ಲಿ ಒಂದು ಭಾಗದಷ್ಟನ್ನಾದರೂ ಈಗ ನಾವು ಕೊಡುವೆವಾದರೆ ನಮ್ಮ ಈಗಿನ ಎಷ್ಟೋ ಸಮಸ್ಯೆಗಳು ಪರಿಹಾರವಾದಾವು.

ಮರಗಳನ್ನು ಪ್ರಯತ್ನ ಪೂರ್ವಕವಾಗಿ ಬೆಳಸುವುದರ ಮೊದಲ ಉಲ್ಲೇಖ ಕ್ರಿಸ್ತಪೂರ್ವ ಮೂರನೇ ಶತಮಾನದ ಅಶೋಕನ ಶಾಸನದಲ್ಲೇ ಬರುತ್ತದೆ. ಅವನ ಪ್ರಾಕೃತ ಭಾಷೆಯ ಶಾಸನ ಹೀಗಿದೆ: "ಸರ್ವತ್ರ ದೇವಾನಾಂಪ್ರಿಯಸ ಪ್ರಿಯದಸಿನೋ ರಾಜ್ಞೋ ದ್ವೇ ಚಿಕೀಛಾ ಕತಾ ಮನುಸ ಚಿಕೀಛಾ ಚ ಪಸುಚಿಕೀಛಾ–ಚ॥ ಓಡುಢಾನಿ ಚ ಯಾನಿ ಮನುಸೋಪಗಾನಿ ಚ ಪಸೋಪಗಾನಿ ಚ ಯತ ಯತ ನಾಸ್ತಿ ಸರ್ವತ ಹಾರಾಪಿತಾನಿ ಚ ರೋಪಾಪಿತಾನಿ ಚ॥ ಮೂಲಾನಿ ಚ ಫಲಾನಿ ಚ ಯತ ಯತ್ರ ನಾಸ್ತಿ ಸರ್ವತ ಹಾರಾಪಿತಾನಿ ಚ ರೋಪಾಪಿತಾನಿ ಚ॥ ಪಂಥೇಸೂ ಕೂಪಾ ಚ ಖಾನಾಪಿತಾ ವ್ರಛಾ ಚ ರೋಪಾಪಿತಾ ಪರಿಭೋಗಾಯ ಪಸುಮನುಸಾನಂ" ಇದರ ಅಭಿಪ್ರಾಯ ಹೀಗಿದೆ. ದೇವಾನಾಂ ಪ್ರಿಯದರ್ಶಿ ಮಹಾರಾಜನು ಮನುಷ್ಯರಿಗೂ ಪಶುಗಳಿಗೂ ವೈದ್ಯಕೀಯ ಚಿಕಿತ್ಸೆಯನ್ನು ಏರ್ಪಾಟು ಮಾಡಿ, ಆ ಚಿಕಿತ್ಸೆಗೆ ಬೇಕಾದ ಔಷಧಿ ಮೂಲಿಕೆಗಳು ಎಲ್ಲೆಲ್ಲಿ ಇರಲಿಲ್ಲವೋ ಅಲ್ಲಿಗೆಲ್ಲ ಔಷಧಿ ಗೆಡ್ಡೆಗಳನ್ನು ಹಣ್ಣು ಬಿಡುವ ಮರಗಳನ್ನೂ ತರಿಸಿ ನಡಿಸಿದ. ಮಾರ್ಗಗಳಲ್ಲಿ ಪಶುಗಳ ಮತ್ತು ಮನುಷ್ಯನ ಪರಿಭೋಗಕ್ಕಾಗಿ ಬಾವಿಗಳನ್ನು ತೋಡಿಸಿದ ಮತ್ತು ಮರಗಳನ್ನು ನಡಿಸಿದ. ಇಂತಹ ಧರ್ಮಾತ್ಮರಾದ ರಾಜರು ಹಿಂದೆ ನಡಿಸಿದ್ದ ಸಾಲು ಮರಗಳನ್ನು ಇಂದಿಗೂ ಹಳೆಯ ರಸ್ತೆಗಳ ಪಕ್ಕದಲ್ಲಿ ಕಾಣಬಹುದು. ಮತ್ತು ಈ ಸಂಪ್ರದಾಯವನ್ನು ಆಧುನಿಕರೂ ಮುಂದುವರಿಸಿಕೊಂಡು ಹೋಗುತ್ತಿದ್ದಾರೆ.

ಕರ್ನಾಟಕದ ಶಾಸನಗಳಲ್ಲಿ ಮರಗಳನ್ನು ನಡಿಸುವ ಮತ್ತು ತೋಪುಗಳನ್ನು ಬೆಳೆಸುವ ಅನೇಕ ಉದಾಹರಣೆಗಳು ದೊರಕುತ್ತವೆ. ಕ್ರಿ. ಶ. ಸು. 945 ರಲ್ಲಿ ಆದಿಕವಿ ಪಂಪನ ತಮ್ಮ ಜಿನವಲ್ಲಭ ಒಂದು ಕನ್ನಡ ಶಾಸನವನ್ನು ಬರೆಯಿಸಿದ. ತನ್ನ ಅಣ್ಣನ ಹೆಸರಲ್ಲಿ 'ಕವಿತಾಗುಣಾರ್ಣವ ತಟಾಕ' ಎಂಬ ಕರೆಯನ್ನು ಕಟ್ಟಿಸಿದ್ದಲ್ಲದೆ, 'ಮದನ ವಿಲಾಸ' ಎನ್ನುವ ವನವನ್ನೂ ಮಾಡಿಸಿದ ವಿಷಯ ಆ ಶಾಸನದಲ್ಲಿದೆ. ಆ ಶಾಸನ ಈಗಿನ ಆಂಧ್ರ ಪ್ರದೇಶದಲ್ಲಿದೆ. ತೆಲುಗು ಸಾಹಿತ್ಯದಲ್ಲಿ ಅನೇಕ ಕಡೆ 'ಸಪ್ತ ಸಂತಾನ'ದ ವಿಷಯ ಬರುತ್ತದೆ. ಅಗ್ರಹಾರ, ಪುತ್ರ, ದೇವಾಲಯ, ಕೆರೆ, ಗ್ರಂಥ, ಗುಪ್ತನಿಧಿ ಮತ್ತು ಉದ್ಯಾನ ಇವೇ ಆ ಸಪ್ತ ಸಂತಾನ. ಮಕ್ಕಳನ್ನು

ಪಡೆಯುವಂತೆಯೇ ಮನುಷ್ಯ ಸಾರ್ವಜನಿಕರಿಗಾಗಿ ತೋಟವನ್ನೂ ಮಾಡಿಸುವುದು ಅವನ ಕರ್ತವ್ಯಗಳಲ್ಲಿ ಒಂದು ಎಂದು ಜನ ನಂಬಿದ್ದರು. ಪಂಪನ ತಮ್ಮ ಕಟ್ಟಿಸಿದ ಕೆರೆ ಉಳಿದಿದೆ ; ಆದರೆ ತೋಪು ಹಾಳಾಗಿದೆ.

ಊರಿನ ಹೊರ ಭಾಗದಲ್ಲಿ ಸಾರ್ವಜನಿಕರಿಗಾಗಿ 'ಅರವೆ' ಅಥವಾ ತೋಪು ಗಳಿದ್ದು ಅಲ್ಲಿ ಅನೇಕ ಬಗೆಯ ಮರಗಳಿರುತ್ತಿದ್ದುವು—ತಿಲಕ, ತಮಾಲ, ತಾಳಿ, ಕದಳಿ, ವಕುಲ, ಪಾಟಳಿ, ಪಿಪ್ಪಲ, ಪಾದಲ, ಮಾವು, ತೆಂಗು, ಇತ್ಯಾದಿ. ಈ ಆರವೆಗಳನ್ನು ಮಾಡಿಸುವುದು ಒಂದು ಧರ್ಮಾರ್ಥಕಾರ್ಯವೆಂದು ಜನ ನಂಬಿದ್ದರು. ಇದಕ್ಕೆ ಶಾಸನಗಳಿಂದ ಉದಾಹರಣೆಗಳನ್ನು ಕೊಡುತ್ತೇನೆ. ಚಟ್ಟಲದೇವಿ ಎಂಬಾಕೆ ಕ್ರಿ. ಶ. 1147 ರಲ್ಲಿ ಬಾವಿ, ಅರವಂಟಿಗೆ, ಚತ್ರಗಳ ಜೊತೆ ಒಂದು 'ಆರವೆ' ಅಥವಾ ತೋಪನ್ನು ಮಾಡಿಸಿದಳೆಂದು ಒಂದು ಶಾಸನ ಹೇಳುತ್ತದೆ. ಕಲಿದೇವ ಸೆಟ್ಟಿ ಎಂಬಾತ 1176ರಲ್ಲಿ ಒಂದು ಶಾಸನ ಹಾಕಿಸಿದ. ಆ ಶಾಸನ ಅವನು ಕಟ್ಟಿಸಿದ ಕರೆಯನ್ನೂ ಮಾಡಿಸಿದ ತೋಪನ್ನೂ ಹಸಿದವರಿಗೆ ಆಹಾರ ಕೊಡುವ ಸತ್ರವನ್ನೂ ಹೊಗಳಿದೆ. ಮೋಟ ಗೌಂಡ ಎಂಬುವವನನ್ನು ಕ್ರಿ. ಶ. 123೨ರ ಶಾಸನ ಪದ್ಯ ಹೀಗೆ ಹೊಗಳಿದೆ:

ಕಟ್ಟಿಸಿದ ತಟಾಕಮುಮರ। ವಟ್ಟೆಸೆದೆತ್ತಿಸಿದ ದೇವತಾಯತನಂ ಸಾ।
ಲಿಟ್ಟಟ್ಟಾರವೆ ಪೇಳವೆ। ನೆಟ್ಟನೆ ತಾವೆಯ್ದೆ ಮೋಟ ಗೌಂಡನ ಪೆಂಪಂ॥

ಹೀಗೆ ದಾನಿಗಳು ಮಾಡಿಸಿದ ತೋಟಗಳಿಗೆ ಹೆಸರುಗಳನ್ನು ಕೊಡುತ್ತಿದ್ದರು. ಹಾಸನ ಜಿಲ್ಲೆಯ ತೋಟವೊಂದಕ್ಕೆ 'ತೋರಣ ಶೂರ' ಎಂಬ ಹೆಸರಿತ್ತೆಂದು ಒಂದು ಶಾಸನ ಹೇಳುತ್ತದೆ. ಮಂಡ್ಯ ಜಿಲ್ಲೆಯ ಶಾಸನವೊಂದರಲ್ಲಿ ತೋಪನ್ನು ಮಾಡಿಸಿ ಸಾಲು ಮರಗಳನ್ನು ನಡಿಸಿ ಅರಳಿ ಮರಗಳನ್ನು ಪ್ರತಿಷ್ಠಿಸಿದ ವಿಷಯವಿದೆ.

ಮರಗಳನ್ನು ನಡುವ ವಿಷಯವನ್ನು ಹೇಳುವ ಶಾಸನಗಳಲ್ಲೆಲ್ಲ ಕ್ರಿ. ಶ. 1190ರ ಬಿಜಾಪುರ ಜಿಲ್ಲೆ ಹಿರೇಬೇವಿನೂರಿನ ಶಾಸನ ಅಗ್ರಗಣ್ಯವಾದುದು[1]. ಅಲ್ಲಿಯ ಮೂವತ್ತಾರು ಹಳ್ಳಿಗಳಿಗೆ ಬೊಪ್ಪಣಯ್ಯ ಎಂಬಾತ ಒಡೆಯ. ಆತನ ಹೆಂಡತಿ ಸಿರಿದೇವಿಯಕ್ಕ ಎಂಬಾಕೆ ವ್ರತಸಾರಸಮುಚ್ಚಯದಲ್ಲಿ ಸ್ಮೃತಿಯಲ್ಲಿ ಎಷ್ಟು ವ್ರತ ಗಳನ್ನು ಹೇಳಿದೆ ಅಷ್ಟನ್ನೂ ಅವಳು ಮಾಡಿ ಮುಗಿಸಿದ್ದಳು. ಆದರೆ ಮರಗಳನ್ನು ನಡುವ ನೋಂಪಿ ಅಥವಾ ವ್ರತವೊಂದು ತಾನು ಮಾಡದೆ ಹಾಗೇ ಉಳಿದಿದೆಯೆಂಬ ಸಂಗತಿಯನ್ನು ಕೇಳಿ ತಿಳಿದಳು. ಅವಳು ಮರಗಳು ಭೂ ಲೋಕದ ಕಲ್ಪವೃಕ್ಷವೆಂದು ನಂಬಿದ್ದಳಾದ್ದರಿಂದ ಮಾವಿನ ಮರ, ನೇರಿಲು, ಈಳೆ, ಹಲಸು, ಖರ್ಜೂರ, ತೆಂಗು

---

1 South Indian Inscriptions XX, No. 175. ಈ ಆಕರದ ಕಡೆಗೆ ನನ್ನ ಗಮನ ಸೆಳೆದವರು ಡಾ॥ ಜ್ಯೋತ್ಸ್ನಾ ಕಾಮತ್

ಅಡಕೆ ಇತ್ಯಾದಿ ಎಷ್ಟೋ ಮರಗಳನ್ನು ಅತ್ಯಾನಂದದಿಂದ ನಡಿಸಿದಳು.[2] ಇದರ ಜೊತೆಗೆ ಅವಳ ಗಂಡ ಬೊಪ್ಪಣನೂ ಆ ಊರಿನಲ್ಲಿ ಸಂತೆಯನ್ನೂ ಬನವನ್ನೂ ಮಾಡಿಸಿದ. ಆ ಬನ ಅಥವಾ ತೋಪಿನ ನೆರಳಲ್ಲಿ ಸಂತೆ ಸೇರುತ್ತಿತ್ತು. ಅವುಗಳನ್ನು ಶಾಸನವು "ಧರ್ಮದಾರವೆ", "ಧರ್ಮಸಂತೆ" ಎಂದು ಕರೆದಿದೆ. ಸಂತೆಯನ್ನೂ ತೋಪಿನ ಮರಗಳನ್ನೂ ಊರುಗಳ ಗೌಡರೂ ವರ್ತಕರೂ ನಾಡಿನ ಮನ್ನೆಯನೂ ದೇಶದ ರಾಜನೂ ಕಾಪಾಡಬೇಕೆಂದೂ, ಅವುಗಳನ್ನು ಉಪೇಕ್ಷಿಸಿದವರಿಗೆ ನರಕವೆಂದೂ ಶಾಸನವು ಸಾರುತ್ತದೆ. ಆ ತೋಪಿನ ಉತ್ಪನ್ನವನ್ನು ಹಂಚಿಕೊಳ್ಳಲು, ಬೇರೆ ಬೇರೆ ದೇವರಿಗೆ ವ್ಯಕ್ತಿಗಳಿಗೆ ಇಷ್ಟಿಷ್ಟು ಮರಗಳೆಂದು ಹಂಚಲಾಗಿದೆ. ಎಲ್ಲಕ್ಕಿಂತ ಸ್ವಾರಸ್ಯದ ಸಂಗತಿಯೆಂದರೆ ಆ ಬನವನ್ನು ನೋಡಿಕೊಳ್ಳಲು ಇಬ್ಬರು 'ಬನಕಾರ' ಅಥವಾ ಮಾಲಿಗಳನ್ನು ನೇಮಿಸಿದ್ದು. ಆ ಬನಕಾರರಿಗೂ ಅವರ ವಾಸಕ್ಕಾಗಿ ಮನೆ ನಿವೇಶನವನ್ನೂ, ಜೀವಿತಕ್ಕಾಗಿ ಭೂಮಿಯನ್ನೂ ದಾನವಾಗಿ ಕೊಡಲಾಗಿದೆ. ಶಾಸನವು "ರಾಜರಕ್ಷಿತ ಧರ್ಮ" ಎಂಬ ಮಾತಿನಿಂದ ಕೊನೆಗೊಂಡಿದೆ. ಸಿರಿಯವ್ವನ ನೋಂಪಿ ನಿಜವಾಗಿಯೂ ಸಾರ್ಥಕವಾಗಿರಬೇಕು.

ಸಸ್ಯ ಗಿಡಗಳನ್ನು ನಟ್ಟು, ಬೇಲಿ ಹಾಕಿ ನೀರು ಉಣ್ಣಿಸಿ ಅವನ್ನು ಚಿಕ್ಕ ಮಕ್ಕಳಂತೆ ಆರೈಕೆ ಮಾಡುವುದು ಒಂದು ವಿಧಾನ. ಆದರೆ ಈಗಂತೂ ಕೆಲವೊಮ್ಮೆ ಬೆಳೆದ ಮರಗಳನ್ನೇ ಕಿತ್ತು ಲಾರಿಗಳಲ್ಲಿ ಬೇರೆಡೆ ಸಾಗಿಸಿ ಅವನ್ನು ಅಲ್ಲಿ ನಡುವುದನ್ನು ನೋಡುತ್ತೇವೆ. ಈ ಪದ್ಧತಿ ವಿನೂತನವಾದುದೇನೂ ಅಲ್ಲ. ಅಂತಹ ಕಾರ್ಯ ಹಿಂದೆ ವ್ಯವಸ್ಥಿತವಾಗಿ ನಡೆಯುತ್ತಿತ್ತೆಂಬುದಕ್ಕೆ ಹನ್ನೊಂದನೇ ಶತಮಾನದ ಚಾವುಂಡರಾಯನ ಲೋಕೋಪಕಾರ ಎಂಬ ಗ್ರಂಥ ಸಾಕ್ಷಿಯಾಗಿದೆ. ಲೋಕೋಪಕಾರ ಹೆಸರೇ ಹೇಳುವಂತೆ ಲೋಕದ ಜನರಿಗೆ ಉಪಯುಕ್ತವಾದ ಸಂಗತಿಗಳನ್ನೊಳಗೊಂಡ ವಿಶ್ವಕೋಶದಂತಹ ಒಂದು ಕೃತಿ. ಅದರಲ್ಲಿ "ವೃಕ್ಷಾಯುರ್ವೇದಂ" ಎಂಬ ಒಂದು ಅಧ್ಯಾಯವಿದೆ. ವಿದ್ಯೆಗಳಲ್ಲಿ ವೃಕ್ಷಾಯುರ್ವೇದವು ಶ್ರೇಷ್ಠವೆಂದು ಅಲ್ಲಿ ಹೇಳಿದೆ. ಮರಗಳಿಗೆ ತಗಲುವ ರೋಗಗಳನ್ನೂ ಔಷಧಿಗಳನ್ನೂ ಅಲ್ಲಿ ಸೂಚಿಸಿರುವುದಲ್ಲದೆ, ಮರಗಳನ್ನು ಕಿತ್ತು ಬೇರೆಡೆ ಅವುಗಳನ್ನು ಹೂಳುವ ವಿಧಾನವನ್ನು ಅಲ್ಲಿ ಹೇಳಲಾಗಿದೆ. ಹೇಮಂತ ಋತುವಿನಲ್ಲಿ ಚಿಗುರಿದ ಮರವನ್ನು ಕಿತ್ತು ಬೇರೆ ಎಲ್ಲಿ ಬೇಕಾದರೂ ನಡಬಹುದು. ಮಳೆಗಾಲದ ಆರಂಭದಲ್ಲಿ ನಡಬೇಕಾದರೆ ಹಣ್ಣು ಬಿಡುವ ಮರಗಳೇ

---

2. "ವ್ರತಸಾರ ಸಮುಚ್ಚಯದೊಳ್ ಸ್ಮೃತಿಯೊಳ್ ಕೇಳಿನಿತು ನೋಂಪಿಯೊಳವೆ ನಿತನಿತಂ ಸತತಂ ನೋಂತೊಲವಿಂದಂ ಕ್ಷಿತಿಗುಹವಿದೊಂದು ನೋಂಪಿಯುಂಟೆನೆ ಕೇಳ್ದಳು ॥ ಪರಮಾನಂದದೆ ಕೇಳ್ದು ಭೂತಳದ ಕಟ್ಪ್ರೋರ್ಬಿಜವೆಂದೆಂದು ಮಾಮರನಂ ನೇಱಲೆಯನೀಳೆಯುಂ ಪಲಸುಮಂ ಖರ್ಜೂರಮಂ ತೆಂಗುಮಂ ವರಪೂಗೀ ತರುವಂ ವನಸ್ಪತಿಯುಮನತ್ಯಾನಂದದಿಂದಿಟ್ಟು ತಾಂ ಧರೆ ಮೆಚ್ಚುತ್ತಿರೆ ಮಾಯಿದೇವನೆಸೆವೀ ಧರ್ಮಂದಿ ದಿಕ್ಕಂದದಂ ॥"

ಆಗಬೇಕು. ಶಿಶಿರದಲ್ಲಿ ದೊಡ್ಡ ಮರಗಳನ್ನು ನಡಬಾರದು, ಎಳೆಯ ಮರಗಳನ್ನು ಮಾತ್ರ ನಡಬಹುದು. ಈ ಎಚ್ಚರಿಕೆಗಳನ್ನು ಗಮನಿಸಿದರೆ, ಮರಗಳು ತಮ್ಮ ಹೊಸ ಜಾಗದಲ್ಲಿ ಹಿಂದಿನಂತೆಯೇ ಅಥವಾ ಇನ್ನೂ ಚೆನ್ನಾಗಿಯೇ ಬೆಳೆಯುತ್ತವೆ ಎನ್ನುತ್ತಾನೆ ಚಾವುಂಡರಾಯ.

ಮರಗಳನ್ನು ಕಡಿಯುವುದು ಬಹು ದೊಡ್ಡ ಪಾಪ. ಅಕಾಸ್ಮಾತ್ ಒಂದು ಮರವನ್ನು ಕಡಿದರೆ ಇನ್ನೆರಡು ಮರಗಳನ್ನಾದರೂ ಹಾಕಬೇಕೆಂಬ ನಂಬಿಕೆ ಹಿಂದೆ ಇತ್ತಂತೆ. ಮರಗಳನ್ನು ಕಡಿದು ಕಾಡನ್ನು ನಾಶಪಡಿಸಿ ನಾವು ಈಗ ಕಷ್ಟವನ್ನು ಅನುಭವಿಸಿದ್ದೇವೆ. ಹಿಂದೆ, ಕಾಡು ಸಮೃದ್ಧವಾಗಿದ್ದು ಈಗಿನಂತೆ ಸಮಸ್ಯೆಗಳು ಇಲ್ಲದಿದ್ದ ಹಿಂದಿನ ಕಾಲದಲ್ಲಿ ನಮ್ಮವರು ಮರಗಳನ್ನು ಬೆಳಸುವುದರ ಬಗ್ಗೆ ಉಳಿಸುವುದರ ಬಗ್ಗೆ ಎಷ್ಟು ಕಳಕಳಿ ವ್ಯಕ್ತಪಡಿಸಿದ್ದರೆಂಬುದನ್ನು ಕಂಡರೆ ಆಶ್ಚರ್ಯವಾಗುತ್ತದೆ. ದೇವರ ಹೆಸರಲ್ಲೋ ಇನ್ನಾವುದೋ ನಂಬಿಕೆಯ ನೆಪದಲ್ಲೋ ತೋಪುಗಳನ್ನು ಯಾರೂ ಕಡಿಯದಂತೆ ರಕ್ಷಿಸುತ್ತಿದ್ದರು. ಶಾಸನಗಳಲ್ಲಂತೂ ತೋಪನ್ನು ನಾಶ ಪಡಿಸುವುದು ಕಾಶಿ, ಹಸು, ಕೆರೆಗಳನ್ನು ನಾಶಪಡಿಸಿದ ಪಾಪಕ್ಕೆ ಸಮಾನವಾದುದು ಎಂದು ಹೇಳಿದೆ.

''ಇದನಳಿದೊನ್ ವಾರಣಾಸಿಯ ಕವಿಲೆಯ ಕೆರೆಯ ಆರವೆಯುನಳಿದೊನ್''

''ಇದನಳಿದೊನ್ ಬಾರಣಾಸಿಯುನಳಿದೊನ್ ಅಲ್ಲಿ ಮಿಕ್ಕೊಡೆ ಕೆರೆಯುಂ ಆರವೆಯುಮನಳಿದ ಪಾಪಮಕ್ಕೆ" ಇವು ಶಾಸನಗಳಲ್ಲಿ ಬರುವ ಮಾತುಗಳು.

ಮರ, ತೋಪು, ಕಾಡುಗಳ ಪ್ರಾಮುಖ್ಯವನ್ನು ನಮ್ಮ ಹಿಂದಿನವರು ಮನಗಂಡಿದ್ದರೆಂಬುದಕ್ಕೆ ಇದಕ್ಕಿಂತ ಸಮರ್ಥ ಆಧಾರಗಳು ಬೇಕೆ? ಅವರಿಂದ ನಾವು ಪಾಠವನ್ನು ಕಲಿಯುವುದು ಬೇಡವೇ? ಮರಗಳನ್ನು ಅವ್ಯಾಹತವಾಗಿ ಕಡಿಯುವುದನ್ನು ನಿಲ್ಲಿಸದಿದ್ದರೆ ನಮ್ಮ ದೇಶ ಮಳೆಯಿಲ್ಲದೆ ಮರುಭೂಮಿಯಾಗುವ ಸಂಭವ ಇದೆಯೆಂಬುದನ್ನು ನಾವು ಮನಗಾಣಬೇಡವೇ?

ಆಧಾರಸಾಮಗ್ರಿ

1. ಬಿ. ಜಿ. ಎಲ್. ಸ್ವಾಮಿ : ಶಾಸನಗಳಲ್ಲಿ ಗಿಡಮರಗಳು
2. ಎಂ. ಚಿದಾನಂದಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ
3. ಬೇರೆ ಬೇರೆ ಶಾಸನ ಸಂಪುಟಗಳು

ಜನಪದ ಪೋಲಿ ಕಥೆ

ದೇ. ನಾ. ರಾಮೇಗೌಡ

I

ಪೋಲಿಕಥೆ ಜನಪದ ಸಾಹಿತ್ಯದ ಒಂದು ಪ್ರಕಾರವಾದ ಜನಪದ ಕಥೆಯ ಒಂದು ಅಂಗ. ವೈವಿಧ್ಯಮಯ ಜನಪದ ಕಥೆಯ ವಿವಿಧ ಭಾಗಗಳಲ್ಲಿ ಇದನ್ನು ಒಂದು ಅನಿವಾರ್ಯ ಅಂಗವನ್ನಾಗಿ ಪರಿಗಣಿಸಬೇಕಾಗಿದೆ. ಪುಸ್ತಕವನ್ನು ಹಿಡಿಯದ, ರೇಡಿಯೋವನ್ನು ತಿರುಗಿಸದ, ಸಿನೆಮಾವನ್ನು ನೋಡದ ಸಾಮಾನ್ಯ ಜನರ ವಾಕ್ಪರಂಪರೆಯಲ್ಲಿ ಜನಪದ ಕಥೆ ಕರ್ಣಾಕರ್ಣಿಯಾಗಿ ಹರಿದು ಬಂದಿರುವಂತೆಯೇ ಪೋಲಿಕಥೆಗಳೂ ಸಾಗಿ ಬಂದಿರುವುದನ್ನು ಮರೆಯುವಂತಿಲ್ಲ. ನಗರ ಸಂಸ್ಕೃತಿಗಿಂತ ದೂರವಾದ ಹಳ್ಳಿಗಾಡಿನ ಜನಪದ ಕಟ್ಟಿದ ಈ ಕಥೆಗಳು ಲೈಂಗಿಕ ಪ್ರವೃತ್ತಿಗಳನ್ನು ತುಂಬಿಕೊಂಡಿರುವ ರಹಸ್ಯ ಕಣಜಗಳು. ಶುದ್ಧ ವಾಕ್ಪರಂಪರೆಯಲ್ಲಿ ಹುಟ್ಟಿ ಬೆಳೆದು ಉಳಿದು ಬಂದ ಈ ಕಥೆಗಳಲ್ಲಿನ ಪ್ರಧಾನ ವಸ್ತು ಲೈಂಗಿಕ ಕ್ರಿಯೆಯ ನೇರ ನಿರೂಪಣೆಯೇ ಆಗಿದೆ. ಇವು ಆದಿ ಮಾನವನ ಸಂಪ್ರದಾಯ ಮತ್ತು ಸಂಸ್ಕೃತಿಗಳ ದರ್ಶನ ನೀಡುವುದಲ್ಲದೆ ಅವನ ಅಂತರಂಗದ ಕಾಮ ಪ್ರವೃತ್ತಿಯ ನಗ್ನತೆಯನ್ನು ಅನಾವರಣಮಾಡುತ್ತಿವೆ. ಕೆಲವು ಮೂಲ ಭೂತವಾದ ಅಂಶಗಳಲ್ಲಿ ಜನಪದ ಸಂಸ್ಕೃತಿ ನಗರ ಸಂಸ್ಕೃತಿಗಿಂತ ಹೇಗೆ ಭಿನ್ನವಾಗಿರುತ್ತದೆಯೋ ಹಾಗೆಯೇ ಈ ಪೋಲಿ ಕಥೆ ನಾಗರಿಕ ಶಿಷ್ಟ ಸಾಹಿತ್ಯಕ್ಕಿಂತ ಭಿನ್ನವಾಗಿರುತ್ತದೆ. ಈ ಕಥೆಗಳಲ್ಲಿ ಎರಡು ಮುಖ ಸ್ಪಷ್ಟ. ಒಂದು ಸಾಹಿತ್ಯಿಕವಾದುದು. ಮತ್ತೊಂದು ವೈಜ್ಞಾನಿಕ ವಾದುದು. ಮನ ರಂಜನೆಯೇ ಮೂಲವಾಗಿದ್ದು ಕಲಾತ್ಮಕಥೆಯಿಂದ ಕೂಡಿದ್ದು ಸಾಹಿತ್ಯಿಕ ಮುಖ. ಸಾಮಾಜಿಕ ಮತ್ತು ಮಾನವಿಕ ಅಂಶಗಳನ್ನುಳ್ಳ ಆದಿ ಮಾನವನ ಇತಿವೃತ್ತವನ್ನು ಅರಿವುಮಾಡಿಕೊಡುವುದು ವೈಜ್ಞಾನಿಕ ಮುಖ. ಈ ದೃಷ್ಟಿಯಿಂದ ಜನಪದಪೋಲಿ ಕಥೆಗಳ ಅಧ್ಯಯನ ಅತ್ಯಂತ ಕುತೂಹಲಕಾರಿಯಾಗಿದೆ.

ಮಾನವನ ದೈಹಿಕ ಪ್ರವೃತ್ತಿಗೆ ಅನಿವಾರ್ಯ ಪೂರಕಗಳು ಎರಡು. ಮೊದಲನೆಯದು ಅನ್ನವಾದರೆ ಎರಡನೆಯದೇ ಕಾಮ ಪ್ರಚೋದನೆ. ಮಾನವನ ಎಲ್ಲ ಮಾನಸಿಕ ಪ್ರವೃತ್ತಿಗಳೂ ಈ ಮೂಲ ಬಯಕೆಗಳ ಮೇಲೆ ನಿಂತಿವೆ. ಅನ್ನದ ಬಯಕೆಯಾಗಲಿ ಲೈಂಗಿಕ ಇಚ್ಛೆಯಾಗಲಿ ಇವೆರಡಕ್ಕೂ ಉಗಮಕೇಂದ್ರ ಹಸಿವು. ಮೊದಲು ಅನ್ನ. ಅನ್ನದಿಂದ ಪ್ರಾಣ; ಪ್ರಾಣದಿಂದ ಪ್ರಣಯ. ಅನ್ನದ

ಸಂತೃಪ್ತಿಯಾದ ಬಳಿಕ ಕಾಮದ ಹಸಿವು. ಅದಕ್ಕಾಗಿ ಸಂಭೋಗಾಕಾಂಕ್ಷೆ. ಕಾಮ ರಂಜನೆಗಾಗಿ ಜನನೇಂದ್ರಿಯಗಳ ಮಿಡಿತ. ಅದರಿಂದ ಹುಡುಕಾಟ, ಬೆದಕಾಟ. ಲೈಂಗಿಕಾಕರ್ಷಣೆ ಮಾನವನ ಹುಟ್ಟುಗುಣ; ಕಾಮ ಪ್ರಚೋದನೆ ಅವನ ಸಹಜ ಪ್ರವೃತ್ತಿ. ಹೆಣ್ಣು ಗಂಡು ಪರಸ್ಪರ ಆಕರ್ಷಿತರಾಗಿ ಬೆರೆತು ಸೊಗಸಿನಿಂದ ಆಡುವ ಸಂಭೋಗ ಕ್ರಿಯೆಯೇ ಲೈಂಗಿಕ ರಂಜನೆ. ಇದರಿಂದ ಸುಖ, ತೃಪ್ತಿ; ಇಲ್ಲವೆ ದುಃಖ ವಿಕಾರ. ಜನಪದ **ಪೋಲಿ ಕಥೆಗಳಿಗೆ ಇದೇ ಮೇಟಿ.** ಈ ಮೇಟಿಯನ್ನು ಸುತ್ತುವರಿದ ಗಂಡು ಹೆಣ್ಣುಗಳ ಸುಪ್ತ ಮತ್ತು ಜಾಗ್ರತ್ ಚಿತ್ತದ ಗುಣಗಳು, ಭಾವಗಳು, ಮನೋವಿಕಾರಗಳು ಅಪಾರ. ಕೌಟುಂಬಿಕ ಜೀವನದ ಒಳಗೆ ಹೊರಗೆ ಜರುಗುವ ಶೋಭನ ಸುಖ, ಸಂಭೋಗಗಳು ; ಶೀಲ ಅಶ್ಲೀಲದ ಸೆರಗು ಹಿಡಿದ ಪ್ರಣಯ ಪ್ರಸಂಗಗಳು ; ಸಾಮಾಜಿಕ ವ್ಯವಸ್ಥೆಯ ಎಲ್ಲೆಕಟ್ಟಿನ ಈಚೆ ಆಚೆ ನಡೆಯುವ ಸೂಳೆಗಾರಿಕೆ, ಹಾದರ, ವ್ಯಭಿಚಾರಗಳು ; ತಲೆ ಹಿಡುಕರ ಮೋಸ, ವಂಚನೆ, ಕಪಟಗಳು ; ರಂಡೆ ಮುಂಡೆಯರ ಠಕ್ಕಿನ ರತಿಕೂಟಗಳು ; ನಪುಂಸಕರ, ಖೋಜಾಗಳ, ಹಿಡಹಾಕಿದವರ ಉದ್ರೇಕ ಪೂರ್ಣವರ್ತನೆಗಳು ; ಬೆದೆಗೊಂಡ ಗಂಡುಬೀರಿಯರ ಅತಿ ಭೋಗಗಳು ; ಅತಿ ಕಾಮಿಗಳ ಅಸಹ್ಯ ತೀಟೆಗಳು ; ಸ್ತ್ರೀ ಪುರುಷರ ಜನನೇಂದ್ರಿಯಗಳ ಬಗೆಗಿನ ವಿಚಿತ್ರ ಕಲ್ಪನೆಗಳು ಮಾತ್ರವಲ್ಲದೆ ಇನ್ನೂ ಹಲವು ಬಗೆಯ ಅಂಶಗಳನ್ನು ಈ ಪೋಲಿ ಕಥೆಗಳಲ್ಲಿ ಕಾಣಬಹುದಾಗಿದೆ.

ಪೋಲಿ ಕಥೆ ಒಂದು ಕಲಾತ್ಮಕವಾದ ಕೃತಿ. ಇದು ಜನಪದ ಪ್ರತಿಭೆಯ ಅಭಿವ್ಯಕ್ತಿ. ಇದನ್ನು ಹೇಳುವುದೂ ಒಂದು ಕಲೆಯೆ. ಆದರೆ ಈ ಕಲೆಯನ್ನು ಗಳಿಸಿ ಕೊಂಡವರು, ಬೆಳೆಸಿಕೊಂಡವರು ವಿರಳ. ಅಂತೆಯೇ ಈ ಕಥೆಗಳನ್ನು ಬಳಸಿ ಕೊಳ್ಳುವವರೂ ವಿರಳ. ಎಲ್ಲಾ ಜನಪದ ಕಥೆಗಳನ್ನು ಎಲ್ಲಾ ಸಮಯದಲ್ಲಿಯೂ ಎಲ್ಲಾ ಜನರಿಗೂ ಹೇಗೆ ಹೇಳಲಾಗುವುದಿಲ್ಲವೊ ಹಾಗೆಯೇ ಈ ಪೋಲಿ ಕಥೆಗಳನ್ನೂ ಎಲ್ಲಾ ಜನರಿಗೂ ಎಲ್ಲಾ ಸಮಯದಲ್ಲಿಯೂ ಹೇಳಲಾಗುವುದಿಲ್ಲ. ಸಮಯ ಸಂದರ್ಭಕ್ಕೆ ತಕ್ಕಂತೆ ಹೇಳುವುದು ಕೇಳುವುದು ಅನಿವಾರ್ಯವಾಗಿದೆ.

ಶ್ರಮಪರಿಹಾರಕ್ಕಾಗಿ, ವಿರಾಮವನ್ನು ನೂಕುವುದಕ್ಕಾಗಿ ಪರಿಮಿತ ಜನರಿಗೆ, ಪರಿಮಿತ ವೇಳೆಯಲ್ಲಿ ಲೈಂಗಿಕ ವಿಷಯದ ಮೂಲಕ ವಿನೋದವನ್ನ ತಮಾಷೆಯನ್ನ, ಹಾಸ್ಯ ಅಣಕ ಕುಚೋದ್ಯ ವಿಡಂಬನೆಗಳನ್ನ ಮಾಡುವುದಕ್ಕೆ ಪೋಲಿ ಕಥೆಗಳು ಹುಟ್ಟಿ ಬಂದಿರಬಹುದು. ದೈಹಿಕ ಪ್ರಕ್ರಿಯೆಗಳಿಗೆ ಮಾನಸಿಕ ಅಗತ್ಯಗಳಿಗೆ ಅನುಗುಣವಾಗಿ ನಂಬಿಕೆಗೆ ಹತ್ತಿರವಾಗಿ, ಬುದ್ಧಿಪೂರ್ವಕವಾಗಿ ರಚನೆಗೊಂಡ ಈ ಕಥೆಗಳು ಸಮಾಜ ದಂತರಂಗದ ಲೈಂಗಿಕ ಪ್ರವೃತ್ತಿಗಳ ವಿವಿಧ ರಾಗರಂಜನೆಗಳನ್ನು ಬಹಿರಂಗಪಡಿಸುವ ವಿಧಾನವನ್ನು ತಾಳಿಯೂ ಹುಟ್ಟಿಬಂದಿರಬಹುದು. ಇವುಗಳ ಹುಟ್ಟು ಮೊದಲು ವ್ಯಷ್ಟಿಯದಾಗಿದ್ದು ಅನಂತರದ ಬೆಳವಣಿಗೆ ಸಮಷ್ಟಿಯದ್ದಾಗಿರಬೇಕು. ಏಕೆಂದರೆ

ಶಿಷ್ಟ ಕವಿಯಿಂದ ಕಥಾಸೃಷ್ಟಿ ಸ್ವೋಪಜ್ಞತಾ ಪೂರ್ವಕವಾಗಿ ನಡೆಯುವಂತೆ ಜನಪದ ಕಥೆಗಳ ಸೃಷ್ಟಿ ನಡೆಯುವುದಿಲ್ಲ. ಜನಪದ ಕಥೆಗಳು ಹೊಸದಾಗಿ ಹುಟ್ಟುವುದಕ್ಕಿಂತ ಹಳೆಯ ಆಶಯಗಳು ಅಥವಾ ಘಟನೆಗಳು ಕಥಾ ವಕ್ತೃವಿನ ಬಾಯಲ್ಲಿ ಬೆಳೆಯುತ್ತಾ ಹೋಗುವುದೇ ಹೆಚ್ಚು. ಪ್ರತಿಯೊಬ್ಬ ಜನಪದ ಕಥಾವಕ್ತೃ ಮೊದಲಿನ ಸಾಮಗ್ರಿಯನ್ನು ಬದಲಿಸುತ್ತಾ, ನಿರಂತರವಾಗಿ ಸೇರಿಸುತ್ತಾ ಹೋಗುತ್ತಾನೆ. ಈ ಬೆಳವಣಿಗೆ ಅಥವಾ ಬದಲಾವಣೆಯಿಂದ ಭಿನ್ನಪಾಠಗಳು ಹುಟ್ಟಿಕೊಳ್ಳುತ್ತವೆ. ಕಥನ ಕ್ರಿಯೆಯಲ್ಲಿ ಏಕರೂಪತೆಯಿದ್ದರೂ ಮೇಲಿನ ಕಾರಣಗಳಿಂದ ಕಥಾರಚನೆಯಲ್ಲಿ ಬಿಗಿ, ಶೈಲಿಯಲ್ಲಿ ಸೊಗಸು ಹುಟ್ಟಿಕೊಂಡು ಏಕರೂಪತೆಯಲ್ಲಿ ಭಿನ್ನತೆಯ ಲಕ್ಷಣಗಳನ್ನು ಪಡೆದುಕೊಳ್ಳುತ್ತದೆ.

ಪೋಲಿ ಕಥೆಗಳಲ್ಲಿನ ಕಥಾಕ್ಷೇತ್ರ ಕೇವಲ ಮರ್ತ್ಯಲೋಕ. ಇಲ್ಲಿ ಬರುವ ಪಾತ್ರಗಳು ಮನುಷ್ಯರು, ಪ್ರಾಣಿಗಳು ಮಾತ್ರವಲ್ಲದೆ ಅತಿಮಾನುಷ ಶಕ್ತಿಗಳಾದ ದೆವ್ವ ಭೂತಗಳೂ ಬರುತ್ತವೆ. ಈ ಪಾತ್ರಗಳೆಲ್ಲ ಕೇವಲ ಲೈಂಗಿಕ ಚಪಲವನ್ನು ತೀರಿಸಿಕೊಳ್ಳುವುದಕ್ಕೆ ಪಡುವ ಸಾಹಸವೇ ಈ ಕಥೆಗಳ ಜೀವಾಳವಾಗಿದೆ. ಒಂದು ಕಡೆ ಬುದ್ಧಿಯ ಚಮತ್ಕಾರ ; ಮತ್ತೊಂದು ಕಡೆ ದಡ್ಡತನದ ವರ್ತನೆ ಇಲ್ಲಿರುತ್ತದೆ. ಮೋಸ ವಂಚನೆ ಕಪಟ ಮುಂತಾದುವುಗಳ ಮೂಲಕ ನಡೆಯುವ ಕಾಮ ಪ್ರವೃತ್ತಿ ಇಲ್ಲದೆ, ಚಿಕ್ಕಂದಿನಲ್ಲುಂಟಾದ ಭಯ, ಇನ್ನಾರದೋ ಹೇಳಿಕೆಗೊಳಗಾದ ಭ್ರಾಂತಿ ಇಲ್ಲಿದೆ. ಇಲ್ಲೆಲ್ಲಾ ಕಥೆಗಾರ ಧರ್ಮದ ನೀತಿಯ ಯಾವ ಪಕ್ಷವನ್ನೂ ಹಿಡಿಯುವುದಿಲ್ಲ. ಈ ಕಥೆಗಳ ಆರಂಭಕ್ಕಿಂತ ಅಂತ್ಯ ವೈವಿಧ್ಯ ಪೂರ್ಣವಾದುದು. ಈ ಕಥೆಗಳು ಮುಖ್ಯ ಕ್ರಿಯೆಯಿಂದ ತಟ್ಟನೆ ಆರಂಭವಾಗುವುದಿಲ್ಲ, ಹಾಗೆಯೇ ಅವಸರದಲ್ಲಿ ಮುಕ್ತಾಯವಾಗುವುದಿಲ್ಲ. ಸಾವಧಾನದ ಆರಂಭವಿದ್ದು ಕಥೆ ಕೇಂದ್ರವನ್ನು ಮುಟ್ಟಿ ದಾಟಿದರೂ ನಗುವಿನ ಬುಗ್ಗೆಯನ್ನುಕ್ಕಿಸುತ್ತ ನಿಧಾನವಾಗಿ ಮುಕ್ತಾಯವಾಗುತ್ತವೆ. ಇಲ್ಲಿನ ಕ್ರಿಯೆ ತೀರ ಹಾಗೂ ಸರಳ. ಈ ಎಲ್ಲ ಕಾರಣಗಳಿಂದ ನಾಗರಿಕ ಸಾಹಿತ್ಯ ಲಕ್ಷಣಕ್ಕಿಂತ ಭಿನ್ನವಾಗಿವೆ.

2

ಪೋಲಿ ಕಥೆಗಳನ್ನು ಪಾತ್ರಗಳ ದೃಷ್ಟಿಯಿಂದ ಸ್ಥೂಲವಾಗಿ ನಾಲ್ಕು ಬಗೆಯಾಗಿ ವರ್ಗೀಕರಿಸಬಹುದು. ಮನುಷ್ಯ ಪಾತ್ರಗಳೇ ಬರುವ ಕಥೆಗಳು ; ಕೇವಲ ಪ್ರಾಣಿಗಳೇ ಬರುವ ಕಥೆಗಳು ; ಪ್ರಾಣಿ ಮತ್ತು ಮನುಷ್ಯ ಪಾತ್ರಗಳು ಬರುವ ಕಥೆಗಳು ; ಮನುಷ್ಯ ಮತ್ತು ಅತಿಮಾನುಷ ಶಕ್ತಿಗಳಾದ ದೆವ್ವ ಭೂತಗಳು ಬರುವ ಕಥೆಗಳು-ಎಂಬ ಗುಂಪುಗಳನ್ನು ಕಾಣಬಹುದು. ಪಾತ್ರಗಳ ದೃಷ್ಟಿಯಿಂದ ಮೇಲಿನ ವಿಭಗಳು ಕಂಡು ಬಂದರೂ ಕಥೆಗಳ ಸ್ವರೂಪ ದೃಷ್ಟಿಯಿಂದ ಗಮನಿಸಿದಾಗ ಪ್ರಸಿದ್ಧ ಜಾನಪದ ತಜ್ಞ ಸ್ಟಿತ್ ಥಾಂಪ್ಸನ್ನರ ವರ್ಗೀಕರಣಗಳಾದ ವಾಸ್ತವಿಕ ಕಥೆಗಳ

ಗುಂಪಿಗೂ ಮತ್ತು ಸರಳ ಕಥೆಗಳ ಗುಂಪಿಗೂ ಇವು ಹಂಚಿಕೊಳ್ಳುತ್ತವೆ. ಪೋಲಿ ಕಥೆಗಳೆಲ್ಲ ವಾಸ್ತವಿಕ ಜಗತ್ತಿಗೆ ಸಂಬಂಧಿಸಿದುವು ; ಜನಪದ ದೈನಂದಿನ ಜೀವನವನ್ನು ಸುತ್ತುವರಿದವು. ಇವುಗಳಲ್ಲಿ ಸಂಕೀರ್ಣ ಸ್ವರೂಪದ ಕಥೆಗಳೂ ಇವೆ; ಸರಳ ಸ್ವರೂಪದ ಕಥೆಗಳೂ ಇವೆ.

ವಾಸ್ತವಿಕ ಲೋಕದ ಮೋಸ, ವಂಚನೆ, ಕಪಟ, ಕಳ್ಳತನ–ಇವುಗಳ ಬಗೆಗಿನ ಕಥೆಗಳನ್ನು ಕೇಳಲು ಹೆಚ್ಚು ಕುತೂಹಲವಿರುತ್ತದೆ. ದಡ್ಡತನ ಮತ್ತು ಬುದ್ಧಿವಂತಿಕೆ ಇವುಗಳ ಭಿನ್ನತೆಯಿಂದ ಹೊಮ್ಮಿಬರುವ ವಿನೋದ ಸಂದರ್ಭಗಳನ್ನು ಕೇಳಿ ಆನಂದಪಡುವುದೇ ಹೆಚ್ಚು. ಅಂಥದರಲ್ಲಿ ಇಂಥ ವಿಷಯಗಳು ಲೈಂಗಿಕ ಕ್ರಿಯೆಗೆ ಸಂಬಂಧಿಸಿಬಂದಾಗ ಕೇಳುಗನ ಮನದಲ್ಲುಂಟಾಗುವ ಪರಿಣಾಮ ಅತ್ಯಂತ ಮಹತ್ವಪೂರ್ಣವಾದುದು. ಜನಪದ ಪೋಲಿ ಕಥೆಗಳು ಲೈಂಗಿಕ ವಿಚಾರ ಶೀಲತೆಯನ್ನು, ಭೌತಿಕ ಸತ್ಯವನ್ನು ಕಾಯ್ದಿಟ್ಟುಕೊಂಡ ವಿನೋದಮಯ ಸಾಧನಗಳು. ಕುತೂಹಲವನ್ನರಳಿಸುತ್ತ ಅಗತ್ಯವಾದ ನಗುವಿನ ಬುಗ್ಗೆಯನ್ನುಕ್ಕಿಸುವ ಅಂಶಗಳಲ್ಲಿ ಲೈಂಗಿಕ ವಿಷಯವೇ ಪ್ರಧಾನವಾದುದು. ಸತ್ಯವಾಗಿಯೂ ತಮಾಷೆಯನ್ನುಂಟುಮಾಡುವ ಅಂಶಗಳೆಂದರೆ ಲೈಂಗಿಕ ಕ್ರಿಯೆಯನ್ನು ಕೇಂದ್ರವಾಗುಳ್ಳ ಹಾದರ, ಸೂಳೆಗಾರಿಕೆ, ಷಂಡತ್ವ, ಸಲಿಂಗ ಕೂಟ, ಹಿಡಹಾಕುವುದು; ಅನೈತಿಕ ಸಂಭೋಗ, ಇತ್ಯಾದಿ ವಿಷಯಗಳು. ಬದುಕಿನ ಇತರ ವಿಷಯಗಳಾದ ಸಾವು, ನೋವು, ಸಾಹಸ, ಗೆಲವು, ನಲಿವು ಇತ್ಯಾದಿ ರಮ್ಯಾದ್ಭುತ ವಿಷಯಗಳು ನಿಶ್ಚಯವಾಗಿಯೂ ವಿನೋದವನ್ನುಂಟುಮಾಡಲಾರವು. ಲೈಂಗಿಕ ವಿನೋದವೇ ನಿಜವಾದುದು ಹಾಗೂ ಅತ್ಯಂತ ಕ್ರಿಯಾತ್ಮಕವಾದುದು. ಈ ಲೈಂಗಿಕ ವಿನೋದದ ರೀತಿ ಎಂದರೆ ಕತ್ತಲೆಯಲ್ಲಿ ಸಿಳ್ಳು ಹಾಕಿದಂತೆ.

ಲೈಂಗಿಕ ಪ್ರಕ್ರಿಯೆಯನ್ನೇ ಕೇಂದ್ರವಾಗುಳ್ಳ ಜನಪದ ಪೋಲಿ ಕಥೆಗಳದು ಒಂದು ಪರಿಮಳ ಭರಿತ ತೋಟ. ಲೈಂಗಿಕ ಕ್ರಿಯೆಯ ಮೂಲದಿಂದ ಉದ್ಭವಿಸುವ ಹಲವು ಬಗೆಯ ಮಾನಸಿಕ ಭಾವನೆಗಳು, ಅಸಾಂಸ್ಕೃತಿಕ ಗುಣಗಳು, ಭ್ರಾಂತಿಮೂಲ ಚಪಲಗಳು, ವಂಚನೆ, ದಡ್ಡತನ, ಬುದ್ಧಿವಂತಿಕೆಗಳು, ಈ ಕಥೆಗಳಲ್ಲಿ ಕಾಣಿಸಿಕೊಳ್ಳುತ್ತವೆ. ದಡ್ಡತನದಿಂದ ಜನನೇಂದ್ರಿಯಗಳನ್ನು ತಪ್ಪಾಗಿ ತಿಳಿಯುವುದು 'ಮೋಟು ಬೀಟು'* ಕಥೆಯಲ್ಲಿ' ಬರುತ್ತದೆ. ಭ್ರಾಂತಿಯಿಂದಲೋ ಚಿಕ್ಕಂದಿನಲ್ಲುಂಟಾದ ಭೀತಿಯಿಂದಲೋ ಸಂಭೋಗ ಕ್ರಿಯೆಯಿಂದ ದೂರವಾಗುವುದು, ಅನಂತರ ಅನ್ಯರ ಸಹಾಯದಿಂದ ಕೂಡುವುದು ಕೆಲವು ಕಥೆಗಳಲ್ಲಿ ಸಾಮಾನ್ಯ. ಪ್ರಸ್ತದ ಮನೆ ಸೇರಿದ ಹೆಣ್ಣೊಬ್ಬಳು ಚಿಕ್ಕಂದಿನ ಭೀತಿಯಿಂದ ಗಂಡನೊಡನೆ ಕೂಡಲು ಹೆದರಿ ದೂರವಾಗುವುದು, ಅದಕ್ಕಾಗಿ ಗಂಡ ಕೊರಗುವುದು, ಅನಂತರ ಮುದುಕನೊಬ್ಬನ

* ವಿವರಕ್ಕೆ : "ನಮ್ಮೂರಿನ ಜನಪದ ಕಥೆಗಳು" ಪು. 86.

ಉಪಾಯ ನೆರವಾಗಿ ಬರುವುದು 'ಮನೆ ದೇವರ ಹಬ್ಬ'ದ* ಕಥೆಯಲ್ಲಿ ಬರುತ್ತದೆ. ಕೆಲವು ಪೋಲಿ ಕಥೆಗಳಲ್ಲಿನ ನಾಯಕನ ಲೈಂಗಿಕ ಗೆಲವು ಅವನ ಬದ್ಧಿವಂತಿಕೆಯ ಮೇಲೆಯೇ ನಿಂತಿರುತ್ತದೆ. ಆದರೆ ನಾಯಕ ನಾಯಕಿಯರಿಬ್ಬರೂ ದಡ್ಡರೇ ಆದಾಗ ಅನ್ಯರ ಸಹಾಯ ನೆರವಾಗುವುದುಂಟು. ದಡ್ಡ ಹೆಂಡತಿಯೊಬ್ಬಳು ತನ್ನ ಯೋನಿಗೆ ಬದಲಾಗಿ ತನ್ನ ಹೊಕ್ಕುಳನ್ನೇ ಗಂಡನಿಗೆ ಒಡ್ಡುತ್ತಾಳೆ. ಇದರಿಂದ ಇಬ್ಬರಿಗೂ ನೋವಾಗುತ್ತದೆ. ಆದರೆ ಮಾರನೆಯ ದಿನ ಅನ್ಯರ ಸೂಚನೆಯಂತೆ ಎಣ್ಣೆ ಹಚ್ಚಿಕೊಂಡು ಅವರಿಬ್ಬರೂ ಸಂಭೋಗಕ್ಕೆ ತೊಡಗಿದಾಗ ಅವನ ಶಿಶ್ನ ಹೆಂಡತಿಯ ಹೊಕ್ಕುಳಿಂದ ಜಾರಿ ಅವಳ ಜನನೇಂದ್ರಿಯಕ್ಕೆ ಧುಮುಕಿಬಿಡುತ್ತದೆ. ಈ ಕಾರಣದಿಂದಾಗಿ ಹೆಂಡತಿಯ ಹೊಟ್ಟೆಯೇ ಸೀಳಿಹೋಯಿತೋ ಎಂಬ ಭೀತಿ ಅವನಿಗಾಗಿ ಆಗಳಿಗೆಯಲ್ಲಿಯೇ ಎದ್ದು ಆರು ಕಟ್ಟಿಕೊಂಡು ಹೊಲಕ್ಕೆ ಹೋಗಿಬಿಡುತ್ತಾನೆ. ಅನಂತರ ಹೊಲಕ್ಕೆ ಊಟ ತಂದ ಹೆಂಡತಿಯನ್ನು ನೋಡಿ, ನಿಜಸ್ಥಿತಿಯನ್ನು ತಿಳಿದು ಊಟ ಮಾಡುವುದನ್ನೂ, ಹೊಲ ಉಳುವುದನ್ನೂ ಬಿಟ್ಟು ಹೆಂಡತಿಯೊಡನೆ ಹಾಡು ಹಗಲೆ ಹೊಲದ ಬದುವಿನ ಮೇಲೆ ಮಲಗಿ ಬಿಡುತ್ತಾನೆ. ಇವರ ಈ ಕ್ರೀಡೆಯನ್ನು ನೋಡಿದ ಪಕ್ಕದ ಹೊಲದವನ ಕಾಮತೀವ್ರತೆ ಹೇಳತೀರದ್ದಾಗುತ್ತದೆ. ಅನೈಸರ್ಗಿಕ ರೀತಿಯಲ್ಲಿ ತನ್ನ ಕಾಮ ಚಟವನ್ನು ತೀರಿಸಿಕೊಳ್ಳಲು ಹೋಗಿ ವಿಕಾರಕ್ಕೆ ಒಳಗಾಗಿಬಿಡುತ್ತಾನೆ.

ಕಾಮ ಚಟಕ್ಕಾಗಿ ಮುದುಕರು ಯುವತಿಯರನ್ನು ಕೂಡುವ, ನಾಯಿ, ಹಸು, ಕುದುರೆ—ಇತ್ಯಾದಿ ಪ್ರಾಣಿಗಳೊಡನೆ ಅನೈತಿಕ ಸಂಪರ್ಕವಿಟ್ಟುಕೊಂಡಿರುವ ಕಥೆಗಳೂ ಇವೆ. ಯುವತಿಯೊಬ್ಬಳನ್ನು ಮದುವೆಯಾದ ಮುದುಕನೊಬ್ಬ ಒದ್ದೆಬಟ್ಟೆಯನ್ನು ತನ್ನ ಹೆಂಡತಿಯ ಯೋನಿಯ ಮೇಲೆ ಹರಡಿಕೊಂಡು ಅದನ್ನು ಕಟ್ಟುವುದರಲ್ಲಿಯೇ ಚಪಲ ತೀರಿಸಿಕೊಂಡರೆ ಆ ಹೆಂಡತಿಯಾದವಳೋ ತನ್ನ ಗಂಡನ ಸವಾರಿ ಕುದುರೆಯ ಶಿಶ್ನವನ್ನು ಮುಟ್ಟಿಮುಟ್ಟಿ "ಇದು ಅದಾಗಿದ್ರೆ" ಎಂದುಕೊಳ್ಳುವುದರಲ್ಲಿಯೇ ಚಪಲ ಹೆಚ್ಚಿಸಿಕೊಂಡುಬಿಡುತ್ತಾಳೆ. ಕೊನೆಗೆ ಆ ಗಂಡು ಕುದುರೆಯನ್ನೇ ಕೂಡಿದ ಸಾವನ್ನೇ ಅಪ್ಪಬೇಕಾಗುತ್ತದೆ.

ಪುರುಷನ ವೀರ್ಯ ಬಂಧನ ಶಕ್ತಿಯುತವಾದುದು ಎಂಬುದು ಜನಪದಕ್ಕೆ ಗೊತ್ತು. ಬಡ್ಡಬೋಯಿಯ ಮಗನೊಬ್ಬನು ಲೈಂಗಿಕಾ ಕರ್ಷಣೆಗೊಳಗಾಗಿ ತನ್ನ ವೀರ್ಯವನ್ನು ಕಳೆದುಕೊಂಡು ಅನಂತರ ಅವನು ಹೇಗೆ ನಿಶ್ಯಕ್ತನಾದ ಎಂಬುದನ್ನು "ಜಡ್ಡಿಗೆ ಬೀಗ" ಎಂಬ ಕಥೆಯೊಂದು ತಿಳಿಸುತ್ತದೆ.

ಪೋಲಿ ಕಥೆಗಳ ಕ್ಷೇತ್ರ ಜನಪದ ವಿಚಾರವಂತಿಕೆಯಿಂದ ಕೂಡಿದ್ದು. ಉಪಯುಕ್ತ ವಿನೋದದ ತಿರುಳಿನಿಂದ ತುಂಬಿರುವ ಈ ಕ್ಷೇತ್ರವಲ್ಲಿ ಒಗಟುಗಳಿಗೆ,

---

* ನೋಡಿ ''ನಮ್ಮೂರಿನ ಜನಪದ ಕಥೆಗಳು''. ಪು. 90.

ಗಾದೆಗಳಿಗೆ ಸಂಬಂಧಿಸಿದ ಪೋಲಿ ಕಥೆಗಳೂ ಇವೆ. ಕ್ರಮವಾದ ಪ್ರಣಯಕ್ಕೆ ಸಂಬಂಧಿಸಿದಂತೆಯೇ ಅಕ್ರಮ ಪ್ರಣಯಕ್ಕೆ ಸಂಬಂಧಿಸಿದ ಒಗಟು ಕಥೆಗಳು ಜನಪದ ಕಥಾವಲಯದಲ್ಲಿನ ಒಂದು ಪ್ರಕಾರವೆಂಬುವನ್ನು ಮರೆಯುವಂತಿಲ್ಲ. ಹೆಣ್ಣೊಂದು ತನ್ನ ಗಂಡನನ್ನು ವಂಚಿಸಿ ಮಿಂಡನೊಡನೆ ವ್ಯವಹರಿಸುವ ಕ್ರಮದಲ್ಲಿ ಒಗಟಿನ ಪೋಲಿ ಕಥೆಗಳಿವೆ. ಅಕ್ರಮ ಪ್ರಣಯಿಗಳು ಮೂರನೆಯವರಿಗೆ ತಿಳಿಯದಂತೆ ಒಗಟನ್ನು ಬಳಸಿಕೊಂಡು ತಮ್ಮ ಪೋಲಿತನವನ್ನು ಮುಂದುವರಿಸಬಹುದು. ಹೆಂಡತಿಯಲ್ಲಿ ಅನುಮಾನಗೊಂಡ ಗಂಡ ಕುರುಡನಂತೆ ನಟಿಸಿ, ಇಲ್ಲವೇ ಬೇರೆಲ್ಲಿಗೋ ಹೋಗುವವ ನಂತೆ ವರ್ತಿಸಿ, ಮನೆಯಲ್ಲಿಯೇ ಹುದುಗಿದ್ದು ಅವಳ ಮತ್ತು ಅವಳ ಮಿಂಡನ ಕೃತ್ಯವನ್ನು ಕಣ್ಣಾರೆ ಕಂಡು ಸಹಿಸಲಾರದೆ ಕ್ರೂರ ಶಿಕ್ಷೆಗೆ ಗುರಿ ಮಾಡುವ ಕಥೆಗಳಿವೆ. ಅಕ್ರಮ ಪ್ರಣಯದಲ್ಲಿ ತೊಡಗಿದ ಹೆಣ್ಣೇ ತನ್ನ ಗಂಡನನ್ನು ಕೊಂದು ಮಿಂಡನೊಡನೆ ಬದುಕಲು ಮಾಡುವ ಪ್ರಯತ್ನದಲ್ಲಿಯೂ ಒಗಟು ಕಥೆಗಳಿವೆ.

ವಾಙ್ಮಯ ಲೋಕದಲ್ಲಿ ಗಾದೆ ಒಗಟಿಗಿಂತಲೂ ಜನಪ್ರಿಯವಾದುದು. ಗಾದೆ, ವಿಶಾಲವಾದ ಜೀವನಾನುಭವದ ಸಾರದಿಂದ ಹರಳುಗೊಂಡ ಸಂಕ್ಷಿಪ್ತ ಅಭಿವ್ಯಕ್ತಿ, ಅನುಭವದ ಸಾರವನ್ನ, ಆಲೋಚನೆಯನ್ನ, ಕಲ್ಪನೆಗಳನ್ನ, ದೃಷ್ಟಾಂತಗಳನ್ನ, ನೀತಿ ಧರ್ಮಗಳನ್ನ ಅಳವಡಿಸಿಕೊಂಡಿರುವ ಸೂತ್ರಗಳು. ಹಾದರದ ವ್ಯವಹಾರದಲ್ಲಿ, ಭ್ರಷ್ಟತನದ ಬದುಕಿನಲ್ಲಿ, ಲೈಂಗಿಕ ಪ್ರವೃತ್ತಿಯಲ್ಲಿ ಅನುಭವ ಸಾಗರವನ್ನೇ ಧ್ವನಿಸಿ ಬಿಡುತ್ತವೆ, ಗಾದೆಗಳಿಗೂ ಸಂಬಂಧಿಸಿದಂತೆ ಪೋಲಿ ಕಥೆಗಳಿವೆ. ಉದಾಹರಣೆಗೆ ಕೆಲವು ಗಾದೆಗಳನ್ನು ನೋಡಬಹುದು : 'ಹೋಗಿ ಬಂದು ಮೂಗಿ...'; 'ಹೆಸರಿಗೊಬ್ಬ ಬಸರಿಗೊಬ್ಬ'; 'ಮಾವನ ಹತ್ರ ಮೊಳಮುದ್ದ ಇದ್ದರೆ ಸೊಸೆಗೆ ಬಂದ ಲಾಭವೇನು?'; 'ಹಾದರಗಿತ್ತಿ ಕಾಲು ಹಸೇಮೇಲೆ ನಿಲ್ಲದು'; 'ದರೆ ಹೊಲ ಉತ್ತುಕೆಟ್ಟ, ದರಿದ್ರ ದವಳನ್ನು...ಕೆಟ್ಟ' ಇತ್ಯಾದಿ.

ಪೋಲಿ ಕಥೆಗಳಲ್ಲಿ ನಿರ್ದಿಷ್ಟ ಕಾಲ ದೇಶಕ್ಕೆ ಸೀಮಿತವಾಗಿರದ, ಸಾರ್ವತ್ರಿಕವಾಗಿ ಹರಡಿಕೊಂಡಿರುವ ಸರಳ ಕಥೆಗಳದೇ ಪ್ರಧಾನ ವರ್ಗ. ಇವು ಸ್ವರೂಪದಲ್ಲಿ ಚಿಕ್ಕ ವಾಗಿದ್ದು ಉದ್ದೇಶವೊಂದನ್ನು ಹೇಳಲು ಹೊರಟ ವಿನೋದಮಯ ಕಲಾಕೃತಿಗಳು. ಇವುಗಳ ನೆಲಗಟ್ಟು ದೈನಂದಿನ ಜೀವನ. ನಾಟಕೀಯತೆ, ಸಂಕ್ಷಿಪ್ತತೆ, ಗೂಢಾರ್ಥತೆ ಸಾರ್ವತ್ರಿಕ ಗುಣವಾಗಿದ್ದು ವಿನೋದವನ್ನು ಬೀರುವುದೇ ಇವುಗಳ ಪ್ರಧಾನ ಗುರಿ. ಸರಳ ಪೋಲಿ ಕಥೆಗಳು ವಸ್ತುವಿನಲ್ಲಿ ಸರಳವಾಗಿದ್ದರೂ ಸ್ಥಳದಿಂದ ಸ್ಥಳಕ್ಕೆ, ಕಾಲದಿಂದ ಕಾಲಕ್ಕೆ ತಮ್ಮ ನಿರ್ದಿಷ್ಟ ಸ್ವರೂಪ ಮತ್ತು ರಚನೆಗಳನ್ನು ಉಳಿಸಿಕೊಳ್ಳುವುದನ್ನು ತಿರಸ್ಕರಿಸುತ್ತವೆ. ಆದಕಾರಣ ಪ್ರತಿ ಕಥಾಗಾರನೂ ತನ್ನ ಬುದ್ಧಿ ಕುಶಲತೆಯನ್ನು ಇಲ್ಲಿ ಮೆರೆಯಲು ಪ್ರಯತ್ನಿಸುತ್ತಾನೆ

ಅನಕ್ಷರಸ್ತ ಸಮಾಜದ ಕಥೆಗಾರನಿಗಾಗಲಿ, ಕೇಳುಗರಿಗಾಗಲಿ ಮತ್ತು ಅಕ್ಷರಸ್ತ ಸಮಾಜದ ಸಾಹಿತಿಗಾಗಲಿ, ಓದುಗರಿಗಾಗಲಿ ಲೈಂಗಿಕ ವಿಷಯ ಎಂದರೆ ಎಲ್ಲಿಲ್ಲದ ಲವಲವಿಕೆ ಬಂದು ಬಿಡುತ್ತದೆ. ಕಾಮದ ವಿಷಯ ಎಂದಕೂಡಲೆ ಇಲ್ಲದ ಚುರುಕು ಬಂದು ಬಿಡುತ್ತದೆ. ಅಶ್ಲೀಲ ವಿಷಯ ವರ್ಣನೆಗಳು, ಮನಸೋಇಚ್ಛೆಯ ಕಾಮ ಚಟಗಳು, ಹುಚ್ಚಾಟಗಳು, ಪೊಂಡುತನ, ಮದನಾಭಿರುಚಿ, ಖಯಾಲು ಮುಂತಾದ ಲೈಂಗಿಕ ಭಾವನೆಗಳು ಮಾನವ ಜನಾಂಗದ ಎಲ್ಲ ಸ್ತರಗಳಲ್ಲಿಯೂ ಕ್ರಿಯಾತ್ಮಕವಾಗಿ ವ್ಯವಹರಿಸುತ್ತವೆ. ಮೋಸದ, ವಂಚನೆಯ, ಕಪಟದ ಲೈಂಗಿಕ ಕ್ರಿಯೆಗಳು ಗಣನಾತೀತ. ವಂಚನೆ ವಾಸ್ತವ ಲೋಕದ ಜೀವಂತ ವಸ್ತು. ಇದರಲ್ಲಿ ಬುದ್ಧಿ ವಂತಿಕೆಯೂ ಇರುತ್ತದೆ, ದಡ್ಡತನವೂ ಇರುತ್ತದೆ. ಚತುರ ವಂಚನೆಯಿಂದ ಸಮಯ ಸಾಧಿಸಿಕೊಳ್ಳುವವರು ಒಂದು ಬಗೆಯಾದರೆ ದಡ್ಡ ವಂಚನೆಗೊಳಗಾಗುವವರ ರೀತಿ ಮತ್ತೊಂದು ಬಗೆಯದಾಗಿರುತ್ತದೆ. ಶೀಲ ಭಂಗಕ್ಕಾಗಿ ಅಥವಾ ವ್ಯಭಿಚಾರಕ್ಕಾಗಿ ಹಲವು ಬಗೆಯ ವಂಚನೆಗಳು ಸಮಾಜದಲ್ಲಿ ನಡೆಯುವುದು ಅಪರೂಪವೇನಲ್ಲ. ಹೆಣ್ಣೊಂದನ್ನು ವಂಚಿಸಿ ಮೋಸದಿಂದ ಹಾದರಕ್ಕೆಳೆಯಬಹುದು. ಅಥವಾ ಹೆಣ್ಣೇ ತನ್ನ ಪತಿಯನ್ನು ವಂಚಿಸಿ ಹಾದರಕ್ಕಿಳಿಯಬಹುದು. ವಂಚಕರೇ ಕೆಲವು ಲಾಭ ಕ್ಕೋಸುಗ ಸತೀತ್ವನಾಶಕ್ಕೆ ಪ್ರೇರಕರಾಗಬಹುದು. ತಲೆ ಹಿಡುಕರು ಅತ್ಯಾಚಾರಕ್ಕೆ ಅನುವು ಮಾಡಿಕೊಡಬಹುದು. ಗಂಡನ ಷಂಡತನವೇ ಹೆಂಡತಿಗೆ ಮಿಂಡನನ್ನು ಹುಡುಕಲು ಎಡೆ ಮಾಡಿಕೊಡಬಹುದು. ಇತ್ಯಾದಿ ವಿಷಯಗಳನ್ನುಳ್ಳ ಸರಳ ಪೋಲಿ ಕಥೆಗಳು ಅಪಾರ.

ದಡ್ಡರ ಅಸಂಬದ್ಧತೆ ಅವರ ತಿಳುವಳಿಕೆಯ ಪರಿಮಿತಿಯಲ್ಲಿಯೇ ಬಿದ್ದಿರುವು ದಿಲ್ಲ. ವಾಸ್ತವಿಕತೆಯ ಬಗ್ಗೆ ಅಜ್ಞಾನ, ಪ್ರಾಥಮಿಕ ನಿಯಮಕ್ಕೆ ಉದಾಸೀನ ಅವರಲ್ಲುಂಟು. ಲೈಂಗಿಕ ವ್ಯವಹಾರದಲ್ಲಿ ದಡ್ಡರಾದವರಿಗೆ, ಅವರ ಬಾಲಿಶವರ್ತನೆಗೆ, ತಪ್ಪುಕಲ್ಪನೆಗಳಿಗೆ ಸಂಬಂಧಿಸಿದ ಕಥೆಗಳು ಅಪಾರ. ಲೈಂಗಿಕ ಕ್ರಿಯೆಯಲ್ಲಿ ತಪ್ಪು ಕ್ರಮಗಳನ್ನು ಆಚರಿಸುತ್ತಾರೆ; ಯಾರದೋ ಮಾತನ್ನು ಕೇಳಿ ಸಂಭೋಗಕ್ಕೆ ತೊಡಗುತ್ತಾರೆ. ತಮ್ಮ ಸಾಮಾನುಗಳನ್ನು ತಪ್ಪಾಗಿ ತಿಳಿಯುತ್ತಾರೆ. ಸರಳ ಪೋಲಿ ಕಥೆಗಳಲ್ಲಿನ ಹೆಣ್ಣು ಸಾಮಾನ್ಯವಾಗಿ ದಡ್ಡಳಾಗಿಯೋ, ಹಠಮಾರಿ ಯಾಗಿಯೋ ಇಲ್ಲವೇ ಅತಿ ಕೆಟ್ಟವಳಾಗಿಯೋ ಕಾಣಿಸಿಕೊಳ್ಳುತ್ತಾಳೆ. ಅವಳ ಹಠಮಾರಿತನ ಎಂತಹದು ಎಂಬುದು 'ಯಾರು ಅಡೀಕೆ ಮಲಗಿಕೊಳ್ಳಬೇಕು ?' ಎಂಬ ಕಥೆಯಿಂದ ತಿಳಿದು ಬರುತ್ತದೆ. ಶೋಭನದ ಮನೆ ಸೇರಿದ ಹೆಂಡತಿ ಯೊಬ್ಬಳು ಗಂಡನೇ ಅಡಿಯಲ್ಲಿ ಮಲಗಿಕೊಳ್ಳಬೇಕೆಂದೂ ತಾನೇ ಅವನ ಮೇಲೆ ಮಲಗುವುದಾಗಿಯೂ ಹಠ ಹಿಡಿಯುತ್ತಾಳೆ. 'ಸಂಭೋಗದ ಸಮಯದಲ್ಲಿ ಯಾರು ಅಡಿಯಲ್ಲಿ ಮಲಗಬೇಕು'? ಎಂಬ ಈ ಸಮಸ್ಯೆ ಏಳೂರ ಗೌಡರವರೆವಿಗೂ ಹೋಗಿ ಬಗೆಹರಿಯದೆ ಬಂದು ನರಿ ಬಂದು ಆ ಸಮಸ್ಯೆಯನ್ನು ಬಗೆಹರಿಸುತ್ತದೆ.

ಇಂಥ ಮೂರ್ಖ ಹೆಂಡಿರ ಕಥೆಗಳ ಉದ್ದೇಶ ವಿನೋದವೇ ಹೊರತು ನೀತಿ ಹೇಳುವುದಿಲ್ಲ. ಇಲ್ಲಿ ಬರುವ ಹಾಸ್ಯವೂ ಅಪಹಾಸ್ಯವಾಗಿರುತ್ತದೆ.

ದಡ್ಡವಂಚನೆಗೆ ಮತ್ತು ಚತುರವಂಚನೆಗೆ ಸಂಬಂಧಿಸಿರುವ ಕಥೆಗಳಂತೆಯೇ ಕ್ರೌರ್ಯರತಿಗೆ ಸಂಬಂಧಿಸಿದ ಕಥೆಗಳೂ ಇವೆ. ವಂಚಕರಲ್ಲಿ ಕ್ರೂರಿಗಳೂ ಇರುವುದರಿಂದ ಕೆಲವು ಸಮಯ ವಂಚನೆ ಕ್ರೌರ್ಯರತಿಯಾಗುವುದುಂಟು. ಎಲ್ಲಾ ಜನಾಂಗದ ಜನಪದ ಕಥೆಗಳೂ ಹಿಂಸೆಯು, ಸೇಡಿನ, ಆಕಸ್ಮಿಕ ಮರಣದ ಚಿತ್ರಗಳಿಂದ ಕೂಡಿರುತ್ತದೆ. ಏಕೆಂದರೆ ಬದುಕಿನಲ್ಲಿ ಕ್ರೂರತ್ವ ಲೆಕ್ಕವಿಲ್ಲದಷ್ಟು ; ವೇದನೆಗಳು ವಿಪರೀತ. ಜನಪದ ಕಥೆಗಳು ಜನಪದದ ಪ್ರತಿಬಿಂಬವಾಗಿ ಅಲ್ಲಿಯೇ ಹುಟ್ಟಿ ಅಲ್ಲಿಯೇ ಬೆಳೆದು ಅಲ್ಲಿಯೇ ಬಳಕೆಯಾಗುವುದರಿಂದ ಕ್ರೌರ್ಯಕ್ಕೆ ಭಯಂಕರತೆಗೆ ಮತ್ತು ಹಿಂಸೆಗೆ ಸಂಬಂಧಿಸಿದ ಪೋಲಿ ಕಥೆಗಳು ಬರುತ್ತವೆ. ಹೆಣ್ಣೊಂದನ್ನು ಕಾಮಿಸಿ ಆದರೆ ಅವಳ ಅನಾದರಣೆಗೆ ಒಳಗಾದ ವ್ಯಕ್ತಿಯಿಂದಲೇ ಕ್ರೌರ್ಯದ ಭ್ರಷ್ಟಾಚಾರ ಜರುಗಬಹುದು. ಒಂದು ಹೆಣ್ಣಿಗೆ ಹಲವು ಪುರುಷರು ನಾಯಿಗಳಂತೆ ಸುತ್ತಿ ವರ್ತಿಸಬಹುದು. ಅಥವಾ ಹೆಣ್ಣೇ ದಿನವೊಂದರಲ್ಲಿ ತೊಂಬತ್ತೊಂಬತ್ತು ಪುರುಷರನ್ನು ಕೂಡಿಯೂ ತೃಪ್ತಳಾಗದೆ ಅವರಿಗೆ ಕಠಿಣ ಶಿಕ್ಷೆ ವಿಧಿಸಬಹುದು.

ಜೀವ ವಿಜ್ಞಾನದ ಪ್ರಕಾರ ಪ್ರಾಣಿ ಮತ್ತು ಸಸ್ಯ ವರ್ಗಗಳು ತಮ್ಮ ಲೈಂಗಿಕಾಕಾಂಕ್ಷೆಯಲ್ಲಿ ತಮಗೆ ಯೋಗ್ಯವಾದುದನ್ನು ಆಯ್ಕೆಮಾಡಿಕೊಳ್ಳುತ್ತವೆ. ಆದರೆ ಪೋಲಿ ಕಥೆಗಳಲ್ಲಿ ಬರುವ ಪ್ರಾಣಿಗಳ ಲೈಂಗಿಕ ಆಯ್ಕೆ ವಿಚಿತ್ರವಾಗಿದೆ. ಜನಪದ ಕಥಾಗಾರನ ದೃಷ್ಟಿಯಲ್ಲಿ ಮಾನವ ಜಗತ್ತು ಮತ್ತು ಪ್ರಾಣಿ ಜಗತ್ತು ಬೇರೆ ಬೇರೆಯಲ್ಲ. ಮಾನವ ಜನಾಂಗವಿರುವ ಎಲ್ಲ ಕಡೆಗಳಲ್ಲಿಯೂ ಪ್ರಾಣಿ ಕಥೆಗಳು ಬರುತ್ತವೆ. ಈ ಕಥೆಗಳಲ್ಲಿನ ಪ್ರಾಣಿ ಪಾತ್ರಗಳು ನಿಜವಾಗಿ ಮನುಷ್ಯರದೋ ಅಥವಾ ಪ್ರಾಣಿಗಳದೋ ಎಂದು ಹೇಳುವುದು ಅನುಮಾನವಾಗಿ ಬಿಡುತ್ತದೆ. ಏಕೆಂದರೆ ಈ ಸಂದಿಗ್ಧ ಕಲ್ಪನೆ ಪವಿತ್ರ ಪುರಾಣಗಳವರೆವಿಗೂ ಹಬ್ಬಿದೆ. ದೇವತೆಗಳಾಗಲಿ, ಮಾನವರಾಗಲಿ, ಪ್ರಾಣಿಗಳಾಗಲಿ ಬೇರೆ ಬೇರೆಯಲ್ಲ ಎಂಬ ಭಾವನೆ ಜನಪದಕ್ಕೆ ಒಗ್ಗಿ ಹೋಗಿದೆ. ಆದಕಾರಣ ಪ್ರಾಣಿಗಳು ಮನುಷ್ಯನ ಸ್ಥಾನದಲ್ಲಿ ನಿಂತು ಕೆಲವು ಸಲ ಅವನ ಲೈಂಗಿಕ ಪ್ರವೃತ್ತಿಗೂ ಹಲವು ಸಲ ಅವನ ವರ್ತನೆಗಳನ್ನು ವಿಡಂಬಿಸುವುದಕ್ಕೂ ಮಾದರಿಯಾಗಿ ನಿಲ್ಲುವುದು ಆಶ್ಚರ್ಯದ ಸಂಗತಿಯೇನಲ್ಲ. ಮಾನವನ ಸ್ಥಾನದಲ್ಲಿ ನಿಂತು ಅವನ ಅಂತರಂಗದ ನಗ್ನತೆಯನ್ನು ಮಿಡಿಯುತ್ತವೆ. ಮಾನವನ ಕಾಮ ಪ್ರವೃತ್ತಿಯ ಸ್ವರೂಪವನ್ನು ಪ್ರತಿನಿಧಿಸಲು ಪ್ರಾಣಿಗಳನ್ನು ಆರಿಸುವಾಗ ಜನಪದ ಸಂಪ್ರದಾಯ ಬಹಳ ಎಚ್ಚರಿಕೆ ವಹಿಸಿದೆ ಎಂದು ಹೇಳಲಾಗುವುದಿಲ್ಲ. ಪರಸ್ಪರ ವಿರೋಧಾಭಾಸದ ಲೈಂಗಿಕ ಆಯ್ಕೆಯ ಕಥೆಗಳೇ ಹೆಚ್ಚು. ಹುಲಿಯನ್ನು ನರಿ ಅಪೇಕ್ಷಿಸುತ್ತದೆ. ಸ್ತ್ರೀಯೊಬ್ಬಳು ನಾಯಿ ಸಂಗ ಮಾಡುತ್ತಾಳೆ.

ಪುರುಷನಾದವ ನಾಯಿ, ಹಸು, ಎಮ್ಮೆ ಇತ್ಯಾದಿ ಪಶುಗಳ ಸಂಗ ವ್ಯವಹರಿಸುತ್ತಾನೆ. ಇಂತಹ ಕಥೆಗಳೇ ಹೆಚ್ಚು. ಚತುರ ವಂಚನೆಯಿಂದ ನರಿಯೊಂದು ಹುಲಿಯನ್ನು ಕೂಡಿದ ಕಥೆಯುಂಟು. ಬೆದೆಗೊಂಡ ನರಿಯೊಂದು ಈದ ಹುಲಿಯ ಗುಹೆಯ ಬಳಿ ಹೋಗಿ ಛೇಡಿಸುತ್ತದೆ. ಸಿಟ್ಟುಗೊಂಡ ಹುಲಿ ನರಿಯನ್ನು ಕೊಂದೇಬಿಡುತ್ತೇನೆಂದು ಹಿಂಬಟ್ಟುತ್ತದೆ. ಅಲ್ಲಿ ಇಲ್ಲಿ ನುಸುಳಿ ಓಡಿದ ಚತುರ ನರಿ ಕೊನೆಗೆ ಇಕ್ಕಾಟಾದ ಬಂಡೆಗಳ ನಡುವೆ ನುಸುಳುತ್ತದೆ. ಹುಲಿಯೂ ಅಲ್ಲಿಯೇ ನುಗ್ಗಲು ಹೋಗಿ ಸಿಕ್ಕಿಕೊಂಡು ಬಿಡುತ್ತದೆ. ಮುಂದಕ್ಕೂ ಹೋಗದ, ಹಿಂದಕ್ಕೂ ಬಾರದ ಇಕ್ಕಟ್ಟಿನಲ್ಲಿ ಸಿಕ್ಕಿಕೊಂಡಾಗ, ನರಿ ಹಿಂದಿನಿಂದ ಬಂದು ತನ್ನ ಕಾಮ ಚಟವನ್ನು ತೀರಿಸಿಕೊಳ್ಳುತ್ತದೆ. ಇಂಥದೆ ವಸ್ತುವನ್ನುಳ್ಳ "ಮೊಲ–ಹೆಣ್ಣುನರಿ" ಎಂಬ ಕಥೆ 'ರಷ್ಯಾದ ರಹಸ್ಯ ಕಥೆಗಳು' (ರಷ್ಯನ್ ಸೀಕ್ರೆಟ್‌ಟೇಲ್ಸ್) ಸಂಕಲನದಲ್ಲಿ ಬರುತ್ತದೆ.

ಪ್ರೇತ ಕಲ್ಪನೆ ಜನಪದ ಸಂಪ್ರದಾಯದ ಒಂದು ಅಚಲನಂಬಿಕೆ. ಬದುಕಿನ ಅಪೂರ್ಣತೆಯಿಂದ ಅತೃಪ್ತರಾಗಿ ಸತ್ತವರು ದೆವ್ವಗಳಾಗಿ ಬಂದು ಮಾನವರಂತೆಯೇ ವ್ಯವಹರಿಸುತ್ತವೆ ಎಂಬುದಕ್ಕೆ ಹಲವು ಕಥೆಗಳಿವೆ. ಅತಿ ಮಾನುಷ ಶಕ್ತಿಗಳಾದ ಈ ಪ್ರೇತಗಳು ಮನುಷ್ಯರಂತೆಯೇ ಬಂದು ತಮ್ಮ ಕಾಮ ಚಟವನ್ನು ತೀರಿಸಿಕೊಳ್ಳುತ್ತವೆ ಎಂಬುದಕ್ಕೆ 'ಹೆಣ್ಣು ದಯ್ಯ' * ಕಥೆ ನಿದರ್ಶನವಾಗಿದೆ. ಪೋಲಿ ಕಥೆಗಳಲ್ಲಿ ಅದ್ಭುತ ವಿಷಯವೆಂದರೆ ಪುರುಷನ ಶಿಶ್ನವಿಗೆ ಸಂಬಂಧಿಸಿದ್ದು. ಹೆಣ್ಣಿನ ಸ್ತನಗಳನ್ನು ಬೆಟ್ಟ ಗುಡ್ಡಗಳೆಂದೂ, ಅವುಗಳ ಕಿಬ್ಬಿಯನ್ನ ಕಣಿವೆ ಎಂದೂ, ಯೋನಿಯನ್ನು ಜೀಟು, ಬಿಲ, ಬಾವಿ, ಡೊಗರು ಎಂಬ ಕಲ್ಪನೆಗಿಂತಲೂ, ಪುರುಷನ ಶಿಶ್ನವನ್ನ ಮೋಟು, ತುಂಡು, ದಡಿ, ಎಂಬ ಭಾವನೆಗಿಂತಲೂ ಪುರುಷನ ಶಿಶ್ನ ಬಹು ಉದ್ದವಾಗಿದ್ದು ಹಗ್ಗದಂತೆ ಸೊಂಟಕ್ಕೆ ಸುತ್ತಿಕೊಂಡು ಬೇಕೆಂದಾಗ ಹರಿಯಬಿಡುವ ಕಲ್ಪನೆ ಅದ್ಭುತ ರಮ್ಯವಾಗಿದೆ. 'ಇಂಥ ಶಿಶ್ನ ಏಕೆ ಮೊಟಕಾಯಿತು ?' ಇದಕ್ಕೆ ಉತ್ತರವಾಗಿ ಹಲವು ಕಥೆಗಳಿವೆ. ಸೊಂಟಕ್ಕೆ ಸುತ್ತಿಕೊಂಡಿದ್ದ ಶಿಶ್ನವನ್ನು ಹರಿಯ ಬಿಟ್ಟು ನದಿಗೆ ಸೇತುವೆ ಮಾಡುವುದು ; ಮರಗಳಡಿ ನಿಂತು ಲೋಟಿಯಂತೆ ಉಪ ಯೋಗಿಸಿ ಕಾಯಿ ಕೀಳುವುದು ; ಇದ್ದಲ್ಲಿಂದಲೇ ಸ್ತ್ರೀಯರತ್ತ ಹರಿಯಬಿಡುವುದು, ಹೊಲದಲ್ಲಿಯೋ ಮನೆಯಲ್ಲಿಯೋ ಕೆಲಸದಲ್ಲಿ ತೊಡಗಿದ್ದ ಇಲ್ಲವೇ ಮಲಗಿದ್ದ ಸ್ತ್ರೀಯರ ಯೋನಿಗೆ ನುಗ್ಗಿಸುವುದು, ಸಿಟ್ಟುಗೊಂಡ ಸ್ತ್ರೀ ಅದನ್ನು ಕುಡುಗೋಲಿನಿಂದ ಕೊಯ್ದು ಹಾಕುವುದು ಇಲ್ಲವೆ ಕೊಳ್ಳಿಯಿಂದ ಸುಡುವುದು–ಇವರಿಂದ ಪುರುಷನ ಶಿಶ್ನ ಮೋಟಾಯಿತು ಎಂದು ಹೇಳುವ ಪೋಲಿ ಕಥೆಗಳು ಅಪಾರ.

---

* ನೋಡಿ : ನಮ್ಮೂರಿನ ಜನಪದ ಕಥೆಗಳು'. ಪು. 83.

3

ಪೋಲಿ ಕಥೆಗಳ ಸ್ವರೂಪ ಕಾಲ ದೇಶಾನುಗುಣವಾಗಿ ಅಭಿನ್ನ. ಇವುಗಳ ನಿರ್ದಿಷ್ಟ ಲಕ್ಷಣ ವಿಡಂಬವೆಗೆಂದೇ ಉದ್ದಿಷ್ಟವಾದುದು. ಏಕ ಆಶಯದಮೇಲೆ ಲಕ್ಷ್ಯವನ್ನು ಕೇಂದ್ರೀಕರಿಸುವ ಈ ಕಥೆ ಶೈಲಿಯಲ್ಲಿ ಸರಳವಿದ್ದರೂ ನೇರವಿಲ್ಲ. ನಾಟಕೀಯವೂ, ವಸ್ತುನಿಷ್ಠವೂ ಆಗಿದ್ದು ಕ್ರಿಯೆಯು ತ್ವರಿತಗತಿಯಿಂದ ಸಾವಧಾನದ ಮುಕ್ತಾಯಪಡೆದುಕೊಂಡಿರುವ ಈ ಕಥೆಗಳಲ್ಲಿನ ಭಾಷೆಯಾಗಲಿ ಭಾವವಾಗಲಿ ಅತ್ಯಂತ ಪ್ರಖರವಾದುದು. ಈ ಕಥೆಗಳು ಕೃತಕವೆಂದೂ, ಯಾರೋ ಅನಾಮ ಧೇಯರು ಹೇಳಿದವೆಂದೂ ಉದಾಸೀನಮಾಡುವಂತಿಲ್ಲ. ಇಲ್ಲಿ ಬಳಕೆಗೊಂಡಿರುವ ಪದಗಳನ್ನಾಗಲಿ, ಭಾವನೆಗಳನ್ನಾಗಲಿ ಕೇಳಿದ ಭಾವುಕರು ಕಿವಿ ಮುಚ್ಚಬೇಕಾಗಿಲ್ಲ. ಈ ಕಥೆಗಳಲ್ಲಿ ಅಂಥ ಒರಟಾದ, ಹಸಿ ಹಸಿಯಾದ ಪದಗಳು ಸಾಮಾನ್ಯವಾಗಿ ಬಳಕೆ ಯಾಗಿರುವುದಿಲ್ಲ. ಕಥಾಗಾರ ತನ್ನ ಬಳಸುಮಾತುಗಳಿಂದ, ದಾಟು ಮಾತುಗಳಿಂದ, ಧ್ವನಿಯಿಂದ, ಸಂಕೇತಗಳಿಂದ ಸನ್ನಿವೇಶಗಳನ್ನು ಪರಿಚಯಿಸಿ ಬಿಡುತ್ತಾನೆ. ಅವನು ಸುಸಂಸ್ಕೃತನಾಗಿದ್ದರೆ ನಯ ಭಾಷೆ ಅವನದಾಗಿರುತ್ತದೆ. ಇಲ್ಲದಿದ್ದರೆ ಅನಿವಾರ್ಯ ವಾಗಿಯೇ ಹಸಿ ಹಸಿಯಾದ ನೇರ ಭಾಷೆ ಅವನದಾಗಿರುತ್ತದೆ. ಆದರೂ ಸಂಗ್ರಹ ಕಾರ ಇಂಥ ಪದಗಳನ್ನು ತೆಗೆದುಹಾಕಿದರೆ ಕಥೆಗಳ ಸ್ವಾರಸ್ಯ ಕುಂದುತ್ತದೆ; ಸ್ವಾದ ತಗ್ಗುತ್ತದೆ.

ಬೇರೆ ಕಥೆಗಳಿಗೆ ಇವನ್ನು ಹೋಲಿಸಿದಾಗ ಇವುಗಳಲ್ಲಿರುವ ಹೆಚ್ಚಿನ ಸಂಗತಿಗಳು ನಮಗರಿವಾಗದೆ ಇರದು. ಮಾನವನ ಲೈಂಗಿಕ ವರ್ತನೆಯ ವೈಚಿತ್ರ್ಯಗಳಿಗೆ ಇವು ಬೆಳಕು ಚೆಲ್ಲುತ್ತವೆ. ಸಮಾಜದ ವ್ಯಕ್ತಿಗಳನ್ನು ಅತಿಯಾಗಿ ವಿಡಂಬಿಸುತ್ತವೆ. ಸಮಾಜದ ಆಚಾರ ಅನಾಚಾರವನ್ನು ಅನಾವರಣಮಾಡುತ್ತವೆ. ಇವು ನೈತಿಕತೆಯ ಪರವನ್ನಾಗಲಿ ವಿರೋಧವನ್ನಾಗಲಿ ತೋರಿಸದೆ ಬದುಕಿನ ಒಂದು ಪ್ರಮುಖವಾದ ಲೈಂಗಿಕ ಮುಖವನ್ನು ತೋರಿಸುವುದೇ ಇವುಗಳ ಪ್ರಮುಖ ಲಕ್ಷಣವಾಗಿದೆ.

4

ಪೋಲಿ ಕಥೆಗಳಲ್ಲಿನ ಒಂದು ಮಹತ್ವದ ಸಂಗತಿ ಎಂದರೆ ಇವು ಶಿಷ್ಟಸಾಹಿತ್ಯ ಕಥೆಗಳಿಗಿಂತ ಕ್ರಿಯಾತ್ಮಕವಾದುವು ಎಂಬುದು. ಈ ಕ್ರಿಯಾತ್ಮಕ ಮೌಲ್ಯ ಇಂದಿಗಿಂತ ಒಂದು ಕಾಲದಲ್ಲಿ ಗಾಢವಾಗಿದ್ದುದು. ಈ ಕಥೆಗಳಲ್ಲಿನ ಕ್ರಿಯಾತ್ಮಕ ಮೌಲ್ಯ ಸಾಹಿತ್ಯಿಕ ಮೌಲ್ಯಕ್ಕೆ ಬಾಧಕವಾಗದೆ ಇತರ ಕಲೆಗಳಿಗಿಂತ ಸರಳವೂ ಕಲಾಪೂರ್ಣವೂ ವೈವಿಧ್ಯಮಯವೂ ಆಗಿದ್ದುದರಿಂದ ನಾಗರಿಕ ಪ್ರಭಾವಕ್ಕೂ ಒಳಗಾಗಿವೆ. ಈ ಪೋಲಿ ಕಥೆಗಳು ಒಂದು ಗೊತ್ತಾದ ಸಂದರ್ಭ, ಸನ್ನಿವೇಶ ಮತ್ತು ಜನರಲ್ಲಿ ಮಾತ್ರ ಬಳಕೆಗೊಂಡು ಮಾನಸಿಕ ಮತ್ತು ಮಾಸಿಕ ಉದ್ದೇಶಗಳನ್ನು ನೆರವೇರಿಸುತ್ತವೆ.

ತನ್ಮೂಲಕ ಸಾಮಾಜಿಕ ಜೀವನದಲ್ಲಿ ಬೆರೆತುಹೋಗಿವೆ. ಒಂದು ಜನಾಂಗದ ಸಂಸ್ಕೃತಿಯನ್ನು, ಜನಪದದ ಮನೋಧರ್ಮವನ್ನು, ಅದರ ಬದುಕಿನ ವಾಸ್ತವಿಕ ದಾಖಲೆಗಳನ್ನು ಅರಿಯುವಲ್ಲಿ ಇವು ಉಪಯುಕ್ತ ಸಾಧನಗಳಾಗಿವೆ. ಎಲ್ಲಾ ದೃಷ್ಟಿಗಳಿಂದಲೂ ಸಾಮಾಜಿಕವಾದುದರಿಂದ ಇವು ಸಮಾಜ ವಿಜ್ಞಾನಿಗಳಿಗೆ, ಮನಶ್ಶಾಸ್ತ್ರಜ್ಞರಿಗೆ, ಭಾಷಾಶಾಸ್ತ್ರಜ್ಞರಿಗೆ ಪುಷ್ಕಳವಾದ ಸಾಮಗ್ರಿಯನ್ನೊದಗಿಸುತ್ತವೆ. ಈ ದೃಷ್ಟಿಯಿಂದ ಪೋಲಿ ಕಥೆಗಳ ಅಧ್ಯಯನ ಅತ್ಯಂತ ಕುತೂಹಲಕಾರಿಯಾಗಿದೆ.

5

ಪೋಲಿಕಥೆಗಳಲ್ಲಿನ ಜನಪದ ವಿಚಾರವಂತಿಕೆ ವೈವಿಧ್ಯಪೂರ್ಣವಾದುದು. ಕಾಮದ ವಿಷಯ ಗೀತೆಗಳಲ್ಲಿ, ಕಥನ ಗೀತೆಗಳಲ್ಲಿ, ಜನಪದ ಇತರ ಕಥೆಗಳಲ್ಲಿ ಸೂಚ್ಯವಾಗಿ ಭಾವದ ಮುಸುಕಿನಲ್ಲಿ ಬಂದರೆ ಪೋಲಿಕಥೆಗಳಲ್ಲಿ ನೇರವಾಗಿಯೇ ಬರುತ್ತದೆ. ಪ್ರಣಯ ಪ್ರಸಂಗಗಳು, ಅನುರಾಗದ ಕ್ರಿಯೆಗಳು ಈ ಕಥೆಗಳಲ್ಲಿ ಅಪರೂಪ. ಹೆಣ್ಣುಗಂಡು ಮೊದಲು ಪ್ರೀತಿಸಿ ಅನಂತರ ನಡೆಸುವ ಸಾಹಸದ ವಿಜಯಕ್ಕೆ ಸಂಬಂಧಿಸಿದ ಕಥೆಗಳು ವಿರಳ. ಅನುರಾಗದ ಪ್ರಸಂಗಗಳೇನಿದ್ದರೂ ರಮ್ಯಾದ್ಭುತದ ಜನಪದ ಕಥೆಗಳಲ್ಲಿ, ಕಥನಗೀತೆಗಳಲ್ಲಿ ಮಾತ್ರ. ಸಾಹಸಿಯಾದ ನಾಯಕ ನಾಯಕಿಯನ್ನು ಗೆಲ್ಲುತ್ತಾನೆ. ಅನಂತರ ಅವರ ಮದುವೆಯಲ್ಲಿ ಕಥೆ ಮುಗಿಯುತ್ತದೆ. ಆದರೆ ಈ ಪೋಲಿಕಥೆಗಳಲ್ಲಿ ಕೇವಲ ದೈಹಿಕ ಪ್ರವೃತ್ತಿಗಳಿಗೆ ಅನುಗುಣವಾಗಿ ಲೈಂಗಿಕ ಕ್ರಿಯೆ ನಡೆಯುತ್ತದೆ. ಇಲ್ಲಿಯೂ ಹೋರಾಟ ಅಥವಾ ಸಾಹಸ ಇಲ್ಲದೆ ಇಲ್ಲ. ಆದರೆ ಅವೆಲ್ಲವೂ ಕೇವಲ ಲೈಂಗಿಕ ಪ್ರಕ್ರಿಯೆಗಳಿಗೆ ಸಂಬಂಧಿಸಿದ್ದು. ಪೋಲಿ ಕಥೆಗಳಲ್ಲಿ ಬರುವ ಕಥೆಗಾರನ ಅನುಭವ ಸಾಮಗ್ರಿ ಸಮಾಜದ ಮೂಲಾನುಭವ. ಚಿರಂತನ ಚೈತನ್ಯಾತ್ಮಕವಾದ ಲೈಂಗಿಕ ಪ್ರಜ್ಞೆಯನ್ನು ಕುರಿತದ್ದು. ಆದುದರಿಂದ ಈ ಪೋಲಿಕಥೆಗಳಲ್ಲಿನ ಅನುಭವ ಸಾಮಗ್ರಿ ಸಪ್ಪೆಯಾದುದಲ್ಲ. ಆನಂದೋನ್ಮುಖ ವಿನೋದ ಉತ್ಸಾಹಪೂರ್ಣ ನಗೆಯ ಮೂಲಕ ಜೀವನದ ಕೇಂದ್ರ ಬಿಂದುವಾದ ಲೈಂಗಿಕಪರಿಜ್ಞಾನವನ್ನು ಒದಗಿಸುವ ಈ ಪುರಾತನಕಥೆಗಳು ನಾಗರಿಕ ಸಾಹಿತ್ಯಕ್ಕಿಂತ ಶ್ರೇಷ್ಠವೆಂಬುದು ನಿಸ್ಸಂದೇಹದ ಸಂಗತಿ. ಜನಪದ ಬದುಕಿನ ಬತ್ತಲೆಯನ್ನು ಬಯಲು ಮಾಡುವ ಈ ಕಥೆಗಳು ಧ್ವನಿಪೂರ್ಣತೆಯಿಂದ ಹೃದಯ ಸ್ಪರ್ಶಿಯಾಗಿ ಉಚ್ಚವರ್ಗದ ಕಥೆಗಳಾಗಿ ನಿಂತಿವೆ. ಈ ಕಥೆಗಳಲ್ಲಿ ನಡೆಯುವ ಲೈಂಗಿಕ ಕ್ರಿಯೆಯ ಮೂಲದಿಂದ ಉಗಮಗೊಳ್ಳುವ ಭಾವನೆಗಳು ಸಂಪೂರ್ಣವಾಗಿ ಸಾಂಸ್ಕೃತಿಕ ರೂಢಿಯನ್ನು ವಿರೋಧಿಸಿದರೂ ಇವುಗಳಲ್ಲಿನ ಸಾಹಿತ್ಯಿಕ ಮೌಲ್ಯ ಉಜ್ವಲವಾದುದೇ ಆಗಿದೆ. ಕಲಾಕೃತಿಯ ದೃಷ್ಟಿಯಿಂದ ಗಣ್ಯವಲ್ಲದ ಕಥೆಗಳು ಸಾಕಷ್ಟಿದ್ದರೂ ಬಹಳ ಕಥೆಗಳು ಅತ್ಯುತ್ತಮ ಕಾವ್ಯಾಂಶಗಳನ್ನೊಳಗೊಂಡು ಆಧುನಿಕ ಸಾಹಿತ್ಯದ ದುರ್ಗುಣಗಳಿಂದ ದೂರವಾಗಿ ನಿಂತಿವೆ.

ಜೀವ ವಿಜ್ಞಾನದ ಪ್ರಕಾರ ಪ್ರಾಣಿ ಅಥವಾ ಸಸ್ಯ ವರ್ಗಗಳು ತಮ್ಮ ಲೈಂಗಿಕ ರಂಜನೆಗಾಗಿ, ತಮ್ಮ ಸಂತಾನವನ್ನು ಬೆಳೆಸುವುದಕ್ಕಾಗಿ ತಮಗೆ ಯೋಗ್ಯವಾದುದನ್ನೇ ಆಯ್ಕೆಮಾಡಿಕೊಳ್ಳುತ್ತವೆ. ಆದರೆ ಪೋಲಿಕಥೆಗಳಲ್ಲಿನ ಲೈಂಗಿಕ ಆಯ್ಕೆ ಬಹು ಕುತೂಹಲಕಾರಿಯಾದುದು. ಈ ಕುತೂಹಲಕ್ಕೆ ಕಾರಣ ಮಾನವನ ಅಂತರಂಗದ ಕಾಮದ ಬಹು ಬಣ್ಣಗಳನ್ನೇ ಕುರಿತುದಾಗಿದೆ. ನಮ್ಮದು ಕಾಮಶಾಸ್ತ್ರವನ್ನು ಪಡೆದುಕೊಂಡಿರುವ ಸಮಾಜ. ಕಾಮ ಧರ್ಮವಿರೋಧಿಯಲ್ಲ; ಅರ್ಥರಹಿತ ವಾದುದೂ ಅಲ್ಲ. ಸಕಲ ಪುರುಷಾರ್ಥಗಳಲ್ಲಿ ಕಾಮವೂ ಒಂದು ಎಂದು ಒಪ್ಪಿ ಕೊಂಡಿರುವ ಸಮಾಜ ನಮ್ಮದು. ಮುನಿ ವಾತ್ಸಾಯನ ಕಾಮಶಾಸ್ತ್ರವನ್ನು ಬರೆದು ಕಾಮ ಕೇಳಿಗೆ ಒಂದು ವ್ಯವಸ್ಥಿತ ರೂಪ ಕೊಟ್ಟವನು. ಸಕಾಮ ಮೋಕ್ಷ ಗಾಮಿ. ಯಾವಾಗ? ಕೆಲವರಲ್ಲಿ ಲೈಂಗಿಕ ನಿಷೇಧಗಳನ್ನಿಟ್ಟುಕೊಂಡಾಗ. ಆದರೆ ಈ ಲೈಂಗಿಕ ನಿಷೇಧ ಕೇವಲ ತತ್ವಗಳಾಗಿಯೇ ನಮ್ಮ ಸಂಸ್ಕೃತಿಯಲ್ಲಿ ನಿಂತುಹೋಗಿವೆ. ತಾಯಿಯೊಡನೆ, ಸಹೋದರಿಯೊಡನೆ, ಸಗೋತ್ರದೊಡನೆ ಸಂಭೋಗ ನಿಷಿದ್ಧ ಎಂದು ಧರ್ಮಶಾಸ್ತ್ರಗಳು ಸಾರುತ್ತಲೇ ಇವೆ. ಆದರೂ ಲೈಂಗಿಕ ಕ್ರಿಯೆಯ ಪ್ರಾಕೃತಿಕಸ್ವರೂಪ ಕೆಲವು 'ತಾಯಿ ಗಂಡ'ರ ಮೇಲೆ, 'ಸೋದರಿ ಕಾಮಿ'ಗಳ ಮೇಲೆ ತನ್ನ ಪ್ರಭಾವವನ್ನು ಬೀರುತ್ತಲೇ ಇದೆ.

6

ಜನಪದ ಸಾಹಿತ್ಯದೃಷ್ಟಿಯಿಂದ ಕನ್ನಡದಲ್ಲಿ ಪೋಲಿಕಥೆಗಳ ಸಂಗ್ರಹ ಅಪ ರೂಪವೆಂದೇ ಹೇಳಬೇಕು. ಈ ಲೇಖಕನದೇ ಆದ 'ನಮ್ಮೂರಿನ ಜನಪದ ಕಥೆಗಳು' ಸಂಕಲನದಲ್ಲಿ ಮೊದಲ ಬಾರಿಗೆ ಕೆಲವು ಪೋಲಿಕಥೆಗಳು ಸಂಗ್ರಹ ಗೊಂಡಿರುವುದು ಗಮನಾರ್ಹವಾದ ಸಂಗತಿ. ಇದೊಂದು ಸಂಕಲನವನ್ನು ಬಿಟ್ಟರೆ ಮತ್ತೊಂದು ಕನ್ನಡದಲ್ಲಿ ಇಲ್ಲವೆಂದೇ ಹೇಳಬಹುದು. ಪೋಲಿಕಥೆಗಳ ಸಂಗ್ರಹ ಪಾಶ್ಚಾತ್ಯ ದೇಶಗಳಲ್ಲಿ ವಿಪುಲವಾಗಿಯೇ ನಡೆದಿದೆ. ಕಳೆದ ಶತಮಾನದಲ್ಲಿಯೇ ರಷ್ಯಾ ದೇಶದಲ್ಲಿ ಪೋಲಿಕಥೆಗಳ ಸಂಗ್ರಹಕಾರ್ಯ ನಡೆದು 'ರಷ್ಯನ್ ಸೀಕ್ರೆಟ್ ಟೇಲ್ಸ್' ಎಂಬ ಹೆಸರಿನಿಂದ ಇಂಗ್ಲಿಷಿಗೆ ಭಾಷಾಂತರಗೊಂಡಿರುವುದು ಅದರ ಜನ ಪ್ರಿಯತೆಗೆ ನಿದರ್ಶನವಾಗಿದೆ. ಲೈಂಗಿಕ ವಿನೋದವನ್ನೊಳಗೊಂಡು ಮಾನಸಿಕ ಮತ್ತು ಸಾಮಾಜಿಕ ಒಳನೋಟವನ್ನು ತೋರಿಸುವ ಜನಪದ ಪೋಲಿಕಥೆಗಳು ಆಧುನಿಕ ಸಾಹಿತ್ಯದಮೇಲೆ ಅಪಾರ ಪ್ರಭಾವ ಬೀರಿವೆ. ರೋಮ್ಯಾಂಟಿಕ್ ಚಳುವಳಿಗೆ ಶಕ್ತಿಯಾಗಿ ಹೊಸ ಸಾಹಿತ್ಯದ, ಮೇಲಾಗಿ ವಿನೋದ ಸಾಹಿತ್ಯದ ಕೃತಿಗಳಿಗೆ ವಸ್ತು, ಪಾತ್ರಗಳನ್ನೊದಗಿಸುವುದಲ್ಲದೆ ಅವುಗಳ ಸಾವಯುವ ರಚನೆಯ ಮೇಲೆ ಅಪಾರ ಪರಿಣಾಮ ಬೀರಿವೆ. ಆಧುನಿಕ ಸಾಹಿತ್ಯದಲ್ಲಿ ಅಶ್ಲೀಲದ ಸೆರಗು ಹಿಡಿದಿರುವ ಮುಖ್ಯ ಕೃತಿಗಳೆಲ್ಲ ಈ ಪೋಲಿಕಥೆಗಳಿಗೆ ಋಣಿಯಾಗಿವೆ. ಕನ್ನಡ

ಸಾಹಿತ್ಯದ ಮೇಲೆಯೂ ಬಹು ಹಿಂದೆಯೇ ಈ ಪೋಲಿಕಥೆಗಳ ಪ್ರಭಾವ ಬಿದ್ದಿರುವು ದನ್ನು ಮನಗಾಣಬಹುದು. ಶಾಂತಲಿಂಗ ದೇಶಿಕ ಕವಿಯಿಂದ ಕ್ರಿ.ಶ. 1672ರಲ್ಲಿ ರಚನೆಗೊಂಡ 'ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರರತ್ನಾಕರ' ಕೃತಿಯಲ್ಲಿ ಕೆಲವು ಪೋಲಿಕಥೆಗಳು ಕಂಡುಬರುವುದರಿಂದ ಅದರ ಪ್ರಭಾವ ಎಂತಹುದು ಎಂಬುದು ನಮ್ಮರಿವಿಗೆ ಬಾರದೆ ಇರದು.

7

ಜನಪದ ಪೋಲಿಕಥೆ ಕೃತಕವೆಂದೂ, ಅಶ್ಲೀಲವೆಂದೊ, ಯಾರೊ ಅನಾಮ ಧೇಯರು ರಚಿಸಿದ ಕಥೆಗಳೆಂದೊ ಇಂದು ಉದಾಸೀನಮಾಡುವಂತಿಲ್ಲ. ಸಂಸ್ಕೃತಿಯ, ಧರ್ಮದ, ಸಮಾಜಶಾಸ್ತ್ರದ, ಮನಶ್ಶಾಸ್ತ್ರದ ಮತ್ತು ಭಾಷಾಶಾಸ್ತ್ರದ ದೃಷ್ಟಿಯಿಂದ ಇವುಗಳನ್ನು ಅಧ್ಯಯನ ಮಾಡಬಹುದು. ಇಲ್ಲವೇ ಕಲಾಕೃತಿಗಳಾಗಿ ಆಸ್ವಾದಿಸ ಬಹುದು. ಇಂದು ಜನಪದ ಅಸ್ತಿತ್ವವೇ ಶಿಥಿಲವಾಗಿದೆ. ಆದಕಾರಣ ಜನಪದ ಸಾಹಿತ್ಯ ಇಂದು ಕ್ರಿಯಾತ್ಮಕವಾಗಿ ಉಳಿಯುವುದು ಶಕ್ಯವಿಲ್ಲ. ವಾಕ್ಪರಂಪರೆಯೇ ಆಧುನಿಕ ಸಮಾಜದಲ್ಲಿ ನಶಿಸುತ್ತಿರುವುದರಿಂದ ಆದಷ್ಟು ಬೇಗ ಪೋಲಿಕಥೆಗಳ ಸಂರಕ್ಷಣೆ, ಸಂಗ್ರಹಣೆ ಅಗತ್ಯವಾಗಿದೆ.

ಪುನರಾಗಮನ

ಎಂ. ಎಸ್. ಜೈಪ್ರಕಾಶ್
ಮೂಲ : ವಿದ್ಯಾಪತಿಯ ಪ್ರೇಮಗೀತೆಗಳು

ಮಾಧವ ಕೊನೆಗೂ ಬಂದಿದ್ದಾನೆ ಮನೆಗೆ—
ಓ ಗೆಳತಿ, ನನ್ನ ಸಂತೋಷಕ್ಕೆ ಕೊನೆಯೇ ಇಲ್ಲ.
ಕರುಣೆಯಿಲ್ಲದ ಆ ಚಂದ್ರನಿಗಾಗಿ
ನಾನನುಭವಿಸಿದ ನೋವು
ಕೊನೆಮುಟ್ಟಿತು ವರವಾಗಿ
ಅವನ ಮೊಗದ ಮೇಲೇ
ನನ್ನ ನೋಟವೆಲ್ಲ ಈಗ

ನನ್ನ ಸೆರಗನ್ನೆತ್ತಿ ಉಡಿಯತುಂಬ
ಬಂಗಾರವನೆ ತುಂಬಿಸಲಿ
ಮರಳಿ ಹೋಗಲವನನ್ನು ನಾನು
ಸಹಸಾ ಬಿಡುವುದಿಲ್ಲ.
ಏಕೆಂದರವನು ನನಗೆ—
ಧಾರೆಸುರಿವ ಮಳೆಗೆ ಆಶ್ರಯ,
ತುಂಬಿ ಹರಿವ ನದಿಗೆ ದೋಣಿ,
ಬೆಚ್ಚನೆಯ ಜೀವ
ಕಡು ಚಳಿಗಾಲಕವನು,
ತಣ್ಣನೆಯ ತಂಗಾಳಿಯಾತ
ಉರಿ ಬೇಸಿಗೆಯ ದಿನಗಳಿಗೆ.
ಓ ಸಾಕು, ಇನ್ನೇನು ಬೇಡ ನನಗೆ

"ವರದಾನಿ ಗುಡ್ಡವ್ವೆ"

ಪ್ರೊ॥ ಬಿ. ಸಿ. ಜವಳಿ

I

ಗುಡ್ಡವ್ವೆ ಎಂಬ ಹೆಸರು ಕನ್ನಡಿಗರ ಹೆಸರು ; ಕನ್ನಡ ಭಾಷೆಯ ಪದವಾಗಿದೆ. ಗುಡ್ಡ ಮತ್ತು ಅವ್ವೆ ಎಂಬ ಎರಡು ಪದಗಳಿಂದ ಕೂಡಿದ ಸಮಸ್ತ ಪದವಾಗಿದೆ. ಗುಡ್ಡ ಎಂಬುದು 'ಶಿಷ್ಯ' ಎಂಬ ಅರ್ಥವನ್ನು ಕೊಡುತ್ತಿದೆ. ಮಣ್ಣು-ಕಲ್ಲಗುಡ್ಡ ಎಂದೂ ಅರ್ಥಗಳಿವೆ. ಆದರೆ ಆ ಅರ್ಥವು "ಗುಡ್ಡವ್ವೆ" ಎಂಬ ಪದದಲ್ಲಿಲ್ಲ. ಗುಡ್ಡಪ್ಪ, ಗುಡಮ್ಮ ಎಂಬ ಹೆಸರುಗಳನ್ನು ಕನ್ನಡಿಗರು ಧರಿಸುತ್ತಾರೆ. ಗುಡ್ಡ ಎಂಬುದು ಪರ್ವತ ಅಥವಾ ಗುಡ್ಡದ ಸಂಕೇತವಾಗಿದೆ. ಮೈಲಾರ ಲಿಂಗನ ಭಕ್ತರು ರಾಣೇ ಬೆನ್ನೂರ ಬಳಿ ಇರುವ ದೇವರಗುಡ್ಡ ಎಂಬ ಕ್ಷೇತ್ರಕ್ಕೆ ನಡೆದುಕೊಳ್ಳುತ್ತಾರೆ. ದೇವರ ಗುಡ್ಡದಲ್ಲಿರುವ ಮೈಲಾರಲಿಂಗನ ಸ್ಮಾರಕವಾಗಿ ಗುಡ್ಡದಯ್ಯ, ಗುಡ್ಡಯ್ಯ, ಗುಡ್ಡಪ್ಪ ಎಂದು ಇಂದಿಗೂ ಜನ ಹೆಸರಿಡುತ್ತಾರೆ. ಅದರಂತೆಯೇ ಹಿಂದಿನ ಕಾಲದಲ್ಲಿ 'ಶ್ರೀಶೈಲ' ಪರ್ವತಕ್ಕೆ ಸಂಕೇತವಾಗಿ 'ಪರ್ವತ' 'ಗುಡ್ಡ' ಎಂದು ಕರೆದು 'ಪರ್ವತಪ್ಪ' 'ಗಿರಿಯಪ್ಪ,' 'ಗುಡ್ಡಪ್ಪ', 'ಗುಡ್ಡವ್ವ' ಎಂದು ಹೆಸರಿಡುತ್ತಿದ್ದರು. ಅಂತಹ ಹೆಸರುಗಳಲ್ಲಿಯೇ ಗುಡ್ಡವ್ವೆಯ ಹೆಸರೂ ಒಂದೆಂದು ತಿಳಿಯಬಹುದಾಗಿದೆ. ಶ್ರೀಗಿರಿಯ ಮಹಿಮೆಯೂ ಆ ಕಾಲದಲ್ಲಿ ಎಷ್ಟಿತ್ತೆಂಬುದಕ್ಕೆ ಇದನ್ನೂ ಒಂದು ನಿದರ್ಶನವೆಂದು ತೆಗೆದುಕೊಳ್ಳಬಹುದು. ಈಕೆಯು ಮಹಾದಾನಿಯಾಗಿದ್ದುದರಿಂದ 'ವರದಾನಿ' 'ದಾನಮ್ಮ' ಎಂಬ ಹೆಸರುಗಳಿಂದಲೂ ಪ್ರಸಿದ್ಧಳಾಗಿದ್ದಾಳೆ. ತನ್ನ ದಾನದ ಗುಣದಿಂದ ಈಕೆ ಜೈನರಲ್ಲಿ ಪ್ರಸಿದ್ಧಳಾದ, 'ದಾನಚಿಂತಾಮಣಿ'ಯೆಂದು ಹೆಸರು ಪಡೆದ ಅತ್ತಿಮಬ್ಬೆಯನ್ನು ಸ್ಮರಣೆಗೆ ತರುತ್ತಾಳೆ. ಹೆಣ್ಣುಮಕ್ಕಳ ಕೈ ಯಾವಾಗಲೂ ವರದ ಹಸ್ತವೂ, ದಾನದ ಹಸ್ತವೂ ಆಗಿರುವುದು ನಮಗೆಲ್ಲ ಪರಿಚಿತ. ಈಕೆಯು ಪ್ರಸಿದ್ಧ ಶರಣೆಯೆಂದು ಬಹುಕಾಲದ ಹಿಂದೆಯೇ ಮನ್ನಣೆಪಡೆದಿದ್ದಾಳೆ. ಈಕೆಯು ಬಾಳಿದ ಸ್ಥಳವು ಇಂದಿಗೂ ಭಕ್ತಾದಿಗಳಿಗೆ ಜಾಗ್ರತ ಸ್ಥಳವೂ ಪ್ರಸಿದ್ಧ ಕ್ಷೇತ್ರವೂ ಆಗಿದೆ. ವೀರಶೈವ ಶರಣೆಯರಾದ ಮಹದೇವಿಯಕ್ಕ, ಅಕ್ಕನಾಗಮ್ಮ, ಗಂಗಾಂಬೆ, ನೀಲಾಂಬೆ, ಮುಕ್ತಾಯಕ್ಕ, ಆಯ್ದಕ್ಕಿ ಲಕ್ಕಮ್ಮ ಮೊದಲಾದವರಂತೆ ಗುಡ್ಡಾಪುರದ ದಾನಮ್ಮನೂ ಆ ಪದವಿಗೆ ಸೇರಿದ ಸ್ತ್ರೀಯಾಗಿದ್ದಾಳೆ. ಕಲ್ಯಾಣದ ಶ್ರೀ ಬಸವೇಶ್ವರರ ತತ್ವ ಮತ್ತು ಉಪದೇಶಗಳನ್ನು ಜನತೆಯಲ್ಲಿ ಪ್ರಸಾರಮಾಡುವುದರಲ್ಲಿ ಈ ಶರಣೆಯು ನಿರತಳಾಗಿದ್ದಳೆಂದು ಕಂಡುಬರುತ್ತದೆ. ಈಕೆಯು ಬಸವಣ್ಣನವರ ತರುವಾಯ

ಬಾಳಿದವಳೆಂದು ತಿಳಿದುಬರುತ್ತದೆ. ತನ್ನ ಧರ್ಮ ಪ್ರಸಾರಕಾರ್ಯಮಾಡುವಲ್ಲಿ ಈಕೆಯು ಒಳ್ಳೆಯ ಪೌರುಷವನ್ನು ತೋರಿ, ಪರಧರ್ಮೀಯರನ್ನು ಗೆಲ್ದು, ಅವರಲ್ಲಿ ವೀರಶೈವ ಧರ್ಮವನ್ನು ಪ್ರಸಾರಮಾಡಿದ್ದಾಳೆ. ಈಕೆ ಆಂಧ್ರ, ಕರ್ನಾಟಕ, ಮಹಾರಾಷ್ಟ್ರ, ಮೊದಲಾದ ರಾಜ್ಯಗಳ ಹಲವು ಭಾಗಗಳಲ್ಲಿ ಸಂಚರಿಸಿ ಧರ್ಮಪ್ರಸಾರ ಮಾಡಿದಳೆಂದು ಪ್ರತೀತಿ ಇದೆ. ತನ್ನ ಕಾಲದಲ್ಲಿ ದಾನಮ್ಮ ಅಂದಿನ ಜನತೆಯ ಮೇಲೆ ಸಾಕಷ್ಟು ಪ್ರಭಾವ ಬೀರಿದಳೆಂದು ಕಂಡುಬರುತ್ತಿದೆ. ಅವಳು ಒಳ್ಳೆಯ ಸಮಾಜ ಸೇವಕಿಯೂ ಆಗಿದ್ದಳು. ವೀರಭಕ್ತರಾದ ಏಕಾಂತದ ರಾಮಯ್ಯ, ಪುಲಿಗೆರೆಯ ಆದಯ್ಯರ ಹಾಗೆ ವೀರಭಕ್ತಿಯಿಂದ ವೀರಶೈವಧರ್ಮವನ್ನು ಬೆಳಗಿದ ಶರಣೆ ಈಕೆ. ಗುಡ್ಡವ್ವೆಯ ಬಗೆಗೆ ಹರಿಹರ ಕವಿಯ ರಗಳೆ, ಭೀಮಕವಿಯ ಬಸವ ಪುರಾಣ, ಪದ್ಮರಾಜ ಪುರಾಣ, ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರ ರತ್ನಾಕರ, ಚೆನ್ನಬಸವಪುರಾಣ ಮೊದಲಾದ ಕೃತಿಗಳಲ್ಲಿ ಅವಳ ಚರಿತ್ರೆ, ಸಾಧನೆಗಳ ವಿಷಯದಲ್ಲಿ ಸಾಮಗ್ರಿ ದೊರೆಯುತ್ತಿದೆಯಲ್ಲದೆ ಶಾಸನಗಳಲ್ಲಿಯೂ (ಇಲ್ಲಿಯವರೆಗೆ ನಾಲ್ಕು ಶಾಸನಗಳಲ್ಲಿ) ಅವಳ ಚರಿತ್ರೆಯು ಉಪಲಬ್ಧವಿರುವುದರಿಂದ ಅವಳು ಪೌರಾಣಿಕವೂ ಕಾಲ್ಪನಿಕವೂ ಆದ ವ್ಯಕ್ತಿಯಲ್ಲ, ಐತಿಹಾಸಿಕ ವ್ಯಕ್ತಿಯೆಂಬುದು ಸುಸ್ಪಷ್ಟವಿದೆ. 'ಸೌಥ್ ಇಂಡಿಯನ್ ಇನ್‌ಸ್ಕ್ರಿಪ್ಷನ್ಸ್', ಸಂಪುಟ 15ರಲ್ಲಿ 56ನೆಯ ನಂಬರಿನ ತಾಳಿಕೋಟೆಯ ಶಾಸನ, ಶರಣಸಾಹಿತ್ಯ (ಸಂಪುಟ 21, ಸಂಚಿಕೆ 1)ದಲ್ಲಿ ಪ್ರಕಟವಾದ ಇಂಗಳಗಿಯ ಶಾಸನ, ಇನ್‌ಸ್ಕ್ರಿಪ್ಷನ್ಸ ಇನ್ ನಾರ್ದರ್ನ್ ಕರ್ನಾಟಕ ಆ್ಯಂಡ್ ಕೊಲ್ಲಾಪುರ ಸ್ಟೇಟ್' ಎಂಬ ದಿವಂಗತ ಕುಂದಣಗಾರರ ಪುಸ್ತಕದಲ್ಲಿಯ ವಿಜಾಪುರ ಶಾಸನಗಳು—ಇವೇ ಈ ಮಹಾಶರಣೆಯ ಬಗೆಗೆ ವಿವರಗಳನ್ನು ನೀಡುತ್ತಿವೆಯೆಂದು ಇಲ್ಲಿಯವರೆಗೆ ತಿಳಿದುಬಂದಿದೆ. ತಾಳೀಕೋಟೆಯ ಶಾಸನ ಕಾಲ ಕ್ರಿ.ಶ. 1184; ಇಂಗಳಗಿಯ ಶಾಸನದ ಕಾಲವು ಕ್ರಿ. ಶ. 1209; ಮತ್ತು ವಿಜಾಪುರದ ಶಾಸನದ ಕಾಲವು ಕ್ರಿ.ಶ. 1278 ಎಂದು ವಿದ್ವಾಂಸರು ನಿರ್ಣಯಿಸಿರುವುದರಿಂದ ಈ ಶರಣೆಯು ಕ್ರಿ. ಶ. 1184ಕ್ಕಿಂತ ಪೂರ್ವದಲ್ಲಿ ಬಾಳಿ ಬೆಳಗಿರಬೇಕೆಂದು ಹೇಳಬಹುದಾಗಿದೆ. ತಾಳೀಕೋಟೆಯ ಶಾಸನದಲ್ಲಿ ನೇರವಾಗಿ ಅವಳ ಹೆಸರು ಹೇಳಿರುವುದಿಲ್ಲವೆಂಬುದು ಗಮನಾರ್ಹ.

2

ಲಿಂಗೈಕ್ಯ ಡಾ. ಫ. ಗು. ಹಳಕಟ್ಟಿಯವರು 'ಶಿವಾನುಭವ' ಪತ್ರಿಕೆಯ ಸಂಪುಟ 1, ಸಂಚಿಕೆ 3, ಪುಟ 16 ರಿಂದ 32 ರಲ್ಲಿ (ಕ್ರಿ. ಶ. 1926) ಲಕ್ಕಣ್ಣ ದಂಡೇಶನ ಶಿವತತ್ವ ಚಿಂತಾಮಣಿಯಲ್ಲಿ ಬಂದಿರುವ ಗುಡ್ಡವ್ವೆಯ ಕಾವ್ಯಭಾಗವನ್ನು ಪ್ರಕಟಿಸಿದರು. ಆದರಲ್ಲಿ ಡಾ॥ ಹಳಕಟ್ಟಿಯವರು ಈ ಕೆಲವು ಮಾತುಗಳನ್ನು ಹೇಳಿದ್ದಾರೆ:

ವಿಜಾಪುರದ ವಾಯುವ್ಯದಿಕ್ಕಿಗೆ ಮೂವತ್ತು ಮೈಲುಗಳ ಮೇಲೆ ದಕ್ಷಿಣೋತ್ತರ ಒಂದು ಗುಡ್ಡದ ಸಾಲು; ಈ ಸಾಲಿನ ದಕ್ಷಿಣ ಕೊನೆಯಲ್ಲಿ ಗುಡ್ಡಾಪುರವೆಂಬ ಗ್ರಾಮವಿದ್ದು ಕ್ಷೇತ್ರ ಸ್ಥಾನವಾಗಿದೆ; ಈ ಸ್ಥಾನಕ್ಕೆ ಮಹಾರಾಷ್ಟ್ರ ಮತ್ತು ಕರ್ನಾಟಕ ಪ್ರಾಂತಗಳಿಂದ ಎಲ್ಲ ಜಾತಿಯ ಅಸಂಖ್ಯ ಯಾತ್ರಿಕರು ಇಡೀ ವರುಷ ಬರುತ್ತಾರೆ; ಇದು ಗುಡ್ಡಮ್ಮೆಯ ಸ್ಥಾನ; ವಾಡಿಕೆಯಾಗಿ ಈಕೆಯನ್ನು 'ಗುಡ್ಡಾಪುರದ ದಾನಮ್ಮ' ಎಂತಲೂ ಕರೆಯುತ್ತಾರೆ; ಈಕೆಯು ಒಬ್ಬ ಶೂರಸ್ತ್ರೀ; ವೀರಶೈವ ಶಿವಶರಣೆ; ಈ ಗುಡ್ಡಮ್ಮೆಯು ಶ್ರೀ ಬಸವೇಶ್ವರನ ಕಾಲದಲ್ಲಿ ಇದ್ದ ಹಾಗೆ ತೋರುತ್ತದೆ; ಈ ಕಾಲ ಕರ್ನಾಟಕದಲ್ಲಿ ಧಾರ್ಮಿಕ ಜಾಗ್ರತಿಯನ್ನು ಮಾಡಿದ ಕಾಲ. ಈ ಜಾಗ್ರತಿಯ ಮೂಲಕ ಅಬಲೆಯರು ಸಹ ಮುಂದಾಗಿ ಧರ್ಮಪ್ರಸಾರದ ಕಾರ್ಯವಲ್ಲಿ ಅಗ್ರಸ್ಥಾನ ವಹಿಸಿದರು; ವೀರಭಕ್ತಿಯನ್ನು ತಾಳಿ ಪ್ರಸಿದ್ಧಿ ಹೊಂದಿದವರಲ್ಲಿ ಈಕೆ ಒಬ್ಬಳು; ಶಿವಸರ್ವೋತ್ತಮತ್ವ, ಏಕದೇವೋಪಾಸನೆಗೆ ಖಡ್ಗ ಹಿಡಿದು ಹೋರಾಡಿದ ವೀರಮಹಿಳೆ; ಶೈವ-ವೈಷ್ಣವರಲ್ಲಿ ಅನೇಕ ಉಪಭೇದಗಳಿದ್ದವು; ಇವನ್ನು ಹೊಡೆದೋಡಿಸಿ ಪರವಸ್ತುವು ಒಂದೇ ಎಂದು ಶರಣರು ಬೋಧಿಸಿದ ವಾದವನ್ನು ಮುಂದೆಮಾಡಿದ ಮಹಿಳೆ ಈಕೆ. ಶಿವತತ್ವಚಿಂತಾಮಣಿಯಲ್ಲಿದ್ದ ಅಲಂಪುರ ಮಲಪ್ರಭಾತೀರದಲ್ಲಿದೆ; ಅಲ್ಲಿಯ ಬ್ರಹ್ಮೇಶ ಲಿಂಗವನ್ನು ವೈಷ್ಣವರು ಕಿತ್ತು ನದಿಯಲ್ಲಿ ಹಾಕಿದುದನ್ನು ವೀರನಾಚಯ್ಯಗಳ ಸಹಾಯದಿಂದ ಪ್ರತಿಷ್ಠಾಪಿಸಿದ ಕತೆ ಶಿವತತ್ವ ಚಿಂತಾಮಣಿಯಲ್ಲಿದೆ. ಗುಡ್ಡವ್ವೆಯು ಮೊದಲಿಗೆ ಸೊಲ್ಲಾಪುರದವಳಿದ್ದು ಅಲ್ಲಿ ಆಕೆಗೂ ಸಿದ್ಧರಾಮೇಶ್ವರನಿಗೂ ಮಾತಿನ ಸಲುವಾಗಿ ಭೇದವುಂಟಾಗಿ ಆಕೆ ಗುಡ್ಡಾಪುರಕ್ಕೆ ಬಂದು ನಿಂತಳೆಂದು ಒಂದು ಸ್ಥಳಿಕ ಐತಿಹ್ಯವಿದೆ. ಶಿವತತ್ವ ಚಿಂತಾಮಣಿಯಲ್ಲಿ ಈಕೆಯ ಚರಿತ್ರಾಂಶಗಳು ಹೆಚ್ಚಿಗೆ ದೊರೆಯುವುದಿಲ್ಲ.

3

ಡಾ॥ ಫ. ಗು ಹಳಕಟ್ಟಿಯವರು ಅದೇ 'ಶಿವಾನುಭವ' ಪತ್ರಿಕೆಯ ಹನ್ನೆರಡನೆಯ ಸಂಪುಟ 6ನೆಯ ಸಂಚಿಕೆಯ ಪುಟ 324-336ರಲ್ಲಿ (1938) ಈಕೆಯ ವಿಷಯವಾಗಿ ಮತ್ತೊಂದು ಲೇಖನ ಬರೆದಿದ್ದಾರೆ. ಅವರ ಸಾರಾಂಶವಿಂತಿದೆ: ಅವರಿಗೆ ದೊರೆತ ಒಂದು ಗ್ರಂಥದಿಂದ ಅವರು ಅನೇಕ ವಿಷಯಗಳನ್ನು ಸಂಗ್ರಹಿಸಿದುದಾಗಿ ತಿಳಿಸಿದ್ದಾರೆ. ಆ ಕೃತಿಯನ್ನು ಬರೆದವನು ಇಂತು ಹೇಳಿಕೊಂಡಿದ್ದಾನೆ:

ಶ್ರೀಗಿರಿಯ ಸಿದ್ಧಾಪುರ
ಹೋರುತಿವಾಸ ಸಿದ್ಧೇಶನು
ಶಿವಚನ್ನಬಸವನ ಹೃದಯ ಕಮಲದೊಳೆ
ನೀನಿರ್ದು ನುಡಿಸಿದರೆ
ನುಡಿದೆನಲ್ಲದೆ ಲಿಂಗಾಂಗ
ಸಮರಸದ ಪದಗಳನು—

ಇದೊಂದು ಉತ್ತಮ ತರಗತಿಯ ಗ್ರಂಥವಲ್ಲದಿದ್ದರೂ ನಮಗೆ ಗೊತ್ತಿಲ್ಲದ ಹಲವು ಸಂಗತಿಗಳು ಹೊರಹೊಮ್ಮಿವೆ. ಶಿವತತ್ವಚಿಂತಾಮಣಿಗೆ ನಿಲುಕದ ವಿಷಯಗಳಿವು. ಈ ವಿಷಯಗಳಿಗೆ ಪ್ರಮಾಣವೆಂದರೆ ದಂತಕಥೆ ಮತ್ತು ಪುರಾತನ ಕುರುಹುಗಳೇ ಸಾಕ್ಷಿ – ಕವಿಯ ಊರು ವಿಜಾಪುರದ ಉತ್ತರಕ್ಕೆ ಇಪ್ಪತ್ತು ಮೈಲು ದೂರವಿರುವ 'ಹೊರ್ತಿಗ್ರಾಮ'.

ಈಕೆಯ ಜನ್ಮಸ್ಥಳ 'ಉಮರಾಣಿ' ; ತಂದೆ ಅನಂತರಾಯ, ತಾಯಿ ಶಿರಸಮ್ಮ, ಪತ್ತಾರ ಕಾಯಕದವರು ; ಇಂಡೀ ತಾಲೂಕಿನ ಭೀಮಾನದಿಯ ತೀರದಲ್ಲಿ ಈ ಗ್ರಾಮವಿದೆ. ವೀರಮಲ್ಲಯ್ಯನ ಅನುಗ್ರಹದಿಂದ ಈಕೆಯ ಜನನವಾಗುತ್ತದೆ. ಅವಳ ಜನನವು ಅದ್ಭುತ; ನಾಮಕರಣ 'ಲಿಂಗಮ್ಮ' ಎಂದು. ಬಸವಣ್ಣನ ಅನುಭವ ಮಂಟಪದ ಪ್ರಖ್ಯಾತಿಯನ್ನು ಕೇಳಿ ಅಲ್ಲಿಗೆ ಬಂದು ಅನುಭವಮಂಟಪದಲ್ಲಿ ಭಾಗವಹಿಸಿದಳೆಂದು ಅಲ್ಲಿ ವರ್ಣಿತವಾಗಿದೆ. ಕಲ್ಯಾಣಕ್ಕೆ ಬರುವ ದಾರಿಯಲ್ಲಿ ಅವಳ ಸಂಪರ್ಕದಲ್ಲಿ ಬಂದವರು ಸಿರಿವಂತರಾದರಂತೆ! ಕಲ್ಯಾಣದ ಅನುಭವಮಂಟಪಕ್ಕೆ ಬಂದಾಗ ಬಸವಣ್ಣನಿಂದ ಲಿಂಗದೀಕ್ಷೆ ಪಡೆದಳು ; ಕಲ್ಯಾಣದಲ್ಲಿ ಅನೇಕ ದುಃಖಿಗಳ ದುಃಖವನ್ನು ಉಪಶಮನ ಮಾಡಿದಳು. ಬಿಜ್ಜಳನಿಂದ ಶರಣಧರ್ಮಕ್ಕೆ ಆಘಾತ ಸಂಭವಿಸಿದಾಗ ಈಕೆ 'ಸಂಕ' ಎಂಬ ತೀರ್ಥಕ್ಕೆ ಬಂದಳು. ಅಲ್ಲಿ 'ಸಂಗಮನಾಥ' ಎಂಬವನೊಡನೆ ಲಗ್ನವಾಗಿ ಗೃಹಸ್ಥಾಶ್ರಮ ಸ್ವೀಕರಿಸಿ, ಅಲ್ಲಿಂದ ದಂಪತಿಗಳು ಗುಡ್ಡಾಪುರಕ್ಕೆ ಬಂದು ವಾಸಿಸತೊಡಗಿದರು. ಅಲ್ಲಿ ಕೆಲವು ದಿವಸವಿದ್ದು, ದೇಶ ಸಂಚಾರ ಕೈಕೊಂಡು ದಾರಿಯಲ್ಲಿ ಭಕ್ತರನ್ನು ಉದ್ಧಾರ ಮಾಡಿದ್ದಾರೆ. ಕಲ್ಯಾಣದ ಕ್ರಾಂತಿಯ ಕಾಲದಲ್ಲಿ ಇವರು ಮಹತ್ಕಾರ್ಯಗೈದಿದ್ದಾರೆ. ಸಂಚಾರದಲ್ಲಿ ಅವರು ಆದವಾನಿಯನ್ನು ಸಂದರ್ಶಿಸಿದರು. ಅಲ್ಲಿಯ ದೇವಾಂಗದವರು ಈ ದಂಪತಿಗಳನ್ನು ಬಹು ಆದರದಿಂದ ಬರಮಾಡಿಕೊಂಡರಂತೆ. ಬ್ರಹ್ಮೇಶ ಲಿಂಗಸ್ಥಾಪನೆಯು ಅವರು ಆದವಾನಿಯಲ್ಲಿದ್ದಾಗಲೇ ನಡೆದಿರಬೇಕು. ಯಾಕೆಂದರೆ ಅಲಂಪುರವು ಕರ್ನೂಲ ಜಿಲ್ಲೆಯಲ್ಲಿದೆ (ಮಲಪ್ರಭಾ ತೀರದಲ್ಲಿದೆ ಎಂದು ಕಾವ್ಯದಲ್ಲಿದೆ). ಮುಂದೆ ಕಪಿಲಾ ಕಾವೇರೀ ಸಂಗಮ ಸ್ಥಳದಲ್ಲಿ ಒಂದೂವರೆ ವರ್ಷ ವಾಸಮಾಡಿದ್ದಾರೆ. ಮಲಯಾಳ ಕೋಚೀನ ಸೀಮೆಯಲ್ಲಿ ಸುತ್ತಾಡಿದ್ದಾರೆ. ಅಲ್ಲಿ ಅನೇಕರಿಗೆ ದೀಕ್ಷೆ ಇತ್ತು ರಾಮೇಶ್ವರ ಕಂಚಿಗಳಿಗೆ ಆಗಮಿಸುತ್ತಾರೆ. ಕಂಚಿಯ ಅರಸನಿಂದಲೂ ಹಾಗೂ ವೈಷ್ಣವರಿಂದಲೂ ಮನ್ನಣೆ ಪಡೆಯುತ್ತಾರೆ. ಅಲ್ಲಿಂದ ಕಾಶಿ, ಗಯಾ, ಸೊನ್ನಲಿಗೆ ನೋಡಿಕೊಂಡು ಕೂಡಲ ಸಂಗಮಕ್ಕೆ ಬರುತ್ತಾರೆ. ಅಲ್ಲಿಂದ ಮಣ್ಣಗೂಳಿ ಎಂಬ ಗ್ರಾಮಕ್ಕೆ ಆಗಮಿಸಿ ಅಲ್ಲಿ ಗೌರಮ್ಮಗೌಡತಿಯ ಸತ್ತ ಒಬ್ಬನೇ ಮಗನನ್ನು ಗುಡ್ಡವ್ವೆಯರು ಬದುಕಿಸುತ್ತಾರೆ. ತರುವಾಯ ಬಾಗೆವಾಡಿಗೆ ದಯಮಾಡಿಸಿ ಶಿವಬ್ರಾಹ್ಮಣರಿಗೆ ಲಿಂಗದೀಕ್ಷೆ ಗೈದು, ಪುನಃ ಗುಡ್ಡಾಪುರಕ್ಕೆ ಆಗಮಿಸುತ್ತಾರೆ. ನಂತರ ಅಲ್ಲಿಯೇ ದಾನಮ್ಮನು ಪತಿಗಿಂತ ಮೊದಲು ಲಿಂಗೈಕ್ಯಳಾಗುತ್ತಾಳೆ. ಅವಳ ಸಂಚಾರದ

ಕಾಲದಲ್ಲಿ ಅವಳ ಉಪದೇಶದಿಂದ ಹಲವರು ವೀರಶೈವರಾದರೆಂದು ಈ ಕೃತಿ ತಿಳಿಸುತ್ತದೆ.

4

ಡಾ॥ ಹಳಕಟ್ಟಿಯವರು ಪ್ರೊ. ಕೆ. ಜಿ. ಕುಂದಣಗಾರ ಅವರು "Inscriptions in Northern Karnatak and Kolhapur State ಎಂಬ ಗ್ರಂಥವನ್ನು ಪ್ರಕಟಿಸಿದ ಮೇಲೆ ಈ ಲೇಖನ ಬರೆದರು. ಕುಂದಣಗಾರರು ಪ್ರಕಟಿಸಿದ ಶಾಸನಗಳಲ್ಲಿ ಇಪ್ಪತ್ತೊಂದನೆಯ ಶಾಸನವು ಗುಡ್ಡವ್ವೆಯ ವಿಷಯದ ಶಾಸನವಿದ್ದು ಆ ಲೇಖನವು ಅದರ ವಿಮರ್ಶೆಗೆ ಮೀಸಲಾಗಿದೆ. ದೇವಗಿರಿಯ ಯಾದವ ವಂಶದ ಮಹಾದೇವರಸನ ಮಾಂಡಲಿಕ ಸಾಯಿದೇವನು ವಿಜಾಪುರ ಜಿಲ್ಲೆಯ ಉತ್ತರ ಭಾಗವನ್ನು ಆಳುತ್ತಿದ್ದು 'ವಾತಾಖ್ಯಪುರ' ಎಂಬಲ್ಲಿ ಅವನು 'ವರದಾನಿ'ಯ ಹೆಸರಿನಿಂದ ಒಂದು ದೇವಾಲಯವನ್ನು ಕಟ್ಟಿಸಿ ಅದಕ್ಕೆ ಉಂಬಳಿಯನ್ನು ಹಾಕಿಕೊಟ್ಟದ್ದು ಈ ಶಾಸನದ ವಿಷಯವಾಗಿದೆ. ದಾನಮ್ಮ ಕಾಲ್ಪನಿಕ ವ್ಯಕ್ತಿಯಲ್ಲ, ಐತಿಹಾಸಿಕ ವ್ಯಕ್ತಿ, ರಾಜರೂ ಮಾಂಡಲಿಕರೂ ಮೊದಲಾದವರಿಂದ ಮನ್ನಣೆ ಪಡೆದಿದ್ದಾಳೆ. ಅವಳು ತೀರಿಕೊಂಡ ಮೇಲೆ ಅವಳ ಸ್ಮರಣೆಗೆ 'ಸಾವಿದೇವ'ನಿಂದ ದೇವಾಲಯದ ಸ್ಥಾಪನೆ ನಡೆದಿದೆ. ಅಲ್ಲದೆ ಭೀಮಾನದಿಯ ತೀರದಲ್ಲಿ ಒಂದು ಗ್ರಾಮವನ್ನೇ ರಚಿಸಲಾಗಿದೆ. ಈತನು ಇಲ್ಲಿಯ ಕೆಲವು ಭೂಮಿಗಳನ್ನು ಉಂಬಳಿಯಾಗಿ ಕೊಟ್ಟಿದ್ದಾನೆ. ಅವಳು ಬಸವೇಶ್ವರನಿದ್ದ ಕಾಲಕ್ಕೆಯೇ ಅಥವಾ ಅದರ ಸಮೀಪದಲ್ಲಿಯೇ ಇದ್ದಳೆಂದು ಈ ಶಾಸನದಿಂದ ಅನುಮಾನ ಮಾಡಬಹುದಾಗಿದೆ.

ಮಹದೇವರಸನ ಮಿತ್ರನೂ ಸಾಮಂತನೂ ಆದ ಸಾಯಿದೇವನು ವಾದದಲ್ಲಿ, ನಾದದಲ್ಲಿ, ವಿವಾದದಲ್ಲಿ, ಶಸ್ತ್ರವಿದ್ಯೆಯಲ್ಲಿ, ಶಾಸ್ತ್ರದಲ್ಲಿ, ಶಿವಾಗಮ ನಿಗಮಗಳಲ್ಲಿ ಚತುರನಾಗಿ ರಾರಾಜಿಸುತ್ತಿದ್ದನು. ಇವನು ದ್ವಿವಾತಾಖ್ಯಪುರದಲ್ಲಿದ್ದು ಶಿವಸದ್ಭಕ್ತಿಯುಳ್ಳವನಾಗಿ 'ವರದಾನಿ'ಯ ಹೆಸರಿನಿಂದ ಲಿಂಗಪ್ರತಿಷ್ಠೆ ಮಾಡಿದನು. ಮಹದೇವ ಭೂಪನು ಇದನ್ನು ಮೆಚ್ಚಿ ಒಂದು ಗ್ರಾಮವನ್ನು ದಾನಮಾಡಿದುದಲ್ಲದೆ ಸಾಯಿದೇವನು ಪೂಜ್ಯಪುರದಲ್ಲಿರುವ ನರಶ್ರೇಷ್ಠಿ-ವಣಜರನ್ನು ಕರೆದು ಅವರ ಸಮ್ಮುಖದಲ್ಲಿ ಕೆಲವು ಗ್ರಾಮಗಳನ್ನು ದಾನಮಾಡಿದನು. ತೇಜೇಶ್ವರ, ವರದಾನಿ, ಪುರುಷೇಶ್ವರ ಇವರ ಪ್ರತಿಷ್ಠೆ ಮಾಡಿಸಿ ಕೆಲವು ಗ್ರಾಮ ದಾನಮಾಡಿದ್ದಾನೆ. ದಾನ ಮಾಡಿದ ವಸ್ತುಗಳ ವಿವರಗಳು ಇಂತಿವೆ :

(ಅ) ಕೊಂಡಿ ನಗರದಲ್ಲಿ ಒಂದು ಭೂಮಿ ;

(ಆ) ನಾಲ್ವತ್ತು ಬಾಡದಲ್ಲಿ ಆಲೂರ ದಾರಿಯಲ್ಲಿ ಉತ್ತರಕ್ಕಿರುವ ಜೋಯಿಸರ ಹೊಲದಲ್ಲಿ ಪೂರ್ವಕ್ಕೆ ಒಂದು ಭೂಮಿ ;

(ಇ) ಬೊಂಬಳ್ಳದಿಂದ ದಕ್ಷಿಣಕ್ಕಿರುವ ಕರುಸಗೆಯು ಒಂದು ಭೂಮಿ :
(ಈ) ರಟ್ಟಗೆರೆಯ ಪಶ್ಚಿಮಕ್ಕೆ ಇರುವ ಒಂದು ಹೊಲ ;
(ಉ) ಗೌಡಗೆರೆಯಲ್ಲಿ ಒಂದು ಹೊಲ ;
(ಊ) ದೆಹೂರಲ್ಲಿ ಒಂದು ಹೊಲ ;

ಇಲ್ಲಿಯು ವರ್ಣನೆಗಳು 'ವರದಾನಿ'ಗೇ ಸಂಬಂಧಿಸಿದುವು. ಮಾನ್ಯದೇವಿಯ ಭತ್ತ ಮಾರಿದರೆ ಅಥವಾ ಅದಕ್ಕೆ ಸಂಬಂಧಿಸಿದುದನ್ನು ಏನೇ ಮಾಡಿದರೂ ಅದಕ್ಕೆ ಸುಂಕವಿಲ್ಲ. ಪುರದೊಳಗೆ ಅನ್ಯಾಯವಾಗಬಾರದು ; ಅನಾಹುತ ಸಂಭವಿಸಬಾರದು ; ಹಾಗಾದರೆ ಅರಸರು, ಮನ್ನೆಯರು, ಹಿರಿಯರು ಸರಿಪಡಿಸಬೇಕು. 'ಸಾಯಿದೇವನು ವೀರಶೈವಳಾದ ವರದಾನಿಗೆ ದಾನವನ್ನು ಕೊಟ್ಟಿದ್ದಾನೆ'. ಈ ಪ್ರದೇಶವು ರೇವಣಸಿದ್ಧ, ಬಸವಣ್ಣನವರ ಕಾರ್ಯಕ್ಷೇತ್ರವಾಗಿತ್ತು ಉಮರಾಣಿ, ಗುಡ್ಡಾಪುರ ಇಂದೂ ಇವೆ. ಇತರ ಕೆಲವು ಕಣ್ಮರೆಯಾಗಿವೆ. ಇದಿಷ್ಟು ಡಾ॥ ಹಳಕಟ್ಟಿಯವರ ಆ ಲೇಖನದ ಸಾರ.

ದಿವಂಗತ ಪ್ರೊ॥ ಕೆ. ಜಿ. ಕುಂದಣಗಾರ ಅವರು ಈ ಮಹಿಳೆಯನ್ನು ಕುರಿತು 'Inscription in Northern Karnataka and Kolhapur' State ಎಂಬ ಗ್ರಂಥದ ಮುನ್ನುಡಿ ಪುಟ 25 ರಲ್ಲಿ ಹೀಗೆ ಬರೆದಿದ್ದಾರೆ ಗ್ರಂಥವು ಇಂಗ್ಲಿಷಿನಲ್ಲಿದ್ದುದರಿಂದ ಅದರ ಅನುವಾದವನ್ನು ಇಲ್ಲಿ ಕೊಡಲಾಗಿದೆ. "ಕ್ರಿ.ಶ. 1278 ರ ಹೊತ್ತಿಗೆ ವೀರಶೈವವು ಕೆಲಮಟ್ಟಿಗೆ ಕರ್ನಾಟಕದಲ್ಲೆಲ್ಲ ಪ್ರಸಾರವಾಗಿತ್ತು. ಆದರೆ ಜನರ ಮನಸ್ಸು ಹಿಂದಿನ ಧ್ಯೇಯಗಳನ್ನು (ಶೈವದ) ತೊರೆಯಲು ಸಿದ್ಧವಿರಲಿಲ್ಲ. ಉದಾಹರಣೆಗೆ-ಶರಣೆ ವರದಾನಿ ಗುಡ್ಡಾದೇವಿಯನ್ನು ಶೈವಬ್ರಾಹ್ಮಣ ಬಸವಿದೇವನು ಸ್ಥಾಪಿಸಿ ವೀರಶೈವ ಶರಣೆಯನ್ನು ಆರಾಧಿಸಿದನು" ಇಲ್ಲಿ ಶೈವಬ್ರಾಹ್ಮಣನೂ ಪುರೋಹಿತನೂ ಆದ ಬಸವಿದೇವನು ಗುಡ್ಡಾದೇವಿಯ ಮೂರ್ತಿಯನ್ನು ಪ್ರತಿಷ್ಠಾಪಿಸಿ ಆರಾಧನೆ ಮಾಡಿದುದು ಅನ್ಯಜಾತಿಯವರಲ್ಲಿ ಗುಡ್ಡಾದೇವಿಯ ಬಗೆಗಿದ್ದ ಪೂಜ್ಯ ಭಾವನೆ ವ್ಯಕ್ತವಾಗುತ್ತದೆ.

5

. 'ಶರಣ ಸಾಹಿತ್ಯ' ಸಂಪುಟ 21, ಸಂಚಿಕೆ 1, ಪುಟ 29 ರಿಂದ 35 ರಲ್ಲಿ ದಿವಂಗತ ಪಾಂಡುರಂಗರಾವ್ ಬಿ. ದೇಸಾಯಿ ಅವರು ಇಂಗಳಗಿಯ ಶಾಸನವನ್ನು ಪ್ರಕಟಿಸಿದ್ದಾರೆ. ಅ ಶಾಸನದ ಕಾಲ ಕ್ರಿ. ಶ. 1209 ಸೆಪ್ಟಂಬರ 14ನೆಯ ಸೋಮವಾರ ಎಂದು ತಿಳಿಸಿದ್ದಾರೆ. ಆ ಶಾಸನದಲ್ಲಿ 'ಗುಡ್ಡವ್ವೆ'ಯ ವಿಷಯವು ಉಲ್ಲೇಖವಾಗಿದ್ದು ಅದರ ಸಾರಾಂಶವನ್ನು ಇಲ್ಲಿ ಕೊಡಲಾಗಿದೆ.

ಗುಡ್ಡವ್ವೆಯ ಅಧ್ಯಕ್ಷತೆಯಲ್ಲಿ ಬಲವ್ವೆಯ ಕಾಲನ್ನು ತೊಳೆದು ಗಣಮಠಕ್ಕೆ ಬಿಜ್ಜರಸ, ಇಂಗುಳಿಗೆಯ ಪ್ರಭು ನಾಗರಸ, ಹೆಗ್ಗಡೆಬಸವಯ್ಯ, ಪಂಚಮಠ ಇವರೆಲ್ಲರೂ ಸೇರಿ ಮೂಲಸ್ಥಾನ ದೇವರ ಉಪಾಸಿಕೆಯೂ ಕ್ಷೇತ್ರಸನ್ಯಾಸಿನಿಯೂ ಆದ ಬಲವ್ವೆಯ ಕಾಲನ್ನು ತೊಳೆದು, ಶ್ರೀ ಸಿದ್ಧರಾಮನಾಥ, ದಶಗಣ ಸಿಂಗಿದೇವ, ಬಿಜ್ಜೇಶ್ವರ, ರೇವಣೇಶ್ವರ, ಕನ್ನೇಶ್ವರ, ಕೇದಾರದೇವ ನಾಗೇಶ್ವರ. ಈ ಎಲ್ಲ ಲಿಂಗದೇವರ ವಿನಿಯೋಗಕ್ಕಾಗಿ, ಗುಡ್ಡವ್ವೆಯ ಅಧ್ಯಕ್ಷತೆಯಲ್ಲಿ ಗಣಮಠಕ್ಕೆ ಮನೆ, ಭೂಮಿ, ಹೂದೋಟ, ಗಾಣ, ಇತ್ಯಾದಿ ವೃತ್ತಿಯನ್ನು ಧಾರಾಪೂರ್ವಕವಾಗಿ ಕೊಟ್ಟರು. ದತ್ತಿಯನ್ನು ಪಡೆದುದು ಗಣಮಠ; ದತ್ತಿಯ ಕಾಲದಲ್ಲಿ ಪೂಜೆಗೊಂಡವಳು ಬಲವ್ವೆ ; ಗಣಮಠದ ದತ್ತಿಯನ್ನು ಸ್ವೀಕರಿಸಿದವಳು ಗುಡ್ಡವ್ವೆ. ಈ ಶಾಸನದಲ್ಲಿ ಇಬ್ಬರು ಮಹಿಳೆಯರು ಉಕ್ತರಾಗಿದ್ದಾರೆ. ದತ್ತಿಯ ಕಾಲದಲ್ಲಿ ಪೂಜೆಗೊಂಡವಳು ಬಲಗವ್ವೆ; ದತ್ತಿಯನ್ನು ಸ್ವೀಕರಿಸಿದವಳು ಗುಡ್ಡವ್ವೆಗಳು. ಗುಡ್ಡವ್ವೆಯು ಅಂದಿನ ಕಾಲದಲ್ಲಿ ಎಷ್ಟೊಂದು ಪ್ರಮುಖವ್ಯಕ್ತಿಯಾಗಿದ್ದಳೆಂದು ತಿಳಿದುಬರುತ್ತದೆ. ಬಲಗವ್ವೆಯೂ ಮೂಲಕ್ಷೇತ್ರವಾಸಿನಿಯೂ ಸನ್ಯಾಸಿಯೂ ಆಗಿದ್ದಳೆಂದು ವ್ಯಕ್ತವಾಗುತ್ತದೆ. ಅವಳು ವಿರಾಗಿಣಿಯಾಗಿ ಪ್ರಖ್ಯಾತಿ ಹೊಂದಿದ್ದರೆ ಗುಡ್ಡವ್ವೆ ಗೃಹಸ್ಥಳಾಗಿಯೂ ಬಲಗವ್ವೆಗಳಿಗಿಂತಲೂ ಪ್ರಖ್ಯಾತಿ ಹೊಂದಿದ್ದಳು.

6

ಡಾ॥ ಎಂ. ಎಂ. ಕಲಬುರ್ಗಿಯವರು ''ಶಾಸನಗಳಲ್ಲಿ ಶಿವಶರಣರು'' ಎಂಬ ಪುಸ್ತಕದ ಪುಟ 30-33 ರಲ್ಲಿ ಈಕೆಯ ವಿಷಯವನ್ನು ಪ್ರಸ್ತಾಪಿಸಿದ್ದಾರೆ. ಅವರು ಈ ಶರಣೆಯನ್ನು ಕುರಿತು ಹೀಗೆ ಬರೆದಿದ್ದಾರೆ.

ಷೋಡಶ ಗಣದಲ್ಲಿ ಗುಡ್ಡವ್ವೆಯದು ಸುಪ್ರಸಿದ್ಧ ಹೆಸರು. ವೈಷ್ಣವರು ಕಿತ್ತೊಗೆದ ಅಣಂಪೂರ ಬಾಲಬ್ರಹ್ಮೇಶ್ವರ ಲಿಂಗವನ್ನು ತನ್ನ ಷೋಡಶಗಣದ ಬೆಂಬಲದಿಂದ ಪುನಃ ಸ್ಥಾಪಿಸಿದ ಈ ವೀರಮಹಿಳೆಯ ವಿಷಯ, ಪಲವು ಶಾಸನಗಳಲ್ಲಿ ಎಡೆ ಪಡೆದಿದೆ. ಈ ಶಾಸನಗಳಲ್ಲಿ ಅವಳ ಕಲಿತನ ಸ್ಪಷ್ಟವಾಗಿ ವ್ಯಕ್ತವಾಗಿದೆ. ಅಲ್ಲಿ ಅವಳನ್ನು 'ವರದಾನಿ' 'ದಾನಚಿಂತಾಮಣಿ'ಯೆಂದು ಸಂಬೋಧಿಸಲಾಗಿದೆ. (1930ರ ಪ್ರಕಟನೆ). ಈ ಶರಣೆಯನ್ನು ಡಾ॥ ಕಲಬುರ್ಗಿಯವರು ಬಸವಪೂರ್ವ ಯುಗದವಳೆಂದು ವರ್ಗೀಕರಿಸಿದ್ದಾರೆ. ತ. ಸು. ಶಾಮರಾಯರು ರಚಿಸಿದ ''ಶಿವಶರಣರ ಕಥಾರತ್ನಕೋಶ''ದ ಪುಟ 116-117 ರಲ್ಲಿ ಅವಳ ಚರಿತ್ರೆ ಬರೆದಿದ್ದಾರೆ. ಅಲ್ಲಿ ಯಾವ ಹೊಸ ವಿಷಯಗಳೂ ಇಲ್ಲದುದರಿಂದ ಅದರ ಸಾರವನ್ನಿಲ್ಲಿ ಕೊಟ್ಟಿಲ್ಲ. ಡಾ॥ ಎಲ್. ಬಸವರಾಜು ಅವರು ''ಶಿವದಾಸ ಗೀತಾಂಜಲಿ'' ಪೀಠಿಕೆಯ ಪುಟ 8ರಲ್ಲಿ (1963 ರ ಪ್ರಕಟನೆ) ಗುಡ್ಡಾಂಬೆಯನ್ನು ಕುರಿತು ಬರೆದ ಮಾತುಗಳಿವು :

ಷೋಡಶರಲ್ಲಿ ಬಹಳ ಪ್ರಖ್ಯಾತವ್ಯಕ್ತಿ ಶಿಷ್ಯವರದೆಯಾದ ಗುಡ್ಡಮ್ಮ ಅಥವಾ ವರದಾನಿ ಗುಡ್ಡಮ್ಮೆಯೆಂಬವಳು. ಈಕೆಯ ಕಥೆಯನ್ನು ಆ ಮೂಲಕ ಷೋಡಶರೆಲ್ಲರ ವೃತ್ತಾಂತವನ್ನೂ ಲಕ್ಕಣ್ಣ ದಂಡೇಶನು ಇಡಿಯಾಗಿ ಶಿವತತ್ವ ಚಿಂತಾಮಣಿಯ 35ನೆಯ ಸಂಧಿಯಲ್ಲಿ ಹೇಳಿದ್ದಾನೆ. ಇವರೆಲ್ಲ ಪರಮ ವೀರವ್ರತಾಚಾರ ನಿಷ್ಠಾಭಕ್ತಿ ಪರಿಪೂರ್ಣರು. ಗುಡ್ಡಾದೇವಿಯು ಮೃಡಮೂರ್ತಿಯನ್ನು ಪ್ರತಿಷ್ಠಾಪಿಸಿ ಪರಸಮಯವನ್ನು ಜಡಿದು ಭಂಗಿಸಿದಳೆಂದು ಷೋಡಶರ ಕಥೆಗಳಲ್ಲಿ ಒಂದಾಗಿ ಈಕೆಯ ಉಲ್ಲೇಖವನ್ನು ಚೆನ್ನಬಸವ ಪುರಾಣದ 55 ನೆಯ ಸಂಧಿ, 48-49 ಪದ್ಯಗಳಲ್ಲಿ ಮಾಡಲಾಗಿದೆ. ಅಲ್ಲಿ ಈಕೆಯನ್ನು ಕೇವಲ 'ಗುಡ್ಡಾಪುರದವಳು' ಎಂದು ಕರೆಯಲಾಗಿದೆ. ಅವಳ ದೀರ್ಘ ಕಥೆ ಇಲ್ಲಿಲ್ಲ.

7

"ಗುಡ್ಡಾಪುರ ದಾನಮ್ಮನ ಚರಿತೆ"—ಎಂಬ ಕಿರುಹೊತ್ತಗೆಯನ್ನು ಗದುಗಿನ ವೀರಶೈವ ಪ್ರಗತಿಶೀಲಯುವಕ ಸಂಘದವರು ಕ್ರಿ. ಶ. 1973ರಲ್ಲಿ ಪ್ರಕಟಿಸಿದ್ದಾರೆ. ಈ ಚಿಕ್ಕ ಪುಸ್ತಕದಲ್ಲಿ ಲೇಖಕನ ಹೆಸರು ಉಕ್ತವಾಗಿಲ್ಲ. ಈ ಚಿಕ್ಕಪುಸ್ತಕವು 30 ಪುಟಗಳನ್ನೊಳಗೊಂಡಿದ್ದು ಮುಖಪುಟದ ಮೇಲೆ ದಾನಮ್ಮನ ಅಲಂಕೃತ ಚಿತ್ರವಿದೆ. ಆ ಚಿತ್ರದಲ್ಲಿ ದಾನಮ್ಮನ ಶೌರ್ಯಭಾವವು ಸ್ಪಷ್ಟವಾಗಿ ಗೋಚರಿಸುತ್ತದೆ. ಈ ಕೃತಿಯಲ್ಲಿ ದಾನಮ್ಮನ ಜನ್ಮ, ಬಾಲ್ಯ, ಕಲ್ಯಾಣಕ್ಕೆ ಗಮನ, ಅನುಭವ ಮಂಟಪದ ಸಂದರ್ಶನ, ಬಸವೇಶ್ವರನಿಂದ ದಾನಮ್ಮನೆಂಬ ನಾಮಕರಣ, ದಾನಮ್ಮನ ವಿವಾಹ, ಧರ್ಮಪ್ರಸಾರ, ಸಂಚಾರ, ದಾನಮ್ಮನು ಗೈದ ಲೋಕಹಿತ ಕಾರ್ಯಗಳ ಬಗೆಗೆ ವಿವರಗಳಿವೆ. ಕೃತಿಕಾರರು ಸಾಮಗ್ರಿಯನ್ನು ಎಲ್ಲಿಂದ ಕಲೆಹಾಕಿದರೆಂಬುದು ತಿಳಿಯಬರುವುದಿಲ್ಲ. ವಿಷಯಗಳು ನಿರೂಪಣೆಯಲ್ಲಿ ಪೌರಾಣಿಕವೆಂದೆನಿಸುತ್ತವೆ. ಭಾವುಕರಿಗೆ, ಭಕ್ತರಿಗೆ ರಂಜನೆಯುಂಟಾಗುತ್ತದೆ. ಇನ್ನೊಂದು ಕೃತಿ "ಶ್ರೀಕ್ಷೇತ್ರ ಗುಡ್ಡಾಪುರ" ಎಂಬ ಶೀರ್ಷಿಕೆಯದು. ಈ ಕೃತಿಯು ಮರಾಠಿಯಲ್ಲಿದೆ. ಮೂಲ ಕೃತಿಯು ಪ್ರಾಯಶಃ ಕನ್ನಡದಲ್ಲಿರಬೇಕು. ಇದರ ಅನುವಾದವನ್ನು ಶ್ರೀ ಕೆ. ಆರ್. ಪಾವಸೆ ರಿಟಾಯರ್ಡ್ ಹೆಡ್‌ಮಾಸ್ಟರ್ ಹುಬ್ಬಳ್ಳಿ ಅವರು ಮಾಡಿರುತ್ತಾರೆ. ಮೂಲ ಕೃತಿಯ ಲೇಖಕರು–ಶ್ರೀ ದಾನಯ್ಯನವರ ಪ್ರೀತಿಯ ಮಗಳು ಎಂದಿದೆ. ಪ್ರಕಾಶಕರು ಶ್ರೀ ದಾನಯ್ಯ ಜಂಬಗೀಮಠ, ಕಡೇಪೇಟೆ ಕಡಕೋಳಮಠ ಹಳೆ ಹುಬ್ಬಳ್ಳಿ ಎಂದು ಇದೆ. ಪುಸ್ತಕವು ಮುದ್ರಣವಾಗಿ ಪ್ರಕಟವಾದ ವರ್ಷದ ಉಲ್ಲೇಖವಿಲ್ಲ. ಈ ಕೃತಿ 32ಪುಟಗಳನ್ನೊಳಗೊಂಡಿದ್ದು ಕೊನೆಯಲ್ಲಿ ಮರಾಠೀ ಲಿಪಿಯಲ್ಲಿ ಮುದ್ರಿತವಾದ ಆರು ಕನ್ನಡದ ಹಾಡುಗಳಿವೆ. ದಾನಮ್ಮನ ಜನನ, ದಾನಮ್ಮನ ಪೂಜೆ, ದಾನಮ್ಮನು ಅನುಭವ ಮಂಟಪಕ್ಕೆ ಆಗಮಿಸಿದುದು, ದಾನಮ್ಮನ ವಿವಾಹ, ಅದವಾನಿಗೆ ಆಗಮನ ಬೇರೆ ಬೇರೆ ಊರುಗಳಿಗೆ ಆಕೆಯು ಸಂದರ್ಶಿಸಿದ ಚಿತ್ರಗಳಿದ್ದು,

ಆ ಚಿತ್ರಗಳಲ್ಲಿ ಕನ್ನಡ ಲಿಪಿ ಬರೆಯಲಾಗಿದೆ. ಈ ಕೃತಿಯ ಮುಖಪುಟದ ಚಿತ್ರವೂ ಈ ಮೊದಲು ಉಲ್ಲೇಖಿಸಿದ ಪುಸ್ತಕದ ಮುಖಪುಟದ ಚಿತ್ರವೂ ಒಂದೇಯಾಗಿವೆ. ಅವಳ ಕೈಯಲ್ಲಿ ಖಡ್ಗವಿದ್ದುದು ಅವಳ ಶೂರತನಕ್ಕೆ ಸಾಕ್ಷಿಯಾಗಿದೆ. ಗುಡ್ಡಾಪುರ ದಲ್ಲಲ್ಲದೆ ಗದುಗಿನ ವೀರಭದ್ರದೇವರ ಗುಡಿಯಲ್ಲಿಯೂ ಗುಡ್ಡಮ್ಮನ ವಿಗ್ರಹವಿದೆ ಯೆಂದು ಆ ಮರಾಠೀ ಪುಸ್ತಕದಲ್ಲಿ ಉಲ್ಲೇಖವಿದೆ. ಕೆಲವೊಂದು ವಿಷಯಗಳು ನಂಬಲರ್ಹವಾಗಿವೆ ; ಕೆಲವೊಂದು ಪವಾಡಗಳ ರೂಪದಲ್ಲಿದ್ದು ಆ ವ್ಯಕ್ತಿಯ ಬಗೆಗೆ ಭಕ್ತಿಯನ್ನುಂಟುಮಾಡಲು ಕಾರಣಗಳಾಗಿವೆ. ಈ ಹೆಣ್ಣುಮಗಳು ಅಂದಿನ ಕಾಲದಲ್ಲಿ ಅಷ್ಟೊಂದು ಪ್ರಖ್ಯಾತಳಾಗಿದ್ದಳಲ್ಲದೆ ಅನೇಕರಿಗೆ ಗುರುವಾಗಿ ದೀಕ್ಷೆಮಾಡಿದ ಳೆಂಬುದೂ ಗಮನಾರ್ಹ. ಸ್ತ್ರೀಯರೂ ದೀಕ್ಷೆಗೆ ಅರ್ಹರಿದ್ದುದಕ್ಕೂ ಇದೊಂದು ಉತ್ತಮ ಉದಾಹರಣೆ.

8

ನಮ್ಮ ಪುರಾತನಮಾತೆಯರ ಮೇಲೆ ಕೃತಿಗಳನ್ನು ರಚಿಸಿದ ಕನ್ನಡದ ಮಹಾ ಕವಿ ಹರಿಹರದೇವನು ಈ ಶರಣೆಯನ್ನು ಕುರಿತು ಪ್ರತ್ಯೇಕ ಒಂದು ಕೃತಿಯನ್ನು ಬರೆದುದು ತಿಳಿದು ಬಂದಿಲ್ಲ. ಆದರೆ ಈಕೆಯ ವಿಷಯವು ಕವಿ ಹರಿಹರನಿಗೆ ತಿಳಿದಿತ್ತೆಂಬುದು ಸುಸ್ಪಷ್ಟ. ಮಹದೇವಿಯಕ್ಕನ ರಗಳೆಯಲ್ಲಿ ಅವನು ಅನೇಕ ಶರಣೆಯರ ಮಧ್ಯದಲ್ಲಿ ''ವರದಾನಿ''ಯನ್ನೂ ಹೆಸರಿಸಿ ಗೌರವಿಸಿದ್ದಾನೆ. ಆ ಸಾಲುಗಳು ಇಂತಿವೆ :

"ಕಾರಿಕ್ಕಾಲಮ್ಮೆಯಂ ವಿನಯದಿಂ ನೋಡುತಂ
ಬಾರ ಮಾಂಗಾಯಕ್ಕರಸಿ ನಾಚಿ ಯೆನ್ನುತುಂ
ಕರೆದು ಯಸ್ಕಜ್ಞಾನದೇವಿಯಂ ಪೊಗಳುತಂ
ಕರುಣದಿಂ ಕೋಳೂರ ಕೊಡಗೂಸ ನೋಡುತಂ
ಚಂಗಳವ್ವೆಯನೊಲಿದುನೋಡಿ ಮನವೀಯುತಂ
ಮಂಗಳಾನನೆ ದುಗ್ಗಳವ್ವೆಗೊಲವೀವುತಂ
ನಿಂಬೆಯಕ್ಕನಮೇಲೆ ಕರತಳಮನೀವುತಂ
ಇಂಬರಿವ ವೈಜಕ್ಕವ್ವೆಯನೊಸೆದು ನೋಡುತಂ .
"ವರದಾನಿ ಗುಡ್ಡವ್ವೆ"ಯಂ ನೋಡಿ ನಲಿವುತಂ"—

ಈ ಎಲ್ಲ ಮಹಾಮಾತೆಯರು ಮಹದೇವಿಯಕ್ಕನು ಭೂಲೋಕದಲ್ಲಿ ಜನಿಸುವ ಪೂರ್ವದಲ್ಲಿಯೇ ಶಿವನ ಸಭೆಯಲ್ಲಿದ್ದರೆಂದೂ, ಶಿವನ ಪ್ರೀತಿಗೆ ಪಾತ್ರರಾಗಿದ್ದರೆಂದೂ ಹರಿಹರ ಕವಿಯ ಹೇಳಿಕೆ. ಈ ಮಾತುಗಳಿಂದ ವರದಾನಿ ಗುಡ್ಡವ್ವೆಯು, ಮಹದೇವಿ ಯಕ್ಕನಿಗೂ ಪೂರ್ವದವಳೆಂಬ ಕಲ್ಪನೆ ಬರುತ್ತದೆ. ಅವಳು ಹರಿಹರ ಕವಿಗಿಂತ ಪೂರ್ವದವಳೇ ವಿನಾ ಮಹದೇವಿಯಕ್ಕನಿಗೆ ಪೂರ್ವದವಳಾಗಿರಲಿಕ್ಕಿಲ್ಲ. ಯಾಕೆಂದರೆ

ಅವಳು ಅನುಭವ ಮಂಟಪದಲ್ಲಿ ಭಾಗವಹಿಸಿದ ಉಲ್ಲೇಖಗಳು ಓಂದಿನ ಕೃತಿಗಳಲ್ಲಿಲ್ಲ. ಆದರೆ ಇತ್ತೀಚಿನ ಪುರಾಣಕಾರರು ಅವಳು ಕಲ್ಯಾಣದಲ್ಲಿ ಅನುಭವಮಂಟಪದಲ್ಲಿದ್ದ ಳೆಂದು ತಿಳಿಸುತ್ತಾರೆ.

ಭೀಮಕವಿಯ ಬಸವ ಪುರಾಣದಲ್ಲಿ ಈಕೆಯು ಕಥೆ ಬರುತ್ತದೆ. ಗುಡ್ಡವ್ವೆಯು 'ನಿರುತಮತಿ' 'ಹಿರಿಯಭಕ್ತೆ'ಯೆಂದು ಕರೆಯಲ್ಪಟ್ಟಿದ್ದಾಳೆ. ಆದಯ್ಯನಂತೆ ಸೌರಾಷ್ಟ್ರಕ್ಕೆ ಹೋಗಿ ಸೋಮೇಶ್ವರನನ್ನು ಒಲಿಸಿಕೊಂಡು, ಶಿವನ ಅನುಗ್ರಹ ಸಂಪಾದಿಸುತ್ತಾಳೆ. ಇವಳ ವಿಷಯವನ್ನು ಬಿಜ್ಜಳನಿಗೆ ತಿಳಿಸುತ್ತಾರೆ. ಅವಳು ನಾಡಿನ ಹಲವೆಡೆಗಳಲ್ಲಿ ಸಂಚರಿಸುತ್ತಾಳೆ. (ಬಸವಪುರಾಣ ಸಂಧಿ 56, ಪದ್ಯ 56ರಿಂದ 67–ಲಿಂಗಾಯತ ವಿಧ್ಯಾಭಿವೃದ್ಧಿಯ ಪ್ರಕಟನೆ, 1971) ಅಲ್ಲಿಯ ಚಿತ್ರವು ಅಷ್ಟೊಂದು ಆಕರ್ಷಕವಿಲ್ಲ.

'ಶಿವತತ್ವಚಿಂತಾಮಣಿ'ಯಲ್ಲಿ 36 ನೆಯ ಸಂಧಿಯಲ್ಲಿ ಈಕೆಯ ವೃತ್ತಾಂತವು ಷೋಡಶರ ಕಥೆಗಳೊಳು ಒಂದಾಗಿ ಬರುತ್ತಿದೆ. ಲಕ್ಕಣ್ಣ ದಂಡೇಶನು ಈ ಶರಣೆ ಯನ್ನು "ಪರಶಿವನ ಚಿತ್‌ಶಕ್ತಿಯಪರಾವತಾರೆ" ಎಂದು ಕರೆದಿದ್ದಾನೆ. ಈಕೆ ಗುಡ್ಡಾಪುರದ ಸೋಮೇಶ ಲಿಂಗಭಕ್ತರ ಗರ್ಭದಲ್ಲಿ ಜನಿಸುತ್ತಾಳೆ. ಚಿಕ್ಕಂದಿನಲ್ಲಿ ಯಾವಾಗಲೂ ಮೌನಿಯಾಗಿ ಲಿಂಗ ಧ್ಯಾನಪರಳೂ ಆಗಿರುತ್ತಾಳೆ. ಗುಡ್ಡಾಪುರದ ಮೂಡಣಕ್ಕೆ ಮೂವತ್ತು ಗಾವುದದೊಳಿರ್ದ 'ಅಲಂಪುರ' ದೊಳಿದ್ದ ಬ್ರಹ್ಮೇಶ ಲಿಂಗವನ್ನು ಕಿತ್ತು ಅದನ್ನು ನದಿಯಲ್ಲಿಟ್ಟು, ಆ ಪೀಠದಲ್ಲಿ ವೀರನಾರಾಯಣನನ್ನು ಧೂರ್ತರು ಸ್ಥಾಪಿಸುತ್ತಾರೆ. ಅಲ್ಲಿಯ ವೀರಗಣ ವೀರನಾಚಯ್ಯನಿಗೆ ಇದನ್ನು ತಿಳಿದು ವ್ಯಸನವಾಗುತ್ತದೆ. ಊಟ, ನಿದ್ರೆ ತೊರೆದು ಅವನು ಚಿಂತೆಯಲ್ಲಿರುವಾಗ ಬ್ರಹ್ಮೇಶನು ವೀರನಾಚಯ್ಯನ ಕನಸ್ಸಿನಲ್ಲಿ ಬಂದು, ಆ ನೀಚರನ್ನು ಸಂಹರಿಸಲು, ಗುಡ್ಡಾಪುರಕ್ಕೆ ಹೋಗಿ ಎಮ್ಮರಸಿ 'ವರದಾನಿ'ಗೊಂದು ಮಾತು ಸೂಚಿಸು' ಎಂದೆನ್ನಲು ವೀರನಾಚಯ್ಯನು 'ಪಕ್ಷಿವೇಗ'ದೊಳು ಆಗಮಿಸಿ, ಗುಡ್ಡಮ್ಮಗಳಿಗೆ ವಿಷಯ ನಿರೂಪಿಸಲು ಅವನಿಗೆ ಗುಡ್ಡಮ್ಮಯು, "ಏನಿ, ಬಿಜಯಂಗೈದಿರಯ್ಯ. ಏನು ಸೇವೆಯನೆನಗೆ ಕರುಣಿಸಲಿ ಬಂದಿರಿ" ಎಂದು ಅಂತಃಕರುಣ ಪೂರ್ವಕ ಕೇಳುತ್ತಾಳೆ. ಅದಕ್ಕೆ ವೀರನಾಚಯ್ಯನು 'ಮಾನನಿಧಿ', 'ಜಗನ್ಮಾತೆ', 'ಸುಜ್ಞಾನ ಮಾನಸೆ', 'ಜಗವೆಲ್ಲವಂ ಪುಟ್ಟಿಸಲು ಜನನಿಯಾಗಿ, ಜಗದ ಜೀವರ ಯಂತ್ರಸೂತ್ರವು ನೀನಾಗಿ, ಜಗದ ತಾಂಡವಮೂರ್ತಿಯಾಗಿಪ್ಪ ನಿನ್ನ ನಿಜವರಿವರೊಳರೇ ? ಜಗದಿಂದ ಲತ್ತತ್ತಲಾರುವರಿಯದ ಶಿವನಮೊಗದ ಕನ್ನಡಿಯೆ, ನಿನ್ನನಾತನೆ ಬಲ್ಲನು" ಎಂದು ಹೊಗಳುತ್ತಾನೆ. "ಆಡಿಸುವ ಸೂತ್ರಧಾರಿಯನರಿದು ಎನ್ನ ಕೊಂಡಾಡುವರೇ ? ಜಗವು ಆರಜಠರದೊಳಿಪ್ಪುದು ? ಆಡುವರಾರು ? ಆಡಿಸುವರಾರು ? ಉಘಡಿಸುವ ನೋಡಿ ಮೆಚ್ಚಿಪರದಾರು ? ಎಂಟಂಗಗಳು ಎಂಟು ದೆಸೆಯೊಳು ಬೀಡುಬಿಟ್ಟಿವೆ ; ಇವು ಮಾಡಿದವರಾರು ? ಶರಣರೇ ಬಲ್ಲರು ; ನಿಮ್ಮೊಡನೆ ಆಡಲೇಂ" ಎಂದು ದಾನವ್ವೆಯು ನುಡಿಯುತ್ತಾಳೆ. ಅದಕ್ಕೆ ವೀರನಾಚಯ್ಯಗಳು, "ಹರ ಕರುಣಾವೇ

ಮೂರ್ತಿಯಾಗಿ ಬಂದಿರೋ, ಕರುಣಿಸುವುದು" ಎಂದು ಗುಡ್ಡವ್ವೆಗಳ ಪಾದಗಳಲ್ಲಿ ಬಿದ್ದು ಕೇಳಿಕೊಳ್ಳುತ್ತಾನೆ. ಅದಕ್ಕೆ ಗುಡ್ಡಮ್ಮನು, ಅವನಿಗೆ, "ಹೇಳದುದನು ಅರಿವ ಅರಿವಿನ ನಿಲವು ನೀವು; ಭಾಳಲೋಚನದ ಚಿಚ್ಛಕ್ತಿ ನೀವು" ಎಂದು ನುಡಿಯುತ್ತಾಳೆ. ವೀರನಾಚಯ್ಯಗಳು "ಆಳ್ದಳೀ ಬಿನ್ನಪವ ಚಿತ್ತೈಸು" ಎಂದು ಅಲಂಪುರದಲ್ಲಿ ನಡೆದುದೆಲ್ಲವನ್ನೂ ವಿಶದವಾಗಿ ತಿಳಿಸುತ್ತಾರೆ. ಈ ಮಾತುಗಳನ್ನು ಕೇಳಿ ಗುಡ್ಡವೆಯು ಮುಳಿದು, ಭುಗಿಲಿಡುತೆದ್ದು, ಹೊನ್ನಯ್ಯ, ಪಾಂಡ್ಯನಾಯಕ, ಕಿನ್ನರಬ್ರಹ್ಮಯ್ಯ, ಬೀರಿದೇವ, ಬಿಜ್ಜಯ್ಯ, ಪಡಿಹಾರಿಸೋಮಯ್ಯ, ಮನ್ನಣೆಯ ಕಾಳಮ್ಮ. ಕೇತಮ್ಮ ಮೊದಲಾದ ಗಣಂಗಳೆಲ್ಲರನ್ನು ಕರೆದು ಅವರನ್ನೊಂದುಗೂಡಿಸಿ ಉಳಿದ ನಂದಿಮುಖಿ, ಹಂಪಯ್ಯ, ಕಂದರ್ಪವಿಜಯ ಕಲ್ಯಾಣ, ಬಾಚಮ್ಮ, ದೇವಯ್ಯ, ಸೇನನಾಥ, ಚಿಕ್ಕರಿಗೆ ನಾಗಯ್ಯ, ಪೂವಲ ಬಾಚಿತಂದೆ, ನೀವೆಲ್ಲ ಬನ್ನಿರಿ ಎಂದು ಇತರರನ್ನು ಕಲೆ ಹಾಕಿದುದಲ್ಲದೆ ಅಲಂಪುರದಲ್ಲಿ ನಡೆದ ಅನಿಷ್ಟ ಘಟನೆಗಳನ್ನು ಮತ್ತು ವೀರ ನಾಚಯ್ಯಗಳು ಬಂದ ವೃತ್ತಾಂತವನ್ನೂ ಸುತ್ತಣ ನಾಲ್ಕು ಗ್ರಾಮದವರಿಗೂ ತಿಳಿಸುತ್ತಾಳೆ. ಎಲ್ಲರೂ ಅಲಂಪುರದ ಹೊರವಲಯದೊಳು ಕೂಡಲು ದಾನಮ್ಮನು ತಿಳಿಸುತ್ತಾಳೆ. ವೀರನಾಚಯ್ಯಗಳನ್ನು ಊರೊಳಗೆ ಕಳಿಸುತ್ತಾಳೆ. ಕೂಡಿದ ಗಣಮೇಳದೊಂದಿಗೆ ನಲಿವುತ್ತ ಕೆಲೆವುತ್ತ, ಮುದ್ದಿಸುತ ಮೋಹಿಸುತ, ಪುಳಕಿಸುತ, ಹದಿನಾರು ರಥವ ತರಿಸಿ, ಬಿರುದಿನ ಪತಾಕೆಗಳ ಎತ್ತಿಸುತ, ಶರಣರ ಕೀರ್ತಿಗಳ ಬಿರುದನುಗ್ಗಡಿಸುತ ರಥವನೇರಿ ಗುಡ್ಡವ್ವೆಯು ಅಲಂಪುರಕ್ಕೆ ಧಾಳಿಯಿಡಲು ಹೊರಡುತ್ತಾಳೆ. ಮೃಡನ ನಡುಗಣ್ಣ ಕೋಪದ ಕಿಡಿಯ ಬಳಗದಂತೆ ಕಡೆಗಾಲದಂದು ಸಂಹರಿಪ ರುದ್ರನ ಸರ್ವಪಡೆಯಂತೆ, ದಕ್ಷಾಧ್ವರಧ್ವಂಸಿ ವೀರೇಶ್ವರನ ವೀರಗಣ ಪರಿವಾರದಂತೆ, ಖಡ್ಗ, ತೋಮರ, ಪರಶು, ಚಕ್ರ, ಧನು, ಶರ, ಮುಸಲ, ಜಡಿವ ಪತ್ರದ ವೀರಭಟಕೋಟಿಯು ಧಾಳಿಯಿಡಲು, ನಡೆದಾಗ ಗುಡ್ಡಮ್ಮನೇ ಮುಂದಿರುತ್ತಾಳೆ. ಶಿವನಲ್ಲದೆ ಬೇರೆ ದೈವವು ಶ್ರೇಷ್ಠವಲ್ಲ ಎನ್ನುವ ತತ್ವವನ್ನು ನಂಬಿ, ಶಿವವಿರೋಧಿಗಳ ಮದವನ್ನಡಗಿಸಲು ವೀರನಾಚಯ್ಯ ಮೊದಲಾದ ವೀರಗಣದೊಂದಿಗೆ ರಣಕಹಳೆಗಳೊಡನೆ ಗುಡ್ಡವ್ವೆಯು ಹೊರಡಲು ಶಿವಭಕ್ತರು ಆಕೆಯನ್ನು ಸ್ವಾಗತಿಸುತ್ತಾರೆ. ಅವರಿಗೆಲ್ಲ ಗುಡ್ಡವ್ವೆಯ ಆಗಮನವು ಪ್ರಾಣ ಬಂದಂತಾಗುತ್ತದೆ. ಶರಭಕ್ಕೆ ಸಿಂಹ, ಗರುಡಕ್ಕೆ ಉರಗ ಅಂಜುವಂತೆ ವೈರಿಗಳು ಎದೆಗುಂದುತ್ತಾರೆ. ಬ್ರಹ್ಮೇಶಲಿಂಗವನ್ನು ಪುನಃ ಪ್ರತಿಷ್ಠಾಪಿಸುತ್ತಾರೆ. ಸಮಸ್ತ ಶಿವಗಣವು ಹರುಷವನ್ನು ತಾಳುತ್ತದೆ. ಅಲ್ಲಿ ಗುಡ್ಡಮ್ಮೆಯು ನೆರೆದ ಭಕ್ತವೃಂದಕ್ಕೆ ಶಿವನ ಸಾಮರ್ಥ್ಯವನ್ನು ಕೊಂಡಾಡುತ್ತಾಳೆ. ಶರಣಾಗತರಾದವರನ್ನು ರಕ್ಷಿಸಿ, ಮುನಿದವರ ಶಿರವ ನೀಡಾಡುತ್ತಾಳೆ. ಅಲ್ಲಿ ನೆರೆದಿರ್ದ ಮುತ್ತೈದೆಯರು ಗುಡ್ಡಮ್ಮನಿಗೆ "ವೀರ ಸಾಮ್ರಾಜ್ಯ ಸಂಘದ ಸಿದ್ಧಿರಸ್ತು; ಶಿವಮಸ್ತು; ಶೈವವ್ರತಾಚಾರ ನಿಷ್ಕಂಟಕ ವ್ಯಾಪ್ತಿರಸ್ತು; ಶಿವಾತ್ಮಯೋಗೋಸ್ತು" ಎಂದು ಹರಸುತ್ತಾರೆ. ವೀರ

ಮಾಹೇಶ್ವರರೆನಿಪ ಷೋಡಶರು ಗುಡ್ಡಮ್ಮೆಗಳ ಕೈಗೆ ವೀರಗಂಕಣಕಟ್ಟಲು ಮುಂದಾಗುತ್ತಾರೆ. ಪಾರ್ವತಿಯ ಹದಿನಾರು ಕಳೆಗಳೇ ಷೋಡಶವಿಭೇದನಾಮದಿಂ ಜನಿಸಿಮದರಿಂದ ಅವರೆಲ್ಲ ಷೋಡಶರಾದರು. ನಾಚಯ್ಯನು ಗುಡ್ಡಮ್ಮನನ್ನು 'ವಿಶ್ವತಶ್ಚಕ್ಷುರುತ ಬ್ರಹ್ಮೇಶನೇ ನಿನಗೆ ವರನು ; ನೀನು ಸಾಕ್ಷಾತ್ ಪಾರ್ವತಿ' ಎಂದು ಕೊಂಡಾಡುತ್ತಾನೆ. ಅಲ್ಲಿ ಅನೇಕರಿಗೆ ಶಿವಧರ್ಮದೀಕ್ಷೆ ಕೊಡುತ್ತಾಳೆ. ಮರಹಿನಿಂದ ಬಂದ ದುಷ್ಕರ್ಮವನ್ನು ಕಳೆದುಕೊಳ್ಳಲು ಬ್ರಹ್ಮೇಶಲಿಂಗಾಲಯದಲ್ಲಿ ಜಪ ಹೋಮಾದಿಗಳನ್ನು ಮಾಡಲು ತಿಳಿಸುತ್ತಾಳೆ. ಈ ಷೋಡಶರು ಪರಮವೀರ ವ್ರತಾಚಾರನಿಷ್ಠಾ ಭಕ್ತಿಪರಿಪೂರ್ಣರೆಂದು ಲಕ್ಕಣ್ಣ ದಂಡೇಶನು ಈಕೆಯ ಚರಿತ್ರೆ ಯನ್ನು ಹೇಳಿ ಅದನ್ನು ಆಲಿಸಿದವರಿಗೆ ನಿರುಪಮ ಐಶ್ವರ್ಯ, ಆಯುಷ್ಯ, ಆರೋಗ್ಯ, ಉರುತರ ಶಿವಜ್ಞಾನಯುತ ಸದ್ಭಕ್ತಿ ದೊರೆಯುತ್ತವೆಯೆಂದು ತಿಳಿಸಿದ್ದಾನೆ.

ಈ ವಿಷಯಗಳನ್ನು ಪರೀಕ್ಷಿಸಿದರೆ ಗುಡ್ಡವ್ವೆಯು ಅಲಂಪುರದಲ್ಲಿ ಬ್ರಹ್ಮೇಶ ಲಿಂಗವನ್ನು ಪ್ರತಿಷ್ಠಾಪಿಸಿದುದು ಸ್ಥಾವರಲಿಂಗಸ್ಥಾಪನೆ ಮುಂದುವರಿಸಿದುದೂ ಕಂಡುಬರುತ್ತದೆ. ಲಕ್ಷ್ಮೇಶ್ವರದಲ್ಲಿ ಆದಯ್ಯನು, ಅಬ್ಬಲೂರಲ್ಲಿ ಏಕಾಂತದ ರಾಮಯ್ಯನು ನೆರವೇರಿಸಿದ ಕೃತ್ಯಗಳೂ ಇಂತಹವೇ. ಆದುದರಿಂದ ಈ ಮಹಾ ತಾಯಿಯನ್ನು ಆ ಶರಣಗಣಕ್ಕೆ ಸೇರಿಸಬಹುದು. ಡಾ॥ ಪಿ. ಬಿ. ದೇಸಾಯಿಯವರು 1964ರಲ್ಲಿ ಪ್ರಸಿದ್ಧಿಸಿದ ಬೊಂಬೆ ಕರ್ನಾಟಕದ ಶಾಸನಗಳಲ್ಲಿ (SI. Vol. XV—ಗ್ರಂಥದ ಪುಟ 73–74ರಲ್ಲಿ) ಪ್ರಕಟಿಸಿದ ತಾಳಿಕೋಟೆಯ ಶಾಸನ 56ರಲ್ಲಿ ಮಹಾ ಮಂಡಲೇಶ್ವರ ವಿರುಪರಸರು ವೀರದಾಸಯ್ಯನಿಗೆ ವೀರಬಯ್ನೇಶ್ವರ ದೇವಾಲಯ ಮತ್ತು ಗಣಮಠದ ರಕ್ಷಣೆಗೆ ದಾನ–ದತ್ತಿ ನೀಡಿದ್ದುದರ ಉಲ್ಲೇಖವಿದೆ; ಈ ಗಣಮಠದ ಗಣಗಳು ಇತರ ಸಮಯದವರ ಮೇಲೆ ಜಯ ಸಂಪಾದಿಸಿದ್ದರು. ಅವರು ಜಯ ಸಂಪಾದಿಸಿದ ಊರುಗಳೆಂದರೆ: ಪರಿಯಳಿಗೆ, ಅಣಿಲೆವಾಡ ಉಣಕಲ್ಲು, ಸಂಪಗಾವಿ, ಅಬ್ಬಲೂರು, ಮಾರುಡಿಗೆ, ಅಣಂಪೂರ, ಕರಹಾಡ, ಕೆಂಭಾವಿ, ಬಮ್ಮಕೂರು, ಮತ್ತಿತರ ಊರುಗಳು. ಇದರಲ್ಲಿ ಅಣಂಪೂರದಲ್ಲಿಯ ಘಟನೆ ಅಲಂಪೂರದಲ್ಲಿ ನಡೆದ ಗುಡ್ಡವ್ವೆಯು ಕೈಕೊಂಡು ಲಿಂಗಸ್ಥಾಪನೆಯಾಗಿರಬಹುದಾ ಗಿದೆ. ಲಕ್ಕಣ್ಣದಂಡೇಶನ ಶಿವತತ್ವ ಚಿಂತಾಮಣಿಯೇ ಮೊತ್ತಮೊದಲು ಈ ಶರಣೆಯ ಚರಿತ್ರೆಯನ್ನು ವಿಶದವಾಗಿ ನಿರೂಪಿಸುವ ಕಾವ್ಯ. ಅವಳ ಉಗ್ರ ಶೈವಾಭಿಮಾನ, ಕಲಿತನ–ಇವು ಇಲ್ಲಿ ಸ್ಪಷ್ಟವಾಗಿ ಗೋಚರಿಸುತ್ತವೆ. ಅಲಂಪೂರದಲ್ಲಿ ಅವಳು ಶೈವಲಿಂಗವನ್ನು ಪ್ರತಿಷ್ಠಾಪಿಸಿದ ಘಟನೆ ನಿರೂಪಿತವಾದುದು ಈ ಕಾವ್ಯ ದಲ್ಲಿಯೇ. ಡಾ॥ ಹಳಕಟ್ಟಿಯವರು ಕ್ರಿ. ಶ. 1959ರಲ್ಲಿ "ಶಿವಶರಣೆಯರ ಚರಿತ್ರೆ ಗಳು" ಎನ್ನುವ ಪುಸ್ತಕದಲ್ಲಿ ಪುಟ 55–57ರಲ್ಲಿ 'ನಾವದಿಗೆಯ ಗುಡ್ಡಮ್ಮೆ' ಎನ್ನುವಲ್ಲಿ ಅವಳ ಕಥೆ ನಿರೂಪಿಸಿದ್ದಾರೆ; ಅದಕ್ಕೆ ಬಸವಪುರಾಣವೇ ಆಧಾರ

ವಾಗಿರುವಂತೆ ಕಂಡುಬರುತ್ತದೆ. ಅಲ್ಲದೆ ಅದೇ ಪುಸ್ತಕದ 63–79 ಪುಟಗಳಲ್ಲಿ ಈಕೆಯ ಕಥೆಯನ್ನು ಮತ್ತೊಮ್ಮೆ "ವರದಾನಿ ಗುಡ್ಡಮ್ಮ" ಎಂಬ ಶೀರ್ಷಿಕೆಯಲ್ಲಿ ಬರೆದಿದ್ದಾರೆ. ಈ ಲೇಖನದಲ್ಲಿ ಅವಳ ಕಥೆಯನ್ನು ವಿವರಿಸಿದ್ದಾರೆ. ವಿಶೇಷವಾಗಿ ಅವಳ ದೇಶ ಸಂಚಾರ, ಶಿವಭಕ್ತರಿಗೆ ಮಾಡಿದ ಹಿತ, ಶಿವಶರಣರ ಸಂದರ್ಶನ, ಅವಳ ಕಲಿತನವ ಕೃತಿ ಮೊದಲಾದವುಗಳನ್ನು ವಿವರಿಸಿದ್ದಾರೆ. ಲಕ್ಕಣದಂಡೇಶನ ಹೇಳಿಕೆಯ ಪ್ರಕಾರ ಅಲಂಪುರವು ಮಲಪ್ರಭಾನದೀ ತೀರದಲ್ಲಿರಬೇಕು. ಆದರೆ ಈ ಹೆಸರಿನ ಗ್ರಾಮವು ಮತ್ತು ಬ್ರಹ್ಮೇಶನ ಲಿಂಗಾಲಯವು ಅಲ್ಲಿಲ್ಲವೆಂದೂ ಇದು ತಪ್ಪೆಂದೂ ಅಲಂಪುರವು ರಾಯಚೂರು ಜಿಲ್ಲೆಯಲ್ಲಿ ಒಂದು ಅತ್ಯಂತ ಪವಿತ್ರವಾದ ಸ್ಥಳವೆಂದು ಪ್ರಸಿದ್ಧಿ ಹೊಂದಿದೆ. ಅಲ್ಲಿ ಒಂದು ತ್ರಿಪದಿಯನ್ನು ಉದಾಹರಿಸಿದ್ದಾರೆ. ಆ ಪದ್ಯದಲ್ಲಿ ಲಿಂಗವನ್ನು ಸ್ಥಾಪಿಸಿದ ಮಾತುಬಂದಿದೆ.

"ವಾರಿಜಾಕ್ಷನ ಕಿತ್ತು ಮಾರವೈರಿಯ ನಿಲಿಸಿ
ಧಾರಿಣಿಯ ಮೇಲೆ ಜಪವೆತ್ತೀಶನ ಮೆರೆದ
ಧೀರೆ ಗುಡ್ಡವ್ವೆ—ಶರಣಾಗು"—

'ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರ ರತ್ನಾಕರ' ಸಂಪುಟ 1, ಪುಟ 386ರಲ್ಲಿ ಗುಡ್ಡವ್ವೆಯ ಕಥೆ ಅತಿ ಸಂಕ್ಷಿಪ್ತವಾಗಿ ಬಂದಿದೆ. ಬಸವಪುರಾಣದ ಕಥೆಯೇ ಇಲ್ಲಿ ಬಂದಿದೆ. ಅಲ್ಲಿ ವಿಚಾರಾರ್ಹ ಘಟನೆಗಳಾವುವೂ ಇಲ್ಲ. (ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರ ರತ್ನಾಕರ, ಸಂಪುಟ 1 ; ಸಂಪಾದಕರು : ಡಾ॥ ಆರ್. ಸಿ. ಹಿರೇಮಠ ; ಕ. ವಿ. ವಿ. ಪ್ರಕಟನೆ 1964).

9

ಗುಡ್ಡಮ್ಮನನ್ನು ಕುರಿತು ಭಕ್ತರು ಕೆಲವು ಹಾಡುಗಳನ್ನು ಬರೆದಿದ್ದು ಕೆಲವು ಪದ್ಯಗಳು ಪುಸ್ತಕಗಳಲ್ಲಿ ಪ್ರಕಟವಾಗಿವೆ. ಆ ಕವಿತೆಗಳಲ್ಲಿ ಆ ವ್ಯಕ್ತಿಯ ಬಗೆಗೆ ಬರುವ ಕೆಲವು ಮಾತುಗಳನ್ನು ಇಲ್ಲಿ ಸಂಗ್ರಹಿಸಲಾಗಿದೆ. ದಾನಮ್ಮ 'ಮೂಜಗದ ತಾಯಿ' ; 'ಪಾರ್ವತಿದೇವಿ', 'ಸೋಮ ಲಿಂಗನ ಪತ್ನಿ ; ಆದಿಶಕ್ತಿ, ಸಂಗಮೇಶ್ವರ ನನ್ನು ನಂಬಿ ದೇವಿ ಭೂಲೋಕದಲ್ಲಿ ಶರಣೆಯ ರೂಪವ ಧರಿಸಿ, ಗುಡ್ಡಾಪುರದಲ್ಲಿ ನೆಲೆಸಿದಳು. ಅನಂತರಾಯ ಶಿರಸಮ್ಮ ಎಂಬ ದಂಪತಿಗಳಲ್ಲಿ ಜನಿಸಿದಳು. ಅವಳ ಮೊದಲಿನ ಹೆಸರು ಲಿಂಗಮ್ಮ. ಊರುಬಿಟ್ಟು ಕಪ್ಪಡಿ ಸಂಗಮ ಅಲ್ಲಿಂದ ಬಾಗೇ ವಾಡಿಗೆ ಹೋಗಿ ಕಲ್ಲಮೂರ್ತಿನಂದಿಗೆ ಕಬ್ಬನ್ನು ಮೆಲ್ಲಿಸಿದಳು ; ಅಲ್ಲಿಂದ ಕಲ್ಯಾಣಕ್ಕೆ ಹೋಗಿ ಜಂಗಮ ದಾಸೋಹವ ಮಾಡಿದಳು : ಅಲ್ಲಿ ದಾನ ಧರ್ಮಾದಿಗಳನ್ನು ಮಾಡಿ 'ದಾನಮ್ಮ' ಎಂಬ ಹೆಸರು ಪಡೆದಳು. ಕುರುಡರು, ಕುಂಟರು, ಬಂಜೆಯರು ಇವರಿಗೆಲ್ಲ ಫಲವಕೊಟ್ಟಳು. ಈಕೆಯ ಪೂಜೆಯು ನಿತ್ಯವೂ ಮೂರು ಹೊತ್ತು ನಡೆಯುತ್ತಿದೆಯೆಂದು ಆ ಪದ್ಯಗಳಲ್ಲಿ ವ್ಯಕ್ತವಾಗಿದೆ. ಶಿವಾನುಭಾವಿಯಾಗಿ ನಾಡಿನಲ್ಲಿ ಸಂಚರಿಸಿ ಶಿವಭಕ್ತಿಯನ್ನು ಹಬ್ಬಿಸಿದ ಕೀರ್ತಿ ಈ ತಾಯಿಗೆ ಸಲ್ಲುತ್ತದೆ.

ಈ ಶರಣೆಯು ಪಂಚಾಳಕುಲದಲ್ಲಿ ಜನಿಸಿ ವೀರಶೈವದೀಕ್ಷೆಯನ್ನು ಹೊಂದಿದ್ದಾಳೆ. ಅವಳಿಗೆ ದೀಕ್ಷೆಕೊಟ್ಟ ಗುರು ಸಂಗಮೇಶ ಯಾರು ? ತಿಳಿಯದು. ಅವಳ ದೇವಾಲಯದಲ್ಲಿ ಆಕೆಯ ಗುರುವಿನ ಪಾದುಕೆಗಳೂ ಇವೆ. ದೇವಾಲಯದಲ್ಲಿ ಸೋಮೇಶನ ಲಿಂಗಮೂರ್ತಿಯಿದ್ದು ಅವಳು ಸೋಮೇಶ್ವರನ ಭಕ್ತಳಾಗಿದ್ದಳೆಂಬುದನ್ನು ಸೂಚಿಸುತ್ತದೆ. ಮಲ್ಲಿಕಾರ್ಜುನ ಗುಡಿಯಿರುವುದು ಅವಳು 'ಗುಡ್ಡವ್ವೆ' ಎಂಬ ಹೆಸರಿಡಲು ಕಾರಣವಾದ ಶ್ರೀ ಶೈಲಮಲ್ಲಿಕಾರ್ಜುನನ ಕುರುಹಾಗಿದೆ. ಆ ಆವಾರದಲ್ಲಿಯೇ ವೀರಭದ್ರನ ಗುಡಿಯಿರುವುದು, ಮತ್ತು ಗದುಗಿನಲ್ಲಿ ವೀರಭದ್ರ ದೇವಾಲಯದಲ್ಲಿ ಗುಡ್ಡಮ್ಮನ ಮೂರ್ತಿಯಿರುವುದು ಆಕೆ ರುದ್ರನಂತಿದ್ದುದರಿಂದ ಅವಳ ನೆನಪುಮಾಡಿಕೊಂಡಾಗೆಲ್ಲ ರುದ್ರದೇವರ ನೆನಪುಬರುವುದನ್ನು ಸೂಚಿಸುತ್ತದೆ. ಆಕೆ ಪಾಂಚಾಳ ಕುಲದಿಂದ ಮತಾಂತರಹೊಂದಿ ವೀರಶೈವಕ್ಕೆ ಮಾಡಿದ ಸೇವೆ ಅನುಪಮ. ಜಾತಿಮತ ಭೇದಗಳಿಲ್ಲದೆ ಕರ್ನಾಟಕ–ಮಹಾರಾಷ್ಟ್ರದಲ್ಲಿ ಇಂದಿಗೂ ಹಲವಾರು ಭಕ್ತರು ಆಕೆಗೆ ನಡೆದುಕೊಳ್ಳುತ್ತಿರುವುದು ಅವಳ ಹಿರಿಮೆಗೆ ಸಾಕ್ಷಿ. ಸ್ತ್ರೀ ಪುರುಷರೆಂಬ ಭೇದವಿಲ್ಲದೆ ಕನ್ನಡ ಜನತೆ ಆಕೆಗೆ ತೋರಿದ ಗೌರವ–ತೋರುತ್ತಿರುವ ಭಕ್ತಿ ಇಂದಿಗೂ ಅನುಕರಣೀಯವಾಗಿವೆ. ಅವಳ ಕಾಲದಲ್ಲಿಯೇ ಸ್ಮಾರಕಗಳು ರಚಿತವಾದುದನ್ನು ನೋಡಿದರೆ ಮತ್ತು ಅನೇಕ ಹಿರಿಕಿರಿಯ ರಾಜರ ಮೇಲೆ ಬೀರಿದ ಪ್ರಭಾವವನ್ನು ಅರಿತರೆ ಅವಳು ಅಂದು ಮಹ ದೇವಿಯಕ್ಕನಿಗಿಂತ ಯಾವ ವಿಧದಲ್ಲೂ ಕಡಿಮೆಯಲ್ಲ ಎನ್ನಬೇಕು. ಅವಳ ಕಾರ್ಯವನ್ನು ನೆನೆದಾಗ ನಮಗೆ ಕಿತ್ತೂರ ರಾಣಿ ಚೆನ್ನಮ್ಮನ ನೆನಪಾಗುತ್ತದೆ.

ಅನುಬಂಧ

ಗುಡ್ಡಾಪುರ ದಾನಮ್ಮನಿಗೆ ಸಂಬಂಧಿಸಿದ ಶಾಸನಗಳು.

(SI. Vol. XV 1964, ಪುಟ 73–74)

(1) ತಾಳೀಕೋಟೆಯ ಶಾಸನ 1184 ಎ.ಡಿ. ಏಪ್ರಿಲ್ 25.

ಈ ಶಾಸನದಲ್ಲಿ ನೇರವಾಗಿ ದಾನಮ್ಮನ ಉಲ್ಲೇಖವಿರದಿದ್ದರೂ 'ಅಣಂಪುರ'ದ ಹೆಸರಿದ್ದು 'ಅಣಂಪುರ'ವೇ ಆಲಂಪುರವಿರಬೇಕೆಂದೂ ಷೋಡಶರ ವರ್ಣನೆ ಇರುವುದರಿಂದಲೂ ದಾನಮ್ಮನಿಗೆ ಸಂಬಂಧಿಸಿರಬೇಕೆಂದು ತಿಳಿಯಲಾಗಿದೆ.

ಶಾಸನದ ವೃತ್ತಾಂತ

1. ದಿಂ ಮುಟಿವರುಂ ಪರಸಮಯಗಿರಿವಜ್ರದಂಡರುಂ ಜಗದಲುದ್ದಂ
2. ಡರುಂ ಜಿನಸಮಯವನದಹನದಾವಾನಳರುಂ ಮುನಿದರ್ಗೆ
3. ಹಾಳಾಹಾಳರುಂ ಬೌದ್ಧಸಮಯವಿಧ್ವಂಸನಪ್ರವೀಣರುಂ ಬಗೆ
4. ಯಲು ಜಾಣರುಂ ಅನ್ಯಸಮಯಿಗಳ ಬೆನ್ನಬಾರನೆತ್ತುವರುಂ ಸೆ

5. ಣಸುವರ ನೆತ್ತರ ಮರುಳ್ಗಳಿಂ ಕುಡಿಸುವರುಂ ಪರಸಮಯ
6. ಘರಟ್ಟರುಂ ವೀರಕು (ಪ್ಪ) ರವಟ್ಟರುಂ ಕಾಲನ ನಾಲಗೆಯಂ ಕೀಳ್ವರುಂ
7. (ಬಾ) ರಿಯಂ ಕೂರದಗ್ಗೀವರುಂ ನಂಜನಂಜದುಂಬರುಂ
8. ......ಱ ಸಿ ಮಾರ್ಕ್ಕೊರ್ಳ್ವರುಂ ಬಹುವಿಧ ನಿಷ್ಠಾವಶೀಕೃತಜ
9. ......(ರುಂ) ಅಸಂಖ್ಯಾತ ಸಂಖ್ಯಾಭಿದೇಯ ಮಹಾ
10. ......ಪುರಸಮಯ ಸರಸಿಜಾತಸನೂಹ ಮದಕರಿಗಳಂ
11. ......ಹು ವಿಧ ನಿಷ್ಠೆಯಂ ಹರನಂ ಪರಿಕ್ಸಿ ಭವಮನಂ ತರ್ಪಿ ಪರಸಮ
12. ......ಮಂ ಸಂಹರ್ಪ್ಪಿ ಜರಮಂ ಮಾಂಕರಿಸುವುದ್ದಂಡರುಂ
13. ......ಲೆ ಗಂಡರುಂ ಪರಿಯಳಿಗೆ ಅಣಿಲೆವಾಡ ಉಣುಕಲ್ಲು ಸಂ
14. ......ಪಗಾಡಿ ಅಬ್ಬಲೂರು ಮಾರುಡಿಗೆ ಅಣಂಪೂರು ಕರಹಾಡ ಕೆಂ
15. ಭಾವಿ ಬಮ್ಮಕೂರು ಮೊದಲಾಗಿ ಅನನ್ತ ದೇಶಾಂತರದಲಿದಿ
16. ರಾದ ಪರಸಮಯಿಗಳಂ ಪಡಲ್ವಡಿಸಿ ಲೋಕಮನಾಕಂಪಂ ಗೊ
17. ಳ್ಸಿ ಬಸದಿಗಳಂ ಹೊಸೆದುಮುಕ್ಕಿ ಶಿವಲಿಂಗಸಿಂಹಾಸನಮಂ...
18. ಣ್ಗೊಳ್ಸಿ ಚಲಮಂ ಮೆ ದು ಧೀರರೊಳು ನೆ ದು ಸ್ವರ್ಗಮರ್ತ್ಯ
19. ಪಾತಾಳದೊಳನಂಗಾರಿಯ ಹೆಮ್ಮೆಯ್ಮಂ ತಮ್ಮ ಭೃ
20. ತ್ಯಾಚಾರದ ತೊಮ್ಮೆಯ್ಮಂ ತಳದಲಿಕ್ಕಿ ತೋರ್ಪನ್ನೆ ತೋ ದ ಪುರಾತ
21. ನ ನೂತರೆನಿಸಿದ ಅಸಂಖ್ಯಾತ ಗಣಂಗಳ ನಾಮಾದಿ ಸ
22. ಮಸ್ತ ಪ್ರಶಸ್ತಿ ಸಹಿತಂ 11 ಸ್ವಸ್ತಿ ಶ್ರೀಮಚ್ಚಾಳುಕ್ಯ ಚಕ್ರವರ್ತಿ ತ್ರಿಭು
23. ವನಮಲ್ಲ ವೀರಸೋಮೇಶ್ವರ ವರ್ಷದ 3ನೆಯ ಕ್ರೋಧಿ ಸಂವತ್ಸ
24. ರದ ವೈಶಾಖ ಶುದ್ಧ 13 ಸೋಮವಾರದಂದು ಶ್ರೀ ವೀರಬಯ್ಸೇಶ್ವ
25. ರದೇವರ್ಗ್ಗೆ ಅಂಗಭೋಗ ಚೈತ್ರಪವಿತ್ರ ಸಕಲಗಣಂಗಳ ದೇವತಾರ್ಚನೆ
26. ಗಳಂ ಮಾಳ್ಪಂತಾ (ಗಿ) ಶ್ರೀಮನುಮಹಾಮಂಗಳೇಸ್ವರಂ ವಿರುಪ
27. ರಸದೇವರು ವೀರದಾಸಂಗೆ ಗಣಮಠವಾಗಿ ಕೊಟ್ಟ ಕೆಯಿ ತಾಳಿ
28. ಯಕೋಟೆಯಿಂ ಬಡಗಲು ಬಂಮನಹಳ್ಳಿಯಿಂಮೂಡಲು ಕಾರೆಗನೂರಿ
29. ಗೆ ಹೋದ ದಾರಿಯಿಂ ಉಪ್ಪುವಳ್ಳ ತೆಂಕಣಸೀಮೆಯಾಗಿ ಬಡಗಲು
30. ಗೊಟ್ಟ ಕಂಡಿಕೆಯಿಂದಿಳಿದು ಬಂದ ಪಳ್ಳ ಮೇರೆಯಾಗಿ ಮಾಣಿಕೇಶ್ವ
31. ರದ ಕೋಲಲು ಚದುರಸ ಮತ್ತರು 100 ದೇವರ ಪೌಳಿಯಿಂ ಸಂದ್ಸಿ
32. ಹೊಜಗೆ ತೆಂಕಲರಮನೆಯ ಬೀದಿ ಮೇರೆಯಾಗಿ ನೀಳಹಸ್ತ 27 ಅಗಲ ಹ-
33. ಸ್ತ 20ರ ನಿವೇಶಣ 1 ಅಂಗಡಿ 1 ಊರಿಂ ಮಾಡಲು ತೋಟ 1 ದೋಣಿಯಿಂ
34. ಪಡುವಲು ತೋಟ 1 ಅನ್ತು ತೋಟ 2 ದೇವಮಾನ ಹೊಂಗೆ ಜೋಳ ಮಾ 2 ನುಣ್ಬ
35. (ನ) ಹೊಂಗೆಮಾನ 1 ದೇವರ ನಂದಾದೀವಿಗೆಗೆ ಗಾಣ 1 ಮೇಲಾದ ಗಾಣಾಂಗ
36. ಳಲು ಎಣ್ಣೆ ಸೊಟಿಗೆ ಹೊಂಗೆಮಾಱಿದಲ್ಲಿ ಅಡಕೆ-5 ಎಲೆ ಹೇಱಿಂಗೆ 50 ದೇ
37. ವರ ಕಾಣಿಕೆ ಹಗರಿಬಗೆ ಮೂಸೂಱಱೊಳಗೆ ಊರೂರಲು ಗದ್ಯಾಣ
38. 1 ಇನ್ನಿನಿತಕ್ಕಂ ವೀರದಾಸನವಂಶ ವೈಜವ್ವೆ ಬಾಗೆಯ ನಾಯಕದೇವರ್ಗಂ
39. (ಭ) ಕ್ತರ್ಗ್ಗಂ ಅಂಜಿ ಬೆಸಕೆಯ್ವರು ಆ ಮಠದ ಹೆಗ್ಗಡೆ ಸಂಕಯ್ಯಂಗೆ ದೇವ
40. ಕೆಯ್ಯೊಳಗೆ ಮತ್ತರು 10 ಪೌಳಿಯೊಳಗೆ ನೀಳಹಸ್ತ 12 ಅ
41. ಗಲಹಸ್ತ 5 ನಿವೇಶಣ 1 ಕಾಣಿಕೆಯೊಳಗೆ ಊರು 2 ಎ
42. ನ್ನೆನ್ತು ದೇವರಿಗೆ ವೃತ್ತಿ ಫನವಾಗಲನ್ತ (ನ್ತೆ) ದಶವಂದ ಸಂಕಯ್ಯಂಗೆ
43. ಜಾವಿಸೆಟ್ಟಿಗೆ ಮತ್ತರು 5.

(2)

ಇಂಗಳಗಿಯ ಶಾಸನ – ಕ್ರಿ.ಶ. 1209, ಸೆಪ್ಟೆಂಬರ 14 ಸೋಮವಾರ.

(ಶರಣಸಾಹಿತ್ಯದಲ್ಲಿ ಪ್ರಕಟವಾಗಿದೆ. ಸಂಪುಟ 21, ಸಂ. ಪುಟ 1 29–35)

ಮೂಲಶಾಸನ ಪಾಠ

1 ಶ್ರೀ ಓಂ ನಮಃ ಶಿವಾಯ ।। ನಮಸ್ತುಂಗ ಶಿರಶ್ಚುಂಬಿ
2 ಚಂದ್ರಚಾಮರ ಚಾರವೇ ತ್ರೈಲೋಕ್ಯನಗರಾರಂಭ ಮೂ-
3 ಲಸ್ತಂಭಾಯ ಶಂಭವೇ ।। ಸ್ವಸ್ತಿ ಸಮಸ್ತ ಭುವನಾಶ್ರಯಂ
4 ಶ್ರೀ ಪೃಥ್ವೀವಲ್ಲಭ ಮಹಾರಾಜಾಧಿರಾಜಂ ಪರಮೇಶ್ವರಂ ಪ್ರ
5 ತಾಪ ಚಕ್ರವರ್ತಿ ತ್ರಿಭುವನಮಲ್ಲ ಸಿಂಗಣದೇವರ ವಿಜ
6 ಯರಾಜ್ಯಮುತ್ತರೋತ್ತರಾಭಿವೃದ್ಧಿ ಪ್ರವೃದ್ಧಮಾನವಾ
7 ಚಂದ್ರಾರ್ಕ ತಾರಂಬರಂ ಸಲುತ್ತಮಿರೆ ದೇವಗಿರಿಯ
8 ನೆಲೆವೀಡಿನೊಳ್ ಸುಖಸಂಕಥಾವಿನೋದದಿಂ ರಾಜ್ಯಂ
9 ಗೆಯ್ಯುತಮಿರೆ ಶ್ರೀಮನ್ಮಹಾಪ್ರಧಾನಂ ಯಾದ
10 ವರಾಜ್ಯಸಮುದ್ಧರಣಂ ಸೇವುಣರಾಯ ಶ್ರೀ
11 ಸಿಂಗಣದೇವರ ದಕ್ಷ ದಕ್ಷಿಣ ಭುಜಾದಂಡ ನಾ
12 ಯಕ ನಾರಾಯಣಂ ಲಕ್ಷ್ಮಿದೇವ ದಂಡನಾಯಕರು
13 ಅನೇಕ ದೇಶಾದೇಶಂಗಟಿಂ ಆಳುತ್ತ ಸಕಳ ಧರ್ಮ್ಮಾಧರ್ಮ್ಮಂ
14 ಗಳಂ ಪ್ರತಿಪಾಳಿಸುತ್ತಮಿರೆ ।। ಸ್ವಸ್ತಿ ಸಮಧಿಗ
15 ತ ಪಂಚಮಹಾಶಬ್ದ ಮಹಾಮಂಡಳೇಶ್ವರಂ ಮಾಹಿಶ್ಮತೀ
16 ಪುರವರಾಧೀಶ್ವರಂ ಅಹಿಹೇಯ ವಂಶೋದ್ಭವಂ
17 ವಿವೇಕವನಜೋದ್ಭವಂ ದಾಯಿಗ ಗಿರಿವಜ್ರಪಂಡ ನರ
18 ಸಂಕಸೂನೆಗಾಜದಳದಂಕಕಾಱ ವೈರಿಮಂಡಟೀಕಗಂಡ ಗೂ
19 ಪಾಟ ಶ್ರೀಲೋಕನಾಥದೇವರ ದಿಬ್ಯ ಶ್ರೀಪಾದಾರಾಧಕ
20 ನುಂ ಮಹಾಮಂಡಳೇಶ್ವರಂ ಆನೆಗ ದೇವಪ್ರಿಯ ಪುತ್ರನುಂ
21 ಗಂಡಭೂರಿಸ್ರಮನುಮಪ್ಪ ಬಿಜ್ಜರಸರು ಮಾಡಿದ ಧರ್ಮ್ಮ
22 ವಂ ಸಮಸ್ತಲೋಕಾಲೋಕ ಚಕ್ರವರ್ತಿಯುಂ ಸಾಸ್ವತ
23 ಯೈಶ್ವರ್ಯಮೂರ್ತಿಯುಮಪ್ಪ ಮಹಾಲಿಂಗ
24 ದೇವರ ವುರಿಗಂಣ್ಣ ಜ್ವಾಳೆಯಿಂದುದಯಿ
25 ಸಿದ ಮಹಾವೀರಗಣಂ ಗಟಿಸಖ್ಯಾತರ ಮಹಿಮೆ
26 ಯೆಂತೆಂದೊಡೆ ।। ಕಂದ ।। ಕರಕರನುಂ ಸೆಂಡಾಡುವರು
27 ರಗಪನಂ ಕೀಟಲಿಟ್ಟು ಬಿಟ್ಟಿಕ್ಕುವ ರಾ॥ ಗಿರಿಕುಟಿಮಂ ಕಿತ್ತೆತ್ತುವ
28 ರುರಿಯೊಟು ಪರಿಮಱುಯನಾಡುತಿರ್ಪರು ಸರಣ
29 ರು ॥ ಸ್ವಸ್ತಿ ಶ್ರೀ ಸಕವರುಶದ 1131 ನೆ
30 ಯ ಸುಕ್ಲ ಸಂವತ್ಸರದ ಆಸ್ವಯಿಜ ಆದ್ದ ತ್ರ
31 ಯೋದಸಿ ಸೋಮವಾರದನ್ದು ಶ್ರೀಮನ್ಮಹಾ

32 ಮಂಡಳೇಶ್ವರಂ ಬಿಜ್ಜರಸರು ಅಱಲು ಮುಂನ್ನೂಱರ ಬ
33 ಳಿಯ ಬಾಡ ಯಿಂಗುಳಿಗೆಯ ಪ್ರಭು ನಾಗರಸ ಹೆಗ್ಗಡೆ
34 ಬಸವಯ್ಯನಲ್ಲಿಯ ಪಂಚಮಠಯಿಂತಿವರೇಕಸ್ತರಾಗಿ ಶ್ರ (ಶ್ರೀ)
35 ಮೂಲಸ್ತಾನದೇವರ ಪಾದಾರಾಧಕಿಯುಮಪ್ಪ ಕ್ಷೇತ್ರ ಸಂನ್ಯಾ
36 ಸಿ ಮಹಾನುಭಾವೆಯುಮಪ್ಪ ಬಲಗವ್ವೆಗೞಕಾಲಂ ತೊ
37 ಳದು ಧಾರಾಪೂರ್ಬಕಂ ಮಾಡಿ ಶ್ರೀ ಸಿದ್ಧರಾಮನಾಥ
38 ದೇವರ್ಗ್ಗಂ ದಸಗಣ ಸಿಂಗಿದೇವ ಬಿಜ್ಜೇಶ್ವರ ದೇವರು
39 ರೇವಣೇಶ್ವರ ಕಂನೇಶ್ವರ ಕೇದಾರ ದೇವರು ನಾಗೇಶ್ವರ ಯಿಂ
40 ತೀ ಸಕಳ ಲಿಂಗದೇವರಿಗೆ ಶ್ರೀಗುಡ್ಡವ್ವೆಗ ಮುಖ್ಯ
41 ವಾಗಿ ಗಣಮಠಕ್ಕೆ ಕೊಟ್ಟ ವ್ರಿತ್ತಿ ಮನೆಯು ನಿವೇಶನ
42 ನಾಲ್ಕು ಮೂಡಣ ಪೊಲದಲು ಹಿರಿಯ ಕಾಲಮತ್ತರು 2
43 ಬಡಗಣ ಹೊಲದಲು ಹೞ್ಕಾಱಿಗೆ ಕಾಲಡಿಯ ಮತ್ತರು 4
44 ಬಡಗಲು ಕೋಟೆಯ ಕೆಱಗೆ ಹೂದೋಟ ಮತ್ತುರು 1 ದೀವಿಗೆಗೆ
45 ಸರ್ಬ್ಬನಮಸ್ಯಗಾಣ 1 ವೂರೊೞಗಣ ಗಾಣದಲು ಗಾಣ
46 ಯಿಲೆಸೋೞಸ 1 ದೇವಗೊೞಗರಾಸಿಯಲು ಕೊೞಗ ।
47 ಯೆಲಯ ಹೇಱಿನ ಸುಂಕ ಹಡಪಗಟ್ಟೊಳಗಾಗಿ ದೇವರಿಗೆ ಸ
48 ಲಿಸುವರು ॥ ತೊನಸೆಹಳ್ಳಿಯಲು ವೂರಮುಂದೆ ಗುಂ
49 ಡ ಬೋವನು ಗಣಮಠಕ್ಕೆ ಕೊಟ್ಟ ಭೂಮಿ ತರಲಹಳ್ಳಿಯ
50 ಕಾಚವ್ವೆ ದೋರಗೌಡ ಮುಖ್ಯವಾಗಿ ಧಾರಾಪೂರ್ಬ್ಬಕಂ
51 ಮಾಡಿಬಿಟ್ಟ ಕಾಲಡಿಯ ಮತ್ತರು ನಾಲ್ಕು ಹಂನಿಕ್ಕ
52 ಯ್ಯ ನಿವೇಶನ 1 ಯಿಂತೀಧರ್ಮ್ಮ ರೇಚಿಲವೆಗೞಮುಂಯ ದೇವಯ್ಯ
53 ಗೆಯಸಂಖ್ಯಾತರು ಕೂರ್ತು ತೊತ್ತುಗೆಲಸವಂ ಬೆಸ
54 ಸಿಕೊಟ್ಟು ಸೀರೆ ಪಟ್ಟಾವಂ ಕಟ್ಟಿ ಆ ಚಂದಾರ್ಕ ತಾರಂಬರಂ
55 ಕಾರುಣ್ಯಂಗೆಯ್ದು ಸ್ಥಿರಂಜೀವಿಯೆಂದು ಮಾಡಿದ ಮಂ
56 ಗೞಮಹಾಶ್ರೀ ॥ ಯೀಧರ್ಮ್ಮಮಂ ಪ್ರತಿಪಾೞಿಸಿದವ
57 ರು ಗಣಂಗೞು ಕೂರ್ಪರು ಯೀಧರ್ಮ್ಮಕ್ಕೆ ಪ್ರತಿ
58 ಕೂಲರಾದವರು ಶಿವದ್ರೋಹರು ಗಣಂಗೞುಮಃನಿವರು
59 ಕುೞಕುರಡಿಯ ಪ್ರಿಯ ನಾಗರಸ ಬರೆದ ಶಾಸನ

[3]

ವಿಜಾಪುರ ಶಾಸನ : ನಂ 21 a

Archaeological Museum Bijapur. A. 18.

(ಪ್ರೊ. ಕೆ. ಜಿ. ಕುಂದಣಗಾರ, ಅವರ ಪುಸ್ತಕದಿಂದ ಎತ್ತಿಕೊಳ್ಳಲಾಗಿದೆ ; ಪುಟ 97-98)

ಶಾಸನದ ಕಾಲ ಕ್ರಿ. ಶ. 1278 ; ಸೋಮವಾರ ಮೇ 8ನೆಯ ತಾರೀಖು.

ಮೂಲಶಾಸನ ಪಾಠ

(ಸಂಬಂಧಿಸಿದ ಭಾಗವು 26ನೆಯ ಚರಣದಿಂದ ಪ್ರಾರಂಭವಾಗುತ್ತದೆ)

25 ....ಸಂ.
26 ಳವಂ ಕ್ರಯಗೊಂಡು ಯಾ ಸ್ಥಳ.........॥ ಸ್ವಸ್ತಿ ಶ್ರೀ ಶಕ 1200

27 ನೆಯ ಬಹುಧಾಂನ್ಯ ಸಂವತ್ಸರದ ವೈಸಾಖ ಸು. 15 ಯಾದಿವಾರದ
28 ಲು ಶ್ರೀ ತೇಜೇಶ್ವರ ಶ್ರೀವರದಾನಿ ಶ್ರೀಪುರುಸೇಶ್ವರ ದೇವರ
29 ಪ್ರತಿಷ್ಠೆಯುಂ ಮಾಡಿ ಪುರವಂ ರಚಿಯಿಸಿಯಾದೇವರುಗಳ ಅಂಗಭೋಗ ರಂಗ
30 ಭೋಗಕ್ಕೆ ಶ್ರೀಮಂಡಳಿಕ ಮಹಾದೇವರಾಣಿಯರು ಕೊಂಡಿಱ ನಗ.........ದಲ್ಲಿ
ಕೊಟ್ಟ ಭೂಮಿಯ ವಿವರ ನಾಲ್ವತ್ತುಂ ಬಾಡಲ್ಲಿಯಾಲೂರ
31 ಬಟ್ಟೆಯಿಂ ಬಡಗಲು ಜೋವಿಸಗೆಯ್ಯಿಂ ಮೂಡಲು ಮತ್ತರು ಮೂಱುಕೆಱೆಯೊಳಗಣ
ಪಡುವಣ ಕೆಱೆಯೊಳಗೆ ಹೂದೋಂಟ ಮ
32 ತ್ತ 4 ಬೊಂಬಳ್ಳದಿಂ ತೆಂಕಲು ಕರುಸಗೆಯಿವೆಂ......ಹರ.........
ಮತ್ತ.....ಹೇಱುವ ಸಾಸನದೆತ್ತು 25 ಹೇರಿಗೆ ಭತ್ತ ಸೊ 1 ಹೇಱುಂಗೆಲೆ 50
33 ಹೊ... ಗೊ ಹಿಡಿವಾದುರಗಾಣಂ ಪ್ರತಿಪಳಿಗೆ ಯೆಂಣ್ಣೆ ಸಂಧೆಯಲು ವೃಪ್ಪಿನಕರ
ಹೆಡಗೆಗೊ ಸೆರೆವುಪ್ಪು ಪುರದೊಳಗ್ಯು ಮಾಱುತಕ್ಕೆ
34 ಅಡ್ಡಾಯ ಪುರದೊಳಗೆ ಮಾಂನ್ಯದ ಗಾಣ 2 ಪುರದೊಳಗಣ.....ರುಕ ಮಗ್ಗದೆಱೆ
ಸರ್ವ್ವಮಾರನ್ಯದೇವಿಯ ಕಂಮತದ ಭತ್ಥ
35 ದೇವಧನವಮಾಱಿದಡಂ ಯಾಯುಮಾಂನ್ಯದೇವಿಯ ಹಬ್ಬದೊಳಗೆ ಯೇನು ಮಾಱಿದ
ವಸ್ತುವಿಗೆ ಯಾಯ ಸುಂಕವಿಲ್ಲ ಪುರದೊಳಗೆ ಅ
36 ನ್ಯಾಯ ನಿಪುತ್ರಿಕವಿಲ್ಲ ನಾಡಿಂಗೆವು ಪಟ್ಟಣಕ್ಕೆವು ಅಸತು ಆಕಾಂತುಕ ಯೇನು
ಹುಟ್ಟಿದೊಡೆವು ಅರಸು (ಮಂನೆಯ) ಅಗ್ರಾಹಿ
37 ತರು ಪಟ್ಟಣದ ಹಲರೂ ಸರ್ವಬಾಧೆ ಪರಿಹಾರವಾಗಿ ಪುರವ
ಪಾಳಿಸುವರು ॥ ಱಟ್ಟಗೆಱೆಯಲು ವೂರಿಂ ಪಡುವಲು ಮತ್ತುರು 80 ಕಾರಕುಱುವದಲು
ಮತ್ತ 6 ಯಾಲೂರಲು ಮತ್ತ 4 ಹಳ್ಳದ ಬಳಿಯಲು ಹೂದೋಂಟ ಮತ್ತ 1 ಗೌಡಗೆಱೆ
ಯಲುಮ
38 ತ್ತ 12 ತಂಬೆದಡಿಯಲು ಮತ್ತ 16 ಕೂಟಜಿಯಲು ಮತ್ತ.....
ದೇಹೂರಲಿ ಮತ್ತ 4

(4)

ವಿಜಾಪುರ ಶಾಸನ : 216

Archaeoligical Museum Bijapur A. 18

(ಪ್ರೊ. ಕೆ, ಜಿ. ಕುಂದಣಗಾರ ಅವರ ಪುಸ್ತಕದಿಂದ ಎತ್ತಿಕೊಳ್ಳಲಾಗಿದೆ.)

ಶಾಸನದ ಕಾಲ ಕ್ರಿ.ಶ. 1278ನೆಯ ಸೋಮವಾರ, ಮೇ 8ನೆಯ ತಾರೀಖು

ಮೂಲ ಶಾಸನ ಪಾಠ (ಶಾಸನದ ಒಂದು ಬದಿಯಲ್ಲಿ)

1 ದೇಬ್ಯಾ ಪೂಜಾಮಹಾನಹ ಕ್ಷೇತ್ರ
2 ವಾಸಿಯ ಚಿಹ್ನೆಗಳೆಂತೆಂದಡೆ ॥ ಅ
3 .... ಸತ್ಯವಾದೀ ಚ ಬ್ರಹ್ಮಚಾರೀ ದ್ರಿಢ ವ್ರಿ (ವೃ)
4 ತಃ ಸಿವಭಕ್ತಃ ಕ್ಷಮಾಯುಕ್ತಃ ಕ್ಷೇತ್ರವಾಸೀ
5 ಸಮರ್ಚ್ಯತೇ॥ ಪ್ರಾತಃ ಸ್ನಾಯೀ ನಕ್ತಭೋಜೀ ಸಪೂ
6 ಜಾ ಮಹಾಸ್ತುಪೋಂನ್ವಿತಃ ಯೇ ಸದ್ಗುಣ ಯ (ಣ್ಯೈಃ)

7 ಹೀನಸ್ತು ಪೂಜಕೋಪಿ ನಚಾರ್ಹತಿ॥ ಯಿಂ
8 ತಹ ಕ್ಷೇತ್ರವಾಸಿ ದೇವಿಯ ತ್ರಿಕಾಲಪೂಜೆ
9 ಯ ಮಾಡಿಕೊಂಡಿಹನು ಆಂತಗೆ ಅಸ
10 ನಾ ಚ್ಛಾದನವ ನಡಸಿ ವರುಸಂಪ್ರತಿ ದೇವಿ
11 ಯ ಭಂಡಾರದಲ್ಲಿ। ಹೊಂನನು ಕೊಂ
12 ಡಿಹನು ಮೂವತ್ತು ಗೇಣು ಬಾಚಿ ವಿಡಿಯ
13 ....ದಾನ ಚಿಂತಾಮಣಿಯು ಫಳಿಯೆನಿಸುವ
14 ಆ ಫಳಿಯಲು ಗುಡ್ಡಾದೇವಿಯ ಭೂಮಿಯೊ
15 ಳಗೆ ಬಿಟ್ಟಗೆಜೆಯಲು ಯಿಬ್ಬರು ಪೂಜಾರಿಯ
16 ರಿಗೆ ಮತ್ತು 10 ವೃತ್ತಮದ ಮದ್ದಳಿಗಂಗೆ ಮತ್ತ 7 ಮಧ್ಯ
17 ....ದ ಮದ್ದಳಿಗಂಗೆ ಮತ್ತು 4 ಪುರದ ತಳಾಜಿ ತ
18 ....ಡೆಯೆರಡುಳಿನಲು ನಡವದಕ್ಕೆ ಕೊಟ್ಟ ಮತ್ತ 5
19 ಆತಂಗೆ ಪುರದ ವೈದಿಗೊಳರ ಕೊ...ವೆನೆದೆ
20 ಪ್ರಜೆಯ ಕಯ್ಯಲು......ವಂಗೆ ಮ. 2 ಲ್ಯಕ್ಕದಲು ಯೆ
21 ತ್ತಿಕೊಂಬನು. ಕಯಿಧಾರೆಯ ಮದುವೆಗೆ ಮ 10
22 ಹಾಲುಕೂಳಿಂಗೆ ಮ. 40 ದೇವಿಯ ಪ್ರಸಾದ
23 ಪ್ರಾತಃಕಾಲಿನದು ಗಣಮಠಕ್ಕೆ ಮಧ್ಯಾಹ್ನ ಕಾಲಿ
24 ನದು ಪೂಜಾರಿಗಳಿಗೆ ಸಾಯಂಕಾಲಿನದು
25 ಕ್ಷೇತ್ರವಾಸಿಗೆ ಲಿಂಗಪ್ರಸಾದುಂನತಂ ತಾ
26 ....ಲಂಗೆ ಆತಂಗೆ ದೇವಿಯ ಭಂಡಾರದಲ್ಲಿ
27 ಯ ಸಂಪ್ರತಿ 1 ಚೈತ್ರಕ್ಕೆ ಕಾಲಕುಟಿ
28 ವದಲ್ಲಿ ಕೊಂಡಿಜೀವನ ಮತ್ತು 6 ತಂಬದಡಿ
29 ಯಲು ಮತ್ತ 16 ಅಂತು ಬ್ರಾಹ್ಮಣ ಭೋಜನಕ್ಕೆ
30 ಮತ್ತ 22 ಜೋವಿಸ ಗೋವಿಂದ ದೇವಂಗೆ ಆಲೂ
31 ರಲ್ಲಿ ಕೊಂಡಿಜೀವನ ಮತ್ತ 4.

ಅನುಬಂಧ 2

ಗುಡ್ಡಮ್ಮನನ್ನು ಕುರಿತು ಬರೆದ ಹಾಡುಗಳು

1

ಪೂಜೆಯ ಮಾಡುವೆನು ದಾನಮ್ಮದೇವೀಗೆ ಪೂಜೆಯ ಮಾಡುವೆನು
ಪೂಜೆಯ ಮಾಡುವೆ ಮೂಜಗದೊಡತಿಗೆ ಪೂಜೆಯ ಮಾಡುವೆನು ॥ ಪಲ್ಲ ॥

ಮೊದಲು ಮಜ್ಜನವ ಮಾಡಿ ಈ ತಾಯಿಗೆ ಅಭಿಷೇಕವನ್ನು ಮಾಡಿ
ಭಸಿತ ಗಂಧವನ್ನು ತೀಡಿ ಮಿಸುಪ ಛತ್ರಿಯ ಧರಿಸಿ ॥ 1 ॥

ಮಡಿಪೀತಾಂಬರ ಉಡಿಸಿ ಈ ತಾಯಿಗಿ ಒಡವೆವಸ್ತುಗಳಿಡಿಸಿ
ಹಣೆಗೆ ಕುಂಕುಮ ಧರಿಸಿ ಮೆರಗು ಅಕ್ಷತೆ ಧರಿಸಿ ॥ 2 ॥

ಪರಿಪರಿ ಪುಷ್ಪವ ತಂದು ಈ ತಾಯಿಗೆ ದಂಡಿಕಟ್ಟುವೆ ಚಂದ
ಐದು ಮುತ್ತೈದೇರು ಬಂದು ಶಾಸದಕ್ಕಿ ಹೊಯ್ದು ॥ 3 ॥

ಕರ್ಪೂರ ಗುಗ್ಗುಳ ತಂದು ಈ ತಾಯಿಗೆ ಮಂಗಳಾರುತಿ ಅಂದು
ಭಕ್ತರೆಲ್ಲರು ಬಂದು ಗುಡ್ಡಾಪುರ ವಾಸ ಶ್ರೀಮಲ್ಲಿಕಾರ್ಜುನ ಕೋಶ
ಭಕ್ತನೀ ಅಡಿಗಲ್ಲೇಶ ತಾಯಿಮುಂದ ಬಸವೇಶ ॥ 4 ॥
—ಪೂಜೆಯ ಮಾಡುವೆನು

2

ಬೆಳಗುವೆ ನಾರತಿ ಗುರುಸೋಮಲಿಂಗನ ಸತಿ
ಪಾರ್ವತಿದೇವಿಗೆ ಬೆಳಗುವನಾರತಿ ॥ ಪಲ್ಲ ॥

ಮೂರು ಬೆಳಗು ಪೂಜೆಯಾಗುವುದು ಸ್ನಾನ ಮಾಡಿಸೊ
ವಿಭೂತಿಧರಿಸಿ ಪತಲುಡಿಸುವರು ಕೊರಳೊಳು ರುದ್ರಾಕ್ಷಿ
ಧರಸುವರು ಗಂಧ ಕುಂಕುಮವ ಬೊಟ್ಟಿಟ್ಟು ದಂಡೆ ಕಟ್ಟವರೆ ॥ 1 ॥

ನಿತ್ಯ ಭಕ್ತರು ಬರುವರೆ ನಿನ್ನೆಡೆಗೆ ದೇವಿ ಚರಣಕಮಲಕೆರಗಿ
ಶರಣು ಮಾಡುವರೆ ಸೆರಗೊಡ್ಡಿ ಬೇಡಿಕೊಂಬುವರೆ
ಬಂದ ಕಂಟಕ ಪರಿಹಾರ ಮಾಡುಎಂಬುವರೆ ॥ 2 ॥

ಕರ್ಪೂರ ಗುಗ್ಗುಳ ತರುವರೆ ಮಂಗಳಾರುತಿ ಮಾಡುವರೆ
ಜೋಡು ತೆಂಗು ಬಡಿಯಣ* ತಂದು ಮುಂದೆ ಒಡ್ಡುವರೆ
ಬಂದ ಭಕ್ತರು
ನೈವೇದ್ಯ ದೇವಿಗೆ ಸಲಿಸುವರೆ ॥ 3 ॥

ಸಂಗತೀರ್ಥೆಂಬುದು ಮಹಾತೀರ್ಥ ಗುರುಮಲ್ಲಿಕಾರ್ಜುನಯ್ಯಾ
ಈಶ್ವರನಾಕಾರ ಪಲ್ಲಕ್ಕಿ ಉತ್ಸವ ಸೋಮವಾರ
ಭಕ್ತ ಅಡಿಗಲ್ಲಪ್ಪ ಕುಂತಾನ ತಾಯಿ ಎದುರಾ ॥ 4 ॥

3

ಆರುತಿ ಬೆಳಗೋಣ ಬಾ ಆದಿಶಕ್ತೀಗೆ
ಆರುತಿ ಬೆಳಗೋಣ ಬಾ ಮಂಗಳ ಪಾಡೋಣ ಬಾ
ಗುರು ಸೋಮನಾಥನ ಸತಿ ಶರಣೀಗೆ
ದಾನಮ್ಮ ತಾಯೀಗೆ ಆರುತಿ ಬೆಳಗೋಣ ಬಾ ॥ಪಲ್ಲ॥

ಸುರಲೋಕವನು ಬಿಟ್ಟು ಶರಣೆರೂಪವ ತೊಟ್ಟು
ಗುರು ಸಂಗಮೇಶನ ಶ್ರೀ ಚರಣ ನಂಬಿಕೊಂಡು
ಶ್ರೀ ಕ್ಷೇತ್ರ ಗುಡ್ಡಾಪುರದಿ ನೆಲೆಸಿದ
ತಾಯಿಗೆ ಆರುತಿ ಬೆಳಗೋಣ ಬಾ ॥1॥

*ಬಡಿಯಣ = ನೈವೇದ್ಯ

ಧರಣಿಗೆ ತಾ ಬಂದು ವೀರಶೈವಮತವಾದಿಗಳ
ಹೊಂದಿ ಹರಸುರಮುನಿಗಳ ಹೊಂದಿ ಹರಣವ ಉಳುಹಿದ
ಕಾಮಧ್ವಂಸನ ಪಟ್ಟದರಾಣಿ ದಾನಮ್ಮ ತಾಯಿಗೆ
ಆರುತಿ ಬೆಳಗೋಣ ಬಾ ॥2॥

ಆರುಗುಣಗಳನಳಿದು ಮಿಗಿಲಾದ ಮೂರು
ಮೂರು ಗುಣಗಳಕಳದು ಆರುಮೂರೊಂಬತ್ತು
ತಾ ಅಳಿದು ಪರಮ ಪಂಚಾಕ್ಷರಿ ಮಂತ್ರ
ಮಹತಿಯ ತಿಳುಹಿದ ದೇವಿಗೆ 1 ಆರುತಿ ಬೆಳಗೋಣ ಬಾ ॥3॥

ಧರಣಿಯೊಳು ತೆಲಸಂಗ ಶರಣೆಯು ಭಕ್ತರು ಬಹುಸಂಗ
ಭಕ್ತರ ಮೇಲೆ ಕೃಪೆಯನು ವರಮುಕ್ತಿ ವರವನ್ನು ಬೇಡುವೆ
ಪ್ರೇಮದಿಂದ ಆರುತಿ ಬೆಳಗೋಣ ಬಾ ॥4॥

4

ಬೆಳಗುವನಾರುತಿಯ ದಾನಮ್ಮ ದೇವಿಗೆ
ದಾನಮ್ಮ ದೇವಿಗೆ ಸೋಮೇಶನ ಸತಿಯಳಿಗೆ
ಪ್ರೇಮದಿಂದಲಿ ನಾವು ನಿಮೆಲ್ಲರೊಡಗೂಡಿ
— ಬೆಳಗುವೆನಾರುತಿಯ ॥1॥

ಉಮರಾಣಿಯಲ್ಲಿ ಜನಿಸಿ ಬಾಲಲೀಲೆಯ ಮಾಡಿ
ದಂಪತಿಗಳೆಂದು ಅನಂತರಾಯ ಶಿರಸಮ್ಮ ಹೆಸರಿಟುಕೊಂಡು
ಲಿಂಗಮ್ಮಗೆ ಬೆಳಗುವೆ ನಾರುತಿಯ ॥2॥

ಉಮರಾಣಿಯನು ಬಿಟ್ಟು ಕಪ್ಪಡಿಸಂಗಮಕ್ಹೋಗಿ
ಸಂಗಮನ ಕೂಡಿಕೊಂಡು ದೇಶ ಸಂಚಾರ ಹೊರಟ
ಮಾದೇವಿಗೆ ಬೆಳಗುವೆನಾರುತಿಯ ॥3॥

ಕಪ್ಪಡಿ ಸಂಗಮಬಿಟ್ಟು ಬಾಗವಾಡಿಗೆ ಹೋಗಿ
ಕಲ್ಲಬಸವಗ ಕಬ್ಬ ಮೆಲಿಸಿದ ದೇವಿ
ದಾನಮ್ಮಗೆ ಬೆಳಗುವನಾರುತಿಯ ॥4॥

ಬಾಗೆವಾಡಿಯಬಿಟ್ಟು ಕಲ್ಯಾಣಪಟ್ಟಣಕ್ಹೋಗಿ
ಬಸವನ ಬಾಳಿಯ ಬನದಲಿ ಜಂಗಮರಿಗೆ ದಾಸೋಹಮಾಡಿದ
ದೇವಿ ದಾನಮ್ಮಗೆ ಬೆಳಗುವೆನಾರುತಿಯ ॥5॥

ದಾನ ಧರ್ಮವ ಮಾಡಿ ಜ್ಞಾನಮಾರ್ಗವ ಹಿಡಿದ
ದಾನದ ಮಹಿಮೆಯಿಂದ ಹೆಸರು ಪಡೆದ
ದಾನಮ್ಮ ದೇವಿಗೆ—ಬೆಳಗುವೆನಾರುತಿಯ ॥6॥

ಕಲ್ಯಾಣಪುರಬಿಟ್ಟು ಸಂಗತೀರ್ಥದಿ ಬಂದು
ತಾಯಿ ತಂದೆಗೆ ದರುಶನ ಕೊಟ್ಟು ಗುಡ್ಡಾಪುರ ಕ್ಷೇತ್ರಕೆ
ಬಂದ ದೇವಿಗೆ-ಬೆಳಗುವೆನಾರುತಿಯ ॥7॥

5

ಅತ್ತ ಇತ್ತ ತಿರುಗುವುದ್ಯಾಕ ಮುತ್ತಿನಂಥ ಮನಸಿರಬೇಕು
ಸತ್ಯವಂತೆ ದಾನಮ್ಮನನ್ನು ನಿತ್ಯದಲ್ಲಿ ನೆನೆಯಬೇಕು ॥1॥

ಉಮರಾಣಿ ಗ್ರಾಮದಲ್ಲಿ ಸತ್ಯವಂತ ಶರಣರಲ್ಲಿ
ಹುಟ್ಟಿದಂಥ ಮಹಾತಾಯಿಯನ್ನು ನಿತ್ಯದಲ್ಲಿ ನೆನೆಯಬೇಕು ॥2॥

ಅಂಗೈಯಲ್ಲಿ ಲಿಂಗವಹಿಡಿದು ಲಿಂಗವಂತ ಧರ್ಮವ ಬೆಳಸುವ
ಮಹಾತಾಯಿ ದಾನಮ್ಮನ ಸೇವೆ ನಿತ್ಯದಲ್ಲಿಮಾಡಬೇಕು ॥3॥

ಕುರುಡರು ಕುಂಟರು ಬಂಜೆಗೆ ಫಲವ ಕೊಡುವ
ಮಹಾದೇವಿ ದಾನಮ್ಮನನ್ನು ನಿತ್ಯದಲ್ಲಿನೆನೆಯಬೇಕು ॥4॥

ಭಕ್ತರ ಬಾನವನು ನಿತ್ಯದಲ್ಲಿ ಸೇವಿಸುತ
ಬೇಡಿದ ವರಗಳ ಕೊಡುವಂಥ ತಾಯಿಯನ್ನು ನಿತ್ಯದಲ್ಲಿ ನೆನೆಯಬೇಕು ॥5॥

ನಾಡಿನೊಳಗೆಲ್ಲಕಡಿಗಿ ಅಂಬಲಿಯನುಂಡು
ಅಡಿಗಡಿಗೆ ನೆನೆದರ ಓಡುವುದು ಸಂಕಟ–ನಿತ್ಯದಲ್ಲಿ ನೆನೆಯಬೇಕು ॥6॥

ಕನ್ನಡ ರಾಜ್ಯದ ಹುಬ್ಬಳ್ಳಿ ಶಹರದೊಳಿರುವ
ದಾನಯ್ನ ಮನಸಿಗೆ ಬಂದ ಮಹಾತಾಯಿ ದಾನಮ್ಮನ–
ನಿತ್ಯದಲ್ಲಿ ನೆನೆಯಬೇಕು ॥7॥

6

ಗುಡ್ಡಾಪುರದಾನಮ್ಮ ದೇವಿಯ ನೋಡಮ್ಮ
ದೇವಿಯ ಮುಂದೆ ಭಕ್ತಿಯನ್ನು ಬೆಳಗಮ್ಮ ॥ಪಲ್ಲ॥

ಮೂರು ಹೊತ್ತಿನ ಪೂಜೆಯು ನಿನ್ನದು
ಮುಡಿಯ ಮಲ್ಲಿಗೆ ಧರಿಸುವುದೆನ್ನದು
ಜಪಮಣಿ ರುದ್ರಾಕ್ಷಿ ಧರಿಸುವ ತಾಯಿಗೆ ಜ್ಯೋತಿಯ ಬೆಳಗಮ್ಮ ॥1॥

ನಿನ್ನಯ ಸೇವೆಯು ಎನಗಿರಲಿ
ಎನ್ನಕಾಯುವ ಹೊಣೆ ನಿನ್ನದಾಗಿರಲಿ
ಬೇಡಿದವರಗಳ ನೀಡುವ ತಾಯಿಗೆ ಜ್ಯೋತಿಯ ಬೆಳಗಮ್ಮ ॥2॥

ದೇವಿಯ ಮುಂದೆ ಅಡಿಗಲ್ಲಪ್ಪ ಭಕ್ತ
ಅಲ್ಲಿರುವುದು ಮಹಾಸಂಕತೀರ್ಥ
ಬದಿಯಲ್ಲಿರುವ ಲಿಂಗನಾಥಗೆ ಜ್ಯೋತಿಯ ಬೆಳಗಮ್ಮ ॥3॥

7

ಎನ್ನ ಪಾಲಿಸು ದಾನಮ್ಮ ತಾಯಿ
ಎನ್ನಪಾಲಿಸು ॥ಪಲ್ಲ॥

ಸಾಲುನಂದದ ದೀಪ ನಡುವೆ ನಿನ್ನಯ ರೂಪ
ಮಾಡಿದಿ ಪ್ರತಾಪಾ ತೋರು ನಿನ್ನಯ ರೂಪ ... ॥1॥

ಸುತ್ತಮುತ್ತ ತೋಟ ನಡುವೆ ನಿನ್ನಯ ಪೀಠ
ಮಾಡಿದಿ ಚಲ್ಲಾಟ ತೋರಿಸು ನಿನ್ನ ಆಟ ॥2॥

ದಾನಮದೇವಿಯು ನೋಡಿಬರೋಣನಡಿ
ನಾನು ನೀನು ಜೋಡಿ ವರಗಳ ಬೇಡಿ ॥3॥

ಶಿರದಮೇಲಿನ ದಂಡೆ ತೆಗೆದುಕೊಡುವುದು ಕಂಡೆ
ದೇವಿಯ ದರ್ಶನಮಾಡಿ ಧನ್ಯಳಾದೆನು ನೋಡಿ ॥4॥

ಅಲ್ಲಿ ಸಂಕತೀರ್ಥ ಸೋಮಲಿಂಗನಾಥ
ಅಡಿಗಲ್ಲಪ್ಪ ಭಕ್ತ ಗುಡ್ಡಾಪುರದ ಕ್ಷೇತ್ರ ...
ಎನ್ನಪಾಲಿಸು ॥5॥

ಇಲ್ಲಿರುವ ಏಳು ಪದ್ಯಗಳು ಆ ಮಾತೆಯು ಬಗೆಗಿರುವ ಭಕ್ತರ ಭಾವನೆಗಳನ್ನು ಎತ್ತಿತೋರಿಸುತ್ತವೆ. ಆಕೆ ಮಹಾತಾಯಿ, ವರದೆ. ಈ ಕವಿತೆಗಳು ಅತ್ಯಂತ ಮೇಲ್ತರಗತಿಯ ಪದ್ಯಗಳಲ್ಲದಿದ್ದರೂ ದಾನಮ್ಮನ ಬಗೆಗಿನ ಭಕ್ತಿಯ ಭಾವನೆಗಳನ್ನು ಎತ್ತಿತೋರಿಸುವುದರಿಂದ ಅವುಗಳನ್ನು ಇಲ್ಲಿ ಸಂಗ್ರಹಿಸಲಾಗಿದೆ. ಮೊದಲಿನ ನಾಲ್ಕು ಪದ್ಯಗಳನ್ನು ತೆಲಸಂಗದ ಭಕ್ತ ಅಡಿಗಲ್ಲಪ್ಪ, ಐದನೆಯ ಪದ್ಯವನ್ನು ಹುಬ್ಬಳ್ಳಿಯ ದಾನಯ್ಯ ಮತ್ತು ಆರು, ಏಳನೆಯ ಪದ್ಯಗಳನ್ನು ಶ್ರೀಮತಿ ಶಿವಪುತ್ರವ್ವ ಕಾತರಕಿ ಗದಗ ಅವರು ಬರೆದಿದ್ದಾರೆ. ದಾನಮ್ಮನು ವೀರಶೈವ ಮಹಿಳೆಯರಲ್ಲಿ ಖಡ್ಗವನ್ನು ಧರಿಸಿ ಧರ್ಮರಕ್ಷಣೆ ಮಾಡಿದ ವೀರಮಹಿಳೆಯರಲ್ಲಿಯೇ ಪ್ರಥಮ ಮಹಿಳೆಯೆನ್ನುವಂತೆ ಗೋಚರಿಸುತ್ತದೆ. ಅವಳ ಮೂರ್ತಿಯ ಕೈಯಲ್ಲಿ ಖಡ್ಗವಿರುವುದೂ ಇದಕ್ಕೆ ನಿದರ್ಶನವಾಗಿದೆ. ಈ ತಾಯಿಯ ಆರಾಧನೆ–ನೆನಹು ಭಕ್ತರಿಗೆ ಸಂತಸದಾಯಕವೆಂದು ಬೇರೆ ಹೇಳಬೇಕಿಲ್ಲ. ಅವಳ ದೇವಾಲಯ ರಚನೆಯು ಶಿವಶರಣರಲ್ಲಿ ಈಕೆಗೆ ಹೆಚ್ಚಿನ ಮಹತ್ವ ತಂದುಕೊಟ್ಟಿದೆ.

ಪ್ರಮಾಣ ಗ್ರಂಥ ಲೇಖನಗಳು

1. ಕಿಟ್ಟೆಲ್ಲರ ಕನ್ನಡ-ಇಂಗ್ಲಿಷ್-ಕನ್ನಡ ನಿಘಂಟು ಪುಟ 550 (1893)
2. ಬಸವಪುರಾಣ : ಸಂಪಾದಕರು : ಡಾ॥ ಆರ್. ಸಿ. ಹಿರೇಮಠ 1971ರ ಪ್ರಕಟನೆ
3. ಶಿವತತ್ವಚಿಂತಾಮಣಿ ; ಸಂಪಾದಕರು ; ಪಂಡಿತ ಎನ್. ಬಸಪ್ಪ (1960)
4. ಮಹದೇವಿಯಕ್ಕನ ರಗಳೆ ; ಸಂಪಾದಕರು : ಚೆನ್ನಮಲ್ಲಿಕಾರ್ಜುನ (1933)
5. ಚೆನ್ನಬಸವಪುರಾಣ ; ಸಂಪಾದಕರು : ಶಿ. ಶಿ. ಬಸವನಾಳ (1934)
6. ಶಿವದಾಸಗೀತಾಂಜಲಿ ; ಸಂಪಾದಕರು : ಡಾ. ಎಲ್. ಬಸವರಾಜು (1963)
7. ಭೈರವೇಶ್ವರ ಕಾವ್ಯದ ಕಥಾ ಮಣಿಸೂತ್ರ ರತ್ನಾಕರ ; ಸಂ : ಡಾ॥ ಆರ್. ಸಿ. ಹಿರೇಮಠ
8. ಶಾಸನಗಳಲ್ಲಿ ಶಿವಶರಣರು : ಸಂ. : ಡಾ॥ ಎಂ. ಎಂ. ಕಲಬುರ್ಗಿ (1970)
9. Inscriptions in Northern Karnatak and Kolhapur State (1939)

10. South Indian Inscriptions. Vol. XV
11. ಶರಣಸಾಹಿತ್ಯ ಸಂಪುಟ 2, ಸಂಚಿಕೆ 1
12. ಶಿವಾನುಭವ ಸಂಪುಟ 1, ಸಂಚಿಕೆ 3, ಸಂಪುಟ 13, ಸಂಚಿಕೆ 11, ಸಂಪುಟ 12 ಸಂಚಿಕೆ 6
13. ಗುಡ್ಡಾಪುರ ದಾನಮ್ಮನ ಚರಿತೆ; ಪ್ರಕಟನೆ–ವೀರಶೈವ ಪ್ರಗತಿಶೀಲ ಸಂಘ, ಗದಗ (1973)
14. ಶ್ರೀ ಕ್ಷೇತ್ರ ಗುಡ್ಡಾಪುರ ಲೇ :–ದಾನಯ್ಯನ ಪ್ರೀತಿಯ ಪುತ್ರಿ, ಹುಬ್ಬಳ್ಳಿ
15. ಶಿವಶರಣೆಯರ ಚರಿತ್ರೆಗಳು ಲೇ . ಫ. ಗು. ಹಳಕಟ್ಟಿ (1959)

ಮಣ್ಣಿನ ಬಳೆಯ ಮೇಲಿರುವ ಒಂದು ಅಪೂರ್ವ ಶಾಸನ*

ವೈ. ಸಿ. ಪಾಟೀಲ್

ಕರ್ನಾಟಕದಲ್ಲಿ ಅಸಂಖ್ಯಾತ ಶಿಲಾಶಾಸನಗಳು ದೊರೆಯುತ್ತವೆಯಾದರೂ ಮಣ್ಣಿನ ಶಾಸನಗಳು ತುಂಬ ಅಪರೂಪ. ಕೋಲಾರ ಜಿಲ್ಲೆಯ ಸಂತೇಕಲ್ಲನಹಳ್ಳಿಯಲ್ಲಿ ದೊರೆತ ಮಡಕೆಯ ಚೂರೊಂದರ ಮೇಲೆ ಶಾಸನವಿದೆ. ಇದು ಕರ್ನಾಟಕದಲ್ಲಿ ಸಿಕ್ಕಿದ ಮೊಟ್ಟಮೊದಲ ಮಣ್ಣಿನ ಬರೆಹ[1]. ಇಂತಹ ಮತ್ತೊಂದು ನಿದರ್ಶನ ಅಮ್ಮಸಂದ್ರ ರೈಲ್ವೆಸಿಲ್ದಾಣಕ್ಕೆ ಸುಮಾರು ಎರಡು ಮೈಲಿಗಳ ದೂರದಲ್ಲಿರುವ ಹರೇಗೊಂಡನಹಳ್ಳಿಯ ವಾಡೆಬಾವಿಯಮೇಲೆ ಕಂಡುಬರುತ್ತದೆ. ಈ ಹಳ್ಳಿ ತುಮಕೂರು ಜಿಲ್ಲೆಯ ತುರುವೇಕೆರೆ ತಾಲ್ಲೂಕಿಗೆ ಸೇರಿದೆ. ಹಳ್ಳಿಗಳಲ್ಲಿ ಸಾಮಾನ್ಯವಾಗಿ ರಾಗಿ ಮುಂತಾದ ದವಸ ಧಾನ್ಯಗಳನ್ನು ರಕ್ಷಿಸಿಡಲು ಬಳಸುವ ವಾಡೆಯ ಆಕಾರದಲ್ಲಿ ಈ ಬಾವಿಯ ರಚನೆಯಿರುವುದರಿಂದ ವಾಡೆಬಾವಿ[2] ಎಂಬ ಹೆಸರು ಪ್ರಚಲಿತವಿದೆ. ಸುತ್ತಲ ಹಳ್ಳಿಗಳ ಜನರು ಕುಂಬಾರರ ಬಾವಿ ಎಂದು ಕರೆಯುವ ರೂಢಿಯೂ ಇದೆ. ಕೆಲವು ವೈಶಿಷ್ಟ್ಯಗಳು ಈ ಬಾವಿಯ ಅಪೂರ್ವತೆಗೆ ಕಾರಣವಾಗಿವೆ.

1. ಬಾವಿಯ ರಕ್ಷಣೆಗಾಗಿ ಹಾಕಿರುವ ಕಳಸಬಳೆ[3]ಯ ಮೇಲೆ ಶಾಸನವಿದೆ.
2. ಕಳಸಬಳೆಯ ಮೇಲೆ ಕೆತ್ತನೆಯಿದೆ.
3. ಬಾವಿಯ ತಳಭಾಗದಿಂದಲೂ ಕಲ್ಲಿಗೆ ಬದಲಾಗಿ ಮಣ್ಣಿನಿಂದ ಮಾಡಿದ ಬಳೆಗಳನ್ನೇ ಜೋಡಿಸಿದ್ದಾರೆ.

ಹರೇಗೊಂಡನಹಳ್ಳಿಯ ವಾಡೆಬಾವಿಯ ಕಳಸಬಳೆಯ ಮೇಲಿರುವ ಶಾಸನದ ಪೂರ್ಣಪಾಠ ಹೀಗಿದೆ:

ಮೊದಲನೆಯ ಸಾಲು:

> ದುರ್ಮುಖಿನಾಮ ಸಂವತ್ಸರದ ಶ್ರಾವಣ ಬಹುಳ ೧ ಪಾಡ್ಯದ ಮಂಗಳವಾರ ದಿವಸ ಅಕ್ಕಳಸಂದ್ರದ ಬೈರಶೆಟ್ಟಿ ಕುಮರ ಪುಟ್ಟಲಿಂಗಶೆಟ್ಟಿ ಮಾವಿನಕೆರೆಯ ಕಂಮಂಣಶೆಟ್ಟಿ ಕುಮಾರ ಲಿಂಗಶೆಟ್ಟಿ.

---

* ಈ ಲೇಖನವನ್ನು ಬರೆಯಲು ಪ್ರಚೋದಿಸಿ, ಉಪಯುಕ್ತ ಸಲಹೆಗಳನ್ನು ನೀಡಿ ಮಾರ್ಗದರ್ಶನ ಮಾಡಿದ ಪ್ರಾಧ್ಯಾಪಕರಾದ ಡಾ॥ ಎಂ. ಚಿದಾನಂದ ಮೂರ್ತಿ ಅವರಿಗೆ ನಾನು ಕೃತಜ್ಞನಾಗಿದ್ದೇನೆ.

ಎರಡನೆಯ ಸಾಲು :

ಇವರುಗಳು ಕೂಡಿ ಮಾಡಿಸಿದ ಬಾವಿ ಕಳಸಬಳೆ..... ರತ

ತುಂಬ ಪುಟ್ಟದಾದ ಇದೊಂದು ವಿಚಿತ್ರ ರೀತಿಯ ಶಾಸನ. ಸಾಮಾನ್ಯವಾಗಿ ಶಾಸನಗಳಲ್ಲಿ ನಿರೀಕ್ಷಿಸುವಂತೆ ಈ ಶಾಸನ ಪ್ರಶಸ್ತಿ, ದಾನದತ್ತಿಯನ್ನೇನೂ ಹೇಳುವುದಿಲ್ಲ. ಬಾವಿಯನ್ನು ಕಟ್ಟಿಸಿದವರ ಅಥವಾ ಬಾವಿಯ ನಿರ್ಮಾಣಕ್ಕೆ ಕಾರಣರಾದವರ ಹೆಸರನ್ನೂ ಹೇಳುವುದಿಲ್ಲ. ಅಕ್ಕಳಸಂದ್ರದ ಕುಂಬಾರ ಜನಾಂಗದ ಬೈರಶೆಟ್ಟಿಯ ಮಗ ಪುಟ್ಟಲಿಂಗಶೆಟ್ಟಿ ಮತ್ತು ಮಾವಿನಕೆರೆಯ ಕಂಮಂಣಶೆಟ್ಟಿಯ ಮಗ ಲಿಂಗಶೆಟ್ಟಿ ಇವರುಗಳು ಬಾವಿಯ ಕಳಸಬಳೆಯನ್ನು ಸಂಯುಕ್ತವಾಗಿ ನಿರ್ಮಿಸಿರುವುದನ್ನು ಈ ಶಾಸನದಲ್ಲಿ ಉಲ್ಲೇಖಿಸಲಾಗಿದೆ. ಈ ಸುತ್ತಲ ಹಳ್ಳಿಗಳಲ್ಲಿ ಇಂದೂ ಸಹ ಇರುವ ಕೆಲವು ಕುಂಬಾರರನ್ನು ಶೆಟ್ಟಿ ಎಂದೇ ಕರೆಯುವುದು ವಾಡಿಕೆಯಲ್ಲಿದೆ. ಹಾಲಿ ಈಗಿರುವ ಕಳಸ ಬಳೆಯನ್ನು ಹಳೆಯ ಕಳಸಬಳೆ ಒಡೆದುಹೋದಮೇಲೆ ಹಾಕಿಸಿದರೆನ್ನುವುದು ಹರೇಗೊಂಡನಹಳ್ಳಿಯ ಕೆಲವು ಹಿರಿಯರಿಂದ ತಿಳಿದು ಬರುತ್ತದೆ.[4] ಆ ಹಳ್ಳಿಯ ಒಬ್ಬ ಹಿರಿಯನ ಅಜ್ಜ ಮತ್ತಿತರರು ಹೇಳುತ್ತಿದ್ದ ಪ್ರಕಾರ ಹಳೆಯ ಕಳಸಬಳೆಯ ಮೇಲಿದ್ದ ಅಕ್ಷರಗಳನ್ನು ತಲೆಕೆಳಗುಮಾಡಿಕೊಂಡು ಪ್ರಯತ್ನಿಸಿದರೂ ಯಾರಿಂದಲೂ ಓದಲು ಸಾಧ್ಯವಾಗುತ್ತಿರಲಿಲ್ಲವಂತೆ. ಒಡೆದುಹೋದ ಹಳೆಯ ಕಳಸಬಳೆಯ ಚೂರುಗಳೇನಾದರೂ ಸಿಕ್ಕಿವೆಯೋ ಅಥವಾ ಪ್ರಯತ್ನಿಸಿದರೆ ದೊರಕಬಹುದೇ ಎಂದು ವಿಚಾರಿಸಿದಾಗ ನಿರೀಕ್ಷಿಸಿರದ ನಿರಾಶೆಯ ಉತ್ತರವೇ ದೊರಕಿತು.


ವಾಡೆಬಾವಿಯ ಹಿಂದೆ ಪಶ್ಚಿಮಕ್ಕೆ ಒಂದು ಚಿಕ್ಕ ಕಟ್ಟೆ ಇದೆ. ಬಾವಿ ಮತ್ತು ಕಟ್ಟೆಯ ಮಧ್ಯೆ ಒಂದು ಆವಿಗೆ ಇತ್ತೆನ್ನುವುದಕ್ಕೆ ರಾಶಿಯಾಗಿ ಬಿದ್ದಿರುವ ಮಡಕೆ ಮತ್ತು ಬೋಕಿಯ ಚೂರುಗಳು ಸಾಕ್ಷಿಯಾಗಿವೆ. ಉತ್ತರ ದಿಕ್ಕಿನಲ್ಲಿ ಈ ಬಾವಿಗೆ ಎದುರಾಗಿ ಒಂದು ಚಿಕ್ಕ ಆಂಜನೇಯನ ದೇವಾಲಯವಿದೆ. ಪೂರ್ವದಲ್ಲಿ ಈ ಬಾವಿಗೆ ಕೆಲವು ಮಾರುಗಳ ದೂರದಲ್ಲಿ ಒಂದು ಶಾಸನವಿದ್ದ ಲಿಂಗಮುದ್ರೆ ಕಲ್ಲು ಇದ್ದಿತಂತೆ. ಸುಮಾರು ಮೂವತ್ತು ವರ್ಷಗಳ ಹಿಂದೆ ಅದು ಇದ್ದಕ್ಕಿದ್ದಂತೆ ಕಾಣದಾಯಿತಂತೆ. ಬಹುಶಃ ಈ ಶಾಸನವಿದ್ದಿದ್ದರೆ ಕಟ್ಟೆ, ಬಾವಿ ಮತ್ತು ಗುಡಿಗಳಿಗೆ ಸಂಬಂಧಿಸಿದಂತಹ ಕೆಲವಾದರೂ ಅಮೂಲ್ಯ ಸಂಗತಿಗಳು ಬೆಳಕಿಗೆ ಬರುತ್ತಿದ್ದವೋ ಏನೋ ? ಈ ವಾಡೆಬಾವಿ ಈಗ್ಗೆ ಸುಮಾರು 20-25 ವರ್ಷಗಳಿಂದ ಹಾಳು ಬಿದ್ದಿದೆ. ಬಾವಿಯ ಬಹುಭಾಗ ಕಸಕಡ್ಡಿ ಕಲ್ಲುಮಣ್ಣುಗಳಿಂದ ತುಂಬಿದೆ. ಈ ಬಾವಿ ಹಿಂದೆ ಇಡೀ ಹಳ್ಳಿಗೆ ಸಿಹಿನೀರು ದೊರಕಿಸುವ ಏಕೈಕ ಆಸರೆಯಾಗಿತ್ತೆಂದು ಅಲ್ಲಿನ ಗ್ರಾಮಸ್ಥರಿಂದ ಖಚಿತಪಡುತ್ತದೆ. ಹೊನ್ನುಣುಸಯ್ಯ ಮತ್ತು ಹೊಂಬಾಳಮ್ಮ ಎಂಬ ಕುಂಬಾರ ದಂಪತಿಗಳು ಈ ಬಾವಿಯ ಜೀರ್ಣೋದ್ಧಾರ ಕಾರ್ಯ ಮಾಡಿಸಿದವರೆಂದು ಅಲ್ಲಿನ ಕೆಲವು ಹಿರಿಯರು ಅಭಿಪ್ರಾಯಪಡುತ್ತಾರೆ. ಹಾಳು ಬಿದ್ದಿರುವ ಈ ಬಾವಿಯ




ವಾಡೆ ಬಾವಿಯ ಕಳಸ ಬಳೆಯ ಮುಂಭಾಗದ ದೃಶ್ಯ



ವಾಡೆ ಬಾವಿಯ ಕಳಸ ಬಳೆಯ ಹಿಂಭಾಗದ ಮುಖ



ಶಾಸನ ಭಾಗ—1



ಶಾಸನ ಭಾಗ—2

ನಿರ್ಮಾತೃಗಳು ಮೇಲೆ ತಿಳಿಸಿದ ಕುಂಬಾರ ಮನೆತನದ ಪೂರ್ವಜರೇ ಎಂದು ಹೇಳುತ್ತಾರೆ. ಈಗ ಹರೇಗೊಂಡನಹಳ್ಳಿಯಲ್ಲಿ ಈ ಮನೆತನದವರಾರೂ ನೆಲೆಸಿಲ್ಲ. ಸಿಹಿನೀರಿನ ಈ ಬಾವಿ ಕುಂಬಾರರ ಒಡೆತನಕ್ಕೊಳಪಟ್ಟಿದ್ದರೂ ಹರಿಜನರನ್ನುಳಿದು ಹಳ್ಳಿಯ ಇತರ ಎಲ್ಲ ಜನಾಂಗದವರೂ ಕುಡಿಯುವ ನೀರಿಗೆ ಈ ಬಾವಿಯನ್ನೇ ಬಳಸುತ್ತಿದ್ದರು.

ಶಾಸನವಿರುವ ವಾಡೆಬಾವಿಯ ಮೇಲಿನ ಕಳಸಬಳೆಯ ಉದ್ದ 2′7″ ಬಳೆಯ ಕಂಠಭಾಗದ ಸುತ್ತಳತೆ 9′. ಬಳೆಯ ಮಧ್ಯದಲ್ಲಿ 9½′. ಶಾಸನದ ಮೊದಲ ಸಾಲಿನ ಉದ್ದ 8′4⅛″. ಎರಡನೆಯ ಸಾಲು ಸುಮಾರು 2′ಗಳಷ್ಟು ಉದ್ದವಿದೆ. ಬಳೆಯ ಕಂಠ ಸುಮಾರು 4½″ ಗಳಿಂದ 5″ ದಪ್ಪವಿದೆ. ಉಳಿದಂತೆ ಬಳೆಯ ದಪ್ಪ 2″. ಕಳಸಬಳೆಯ ಶಾಸನಭಾಗದ ಕೆಳಗೆ ದಿಂಡುಕಟ್ಟುಗಳ ಹೊರತಾಗಿ ಕಲೆಯ ಕುಸುರಿ ಕೆಲಸವನ್ನೂ ಇಲ್ಲಿ ಕಾಣಬಹುದು. ಸರಪಳಿಯಂತಹ ಕೊಂಡಿಗಳನ್ನು ಕೂಡಿಸುವ ಮಧ್ಯದಲ್ಲಿ ಎಲೆ ಮತ್ತು ಕಾಯಿಯಂತಹ ಆಕೃತಿಗಳನ್ನು ಬಳೆಯ ಸುತ್ತಲೂ ಬಿಡಿಸಿದ್ದಾರೆ. ಇದಕ್ಕಿಂತ ಹೆಚ್ಚಿನ ಗಮನ ಸೆಳೆಯತಕ್ಕದ್ದೆಂದರೆ ಕಳಸಬಳೆಯಮೇಲೆ ಪೂರ್ವ ಮತ್ತು ದಕ್ಷಿಣ ಕಡೆಗಿರುವ ಪ್ರತಿಮೆಗಳು. ಸಾಮಾನ್ಯವಾಗಿ ಅನೇಕ ಶಾಸನ ಗಳಲ್ಲಿ ಕೆತ್ತಿರುವಂತಹ ಸೂರ್ಯ, ಚಂದ್ರ ಮತ್ತು ಶಿವಲಿಂಗದ ಪ್ರತಿಮೆಗಳನ್ನು ಈ ಕಳಸಬಳೆಯಮೇಲೆ ಪೂರ್ವದಿಕ್ಕಿನಲ್ಲಿ ಕೆತ್ತಿದ್ದಾರೆ. ಸೂರ್ಯ ಮತ್ತು ಚಂದ್ರರ ಕೆಳಭಾಗದ ಮಧ್ಯದಲ್ಲಿ ಶಿವಲಿಂಗವಿದೆ. ಸೂರ್ಯ, ಚಂದ್ರರ ಕೆಳಗೆ ಎರಡು ಸರ್ಪ ಗಳನ್ನು ಬಿಡಿಸಿದ್ದಾರೆ. ಶಿವಲಿಂಗದ ಬಲಭಾಗಕ್ಕೆ ಚಂದ್ರ ಮತ್ತು ಸರ್ಪಗಳ ಕೆಳಗೆ ಮುದ್ದಾದ ಒಂದು ನಂದಿ(ಬಸವ)ಯಿದೆ. ಶಿವಾಲಯಗಳಲ್ಲಿ ಶಿವಲಿಂಗದ ಎದುರಿಗೆ ಬಲಗಾಲನ್ನು ಮುಂದೆ ಚಾಚಿ ಕುಳಿತಿರುವ ನಂದಿಯ ವಿಗ್ರಹವನ್ನು ಇದು ಹೋಲುತ್ತದೆ. ದಕ್ಷಿಣ ಭಾಗದಲ್ಲಿ ಒಂದು ಚೌಕಟ್ಟಿನೊಳಗೆ ಭಿನ್ನವಾದ ಒಂದು ಗಣಪತಿಯ ಮೂರ್ತಿಯಿದೆ. ಇನ್ನೊಂದು ಚೌಕಟ್ಟಿನಲ್ಲಿ ಆಂಜನೇಯನ ಪ್ರತಿಮೆ ಇದ್ದುದಾಗಿ ಹೇಳುತ್ತಾರೆ. ಆದರೆ ಈಗ ವಿಕಾರಗೊಂಡಿರುವ ಭಗ್ನಗಣಪತಿ ಯನ್ನುಳಿದು ಮತ್ತೊಂದು ಚೌಕಟ್ಟಿನೊಳಗೆ ಯಾವುದೋ ದೇವರ ವಿಗ್ರಹವಿದ್ದಿತೆಂದು ಮಾತ್ರ ಊಹಿಸಲನುವಾಗುವಂತೆ ಕೆಲವು ಗುರುತುಗಳು ಮಾತ್ರ ಉಳಿದಿವೆ.

ಶಾಸನದ ಲಿಪಿಯನ್ನು ಹವ್ಯಾಸಿ ಲಿಪಿಕಾರನೊಬ್ಬ ಬರೆದಿರಬಹುದೆಂದು ಊಹಿಸ ಬಹುದು. ವೃತ್ತಿ ಲಿಪಿಕಾರನಾಗಿದ್ದರೆ ಅಕ್ಷರಗಳ ಆಕಾರದಲ್ಲಿ ಏಕತೆಯನ್ನು ಉಳಿಸಿ ಕೊಳ್ಳುವ ಸಾಧ್ಯತೆ ಇತ್ತೆನ್ನುವುದು 'ಬೈರಶೆಟ್ಟಿಕುಮರ' ಎಂಬ ಪ್ರಯೋಗದ ಜೊತೆಗೇ 'ಕಂಮಂಣಶೆಟ್ಟಿಕುಮಾರ ಎಂಬ ಸ್ಪಷ್ಟಪ್ರಯೋಗವಿರುವುದೂ ಸಹ ಈ ಊಹೆಗೆ ಆಧಾರವಾಗಿದೆ. ಎರಡನೆಯ ಸಾಲಿನ ಪ್ರಾರಂಭದ ಹಿಂದಕ್ಕಿರುವ "ರತ" ಎಂಬ ಅಕ್ಷರಗಳ ಅರ್ಥ ಸ್ಫುಟವಾಗಿಲ್ಲ.

ಶಾಸನದ ಕಾಲದ ಬಗ್ಗೆ ನಿಖರವಾಗಿ ಹೇಳುವುದು ಸಾಧ್ಯವಾಗಿಲ್ಲ. ಶಾಸನದ ಲಿಪಿಯನ್ನು ಮೇಲ್ನೋಟಕ್ಕೆ ಗಮನಿಸಿದರೆ ಪ್ರಾಯಶಃ 19–20 ನೆಯ ಶತಮಾನಕ್ಕೆ ಸೇರಿದ್ದೆಂದು ಹೇಳಬಹುದು. "ಬಹುಳ" ಎಂಬಲ್ಲಿ ಪ್ರಯೋಗಿಸಿರುವ "ಹು" ಸುಮಾರು ವಿಜಯನಗರದ ಕಾಲದ ಲಿಪಿಯನ್ನು ಹೋಲುತ್ತದೆ. ಈ ಶಾಸನವನ್ನು ಕನ್ನಡಲಿಪಿ ಸಂಪೂರ್ಣ ವಿಕಾಸ ಹೊಂದಿದ ಕಾಲದಲ್ಲಿ ಬರೆದಿರುವಂತೆ ಕಂಡುಬಂದರೂ ಹು, ತ್ಸ, ಣ, ವಿ ಇಂತಹ ಕೆಲವು ಅಕ್ಷರಗಳಿಂದಾಗಿ ಈ ಶಾಸನ ಕಾಲವನ್ನು 18ನೆಯ ಶತಮಾನದಷ್ಟು ಹಿಂದಕ್ಕೂ ಎಳೆಯಬಹುದು. ಈ ಶಾಸನದ ನಿರ್ದಿಷ್ಟ ದಿನಾಂಕವನ್ನು ಪತ್ತೆಹಚ್ಚಲು ಇರುವ ತೊಂದರೆಯೆಂದರೆ ಶಕವರ್ಷದ ಉಲ್ಲೇಖವಿಲ್ಲದಿರುವುದು. ದುರ್ಮುಖಿನಾಮ ಸಂವತ್ಸರ ಕ್ರಮವಾಗಿ ಕ್ರಿ.ಶ. 1825, 1884, 1943 ರಲ್ಲಿ ಬರುವುದಾಗಿ ಅಲೆಗ್ಸಾಂಡರ್ ಕನ್ನಿಂಗ್‌ಹ್ಯಾಂರವರ ಗ್ರಂಥದಿಂದ[5] ತಿಳಿದು ಬರುತ್ತದೆ. ಸಂಬಂಧಿಸಿದ ವಿವರಗಳು ಸಾಕಷ್ಟು ಈ ಗ್ರಂಥದಲ್ಲಿ ದೊರಕದ ಕಾರಣ ಈ ದಿನಾಂಕಗಳಿಂದ ಹೆಚ್ಚಿನ ಉಪಯೋಗವಾಗಲಿಲ್ಲ. ಎಲ್. ಡಿ. ಸ್ವಾಮಿಕಣ್ಣು ಪಿಳ್ಳೆಯವರ ಪಂಚಾಂಗ[6]ದಲ್ಲಿ ಕ್ರಿ.ಶ. 1706, ಆಗಸ್ಟ್ 13ನೆಯ ಮಂಗಳವಾರ ಶಾಸನದಲ್ಲಿ ಹೇಳಿರುವ ದಿನಾಂಕದೊಂದಿಗೆ ತುಂಬ ಸ್ಪಷ್ಟವಾಗಿ ಹೋಲುತ್ತದೆ. ಕ್ರಿ.ಶ. 1766 ಆಗಸ್ಟ್ 21, ಮತ್ತೊಂದು ದುರ್ಮುಖಿ ಬಂದರೂ ಗುರುವಾರ ಆಗಿರುವುದರಿಂದ ನಂಬಲರ್ಹವಾಗಿಲ್ಲ. ಕ್ರಿ.ಶ. 1896ನೆಯ ಆಗಸ್ಟ್ 24, ಸೋಮವಾರ, ಶಾ.ಶ. 1818, ವಿಕ್ರಮ 1952ರಲ್ಲಿಯೂ ದುರ್ಮುಖಿ ಸಂವತ್ಸರ ಬರುವುದಾದರೂ ಶಾಸನದಲ್ಲಿ ಮಂಗಳವಾರದ ಉಲ್ಲೇಖವಿರುವುದರಿಂದ ಇದೂ ಸಹ ವಿಶ್ವಾಸಾರ್ಹವಲ್ಲ[7]. ಕ್ರಿ.ಶ. 1956ರ ಆಗಸ್ಟ್ 21 ವಾಡೇಬಾವಿಯ ಶಾಸನದ ಕಾಲವನ್ನು ಹೋಲುವುದಾದರೂ ತೀರ ಇತ್ತೀಚಿನ ಶಾಸನ ಇದಲ್ಲವೆಂದು ಎಲ್ಲ ದೃಷ್ಟಿಯಿಂದಲೂ ತಳ್ಳಿಹಾಕಬಹುದು. ಹರೇಗೊಂಡನಹಳ್ಳಿಯ ಜನರು ಹೇಳುವ ಪ್ರಕಾರ ಇದು ಕನಿಷ್ಠ 100 ವರ್ಷಗಳಷ್ಟು ಹಿಂದಿನದು. ಕ್ರಿ.ಶ. 1706 ಸದ್ಯಕ್ಕೆ ಈ ಶಾಸನದ ಕಾಲವೆಂದು ಇಟ್ಟುಕೊಳ್ಳಬಹುದು.

ಕಳಸಬಳೆಯ ಮೇಲಿರುವ ಶಾಸವನ್ನು ಹಸಿಯಿದ್ದಾಗಲೇ ಕೊರೆದು ನಂತರ ಸುಟ್ಟಿದ್ದಾರೆ. ಇದು ಎಲ್ಲೆಡೆಯೂ ಕಂಡುಬರುವ ಸಾಮಾನ್ಯ ನಿಯಮ. ಸೂರ್ಯ, ಚಂದ್ರ, ಶಿವಲಿಂಗ ಮತ್ತು ನಂದಿಯ ಪ್ರತಿಮೆಗಳು ಬಳೆಯೊಂದಿಗೇ ಸೇರಿಕೊಂಡಿವೆ. ಗಣಪತಿ ಮತ್ತು ಆಂಜನೇಯರ ಪ್ರತಿಮೆಗಳನ್ನು ಬೇರೆಯಾಗಿಯೇ ಮಾಡಿ ಹಸಿಯಿರುವಾಗಲೇ ಭದ್ರವಾಗಿ ಅಂಟಿಸಿದ್ದಿರಬಹುದು. ಈಗ ಗುರುತಷ್ಟೇ ಉಳಿದಿರುವ ಆಂಜನೇಯನ ಪ್ರತಿಮೆಯಿದ್ದ ಭಾಗವನ್ನು ಗಮನಿಸಿದಾಗ ಈ ಅಂಶ ವ್ಯಕ್ತವಾಗುತ್ತದೆ.

ಅಡಿ ಟಿಪ್ಪಣಿಗಳು

1. ಎಂ. ಚಿದಾನಂದಮೂರ್ತಿ ಮತ್ತು ಆರ್. ಶೇಷಶಾಸ್ತ್ರಿ : 'ಸಂತೇಕಲ್ಲಹಳ್ಳಿಯಲ್ಲಿ ಐತಿಹಾಸಿಕ ಪ್ರಾಗೈತಿಹಾಸಿಕ ಅವಶೇಷಗಳು' (ಪ್ರಜಾವಾಣಿ, 21-10-1973).
2. ಕ.ಸಾ.ಪ.ನ. ಕನ್ನಡ ನಿಘಂಟು ಎರಡನೆಯ ಸಂಪುಟದಲ್ಲಿ ಈ ಅರ್ಥವಿದೆ : ಗಡಿಗೆಬಾವಿ (ನಾ). ಓಡೆಯ ಬಳಿಯಲ್ಲಿ ಕಟ್ಟಿದ ಬಾವಿ ; ಓಡೆಬಾವಿ : ಗಡ್ಡಂಮೀಸೆಗಳು ಬೇಯಲು ಸಮೀಪದ ಗಡಿಗೆ ಬಾವಿಗಳೊಳಗೆ ಧುಮ್ಮಿಕ್ಕುವರು ತಮ್ಮಯ ಪ್ರಾಣ ಸಂಕಟಕೆ ಬಸವು. 56-38
3. ಸಾಮಾನ್ಯವಾಗಿ ಬಾವಿಯ ಸುತ್ತ ರಕ್ಷಣೆಗಾಗಿ ಕಲ್ಲಿನ ಇಲ್ಲವೆ ಗಾರೆಯ ಕಟ್ಟೆ ಕಟ್ಟುತ್ತಾರೆ. ಆದರೆ ಈ ಬಾವಿಯ ರಕ್ಷಣೆಗಾಗಿ ಮಣ್ಣಿನಿಂದ ಮಾಡಿರುವ ಗಟ್ಟಿಯಾದ, ವಾಡೆಯ ಮೇಲ್ಭಾಗದ ಆಕಾರವನ್ನು ಹೋಲುವ ಒಂದು ಬಳೆಯನ್ನು ಹಾಕಿದ್ದಾರೆ. ಇದನ್ನೇ ಶಾಸನದಲ್ಲಿ ಕಳಸಬಳೆ ಎಂದು ಕರೆದಿರುವುದು.
4. ಮಾಹಿತಿ ದೊರಕಿಸಿದ ಹಿರಿಯ ಕರಿಯುಪ್ಪಜ್ಜ. ವಯಸ್ಸು ಸುಮಾರು 80 ವರ್ಷಗಳು.
5. Book of Indian Eras—Alexander Cunningham. ಈ ಗ್ರಂಥವನ್ನು ಪರಿಶೀಲಿಸಲು ಕ.ಸಾ.ಪ.ನ ಶಾಸನವಿಭಾಗದ ಶ್ರೀ ದೇವರಕೊಂಡರೆಡ್ಡಿಯವರು ನೆರವಾಗಿದ್ದಾರೆ.
6. Indian Ephimeris: L.D. Swamy Kannu Pillai, Vol. VI.
7. ಶ್ರೀ ಅಚ್ಚಪ್ಪಶಾಸ್ತ್ರಿ ಎಂಬುವರು ಹೊಂದಿದ್ದ ಹಳೆಯ ಪಂಚಾಂಗದಿಂದ ಈ ದಿನಾಂಕ ತಿಳಿದು ಬಂದಿತು.

ಮಜಲುಗಳು

ಬಿದರಹಳ್ಳಿ ನರಸಿಂಹಮೂರ್ತಿ

ಮೊನ್ನೆ : ಪರಿವೆಯಿಲ್ಲದೆ ಪ್ರೀತಿಸಿ ನಿಂತ
ಬೆಟ್ಟದ - ಜೀವಗಳ ನಡುವೆ
ಅಂತಃಕರಣವಾಹಿನಿ
ತುಂಬಿ ಹರಿಯುವುದನ್ನ
ಇಡೀ ಆಕಾಶ
ಮೌನವಾಗಿ ಗಮನಿಸಿತು
ಮುಗ್ಧ ಗಿಡಗಂಟೆಗಳು
ಕೊರಳೆತ್ತಿ ಕಂಡು
ಮೆಚ್ಚಿ ಪಿಸುಗುಟ್ಟಿಕೊಂಡವು

ನಿನ್ನೆ : ಕತ್ತಲುದ್ದಕ್ಕೂ ಕಾದದ್ದಕ್ಕೆ
ಮೆಲ್ಲಗೆ ಬೆತ್ತಲಾಯಿತು ಬೆಚ್ಚನೆ ಬೆಳಕು
ಬಯಕೆ ಬಿಮ್ಮನೆ ಬಿಗಿದು
ಹೆಣೆದುಕೊಂಡ ಜೀವಗಳು ಶೃತಿ ಹಿಡಿದು
ಬಿಸಿಯಾಗಿ ಲಿಂಗೈಕ್ಯವಾದವು
ಗುಹೇಶ್ವರ ನೆಟ್ಟಲಗಿಸತುದಿ
ಅಂತರಂಗವನ್ನೆಲ್ಲ ಕೊರೆದು
ಕೊನೆ ಮುಟ್ಟಿದ ಕ್ಷಣ
ಹೂ-ಮಳೆಯಾಗುವ ನೋವಿನ
ದಿವ್ಯ ಶಿವಾನುಭವ

ಇಂದು : ಕೊನೆ ಮೊದಲಿಲ್ಲದ
ಜೀವನ-ಕಾವ್ಯದ
ನಡುವೆಲ್ಲೊ ಮಿಂಚಿನಿಂತ
ಸುಂದರ ದ್ವಿಪದಿ
ಗೊಂದು ಅನುಪ್ರಾಸ ಮೂಡಿಬಂದು
ಸಾರ್ಥಕ ತ್ರಿಪದಿ
ಜೀವ ಭಾವ ಹಿಗ್ಗಿ
ನೆರೆಹೊರೆ ಸಾಲುಗಳ ಏರಿಳಿತ
ಗಳೊಂದಿಗೆ ಮೇಳವಿಸಿ
ಕಾವ್ಯದ ಮೂಲ-ಧ್ವನಿಯೆಡೆಗೆ
ಹದವಾಗಿ ಹರಿಯುವ
ಹಂಬಲ

ಶ್ರೀ ಮಹಿಪತಿರಾಯರ ಕಾಲ ವಿಚಾರ

ಕೃಷ್ಣ ಕೊಲ್ಹಾರಕುಲಕರ್ಣಿ

ಹರಿದಾಸರಲ್ಲಿ ಪ್ರಮುಖರೆನಿಸಿದ ಕಾಖಂಡಕೆಯ ಶ್ರೀ ಮಹಿಪತಿರಾಯರ ಪ್ರತಿಭೆ ದೊಡ್ಡದು. ಭಾರತದ ಶ್ರೇಷ್ಠ ತತ್ವಜ್ಞಾನಿ ಶ್ರೀ ಗುರುದೇವ ರಾನಡೆಯವರು ಹೇಳುವಂತೆ, 'One of the greatest of Karnataka Mystics and for that matter of whole world!' ಶ್ರೀ ರಾನಡೆಯವರು ತಮ್ಮ Pathway to God in Kannada Literature' ಎಂಬ ಗ್ರಂಥದಲ್ಲಿ ಶ್ರೀ ಮಹಿಪತಿರಾಯರ ಕುರಿತು ಇನ್ನೂ ಹಲವಾರು ಸಲ ತುಂಬು ಹೃದಯದಿಂದ ಹೇಳಿದ್ದಾರೆ. 'Mahipati is one of the rare types of Mystics', 'He is one of the greatest of Kannada poets' ಇತ್ಯಾದಿ.

ಇಂಥ ಒಬ್ಬ ಮಹಾನ್ ವ್ಯಕ್ತಿಯ ಕೃತಿಗಳನ್ನು ಸಂಪಾದಿಸಿ ಕಳೆದ ವರುಷ ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯವರು 'ಶ್ರೀ ಮಹಿಪತಿ ರಾಯರ ಕೃತಿಗಳು' ಎಂಬ ಬೃಹದ್ ಗ್ರಂಥವನ್ನು ಪ್ರಕಟಿಸಿದ್ದಾರೆ. ಕನ್ನಡಿಗರ ಅಭಿನಂದನೆಗೆ ಪಾತ್ರರಾಗಿದ್ದಾರೆ. ಕೃತಿಗಳನ್ನು ಸಂಪಾದಿಸುವುದರ ಜೊತೆಗೆ ಡಾ. ಜಿ. ವರದರಾಜರಾಯರು ಶ್ರೀ ಮಹಿಪತಿರಾಯರ ಸಂಕ್ಷಿಪ್ತ ಚರಿತ್ರೆಯನ್ನೂ ಆಧಾರ ಸಹಿತವಾಗಿ ಪೀಠಿಕೆಯಲ್ಲಿ ಪ್ರಕಟಿಸಿದ್ದಾರೆ. ಅದರ ಅವಲೋಕನ ಹಾಗೂ ಮುಖ್ಯವಾಗಿ ಶ್ರೀ ಮಹಿಪತಿರಾಯರ ಕಾಲ ವಿಚಾರದ ಕುರಿತು ಚರ್ಚಿಸುವುದು ಈ ಲೇಖನದ ಉದ್ದೇಶವಾಗಿದೆ.

ಸಂಕ್ಷಿಪ್ತವಾಗಿ ಅವರ ಜೀವನ ಚರಿತ್ರೆ ಇಂತಿದೆ. 'ವಿಜಾಪುರದಲ್ಲಿ ಜನಿಸಿದ ರಾಯರ ಮೂಲ ಹೆಸರು ಗುರಾಚಾರ್ಯರೆಂದು, ಅವರ ತಂದೆಯ ಹೆಸರು 'ಕೋನೇರಿ ರಾಯ'. ಸಂಚಾರಾರ್ಥವಾಗಿ ಅವರು ಐಗಳಿ ಗ್ರಾಮಕ್ಕೆ ಬಂದರೆಂದು ವದಂತಿ. ಬಡತನದಲ್ಲಿಯೇ ಬೆಳೆದವರು. ಚಿಕ್ಕಂದಿನಲ್ಲಿ ಸಂಸ್ಕೃತ ಅಭ್ಯಾಸ ಮಾಡಿದ್ದರು. ತಮ್ಮ ಪುರಾಣಿಕ ವೃತ್ತಿಯಿಂದ ಆಗಿನ ಆದಿಲ್ ಶಾಹಿ ರಾಜನ ಪ್ರೀತ್ಯಾದರಗಳಿಗೆ ಪಾತ್ರರಾಗಿ ಮುಂದೆ ದಿವಾನ (?) ಪಟ್ಟಕ್ಕೇರಿದರು. ಸುಖವಾಗಿ ಸಂಸಾರ ಮಾಡುತ್ತಿದ್ದ ಅವರು ಚಿಕ್ಕ ಕಾರಣದಿಂದ ವೈರಾಗ್ಯ ಹೊಂದಿ ಸಾರವಾಡದ ಭಾಸ್ಕರ ಸ್ವಾಮಿಗಳ ಶಿಷ್ಯತ್ವ ವಹಿಸಿ ಸರ್ವಸಂಗ ಪರಿತ್ಯಾಗ ಮಾಡಿ, ಯೋಗಿಯಾಗಿ ಕಾಖಂಡಕಿ ಗ್ರಾಮದಲ್ಲಿ ವಾಸಮಾಡಿದರು. ಅವರಿಗೆ ಇಬ್ಬರು ಗಂಡು

ಮಕ್ಕಳಿದ್ದರು. ಮೊದಲನೆಯವ ದೇವರಾಯ, ಲೆಕ್ಕಣಿಕೆ ಹಿಡಿದು ಜಾಲವಾದಿಯಲ್ಲಿ 'ಡೋಣ ಶಿವಾಜಿ' ಎಂದು ಹೆಸರಾದ. ಎರಡನೆಯವ ಕೃಷ್ಣರಾಯ–ತಂದೆಯ ತಂಬೂರಿ ಹಿಡಿದು ದಾಸ ಪರಂಪರೆಯನ್ನು ಮುಂದುವರೆಸಿದ. ಕಾಖಂಡಕಿಯಲ್ಲಿದ್ದ ಇಂದಿನ ಹರಿದಾಸ ಮನೆತನವು ಕೃಷ್ಣರಾಯರಿಂದ ಮುಂದುವರೆದದ್ದು. ಇಂದಿಗೂ ವರ್ಷಂಪ್ರತಿ ಶ್ರೀ ಮಹಿಪತಿರಾಯರ ಆರಾಧನೆಯು ಮಾರ್ಗಶೀರ್ಷ ಶುಕ್ಲಪಕ್ಷದ ಪ್ರತಿಪದೆಯಂದು ಕಾಖಂಡಕಿಯಲ್ಲಿದ್ದ ಅವರ ವೃಂದಾವನದ ಪೂಜೆಯೊಂದಿಗೆ ವಿಜೃಂಭಣೆಯಿಂದ ಜರುಗುತ್ತದೆ. ಸುತ್ತಲಿನ ಸಾವಿರಾರು ಭಕ್ತರು ನೆರೆಯುತ್ತಾರೆ. ಶ್ರೀ ಮಹಿಪತಿರಾಯರು ನಿಜವಾಗಿ ಕಾಲವಾದದ್ದು ವಿಜಾಪುರ ಜಿಲ್ಹೆಯ ಇನ್ನೊಂದು ಹಳ್ಳಿ ಕೊಲ್ಹಾರದಲ್ಲಿ. ಕೃಷ್ಣೆಯದಡದಲ್ಲಿ ಇಂದಿಗೂ ರಾಯರದೆಂದು ಹೇಳಿ ಕೊಳ್ಳುವ ಬಯಲು ವೃಂದಾವನ ಇದೆ.

ಈ ಎಲ್ಲ ವಿಷಯುಗಳನ್ನೊಳಗೊಂಡ ರಾಯರ ವಿಸ್ತಾರವಾದ ಚರಿತ್ರೆ, ಕೃತಿಗಳ ಪರಿಚಯ ಮತ್ತು ಕೃತಿಗಳ ಸಂಕಲನದಿಂದ ಕೂಡಿದ್ದ ಗ್ರಂಥಗಳ ಪ್ರಕಟನ ವಿವರ ಇಂತಿದೆ.

	ಹೆಸರು	ವರ್ಷ
(1)	ಮಹಿಪತಿದಾಸರ ಕೀರ್ತನ ಸಂಗ್ರಹ (ಕೀರ್ತನೆಗಳಿಂದ ಮೊದಲು ಬರುವ ರಾಯರ ಚರಿತ್ರೆ) ಲೇಖಕರು : ಶ್ರೀ ಹರಿದಾಸ ಅಣ್ಣಪ್ಪಯ್ಯ	1957
(2)	ಸ್ವಾನಂದ ಸಾಮ್ರಾಜ್ಯ ಲೇಖಕರು : ಶ್ರೀ ಮ. ಶ್ರೀ ದೇಶಪಾಂಡೆ	1962
(3)	ಸೇವಾತತ್ವ ಲೇ : ಸಂ: ಶ್ರೀ ಹರಿದಾಸ ಶ್ರೀಪತಯ್ಯ	1963
(4)	ಕೀರ್ತನೆಗಳ ಸಂಗ್ರಹ (ಸಂಪುಟ-2) ಸಂಗ್ರಾಹಕರು : ಡಾ॥ ಕೆ. ಎ. ಕಾಖಂಡಕಿ	1972
(5)	ಶ್ರೀ ಮಹಿಪತಿರಾಯರ ಕೃತಿಗಳು ಸಂ : ಡಾ. ಜಿ. ವರದರಾಜರಾವ್ ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾನಿಲಯ	1976

ಇವಲ್ಲದೆ ಒಂದಿಷ್ಟು ಬಿಡಿ ಲೇಖನಗಳೂ ಬಂದಿವೆ.

1) ಶ್ರೀ ಬೇಲೂರು ಕೇಶವದಾಸರ 'ಶ್ರೀ ಕರ್ನಾಟಕ ಭಕ್ತವಿಜಯ' ದಲ್ಲಿ ಬರುವ 'ಶ್ರೀ ಮಹಿಪತಿರಾಯರ ಚರಿತ್ರೆ. (ಪು. 540–566)

2) ಜೀವನ ಮಾಸಪತ್ರಿಕೆಯ 2ನೇ ಸಂಪುಟದಲ್ಲಿ (ಪು. 196) 'ಮಹಿಪತಿ ದಾಸ' ಎಂಬ ಶ್ರೀ ಮ. ಶ್ರೀ. ದೇಶಪಾಂಡೆಯವರ ಲೇಖನ.

3) 'A chapter on Mahipatidasa' ಪ್ರೊ. ಡಿ. ಎನ್. ಅವಳೀಕರ (The journal of the Karnatak University Vol. III No. 2 June 1959)

4) 'ಮಹಾಮಹಿಮ ಮಹಿಪತಿದಾಸರು' ಕರ್ಮವೀರ ವಾರಪತ್ರಿಕೆಯ 11–11–1962ರ ಸಂಚಿಕೆಯಲ್ಲಿ ಕೃಷ್ಣ ಕೊರ್ಪ್ಪುರ ಕುಲಕರ್ಣಿ ಲೇಖನ.

5) ಶ್ರೀ ಮಹಿಪತಿರಾಯರ ಕಾಲ ವಿಚಾರ— 'ಸುಬೋಧ' ಫೆಬ್ರುವರಿ 1965ರ ಸಂಚಿಕೆಯ ಲೇಖನ.

ಇದಿಷ್ಟು ಈ ಶತಮಾನದಲ್ಲಿ ಶ್ರೀ ಮಹಿಪತಿರಾಯರ ಕುರಿತು ಬಂದ ಸಾಹಿತ್ಯ. ಇವುಗಳಿಗೆ ಆಧಾರವಾಗಿರುವ ಮತ್ತು ರಾಯರ ಚರಿತ್ರೆಗೆ ಸಹಾಯವಾಗುವ ಹಳೆಯ ಬಾಹ್ಯ ಪ್ರಮಾಣಗಳು ಎರಡು ಕಡೆಗೆ ದೊರೆಯುತ್ತವೆ.

1) ಸುಮಾರು ಎರಡು ನೂರು ವರುಷಗಳ ಹಿಂದೆ ಶ್ರೀ ಮಹಿಪತಿರಾಯರ ಮರಿಮಕ್ಕಳಾದ ಶ್ರೀಪತಿ ತನುಜರು ಬರೆದ— 'ಶ್ರೀ ಗುರು ಮಹಿಪತಿ ರಾಯರ ಸ್ತೋತ್ರ' ಎಂಬ 20 ಪದ್ಯಗಳುಳ್ಳ ಕಿರುಕಾವ್ಯ. ರಾಯರ ಕುರಿತು ಸಾಕಷ್ಟು ಪರಿಚಯ ಈ ಕೃತಿಯಿಂದ ದೊರೆಯುತ್ತದೆ.

2) ರುಕ್ಮಜದಾಸನ ಗುರುಮಾಲಿಕೆಯಲ್ಲಿ ಬರುವ ಮಹಿಪತಿದಾಸರ ಚರಿತ್ರೆ (ಅಪೂರ್ಣ) ಮರಾಠಿ ಓವ ಪದ್ಧತಿಯಲ್ಲಿ ಬರೆದಿದೆ.[1]

ಇದಲ್ಲದೆ ವಿಜಾಪುರ ಜಿಲ್ಲೆಗೆ ಸಂಬಂಧಿಸಿದ 'Bombay Gazetteer' ದಲ್ಲಿ ಕೂಡ ರಾಯರ ಉಲ್ಲೇಖ ಬಂದಿದೆ.[2]

ಈ ಎಲ್ಲ ಗ್ರಂಥಗಳು, ಬಿಡಿಲೇಖನಗಳು ಹಾಗು ಕಾವ್ಯಗಳಿಂದ ರಾಯರ ಪರಿಚಯ ಸಾಕಷ್ಟಾಗುತ್ತದೆ. ಆದರೆ ರಾಯರ ಕಾಲವಿಚಾರವಾಗಿ 'ಸ್ವಾನಂದ ಸಾಮ್ರಾಜ್ಯ' ಮತ್ತು 'ಸೇವಾತತ್ವ' ಈ ಎರಡು ಗ್ರಂಥಗಳಲ್ಲಿ ಮಾತ್ರ ಬರೆದದ್ದಾಗಿದೆ.

---

1 ರುಕ್ಮಜದಾಸನ ಕಾಲ ಸುಮಾರು 18 ನೆಯ ಶತಮಾನದ ಮಧ್ಯಕಾಲ – A. Chapter on Mahipatidas J.K.U. Vol III No 2 June 59.

2 Bijapur Dist Gazetteer Page No 657 Chapter XIV.

ಮತ್ತು ಇದನ್ನೇ ಇತ್ತೀಚೆಗೆ ಪ್ರಕಟಗೊಂಡ ಮೈಸೂರು ವಿಶ್ವವಿದ್ಯಾಲಯದ 'ಶ್ರೀ ಮಹಿಪತಿರಾಯರ ಕೃತಿಗಳು' ಗ್ರಂಥದಲ್ಲಿ ಸಂಪಾದಕರು ವಿಶೇಷ ಚರ್ಚೆಯಿಲ್ಲದೆ ಒಪ್ಪಿಬಿಟ್ಟಿದ್ದಾರೆ.[3]

ಸುಮಾರಾಗಿ ಈಗ ಪ್ರಚಲಿತವಿದ್ದ ಒಂದು ಮುಖ್ಯ ಅಂಶವೆಂದರೆ ಮಹಿಪತಿ ರಾಯರು ವಿಜಾಪುರದ ಆದಿಲ್‌ಶಾಹಿ ರಾಜ್ಯದಲ್ಲಿ ಇದ್ದರೆನ್ನುವುದು, ಹಾಗು ಮಂತ್ರಿಗಳಾಗಿದ್ದರೆನ್ನುವುದು. ಇದಕ್ಕೆ ಬೇರೆಡೆ ಐತಿಹಾಸಿಕ ಆಧಾರ ಮಾತ್ರ ಇನ್ನೂ ಸಿಕ್ಕಿಲ್ಲವೆಂಬುದು ಗಮನಾರ್ಹವಾಗಿದೆ. ರುಕ್ಮಜದಾಸ ಕೃತ ಮಹಿಪತಿದಾಸರ ಚರಿತ್ರೆಯಲ್ಲಿ ರಾಯರು ಖವಾಸಖಾನನೆಂಬ ಸರದಾರನಲ್ಲಿ ಕರ್ಣಿಕ ವೃತ್ತಿಯಲ್ಲಿದ್ದರು ಎಂದು ಹೇಳಿದೆ.[4]

ರಾಯರ ಮಕ್ಕಳಾದ ಕೃಷ್ಣರಾಯರು ರಚಿಸಿದ 'ಆನಂದ ಲಹರಿ' ಎಂಬ ಖಂಡಕಾವ್ಯದ ಕೊನೆಯಲ್ಲಿ ತಾವು ರಚಿಸಿದ ಕಾಲ, ಮಾಸ, ತಿಥಿಗಳನ್ನು ತಿಳಿಸಿದ್ದಾರೆ.

ಈ ಆಧಾರಗಳಿಂದ ಶ್ರೀ ಮ. ಶ್ರೀ ದೇಶಪಾಂಡೆ ಹಾಗು ಶ್ರೀ ಹರಿದಾಸ ಶ್ರೀಪತಯ್ಯ ಈ ಇಬ್ಬರು ಮಹನೀಯರು ಅನುಕ್ರಮವಾಗಿ ತಮ್ಮ 'ಸ್ವಾನಂದ ಸಾಮ್ರಾಜ್ಯ' ಹಾಗು 'ಸೇವಾತತ್ವ' ಗ್ರಂಥಗಳಲ್ಲಿ ಮಹಿಪತಿರಾಯರ ಕಾಲವಿಚಾರವನ್ನು ಪ್ರಸ್ತಾಪಿಸಿದ್ದಾರೆ. ಇವರೀರ್ವರ ಕಾಲ ನಿರ್ಣಯದಲ್ಲಿ ಅಂತರವಿಲ್ಲ. ಇವರ ಪ್ರಕಾರ.[5]

ಮಹಿಪತಿರಾಯರ ಜನನ	ಸುಮಾರು ಕ್ರಿ. ಶ.	1611
ದಿವಾನರಾದದ್ದು	,,	1635
ಗುರುಗಳ ಅನುಗ್ರಹ	,,	1651
ವಿಜಾಪುರ ತ್ಯಾಗ	,,	1655
ಕಾಖಂಡಕಿಯಲ್ಲಿ ನೆಲೆಸಿದ್ದು	,,	1659
ಮಗ ಕೃಷ್ಣರಾಯರ ಜನನ	,,	1663
ಮಹಿಪತಿರಾಯರ ಮರಣ	,,	1681

ಹೀಗೆ ಸುಮಾರು ಕ್ರಿ. ಶ. 1611 ರಿಂದ 1681ರ ವರೆಗೆ ಅಂದರೆ ಸುಮಾರು 70 ವರುಷಗಳವರೆಗೆ ಜೀವಿಸಿದ್ದರೆಂದು ಶ್ರೀ ದೇಶಪಾಂಡೆಯವರು, ಶ್ರೀ ಶ್ರೀಪತಯ್ಯನವರು ಹೇಳುತ್ತಾರೆ. ಮತ್ತು ಇದನ್ನು ಡಾ॥ ಜಿ. ವರದರಾಜಾರಾವ್ ಅವರು ಒಪ್ಪಿಕೊಳ್ಳುತ್ತಾರೆ.[6]

---

3 ಶ್ರೀ ಮಹಿಪತಿರಾಯರ ಕೃತಿಗಳ :- ಪೀಠಿಕೆ ಪು XX

4 A Chapter on Mahipatidas ಪು. 92

5 ಸ್ವಾನಂದ ಸಾಮ್ರಾಜ್ಯ. ಪುಟ 22-23. ಸೇವಾತತ್ವ, ಪುಟ 8-9

6 ಶ್ರೀ ಮಹಿಪತಿರಾಯರ ಕೃತಿಗಳು, ಪೀಠಿಕೆ pp xx

ಮೊದಲು ಆವರುಗಳು ಆಧರಿಸಿದ ಗ್ರಂಥಗಳನ್ನು ನೋಡೋಣ.

"ಮಹಿಪತಿರಾಯರು ಖವಾಸಖಾನನೆಂಬ ಬಾದಶಹನ ಅಧಿಕಾರಿಯಲ್ಲಿ ಮೊದಲು ಕಾರಕೂನನಾಗಿ ಕೆಲಸ ಮಾಡಹತ್ತಿದರೆಂದು 'ಗುರು ಮಾಲಿಕೆ'ಯು ಹೇಳುತ್ತದೆ. ಈ ಖವಾಸಖಾನನು ವಿಜಾಪುರದಲ್ಲಿ ಕ್ರಿ. ಶ. 1626ರಿಂದ 1656ರ ವರೆಗೆ ಆಳಿದ ಮಹಮ್ಮದಶಹನ ದಿವಾಣನೇ ಇರುವ ಸಂಭವವಿದೆ. ಅವನನ್ನು ಶಾಹನು ಕ್ರಿ. ಶ. 1635ರಲ್ಲಿ ಪಿತೂರನೆಂದು ಕೊಲ್ಲಿಸಿದನು ಎಂದು ಇತಿಹಾಸ ಹೇಳುತ್ತದೆ",[7] ಎಂದು ಶ್ರೀ ದೇಶಪಾಂಡೆಯವರು ಗುರುಮಾಲಿಕೆಯಲ್ಲಿ ಬಂದ ವಿಷಯವನ್ನು ಇತಿಹಾಸದೊಂದಿಗೆ ಜೋಡಿಸಿದ್ದಾರೆ.

ಇತಿಹಾಸದ ಪ್ರಕಾರ ವಿಜಾಪ್ಪುರದ ಎರಡುನೂರು ವರುಷಗಳ ಆದಿಲ್‌ಶಾಹಿ ರಾಜ್ಯದಲ್ಲಿ ಇಬ್ಬರು ಖವಾಸಖಾನರು ಆಗಿಹೋದರು. ಒಬ್ಬ ಖವಾಸಖಾನನು ಶ್ರೀ ದೇಶಪಾಂಡೆಯವರು ಹೇಳಿದ ಮಹಮ್ಮದಶಾಹ (1626–1656) ನಲ್ಲಿ ಇದ್ದದ್ದು ನಿಜ.[8] ಇನ್ನೊಬ್ಬ ಖವಾಸಖಾನನು ಆದಿಲ್‌ಶಾಹಿ ಮನೆತನದ ಕೊನೆಯ ಅರಸರುಗಳಾದ 2ನೆಯ ಅಲಿ ಆದಿಲ್‌ಶಾಹನ (1656–1627) ಮತ್ತು ಸಿಕಂದರ ಆದಿಲ್‌ಶಾಹ (1672–1686) ಇವರ ಆಳ್ವಿಕೆಯಲ್ಲಿ ಇದ್ದನು.[9] ಈ ಇಬ್ಬರು ಖವಾಸಖಾನರಲ್ಲಿ ಮೊದಲನೆಯವನ ಮೂಲ ಹೆಸರು ದೌಲತ್‌ಖಾನ ಎಂದಿತ್ತು. ಮಹಮ್ಮದ ಆದಿಲ್‌ಶಾಹನು ಪಟ್ಟಕ್ಕೆ ಬರುವಲ್ಲಿ ಈತ ಸಹಾಯ ಮಾಡಿದನೆಂದು ಅನಂತರ ಅವನಿಗೆ 'ಖವಾಸಖಾನ' ಎಂಬ ಬಿರುದನ್ನು ಕೊಡಲಾಗಿತ್ತು.[10] ಶ್ರೀ ದೇಶಪಾಂಡೆಯವರು ಹೇಳುವಂತೆ[11] ಈತನು ಬಾದಶಹನಿಂದ ಕೊಲ್ಲಲ್ಪಡಲಿಲ್ಲ. ಕೊನೆಯ ವರೆಗೂ ಬಾದಶಹನ ಪ್ರೀತಿಯಲ್ಲಿದ್ದನು. ಆದರೆ, ಸಿಕಂದರನ ಕಾಲದಲ್ಲಿದ್ದ 'ಖವಾಸ ಖಾನನು' ಕೊಲ್ಲಿಸಲ್ಪಟ್ಟನು. ಅದು ಸುಮಾರು 1674–75ರಲ್ಲಿ ನಡೆದ ಘಟನೆ.[12] "ಗುರು ಮಾಲಿಕೆಯಲ್ಲಿ 'ಮಹಿಪತಿರಾಯರು ಖವಾಸಖಾನನಲ್ಲಿ ಕರ್ಣಿಕ ರಾಗಿದ್ದರೆಂತಲೂ, ಮುಂದೆ ಅವನ ಹಾಗೂ ಬಾದಶಹನ ಪ್ರೀತ್ಯಾದರಗಳಿಗೆ ಪಾತ್ರ ರಾಗಿ ದಿವಾನ ಪಟ್ಟಕ್ಕೆ ಏರಿದರೆಂತಲೂ' ಹೇಳಿದೆ" ಎಂದು ಶ್ರೀ ದೇಶಪಾಂಡೆ ಯವರು ಸ್ವಾನಂದ ಸಾಮ್ರಾಜ್ಯದಲ್ಲಿ ಹೇಳಿದ್ದನ್ನು ಡಾ॥ ವರದರಾಜರಾವ್ ಅನು ಮೋದಿಸುತ್ತಾರೆ.[13] ಆದರೆ ಗುರುಮಾಲಿಕೆಯಲ್ಲಿ ದಿವಾನಪಟ್ಟಕ್ಕೆ ಏರಿದರೆಂದು

---

7 · ಸ್ವಾನಂದ ಸಾಮ್ರಾಜ್ಯ, ಪುಟ 22

8 Bijapur : H. Cousins (1889), ಪು. 119.

9 ಅದೇ, ಪುಟ 119

10 External Relations of Bijapur kingdom —Dr. M. A. Nayeem (Ph.D. thesis) 1973, ಪು. 25.

11 ಸ್ವಾನಂದ ಸಾಮ್ರಾಜ್ಯ, ಪು. 22

12 Bijapur, ಪು. 128.

13 ಶ್ರೀ ಮಹಿಪತಿರಾಯರ ಕೃತಿಗಳು, ಪೀಠಿಕೆ ಪು. xix.

ಹೇಳಿಲ್ಲ. ಒಂದು ದಿನ ಖವಾಸಖಾನನು ಬಾದಶಹನನ್ನು ಕಾಣಲು ರಾಯರಿಗೆ ಹೇಳಿದನು. ಸಂದರ್ಭ ಯಾವುದೋ ಲೆಕ್ಕಪತ್ರದ್ದು. ರಾಯರ ಕೆಲಸದಿಂದ ಬಾದಶಹ ತೃಪ್ತನಾದ ಮತ್ತು ಕೆಲಸದಲ್ಲಿ ಬಡತಿ ಕೊಟ್ಟ ಎಂದಿಷ್ಟೇ ಹೇಳಿದೆ.[14] ಈ ಬಡತಿಯನ್ನು ಕೊಡಿಸುವಲ್ಲಿ ಅಥವ ಕೊಡುವಲ್ಲಿ ಖವಾಸಖಾನದ್ವಯರಲ್ಲಿ ಯಾರು ಹೆಚ್ಚು ಪ್ರಭಾವಿತರಾಗಿದ್ದರು, ಎಂಬುದನ್ನು ನೋಡಬೇಕು. ಮಹಮ್ಮದಶಾಹನ ಕಾಲದಲ್ಲಿದ್ದ ಖವಾಸಖಾನನು ಬಾದಶಹನ ಪ್ರೀತಿಗೆ ಪಾತ್ರನಾಗಿದ್ದನು ಅಷ್ಟೆ. ಆದರೆ ಸಿಕಂದರ ಕಾಲದಲ್ಲಿದ್ದ ಖವಾಸಖಾನನ ಬಗ್ಗೆ ಬರೆಯುವಾಗ ಪೂರ್ವೋಕ್ತ ಹೆನ್ರಿ ಕಸಿನ್ಸ ತನ್ನ ಬಿಜಾಪುರ ಗ್ರಂಥದಲ್ಲಿ—

'Sikandar was a minor of only five year when he ascended the throne. All the evil effects of a minor's rule began to be manifest. Khavas Khan was appointed regent......(ಪುಟ 127). ವಿಜಾಪುರದ ಪೂರ್ಣ ಅಧಿಕಾರ ವಹಿಸಿದ ಸಿಕಂದರನ ಕಾಲದಲ್ಲಿದ್ದ ಖವಾಸಖಾನನಿಗೆ ತನ್ನಲ್ಲಿ ಕರ್ಣಿಕ ವೃತ್ತಿಯಲ್ಲಿದ್ದ ಮಹಿಪತಿರಾಯರನ್ನು ದೊಡ್ಡ ಪದವಿಗೆ ಏರಿಸುವ ಯೋಗ್ಯತೆ ಇದ್ದಿತು. ತನ್ನ ಕೈಯಲ್ಲಿ ಅಧಿಕಾರ ಬಂದ ಕೆಲವೇ ದಿನಗಳಲ್ಲಿ ರಾಯರಿಗೆ ಬಡತಿ ಕೊಟ್ಟಿರಲೂ ಸಾಕು.

ಈ ಕಾರಣಗಳಿಂದ ಮಹಿಪತಿರಾಯರು ದಿವಾಣರೇ ಆಗಿದ್ದರೆ, ಅಥವ ಒಂದು ದೊಡ್ಡ ಹುದ್ದೆಯಲ್ಲಿದ್ದುದೇ ಆಗಿದ್ದರೆ. ಮತ್ತು ಖವಾಸಖಾನ ಎಂಬವನಲ್ಲಿ, ಕರ್ಣಿಕ ವೃತ್ತಿಯಲ್ಲಿದ್ದರೆ ಅದು ಮಹಮ್ಮದ ಶಹನ (1626–1656) ಕಾಲದಲಲ್ಲ. ಸಿಕಂದರನ (1672–1686) ಕಾಲದಲ್ಲಿ ಇದ್ದ ಖವಾಸಖಾನನಲ್ಲಿ ಎಂದು ಊಹಿಸಲು ಅವಕಾಶವಿದೆ.

ಶ್ರೀ ದೇಶಪಾಂಡೆ ಹಾಗು ಶ್ರೀ ಶ್ರೀಪತಯ್ಯನವರು ಈ ಐತಿಹಾಸಿಕ ಆಧಾರದ ಜೊತೆಗೆ ಮಹಿಪತಿರಾಯರ ಮರಿಮಕ್ಕಳಾದ ಶ್ರೀಪತಿ ತನುಜರು ಬರೆದ ಶ್ರೀಗುರು ಮಹಿಪತಿ ಸ್ತೋತ್ರದ ಕೆಲಪದ್ಯಗಳನ್ನು ಸೇರಿಸಿ ಕಾಲ ನಿರ್ಣಯಿಸಲು ಪ್ರಯತ್ನಿಸಿದ್ದಾರೆ.[15] ಆ ಸ್ತೋತ್ರದಿಂದ ತೆಗೆದುಕೊಂಡ ಪದ್ಯಗಳು ಇಂತಿವೆ:

---

14 A Chapter on Mahipatdas, ಪು. 93 ಮತ್ತು f.n. — 'One day his master asked him to see the Badshah in connection with some accounts. The king was much impressed by him. This success of his mission resulted in promotion...

15 ಸ್ವಾನಂದ ಸಾಮ್ರಾಜ್ಯ, ಪು. 22, ಮತ್ತು
ಸೇವಾತತ್ವ, ಪು. 8

'ಅಂತರಂಗದಲ್ಲಿ ತಿಳಿಯುತಲಾ ಗ್ರಾಮ ।
ತ್ಯಜಿಸಿದ್ಯೋ ನಿಸ್ಸೀಮಾ । ಸಂತಸದಲ್ಲಿ
ಶಾಪೂರಕ್ಹೋಗುತ ।
ಧಾಮಾ । ಮಾಡಿದ್ಯೋ ನಿಷ್ಕಾಮಾ ॥ 11 ॥

ಹಾಗೂ ಅದರ ಮುಂದಿನ ಪದ್ಯವಾದ—

ಅಲ್ಲಿ ಮೂರು ಸಂವತ್ಸರ ಇರಲಾಗಿ ।
ಶರಣಾಳಿಯು ಬಾಗಿ ।
ಇಲ್ಲಿ ನೀವು ದಯಮಾಡುವುದೊಳಿತಾಗಿ ।
ಸರಿ ಬಾರದಾಗಿ ।
ಅಲ್ಲಿಂದ ಪಯಣ ಮಾಡುತ ಪಥ ಸಾಗಿ ।
ಬಂದ್ಯೋ ಮಹಾತ್ಯಾಗಿ
ಮೆಲ್ಲನೆ ಕಾಖಂಡಕಿ ಸ್ಥಳಕನುವಾಗಿ
ಬರಲು ವರಯೋಗಿ ॥ 12 ॥

ಇಲ್ಲಿ ಗಮನಿಸುವ ಅಂಶವೆಂದರೆ ಗುರುಮಾಲಿಕೆಯನ್ನು ಬರೆದ ರುಕ್ಮಜದಾಸನ ಸಮಕಾಲೀನರು ಅಥವ ತುಸು ಮೊದಲಿನವರೇ ಆದ ಶ್ರೀಪತಿ ತನುಜರು ತಮ್ಮ ಅಜ್ಜನ ಈ ಚರಿತ್ರರೂಪೀ ಖಂಡ ಕಾವ್ಯದಲ್ಲಿ ಮಹಿಪತಿರಾಯರು ಯಾರಲ್ಲಿಯೂ ನೌಕರಿಯಲ್ಲಿ ಇದ್ದುದಾಗಲೀ ಅನಂತರ ದಿವಾಣ ಪಟ್ಟಕ್ಕೆ ಏರಿದರೆಂದಾಗಲೀ ಹೇಳಲಿಲ್ಲ, ನೇರ ಸಂಬಂಧವುಳ್ಳ ಶ್ರೀಪತಿ ತನುಜರು ಈ ವಿಷಯದಲ್ಲಿ ಹೆಚ್ಚಿನ ಬೆಳಕನ್ನು ಚೆಲ್ಲ ಬಹುದಾಗಿತ್ತು. ಮಹಿಪತಿರಾಯರ ಜೀವನದ ಪ್ರಾರಂಭದ ದಿನಗಳನ್ನು ಹೇಳು ವಾಗ ಅವರು ಕೊಡುವ ಚಿತ್ರವೇ ಬೇರೆ.

ಜನಿಸಿದಿ ಮೊದಲೆ ವಿಜಾಪುರದಲಿ ನೀನು ।
ಭಕ್ತರ ಸುರಧೇನು ।
ಜನದೊಳೆನಿಸಿ ಕೊನೇರಿರಾಯನ ಮಗನು ।
ಐಗಳಿ ವೃತ್ತಿಯನು ।
ಮನಕೆ ತಾರದೆ ಘನ ವ್ಯಾಪಾರವನು ।
ಮಾಡುತ ಭಾಗ್ಯವನು ।
ಅನುಭವಿಸುತಲಿರೆ ಸುತರಾಪೇಕ್ಷೆಯೆನು ।
ಮಾಡಲು ತಿಮ್ಮವ್ವನು ॥ 1 ॥

ಇಲ್ಲಿ ಬರುವ ಅರ್ಥ–ಮಹಿಪತಿರಾಯರು ಐಗಳಿ ವೃತ್ತಿ (ಐಗಳ–ವೃತ್ತಿ–ಭಿಕ್ಷಾವೃತ್ತಿ)ಯನ್ನು ಬಿಟ್ಟು ಘನ ವ್ಯಾಪಾರವನ್ನು ಮಾಡುತ್ತ ಭಾಗ್ಯವನ್ನು ಅನುಭವಿಸುತ್ತಿರುವಾಗ, ಮಡದಿ, ಮಕ್ಕಳ ಅಪೇಕ್ಷೆಯನ್ನು ಮಾಡಿ ಸಾರವಾಡ ಗ್ರಾಮದಲ್ಲಿದ್ದ ಭಾಸ್ಕರ ಸ್ವಾಮಿಗಳ ಸೇವೆಯನ್ನು ಮಾಡಿದರೆಂದು ಕಥೆ ಸಾಗುತ್ತದೆ. ಬೇರೆಡೆ ಐತಿಹಾಸಿಕ ಆಧಾರ ದೊರೆಯುವತನಕ ಈ ಕಥೆ ಹೆಚ್ಚು ವಾಸ್ತವವೆನಿಸುತ್ತದೆ.

ಸರಿ, ಈ ಮೊದಲು ಉದ್ಧರಿಸಿದ ಪದ್ಯಗಳಲ್ಲಿ, 'ಅಂತರಂಗದಲ್ಲಿ ತಿಳಿಯುತಲಾಗ್ರಾಮಾ' ಎನ್ನುವ ಪದ್ಯಕ್ಕೂ ಕ್ರಿ. ಶ. 1656ರಲ್ಲಿ ಔರಂಗಜೇಬನು ವಿಜಾಪುರದಮೇಲೆ ದಂಡೆತ್ತಿ ಬಂದುದಕ್ಕೂ ಹೋಲಿಸಿ, ರಾಯರು ಈ ದಂಡುದಾಳಿಯೇ ವಿಪತ್ತೆಂದು ತಮ್ಮ ಅಂತರ್‌ಜ್ಞಾನದಿಂದ ತಿಳಿದು ಇನ್ನು ಇಲ್ಲಿರುವುದು ಉಚಿತವಲ್ಲವೆಂದು ಶಾಪೂರಕ್ಕೆ ಹೋದರೆಂದು ಶ್ರೀ ಶ್ರೀಪತಯ್ಯನವರು ಹೇಳುತ್ತಾರೆ.[16] ಕ್ರಿ. ಶ. 1656 ರಲ್ಲಿ ದಂಡೆತ್ತಿ ಬಂದ ಔರಂಗಜೇಬನು ವಿಜಾಪುರವನ್ನು ಗೆದ್ದು ವಶಪಡಿಸಿಕೊಳ್ಳುವುದರಲ್ಲಿದ್ದ. ಆದರೆ ಶಾಹಜಹಾನನ ಅಸ್ವಸ್ಥತೆಯನ್ನು ಕೇಳಿ ತನ್ನ ಸಿಂಹಾಸನ ಹೋದೀತೆಂದು ವಿಜಾಪುರದ ಯುದ್ಧವನ್ನು ಅಷ್ಟಕ್ಕೆಯೆ ನಿಲ್ಲಿಸಿ ದಿಲ್ಲಿಗೆ ಓಡಿದನು.[17] ಹೀಗಾಗಿ ಬಂದ ವಿಪತ್ತು ಇಲ್ಲವಾಯಿತು. ಈ ಸಮಯದಲ್ಲಿ ಮಹಿಪತಿರಾಯರು ಮೂರು ವರುಷ[18] ಶಾಪೂರಕ್ಕೆ ಹೋಗುವ ಅವಶ್ಯಕತೆ ಏನಿದ್ದಿತು ? ಆದ್ದರಿಂದ ಮಹಿಪತಿರಾಯರು ಈ ಸುಮಾರಿಗೆ ವಿಜಾಪುರವನ್ನು ಬಿಟ್ಟುಹೋಗಲಿಲ್ಲ ಎನ್ನಬಹುದು. ಆದರೆ ಒಂದು ದೊಡ್ಡ ವಿಪತ್ತನ್ನು ಎದುರಿಗಿಟ್ಟುಕೊಂಡು ರಾಯರು ವಿಜಾಪುರವನ್ನು ಬಿಟ್ಟು ಶಾಪುರಕ್ಕೆ ಹೋಗಿದ್ದಂತೂ ನಿಜ. ಪ್ರಸ್ತುತ ಅಂಥ ದೊಡ್ಡ ವಿಪತ್ತು ಯಾವುದಿತ್ತು ? ವಿಜಾಪುರಕ್ಕೆ ಅಂಥ ವಿಪತ್ತು ಯಾವಾಗ ಬಂದಿರಬೇಕು ?

ಕ್ರಿ. ಶ. 1684 ರಲ್ಲಿ ಔರಂಗಜೇಬನು ದಕ್ಷಿಣಕ್ಕೆ ದಂಡೆತ್ತಿ ಬಂದು 1686 ರಲ್ಲಿ ವಿಜಾಪುರವನ್ನು ವಶಪಡಿಸಿಕೊಂಡನು. ಅಂದಿಗೆ ಆದಿಲ್‌ಶಾಹಿ ರಾಜ್ಯ ಕೊನೆಗೊಂಡಿತು. ಅದೇ ವರುಷ, ಅಂದರೆ ಕ್ರಿ. ಶ. 1686 ರಿಂದ 1689 ರ ವರೆಗೆ ಮೂರು ವರುಷ ವಿಜಾಪುರವು ಪ್ಲೇಗಿನಿಂದ ಧಗಧಗಿಸಿತು.[19] ಇದು ವಿಜಾಪುರಕ್ಕೆ ಬಂದ ದೊಡ್ಡ ವಿಪತ್ತೆಂದು ಬೇರೆ ಹೇಳಬೇಕಾಗಿಲ್ಲ. ಇದಕ್ಕೆ ಪೂರಕವಾಗಿ ಎನ್ನುವಂತೆ ಶ್ರೀಪತಿತನುಜರು ತಮ್ಮ ಸ್ತೋತ್ರದ ಹತ್ತನೆಯ ಪದ್ಯದ ಕೊನೆಯ ಸಾಲಿನಲ್ಲಿ ಈ ವಿಷಯವನ್ನು ಒತ್ತಿ ಹೇಳಿದ್ದಾರೆ.

'ಅನಿತರೊಳಗೆ ನೀ ಆ ನಗರಕೆ ತ್ವರಿತ ವೇಧಿಯು ಬಂತೆನುತ ॥ 10 ॥
ಅಂತರಂಗದಲಿ ತಿಳಿಯುತಲಾಗ್ರಾಮ । ತ್ಯಜಿಸಿದ್ಯೋ ನಿಸ್ಸಿಮಾ

ಈ ಅವಧಿಯಲ್ಲಿ ಅಂದರೆ ಸುಮಾರು ಕ್ರಿ. ಶ. 1685–86 ರ ರಲ್ಲಿ ಮಹಿಪತಿರಾಯರು ವಿಜಾಪುರವನ್ನು ಬಿಟ್ಟು ಶಾಪೂರಕ್ಕೆ ಹೋಗಿರಬಹುದು. ಪ್ಲೇಗಿನಲ್ಲಿ

16 ಸೇವಾತತ್ವ ಪುಟ 4
17 Bijapur ಪುಟ 17
18 ಗು. ಮ. ಸ್ತೋತ್ರ ಪದ್ಯ 12
19 Bijapur ಪುಟ. 131. ಈ ಪ್ಲೇಗಿನಲ್ಲಿಯೇ ಔರಂಗಜೇಬ ತನ್ನ ಹೆಂಡತಿಯನ್ನು ಕಳೆದುಕೊಂಡ.

ಊರು ಬಿಟ್ಟು ಹೋಗುವುದು ಗೊತ್ತಿದ್ದ ವಿಷಯ. 'ಅಂತರಂಗದಲ್ಲಿ ತಿಳಿಯುತಲಾ ಗ್ರಾಮ' ಹಾಗೂ 'ಅಲ್ಲಿ ಮೂರು ಸಂವತ್ಸರ ಇರಲಾಗಿ' ಎನ್ನುವ ಎರಡೂ ಪದ್ಯಗಳು ಇಲ್ಲಿ ಸಾಕಷ್ಟು ಅರ್ಥಪೂರ್ಣವೆನಿಸುತ್ತವೆ. ಶಾಪೂರದಲ್ಲಿ ಮೂರು ವರುಷ ಇದ್ದು ತಿರುಗಿ ವಿಜಾಪುರಕ್ಕೆ ಬಂದು ಹಾಳುಬಿದ್ದ ವಿಜಾಪುರವನ್ನು ನೋಡಿ, ಅಲ್ಲಿರದೆ, ಸಮೀಪದ ಕಾಖಂಡಕಿ ಎಂಬ ಗ್ರಾಮಕ್ಕೆ ಪ್ರಯಾಣ ಬೆಳೆಸಿ ಅಲ್ಲಿಯೇ ಸ್ಥಾಯಿಯಾಗಿ ಉಳಿದಿರಲೂಬಹುದು. ಈ ಆಧಾರದಿಂದಲೂ ಮಹಿಪತಿರಾಯರು ಮಹಮ್ಮದಶಹನ (1626–1656) ಕಾಲದಲ್ಲಿರದೆ ಸಿಕಂದರನ (1672–1686) ಕಾಲದಲ್ಲಿದ್ದರೆಂದು ಹೇಳಬಹುದು. ಅರ್ಥಾತ್ ಅವರು 17ನೆಯ ಶತಮಾನದ ಮಧ್ಯದಲ್ಲಿರದೆ ಆ ಶತಮಾನದ ಅಂತ್ಯದಲ್ಲಿ ಹಾಗೂ 18ನೆಯ ಶತಮಾನದ ಆದಿಯಲ್ಲಿದ್ದರು, ಎನ್ನುವುದು ಸೂಕ್ತವೆನಿಸುತ್ತದೆ.

ಈಗ ಮಹಿಪತಿರಾಯರ ಮಕ್ಕಳಾದ ಶ್ರೀ ಕೃಷ್ಣರಾಯರು (ಅಂಕಿತ: ಮಹಿಪತಿ ಸುತ) ರಚಿಸಿದ 'ಆನಂದ ಲಹರಿ' ಖಂಡಕಾವ್ಯದ[20] ಕೊನೆಯ ಪದ್ಯ ನೋಡುವ.

ಸುಭಾನು ಸಂವತ್ಸರದ ಆ ಭಾದ್ರಪದ ಮಾಸ ।
ಶುಭವಾರ ದಶಮಿ ಗುರುವಾರ ದಿನ ದೇವ ।
ಪ್ರಭುವಿನ ದಯದಿಂದ ಸಂಪೂರ್ಣ ॥ 15 ॥

ಇಲ್ಲಿ ಹೇಳಿದ ಸುಭಾನು ಸಂವತ್ಸರ ಕ್ರಿ. ಶ. 1703 ರಲ್ಲಿ ಬಂದದ್ದು ಎಂದು ಶ್ರೀ ಮ. ಶ್ರೀ ದೇಶಪಾಂಡೆಯವರು ಹೇಳುತ್ತಾರೆ.[21] ಸದ್ಯದಮಟ್ಟಿಗೆ ಇದನ್ನು ಒಪ್ಪಿಕೊಂಡು ಕೃಷ್ಣರಾಯರೇ ರಚಿಸಿದ ಈ ಕೀರ್ತನೆಯನ್ನು ನೋಡೋಣ.

.ನೆನೆದು ನಮಿಸುವೆನು ವಾರಂ ವಾರಂ ॥ಪ॥

ಸತ್ಯಪ್ರಿಯ ತೀರ್ಥ, ಸತ್ಯಬೋಧ ಕರ್ತ ॥2॥

ಹರಿಭಕ್ತ ಉಲ್ಹಾಸರ ಬಂಡೆರಂಗನರಿತಿಹ ನಿಜ ದಾಸರ
ಮಹಿಪತಿ ಗುರು ಶರಣರ ತೋಷ ವಾರಂ ವಾರಂ ॥3॥

ಕೃಷ್ಣರಾಯರು ತಮ್ಮ ಈ ಮೂರು ನುಡಿಗಳ ಕೀರ್ತನೆಯ 2ನೆಯ ನುಡಿಯ ಕೊನೆಗೆ ಶ್ರೀ ಸತ್ಯಬೋಧಯತಿಗಳನ್ನೂ, ಮೂರನೆಯ ನುಡಿಯ ಕೊನೆಗೆ ಶ್ರೀ ಜಗನ್ನಾಥ ದಾಸರನ್ನೂ (ಬಂಡೆರಂಗನರಿತಿಹ ದಾಸರು) ನೆನೆಸಿದ್ದಾರೆ.[22]

---

20 'ಆನಂದ ಲಹರಿ' ಸರಸ ಸುಂದರ ಖಂಡಕಾವ್ಯ ಪರಿಚಯ ಲೇಖ–ಕೃಷ್ಣಕೊಲ್ಹಾರ ಕುಲಕರ್ಣಿ (ಸುಬೋಧ ದೀಪಾವಳಿ ಸಂಚಿಕೆ 1964).

21 ಸ್ವಾನಂದ ಸಾಮ್ರಾಜ್ಯ ಪು. 22

22 ಸೇವಾತತ್ವ ಪು. 7. 8. ಪದ್ಯ 6

ಶ್ರೀ ಸತ್ಯಬೋಧರು ಕ್ರಿ. ಶ. 1744 ರಿಂದ 1783ರ ವರೆಗೆ ಉತ್ತರಾದಿ ಮಠದ ಸಂಸ್ಥಾನವನ್ನು ಆಳಿದರೆಂಬುದು ನಿರ್ವಿವಾದ[23]. ಶ್ರೀ ಜಗನ್ನಾಥ ದಾಸರ ಜನನ ಕ್ರಿ. ಶ. 1728, ಅವರು ದಾಸರಾದದ್ದು ಕ್ರಿ. ಶ. 1755 ಮತ್ತು ಮರಣ ಕ್ರಿ. ಶ. 1809 ಈ ಕಾಲಮಾನಗಳೂ ನಿರ್ಣೀತವಾದದ್ದೇ ಇವೆ.[24] ಶ್ರೀ ಸತ್ಯಬೋಧರ ಹೆಸರನ್ನು ತೆಗೆದುಕೊಂಡದ್ದರಿಂದ ಕ್ರಿ. ಶ. 1744ರಲ್ಲಿ ಅಥವ ಅನಂತರ, ಹಾಗು ಶ್ರೀ ಜಗನಾಥ ದಾಸರ ಹೆಸರು ತೆಗೆದುಕೊಂಡದ್ದರಿಂದ ಕ್ರಿ. ಶ. 1755ರಲ್ಲಿ ಅಥವ ಅನಂತರವೇ, ಕೃಷ್ಣರಾಯರು ಈ ಪದ್ಯವನ್ನು ರಚಿಸಿರಬೇಕು. ಶ್ರೀ ಜಗನ್ನಾಥ ದಾಸರು ದಾಸರಾದದ್ದು ಕ್ರಿ. ಶ. 1755ರಲ್ಲಿ. ಆಮೇಲೆ ಎಷ್ಟೋ ದಿನಗಳ ನಂತರ (ಸುಮಾರು 1770-75) ಅವರು ಶ್ರೀ ರಂಗಕ್ಕೆ ಹೋಗಿದ್ದರೆಂತಲೂ ಅಲ್ಲಿ ಅವರಿಗೆ 'ಬಂಡೆರಂಗನರಿತಿಹ ದಾಸರು' ಎಂಬ ನಾಮಾಭಿದಾನವಾಯಿತೆಂದು ಪ್ರತೀತಿ. ಅದೇನಿದ್ದರೂ–ಕೃಷ್ಣರಾಯರು ಈ ಪದ್ಯವನ್ನು ಕ್ರಿ. ಶ. 1755ರ ನಂತರ ರಚಿಸಿದರೆನ್ನುವುದಂತೂ ನಿರ್ವಿವಾದ. ಇಲ್ಲಿ ಕೃಷ್ಣರಾಯರು ಜಗನ್ನಾಥ ದಾಸರಿಗಿಂತ (ಅವರನ್ನು ಸಂಬೋಧಿಸಿದ ರೀತಿಯನ್ನು ನೋಡಿದಾಗ) ಸಣ್ಣವರೆಂದು ಊಹಿಸಬಹುದು. ಇಲ್ಲವೆ, ವರುಷೆರಡು ವರುಷ ಹಿರಿ–ಕಿರಿಯರಿದ್ದರೆಂದರೂ ಕ್ರಿ. ಶ. 1703ರಲ್ಲಿ 'ಆನಂದ ಲಹರಿ'ಯನ್ನು ಕೃಷ್ಣರಾಯರು ರಚಿಸುವುದು ಸಾಧ್ಯವಿಲ್ಲ. ಈ ಕಾವ್ಯವನ್ನು ರಚಿಸಿದಾಗ ಅವರಿಗೆ ಸುಮಾರು ನಲವತ್ತು ವರುಷಗಳಾಗಿದ್ದುವೆಂದು ಶ್ರೀ ದೇಶಪಾಂಡೆಯವರು ಊಹಿಸಿದ್ದಾರೆ.[25] ಅಂದರೆ 'ನೆನೆದು ನಮಿಸುವೆನು ವಾರಂ, ವಾರಂ' ಎಂಬ ಕೀರ್ತನೆಯನ್ನು ಕೃಷ್ಣರಾಯರು ತಮ್ಮ 120ನೆಯ ವಯಸ್ಸಿನಲ್ಲಿ ರಚಿಸಿರಬೇಕೆ ? ಅಥವ ಅವರು ಹುಟ್ಟುವ ಪೂರ್ವದಲ್ಲಿಯೆ 'ಆನಂದ ಲಹರಿ'ಯ ರಚನೆಯಾಗಿರಬೇಕು ! ಈ ಎರಡೂ ಅಸಾಧ್ಯವೆಂದೇ ತೋರುತ್ತದೆ. ಆದ್ದರಿಂದ ಕೃಷ್ಣರಾಯರು 'ಆನಂದ ಲಹರಿ'ಯನ್ನು ಕ್ರಿ.ಶ. 1703ಕ್ಕೆ ಸಮಾನಾದ ಸುಭಾನು ಸಂವತ್ಸರದಲ್ಲಿ ರಚಿಸಿರದೆ ಕ್ರಿ.ಶ. 1763ರ ಸುಭಾನು ಸಂವತ್ಸರದಲ್ಲಿ ರಚಿಸಿದ್ದಾರೆ ಎನ್ನಲು ತಪ್ಪೇನಿಲ್ಲ. ಇದಕ್ಕೆ ಪೂರಕವಾಗಿ ಈ ಮೊದಲು ನಿಷ್ಕರ್ಷಿಸಿದ ಕಾಲವೂ ಹೊಂದುತ್ತದೆ.

ಈಗ ಶ್ರೀ ದೇಶಪಾಂಡೆ ಹಾಗೂ ಶ್ರೀ ಪತಯ್ಯನವರು ಗಮನಿಸದಿದ್ದ ಒಂದು ವಿಷಯವನ್ನು ಇಲ್ಲಿ ಎತ್ತಿಕೊಳ್ಳಬಯಸುವೆ.

---

23 ಸತ್ಯಕಥಾ ಪು. 75 ಅಣುಸತ್ಯಬೋಧ ವಿಜಯ ಪು. 52

24 ಶ್ರೀ ಜಗನ್ನಾಥ ದಾಸರು ಪು. 144, 156, 171

25 ಸ್ವಾನಂದ ಸಾಮ್ರಾಜ್ಯ ಪು. 22

ಶ್ರೀ ಮಹಿಪತಿರಾಯರ ಗುರುಗಳಾದ ಉಮರ್ಜಿ ಕೃಷ್ಣಾಚಾರ್ಯರ ಹೆಸರನ್ನು ಮೇಲಿನ ಎಲ್ಲ ಮಹನೀಯರೂ ತಂತಮ್ಮ ಗ್ರಂಥಗಳಲ್ಲಿ ತಗೆದುಕೊಂಡಿದ್ದಾರೆ.[26] ಆದರೆ ಅವರ ಕಾಲವನ್ನು ಗಮನಿಸಿದಂತಿಲ್ಲ. ಈ ಉಮರ್ಜಿಯವರು ಯಾರು ?

ಉಮರ್ಜಿ ಪ್ರಲ್ಹಾದ ಕೃಷ್ಣಾಚಾರ್ಯರು ಶ್ರೀಮದುತ್ತರಾದಿ ಮಠದ ಶ್ರೀ ಸತ್ಯಾಭಿನವ ತೀರ್ಥರೊಡನೆ ಇರುತ್ತಿದ್ದರು.[27] ಈ ವಿಷಯವನ್ನು ಉಮರ್ಜಿ ಮನೆತನ ಪಂಡಿತ ಶ್ರೀವಿಕ್ರಮಾಚಾರ್ಯ ಉಮರ್ಜಿಯವರೂ ಒಪ್ಪಿದ್ದಾರೆ.[28] ಶ್ರೀ ಸತ್ಯಾಭಿನವ ತೀರ್ಥರು ಉತ್ತರಾದಿ ಮಠವನ್ನು ಆಳಿದ್ದು ಕ್ರಿ. ಶ. 1673 ರಿಂದ ಕ್ರಿ. ಶ. 1703. ಈ ಕಾಲದಲ್ಲಿ ಉಮರ್ಜಿಯವರು ಇದ್ದರೆನ್ನಬಹುದು. ಇವರ ಕಾಲದ ಬಗ್ಗೆ ಇನ್ನೂ ಒಂದು ಉಪಲಬ್ಧ ಆಧಾರವೆಂದರೆ ಶ್ರೀ ಸತ್ಯಬೋಧ ತೀರ್ಥರ ಕಾಲಕ್ಕೆ-ಸವಣೂರಿನಲ್ಲಾದ ನವರಾತ್ರಿ ಉತ್ಸವಕ್ಕೆ ಉಮರ್ಜಿಯವರು ಉಪಸ್ಥಿತರಿದ್ದರೆನ್ನುವುದು. ಶ್ರೀ ಸತ್ಯಬೋಧತೀರ್ಥರು ಸವಣೂರಿಗೆ ಬಂದದ್ದು ಸರ್ವಜಿತು ಸಂವತ್ಸರದಲ್ಲಿ ಕ್ರಿ. ಶ. 1768)[29] ಅದೇ ವರುಷ ಸವಣೂರಿನಲ್ಲಿ ನವರಾತ್ರಿ ಉತ್ಸವವನ್ನು ಅವರು ಬಹು ವಿಜೃಂಭಣೆಯಿಂದ ಆಚರಿಸಿದರೆಂತಲೂ ಅದಕ್ಕೆ ಸರ್ವಶ್ರೀ ಗಲ ಗಲಿ ಮುದ್ಗಲಾಚಾರ್ಯರು, ಉಮರ್ಜಿ ಕೃಷ್ಣಾಚಾರ್ಯರು ಬಂದಿದ್ದರೆಂದೂ 'ಅಣುಸತ್ಯಬೋಧವಿಜಯ' ಕಾವ್ಯದ ಈ ಕೆಳಗಿನ ಪದ್ಯದಿಂದ ತಿಳಿಯುತ್ತದೆ.

'ಗಲಗಲಿ ಮುದ್ಗಲಾಚಾರ್ಯಃ ಕೃಷ್ಣಾತೀರಾತ್ ಸಮಾಗತಃ
ಯದುಪತ್ಯಾರ್ಯ ವಂಶಸ್ಥಃ ಶ್ರೀ ಪತ್ಯಾಚಾರ್ಯಃ ಕೋವಿದಃ
ತಥೈವಚೋ ಮ್ರುಜೀ ಕೃಷ್ಣಾಚಾರ್ಯಃ ಶಿಷ್ಯೈಃ ಸಮಾಗತಃ ॥ 30 ॥

ಹೀಗೆ ಕ್ರಿ. ಶ. 1768ರಲ್ಲಿ ಜರುಗಿದ ಸವಣೂರಿನ ನವರಾತ್ರಿಯ ಉತ್ಸವಕ್ಕೆ ಉಮರ್ಜಿ ಕೃಷ್ಣಾಚಾರ್ಯರೂ ಬಂದಿದ್ದರು. ಶ್ರೀ ಸತ್ಯಾಭಿನವರ ಸಮಕಾಲೀನರಾದ ಉಮರ್ಜಿಯವರು ಸವಣೂರಿಗೆ ಬಂದಿರಲೂ ಸಾಧ್ಯವಿದೆ. ಇಷ್ಟೇ ಆಗ ಅವರು ತೀರ ಮುದುಕರಾಗಿರಬೇಕು. ಅಂತೆಯೇ ಶಿಷ್ಯರೊಂದಿಗೆ ಆಗಮಿಸಿದ್ದರು. ಆದ್ದರಿಂದ ಉಮರ್ಜಿಯವರ ಕಾಲ ಸುಮಾರು ಕ್ರಿ. ಶ. 1670–75 ರಿಂದ 1768–70 ಎಂದು ಗುರುತಿಸಬಹುದು. ಇದಕ್ಕೆ ಪೂರಕ ಎನ್ನುವಂತೆ ಮಹಿಪತಿರಾಯರು ರಚಿಸಿದ 'ಚರಣವ ನೆನೆ ಮನವೆ' ಎಂಬ ಕೀರ್ತನೆಯ ಕೊನೆಯ ನುಡಿ,[30] ಕೃಷ್ಣರಾಯರು

---

26 ಸ್ವಾನಂದ ಸಾಮ್ರಾಜ್ಯ. ಪು. 25, ಸೇವಾತತ್ವ ಪು. 11 ಮತ್ತು ಶ್ರೀ ಮಹಿಪತಿ ರಾಯರ ಕೃತಿಗಳು ಪು. xiv

27 ಸತ್ಕಥಾ ಪು. 195

28 ಕೀರ್ತನೆಗಳ ಸಂಗ್ರಹ ಸಂಪುಟ 3 ಮುನ್ನುಡಿ ಪು. vi

29 ಅಣುಸತ್ಯಬೋಧ ವಿಜಯ ಪುಟ 46 ಪದ್ಯ 39.

30 ಸೇವಾತತ್ವ ಪುಟ 42 ಪದ್ಯ 57.

ರಚಿಸಿದ ಉದಯರಾಗ "ಬೆಳಗಾಯಿತೇಳಿರೈ..." ಎಂಬ ಮೊದಲ ನುಡಿ[31] ಗಳಲ್ಲಿ ಕ್ರಮವಾಗಿ ಶ್ರೀ ಸತ್ಯಾಭಿನವ ತೀರ್ಥರನ್ನು ಹಾಗೂ ಶ್ರೀ ಸತ್ಯಪೂರ್ಣ ತೀರ್ಥರನ್ನು ತಂದೆ ಮಕ್ಕಳಿಬ್ಬರೂ ಹೆಸರಿಸಿದ್ದಾರೆ.

ಈಗ ಶ್ರೀ ದೇಶಪಾಂಡೆಯವರು ಮತ್ತು ಇತರರು ನಿರ್ಧರಿಸಿದ ಮಹಿಪತಿ ರಾಯರ ಕಾಲಕ್ಕೂ ಇದಕ್ಕೂ ತಾಳೆಹಾಕಿ ನೋಡಿದರೆ ಮಹಿಪತಿರಾಯರು ಕಾಲವಾದ ನಂತರ ಅವರ ಗುರುಗಳಾದ ಪ್ರಲ್ಹಾದ ಕೃಷ್ಣಾಚಾರ್ಯರು ಹುಟ್ಟುತ್ತಾರೆ.

'ಪ್ರಲ್ಹಾದ ಕೃಷ್ಣಾಚಾರ್ಯರು ಬಾಲ ಮಹಿಪತಿಯ ಜಾತಕವನ್ನು ನೋಡಿ ದರು' ಎಂಬ ಶ್ರೀ ಪತಯ್ಯನವರ ಹೇಳಿಕೆ,[32] 'ಒಂದು ದಿನ ಏನೋ ಕಾರಣದಿಂದ ಮಹಿಪತಿಯ ಜನ್ಮಪತ್ರಿಕೆಯನ್ನು ನೋಡುವ ಕುತೂಹಲವು ಆಚಾರ್ಯರಿ ಗುಂಟಾಯಿತು' ಎಂಬ ಶ್ರೀ ದೇಶಪಾಂಡೆಯವರ ಹೇಳಿಕೆ[33] ಮತ್ತು, 'ಬಾಲಕ ಮಹಿಪತಿಯ ಜಾತಕವನ್ನು ಕಂಡ ಆಚಾರ್ಯರು......' ಎಂದು ಹೇಳುವ ಪ್ರಾ. ಜಿ. ವರದರಾಜರಾವ್ ಅವರುಗಳ ಹೇಳಿಕೆಗಳಿಗೆ[34] ಆಧಾರವೂ ಇಲ್ಲ. ಅದರಲ್ಲಿ ತಥ್ಯವೂ ಇಲ್ಲವೆಂದೇ ಹೇಳಬೇಕಾಗುತ್ತದೆ. ಮೂಲತಃ ಈ ಗುರು-ಶಿಷ್ಯ ಪರಂಪರೆ ಪ್ರಾರಂಭವಾದದ್ದೇ ಉಮರ್ಜಿ ಪ್ರಲ್ಹಾದ ಕೃಷ್ಣಾಚಾರ್ಯರಿಂದ ಹಾಗು ಮಹಿಪತಿ ರಾಯರಿಂದ, ಯಾಕಂದರೆ ಕಾಖಂಡಕಿ ಮನೆತನ ಎಂಬ ಹೆಸರು ಪ್ರಾರಂಭವಾದದ್ದೇ ಶ್ರೀ ಮಹಿಪತಿರಾಯರಿಂದ ಮತ್ತು ಉಮರ್ಜಿ ಮನೆತನಕ್ಕೆ ಶಿಷ್ಯ ಪರಂಪರೆ ಪ್ರಾರಂಭವಾದದ್ದು ಪ್ರಲ್ಹಾದ ಕೃಷ್ಣಾಚಾರ್ಯರಿಂದ.[35] ಅಲ್ಲದೆ ರಾಯರು ಉಮರ್ಜಿ ಯವರನ್ನು ಗುರುಗಳನ್ನಾಗಿ ಸ್ವೀಕರಿಸಿದುದು ತಮ್ಮ ಜೀವಿತದ ಕೊನೆ-ಕೊನೆಯ ದಿನಗಳಲ್ಲಿ. ಸಾರವಾಡದ ಭಾಸ್ಕರ ಸ್ವಾಮಿಗಳನ್ನು ಗುರು ಎಂದು ಸ್ವೀಕರಿಸಿದ್ದ ರಾಯರಿಗೆ ಎರಡನೆಯ ಗುರುವಿನ ಅವಶ್ಯಕತೆ ಇದ್ದಿಲ್ಲ. ಅಂತೆಯೇ ಸಾಂಪ್ರ ದಾಯಿಕವಾಗಿ ಕೇಳಿ ಬಂದ ಕಥೆಯ ಹೊರತು ಶ್ರೀ ಉಮರ್ಜಿಯವರ ಹೆಸರು ಗ್ರಂಥಸ್ಥವಾಗಿ ಎಲ್ಲಿಯೂ ಕಾಣಬರುವುದಿಲ್ಲ. ಪೂರ್ವೋಕ್ತ ಶ್ರೀಪತಿ ತನುಜರು, ರುಕ್ಮಜದಾಸ ಅಥವ ತಂದೆ ಮಕ್ಕಳ ಯಾವುದೇ ಒಂದು ಕೀರ್ತನೆಯಲ್ಲಿಯೂ ಆಚಾರ್ಯರ ಹೆಸರು ಕಾಣದಿರುವುದು ಗಮನಾರ್ಹವಾಗಿದೆ. ಅದರೂ ಹಿರಿಯ ರಿಂದ ಕೇಳಿ ಬಂದ ಕಥೆ, ಕಾಖಂಡಕಿ ಮನೆತನದಿಂದ ಇಂದಿಗೂ ಕುಲಗುರುಗಳೆಂದು ಮರ್ಯಾದೆಯನ್ನು ಪಡೆಯುತ್ತಿರುವ ಕೊಲ್ಹಾರದ ಉಮರ್ಜಿ ಮನೆತನ ಮತ್ತು

---

31 ಸೇವಾತತ್ವ ಪುಟ 76 ಪದ್ಯ 104.

32 ಸೇವಾತತ್ವ ಪುಟ 11.

33 ಸ್ವಾನಂದ ಸಾಮ್ರಾಜ್ಯ ಪುಟ 25.

34 ಶ್ರೀ ಮಹಿಪತಿರಾಯರ ಕೃತಿಗಳು ಪೀಠಿಕೆ ಪುಟ XIV

35 ಸತ್ಕಥಾ ಪುಟ 195.

ಕೊಲ್ಹಾರದಲ್ಲಿಯೇ ಇದ್ದ ಶ್ರೀ ಮಹಿಪತಿರಾಯರ ವೃಂದಾವನ ಗುರು–ಶಿಷ್ಯರ ಸಂಬಂಧವನ್ನು ಎತ್ತಿ ಹೇಳುತ್ತವೆ.

ಇಷ್ಟಾಗಿಯೂ ಈಗ ಮಹಿಪತಿರಾಯರ ಕಾಲವನ್ನು ನಿಶ್ಚಯಿಸುವಾಗ ಈ ಎರಡನೆಯ ಗುರುಗಳಾದ ಉಮರ್ಜಿಯವರು ತುಸು ಚಿಕ್ಕವರೂ, ಶಿಷ್ಯರಾದ ಮಹಿಪತಿರಾಯರು ದೊಡ್ಡವರೂ ಆಗುವ ಸಂಭವವಿದೆ. ಇಲ್ಲವಾದಲ್ಲಿ ಶ್ರೀ ಮಹಿಪತಿರಾಯರ ಕಾಲದ ಗಡುವು ಇನ್ನೂ ಮುಂದಕ್ಕೆ ಬರುತ್ತದೆ. ಆದರೆ ಮಹಾಮಂತ್ರೋಪದೇಶವೊಂದರ ಸಲುವಾಗಿಯೆ ಉಮರ್ಜಿಯವರ ಶಿಷ್ಯತ್ವವಹಿಸಿದ ಮಹಿಪತಿರಾಯರು ಈ ಅಂಶದತ್ತ ನೋಡುವ ಕಾರಣವಿದ್ದಿಲ್ಲ. ಮಹಾಮಂತ್ರವನ್ನು ಬಲ್ಲವರು ಆ ಕಾಲದಲ್ಲಿ ಸುತ್ತಲಿನಲ್ಲಿ ಉಮರ್ಜಿ ಪ್ರಲ್ಹಾದ ಕೃಷ್ಣಾಚಾರ್ಯರೊಬ್ಬರೇ ಆಗಿದ್ದರು.

ಹೀಗಾಗಿ ಈ ಎಲ್ಲ ಆಧಾರಗಳಿಂದ ಶ್ರೀ ಮಹಿಪತಿರಾಯರ ಜೀವನಾಂಶಗಳ ಕಾಲವನ್ನು ಈ ರೀತಿಯಾಗಿ ನಿರ್ದೇಶಿಸಬಹುದು.

ಶ್ರೀ ಮಹಿಪತಿರಾಯರ ಜನನ	ಸುಮಾರು	ಕ್ರಿ. ಶ.	1650
ಖವಾಸಖಾನನಲ್ಲಿ ಕರ್ಣಿಕರು	,,	,,	1670
ಬಡತಿ/ದಿವಾಣ (?)	,,	,,	1673
ಅಧಿಕಾರ ತ್ಯಾಗ	,,	,,	1684
ಭಾಸ್ಕರ ಸ್ವಾಮಿಗಳಲ್ಲಿ ಶಿಷ್ಯತ್ವ	,,	,,	1684
ತಿರುಗಿ ವಿಜಾಪುರಕ್ಕೆ	,,	,,	1685
ವಿಜಾಪುರವು ಔರಂಗಜೇಬನ ವಶವಾದದ್ದು	,,	,,	1686
ವಿಜಾಪುರದ ಪ್ಲೇಗು ರಾಯರ ಶಾಪೂರ ವಾಸ	,,	,,	1686 ರಿಂದ 89
ಕಾಖಂಡಕಿಗೆ ಆಗಮನ	,,	,,	1690
ದೇವರಾಯನ ಜನ್ಮ	,,	,,	1691
ಕೃಷ್ಣರಾಯರ ಜನ್ಮ	,,	,,	1693
ಮಹಿಪತಿರಾಯರ ಮರಣ	,,	,,	1725-30

ಕರಗ ಶಕ್ತಿ ನೃತ್ಯ

ಕೆ. ಎಸ್. ರಾಮಮೂರ್ತಿ

ಕರಗ ನೃತ್ಯ ಕರ್ಣಾಟಕದ ಒಂದು ವಿಶಿಷ್ಟ ಜನಪದ ನೃತ್ಯ. ಮಲ್ಲಿಗೆ ಹೂಗಳಿಂದ ಅಲಂಕೃತವಾದ ಕರಗವನ್ನು (ಕಲಶವನ್ನು) ತಲೆಯಮೇಲೆ ಹೊತ್ತು ತಮ್ಮಟೆ ವಾದ್ಯದ ಗತ್ತಿಗನುಗುಣವಾಗಿ ಆಕರ್ಷಕ ಭಂಗಿಗಳಲ್ಲಿ ಕುಣಿಯುವುದೇ ಕರಗ ನೃತ್ಯ. ಇದೊಂದು ಧಾರ್ಮಿಕ ನೃತ್ಯ. ಇದೊಂದು ಕೇವಲ ಜನಪದ ನೃತ್ಯ ಮಾತ್ರ ವಲ್ಲ. ಇದೊಂದು ಧಾರ್ಮಿಕ ವಿಧಿಯೂ ಹೌದು. ಈ ನೃತ್ಯದ ಹಿನ್ನೆಲೆಯಲ್ಲಿ ಅನೇಕ ಆಚರಣೆಗಳು, ಸಂಪ್ರದಾಯಗಳು, ನಂಬಿಕೆಗಳು ಕಟ್ಟು ಕತೆಗಳು ಕಂಡು ಬರುತ್ತದೆ. ಅಲ್ಲದೆ ಈ ನೃತ್ಯವು ನಿರ್ದಿಷ್ಟ ದೈವ ಉತ್ಸವದ ಸಂದರ್ಭದಲ್ಲಿ ಮಾತ್ರ ನಡೆಯುತ್ತದೆ. ಈ ನೃತ್ಯವು ಕರಗ ಮಹೋತ್ಸವದ ಒಂದು ಮುಖ್ಯ ಕಾರ್ಯಕ್ರಮ ಹಾಗೂ ಮುಖ್ಯವಾದದ್ದು.

ಕರಗ ಮಹೋತ್ಸವ

ಕರಗ ಮಹೋತ್ಸವವನ್ನು 'ದ್ರೌಪದಿ-ಧರ್ಮರಾಯ'ರ ಕರಗ ಮಹೋತ್ಸವ ವೆಂದು ಕರೆಯುವರು. ಈ ಉತ್ಸವವನ್ನು ಒಂಬತ್ತು ದಿನಗಳ ಕಾಲ ಆಚರಿಸುವರು. ಕೆಲವೆಡೆಗಳಲ್ಲಿ ಇದು ಒಂಬತ್ತು ದಿನಗಳ ಉತ್ಸವವಾಗಿ ಕಂಡು ಬಂದರೆ ಮತ್ತೆ ಕೆಲವೆಡೆ ಇದು ಏಳು ದಿನಗಳ ಉತ್ಸವವಾಗಿ ಕಂಡುಬರುತ್ತದೆ. ಈ ಉತ್ಸವವನ್ನು ವಹ್ನಿಕುಲ ಕ್ಷತ್ರಿಯರೆಂಬ ಜನಾಂಗವು ಆಚರಿಸುವುದು. ಉತ್ಸವ ನಡೆಯುವ ಅವಧಿಯಲ್ಲಿ ಈ ಜನಾಂಗದವರು ಬಹಳ ಭಯ ಭಕ್ತಿಯಿಂದಿದ್ದು ನಿಯಮ ನಿಷ್ಠಿತರಾಗಿ ನಡೆದು ಕೊಳ್ಳುತ್ತಾರೆ. ಈ ಉತ್ಸವದ ಸಂದರ್ಭದಲ್ಲಿ ಕೆಲವು ಕಡೆ ಜಾತ್ರೆಗಳು, ರಥೋತ್ಸವ ಗಳು ನಡೆಯುತ್ತವೆ. ಇನ್ನೊಂದು ಮಹತ್ವದ ವಿಷಯವೆಂದರೆ ಕರಗ ಮಹೋ ತ್ಸವವು ಧರ್ಮರಾಯಸ್ವಾಮಿ ದೇಗುಲದಲ್ಲಿ ನಡೆಯುತ್ತದೆ.

ಉತ್ಸವದ ವಿವರ

ಮೊದಲ ದಿನ ಉತ್ಸವವು ಧ್ವಜಾರೋಹಣದಿಂದ ಪ್ರಾರಂಭವಾಗುವುದು. ಈ ದಿನದಂದು ಪುಣ್ಯಾಹವ, ಧ್ವಜ ಪ್ರದಕ್ಷಿಣೆ, ಬಲಿಹರಣ, ಗಂಗಾಪೂಜೆ ಮತ್ತು ಮಂಗಳಾರತಿ ಮೊದಲಾದ ವಿಧಿಗಳು ನಡೆಯುತ್ತವೆ. ಕರಗ ಪೂಜಾರಿಯನ್ನು, (ಕರಗ ಹೊರುವ ವ್ಯಕ್ತಿ) ವೀರಕುಮಾರರನ್ನು ಸಕಲ ಮರ್ಯಾದೆಗಳೊಂದಿಗೆ ಧರ್ಮ

ರಾಯ ದೇಗುಲಕ್ಕೆ ಬರಮಾಡಿಕೊಳ್ಳುವರು. ನಂತರ ಮೇಲೆ ಹೇಳಿದ ಪೂಜಾ ವಿಧಿಗಳು ನಡೆಯುವುದು. ಅವರು ಹೊಂದಿರುವ ಆಯುಧಗಳನ್ನು ಪೂಜಿಸುವರು ಮತ್ತು ಕಂಕಣ ಕಟ್ಟಿಕೊಳುವರು[1] ಸಾಮಾನ್ಯವಾಗಿ ಈ ಉತ್ಸವದ ಸಂದರ್ಭದಲ್ಲಿ ನಡೆಯುವ ಪೂಜಾವಿಧಿಗಳನ್ನು ಬ್ರಾಹ್ಮಣ ಪುರೋಹಿತರು ನಡೆಸಿಕೊಡುವರು. ಉಳಿದಂತೆ ಧರ್ಮರಾಜಸ್ವಾಮಿ ದೇಗುಲದಲ್ಲಿ ನಿತ್ಯಪೂಜೆ ಮಾಡುವವರು ವಹ್ನಿ ಮತಸ್ಥರು.

ಉತ್ಸವದ ಎರಡನೆಯ ದಿನ ಹಸಿಕರಗದ ಉತ್ಸವ ನಡೆಯುತ್ತದೆ. ಈ ದಿನದಂದು ಬೆಳಗ್ಗೆ ಬಲಿಹರಣ ವಿಧಿ ನಡೆದು ಮಧ್ಯಾಹ್ನ ಅರಿಸಿನ ಬಣ್ಣದ ಉಡುಗೆಗಳನ್ನು ತೊಟ್ಟ ವೀರಕುಮಾರರು ಮತ್ತು ಕರಗ ಪೂಜಾರಿಯು ಮಂಗಳ ವಾದ್ಯಗಳೊಂದಿಗೆ ನಿರ್ದಿಷ್ಟ ಕೊಳದ ಬಳಿಗೆ ಬರುವರು. ಅಲ್ಲಿ ಮೊದಲು ಗಂಗಾಪೂಜೆ ಮಾಡುವರು. ನಂತರ ಮೊದಲೇ ಕೊಳದಲ್ಲಿ ಅಡಗಿಸಿಟ್ಟ ಕಲಶವನ್ನು[2] ಭಕ್ತಿಯಿಂದ ಮನದಲ್ಲಿ ನೆನೆದು ಕರಗಪೂಜಾರಿ ಮತ್ತು ಮತ್ತಿಬ್ಬರು ಕಲಶವನ್ನು ತಮ್ಮ ಕೈಯೊಳಕ್ಕೆ ಆಹ್ವಾನಿಸುವರು. ನಂತರ ಕಲಶಕ್ಕೆ ಪೂಜೆಸಲ್ಲಿಸುವರು ವೀರಕುಮಾರರಿಂದ ಕಲಶಕ್ಕೆ ಅಲಗುಸೇವೆ ನಡೆಯುತ್ತದೆ. ಈ ಕಲಶವನ್ನೇ ಕರಗವೆಂದು ಕರೆಯುವರು. ಕಲಶವು ಇನ್ನೂ ಹಸಿ ಹಸಿಯಾಗಿರುವುದರಿಂದ ಇದನ್ನು ಹಸಿ ಕರಗವೆಂದು ಕರೆಯುವರು. ಹೀಗೆ ಹೊರತೆಗೆದು ಪೂಜಿಸಿದ ಕರಗವನ್ನು ನಿಂಬೆಹಣ್ಣು, ಅಕ್ಕಿ ಹಾಗೂ ದಕ್ಷಿಣೆಯನ್ನೊಳಗೊಂಡ ಅಗಲವಾದ ತಟ್ಟೆಯಲ್ಲಿಟ್ಟು ಕರಗ ಪೂಜಾರಿ ಮತ್ತು ಮತ್ತಿಬ್ಬರು ಅದನ್ನು ಅಂಗೈಯಲ್ಲಿ ಹಿಡಿದುಕೊಂಡು ಮೆರವಣಿಗೆಯಲ್ಲಿ ದೇಗುಲಕ್ಕೆ ತರುವರು. (ಕೊಳದ ಬಳಿಗೆ ಹೋದ ದಾರಿಯಲ್ಲೇ ಹಿಂತಿರುಗುವರು.) ದೇಗುಲದಲ್ಲಿ ಹಸಿಕರಗವನ್ನು ತಂದು ಪ್ರತಿಷ್ಠಾಪ್ಪಿಸಿ ಪೂಜೆ ಮಾಡುವರು. ಹೋಮ, ಯಜ್ಞೋಪವೀತಧಾರಣೆ, ಮಂಗಳಾರತಿ ಮೊದಲಾದ ಪೂಜಾ ವಿಧಿಗಳು ನಡೆಯುತ್ತವೆ.

ಉತ್ಸವದ ಮೂರನೆಯ ದಿನ ದೀಪೋತ್ಸವ ನಡೆಯುತ್ತದೆ. ವಹ್ನಿಕುಲಸ್ಥರಿಗೆ ಇದೊಂದು ದೊಡ್ಡ ಹಬ್ಬ. ಇದನ್ನು ಪೊಂಗಲ್ ಉತ್ಸವವೆಂದು ಕರೆಯುವರು. ವಹ್ನಿಕುಲದ ಹೆಂಗಳೆಯರಿಗೆ ಈ ದಿನ ಪ್ರಾಶಸ್ತ್ಯ. ಈ ದಿನದಂದು ವಹ್ನಿಕುಲಸ್ಥ

---

1 ಈ ದಿನದಂದು ಕರಗ ಪೂಜಾರಿಯು ತನ್ನ ಸತಿಯ ಮಾಂಗಲ್ಯವನ್ನು ನಾಲ್ಕು ಮಂದಿ ಕುಲಸ್ಥರೆದುರು ತೆಗೆದು ತನ್ನ ಮನೆಯ ದೇವರ ಬಳಿ ಇಡುತ್ತಾನೆ, ಈ ದಿನದಿಂದ ಉತ್ಸವ ಮುಗಿಯುವವರೆಗೆ ಈತನ ಸತಿಯನ್ನು ತಾತ್ಕಾಲಿಕ ವಿಧವೆಯೆಂದು ಪರಿಗಣಿಸುವರು. ಈಕೆ ಕರಗವನ್ನು ನೋಡಬಾರದು.

2 ಕಲಶವೆಂದರೆ ಹಸಿಮಡಕೆ. ಇದನ್ನು ನಿಯಮ ನಿಷ್ಠಿತರಾದ ನಿರ್ದಿಷ್ಟ ಕುಂಬಾರನು ಮಾತ್ರ ತಯಾರಿಸುವನು. ಎಳನೀರಿನಿಂದ ಕಲಸಿದ ಮಣ್ಣಿನಿಂದ ಇದನ್ನು ಮಾಡುವರು. ಪಂಚಮುಖಿಗಳಿರುವ ಈ ಕಲಶದ ಸುತ್ತಲೂ ಸೂರ್ಯ, ಚಂದ್ರ, ಅರ್ಜುನ ದ್ರೌಪದಿ ಮತ್ತು ಧರ್ಮರಾಯರ ಚಿತ್ರಗಳನ್ನು ಬರೆದು ಅಲಂಕರಿಸುವರು.

ರೆಲ್ಲರೂ ಸೇರಿ ಧರ್ಮರಾಯ ದೇಗುಲದಲ್ಲಿ ಸೇರಿ ಪೊಂಗಲ್ ಎಂಬ ಸಿಹಿ ಅಡುಗೆಯನ್ನು ತಯಾರಿಸುವರು. ಸಿದ್ಧ ಮಾಡಿದ ಅಡುಗೆಯ ಅರ್ಧಪಷ್ಟನ್ನು ವೀರ ಕುಮಾರರಿಗೆ ಉಣಬಡಿಸಿ ಉಳಿದರ್ಧ ಭಾಗವನ್ನು ಭಕ್ತಿಯಿಂದ ತಮ್ಮ ಮನೆಗೆ ಕೊಂಡೊಯ್ದು ಸ್ವೀಕರಿಸುವರು. ಈ ದಿನದಂದು ಬೆಳಗ್ಗೆ ಈ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ದೇವರ ಕೃಪೆಗೆ ಪಾತ್ರರಾಗಲು, ವೀರಕುಮಾರರೊಂದಿಗೆ ಕರಗ ಪೂಜಾರಿಯು ತಮ್ಮ ಜನಾಂಗದ ಎಲ್ಲ ಮನೆಗಳಿಗೂ ಹೋಗಿ ಎಲ್ಲರನ್ನು ದೇಗುಲಕ್ಕೆ ಸಕಲ ಮರ್ಯಾದೆಗಳೊಂದಿಗೆ ಕರೆತರುವರು. ಇವಲ್ಲದೆ ಕರಗ ಪೂಜೆಯು ನಡೆಯುವುದು.

ಉತ್ಸವದ ನಾಲ್ಕನೆಯ ದಿನವೇ ಕಲ್ಯಾಣೋತ್ಸವ. ಈ ಉತ್ಸವ ಸಾಮಾನ್ಯವಾಗಿ ರಾತ್ರಿಕಾಲದಲ್ಲಿ ನಡೆಯುತ್ತದೆ. ಇಂದಿನ ದಿನ ರಾತ್ರಿ ವಹ್ನಿಕುಲದಲ್ಲಿ ಹರಕೆ ಹೊತ್ತವರನ್ನು, ಮುಡಿಪು ಇಟ್ಟವರನ್ನು ಮಂಗಳ ವಾದ್ಯಗಳೊಂದಿಗೆ ದೇಗುಲಕ್ಕೆ ಕರೆತರಲಾಗುತ್ತದೆ. ಹರಕೆ ಹೊತ್ತವರು ತಮ್ಮೊಂದಿಗೆ ಮಂಗಳ ದ್ರವ್ಯಗಳನ್ನು, ಕಾಣಿಕೆಗಳನ್ನು ತರುವರು. ನಂತರ ದೇಗುಲದಲ್ಲಿ ಕರಗಪೂಜೆಯು ನಡೆಯುತ್ತದೆ. ಮತ್ತು ದ್ರೌಪದಿ-ಧರ್ಮರಾಯರ ಕಲ್ಯಾಣೋತ್ಸವವು ನಡೆಯುತ್ತದೆ.

ಉತ್ಸವದ ಐದನೆಯ ದಿನವೆ ಹೂವಿನ ಕರಗದ ನೃತ್ಯ. ಈ ದಿನ ಬೆಳಗ್ಗೆ ಕಲಶಪೂಜೆ ಯಥಾವಿಧಿಯಾಗಿ ನಡೆಯುತ್ತವೆ. ಪವಿತ್ರ ಗಂಗೆಯಲ್ಲಿ ಮಿಂದ ಕರಗ ಪೂಜಾರಿ ಮತ್ತು ವೀರಕುಮಾರರು ಧರ್ಮರಾಯನ ದೇಗುಲದ ಮುಂದೆ ಅಗ್ನಿ ಕುಂಡವನ್ನು ಸಿದ್ಧಪಡಿಸುವರು: ಮತ್ತು ಚಿತ್ರಗೋಪುರಕ್ಕೆ ಪೂಜೆಮಾಡುವರು. ಪುನಃ ಸಂಜೆಯವೇಳೆಗೆ ಮಿಂದು ಅರಿಶಿನ ವಸ್ತ್ರಗಳನ್ನು ಧರಿಸಿ ದೇಗುಲಕ್ಕೆ ಬರುವರು. ಕರಗವನ್ನು ದುಂಡುಮಲ್ಲಿಗೆ ಹೂಗಳಿಂದ ಅಲಂಕರಿಸುವರು.[3] ಕರಗಕ್ಕೆ ವಿಶೇಷ ಪೂಜೆ ಮಾಡುವರು. ಕರಗ ಪೂಜಾರಿಗೆ ಹೆಣ್ಣು ವೇಷ ತೊಡಿಸುವರು. ಅರಿಶಿನವಸ್ತ್ರ, ಬಳೆ, ಜಡೆ, ಕುಚ್ಚು ಮೊದಲಾದವುಗಳಿಂದ ಅಲಂಕರಿಸುವರು. ಎರಡು ಕೆನ್ನೆಗಳಿಗೂ ಅರಶಿನ ಬಳಿಯುವರು. ಮುಖಕ್ಕೆ ತಿಲಕವಿಡುವರು. ಇದಕ್ಕೆ ಮುನ್ನ ಆತನಿಗೆ ವಪನ ಸಂಸ್ಕಾರ ಮಾಡಿ ಕಂಕಣ ಧಾರಣೆ ಮಾಡಿಸುವರು. ಪೂಜೆಗಳು ಮತ್ತು ಹೋಮಾದಿಗಳು ನಡೆದನಂತರ ವೀರಕುಮಾರರಿಂದ ಅಲಗು ಸೇವೆ ನಡೆಯುತ್ತದೆ[4]. ಹೀಗೆ ಪೂಜೆಗೊಂಡು ಮತ್ತು ಅಲಂಕೃತಗೊಂಡ ಕರಗ

---

3 ಶಕ್ತಿ ಆವಾಹನೆ ಮಾಡಿದ ಕಲಶದಲ್ಲಿ ದಕ್ಷಿಣೆ, ನೀರು, ಬೆಳ್ಳಿ, ಬಂಗಾರ ಮತ್ತು ನಿಂಬೆಹಣ್ಣುಗಳನ್ನಿಟ್ಟು, ಕಲಶದ ಮೇಲ್ಭಾಗವನ್ನು ಬಿದಿರಿನಿಂದ ಗೋಪುರಾಕಾರವಾಗಿ ಸುಮಾರು 3–4 ಅಡಿ ಮುಚ್ಚಿರುತ್ತಾರೆ. ಬಿದಿರಿನ ಕವಚದ ಹೊರಭಾಗವನ್ನು ಮಲ್ಲಿಗೆ ಹೂಗಳಿಂದ ಅಲಂಕರಿಸುವರು – ಇದೇ ಹೂ ಕರಗದ ಸ್ವರೂಪ.

4 ಅಲಗುಸೇವೆ: ಕತ್ತಿಯಿಂದ ಎದೆಗೆ ಹೊಡೆದುಕೊಳ್ಳುವುದು.

ವನ್ನು ತಲೆಯಲ್ಲಿ ಧರಿಸಿ (ತಲೆಯಮೇಲೆ ಹೊತ್ತು) ಕೈಗಳನ್ನು ಇಳಿಬಿಟ್ಟು ಒಂದು ಕೈಯಲ್ಲಿ ಬೆಳ್ಳಿ ಬೆತ್ತ ಮತ್ತೊಂದು ಕೈಯಲ್ಲಿ ಕಠಾರಿ ಹಿಡಿದು ಆರತಿಗೊಂಡು ಹೊರಬಂದ ಕರಗ ಪೂಜಾರಿಯು, ದೇಗುಲವನ್ನು ಮತ್ತು ಚಿತ್ರಗೋಪುರವನ್ನು ಮೂರು ಬಾರಿ ಪ್ರದಕ್ಷಿಣೆಗೊಂಡು ತಮ್ಮಟೆಯ ಗತ್ತಿಗನುಸಾರವಾಗಿ ಗಂಭೀರವಾಗಿ



ಚಿತ್ರ : 1 ಕರಗದ ಮೆರವಣಿಗೆ ಈ ಚಿತ್ರದಲ್ಲಿ ಹೂವಿನ ಕರಗವನ್ನು ಹೊತ್ತ ಕರಗ ಪೂಜಾರಿಯನ್ನು ತಮ್ಮಟೆ ವಾದ್ಯಗಾರನನ್ನು ಮತ್ತು ವೀರಕುಮಾರರನ್ನು ಕಾಣಬಹುದು.

ಕುಣಿಯುತ್ತ ಊರೊಳಕ್ಕೆ ಬರುವನು. ಈತನ ಹಿಂದೆ ಕತ್ತಿಹಿಡಿದ ವೀರಕುಮಾರರು ನಡೆದು ಬರುವರು. ಕರಗ ಉತ್ಸವಕ್ಕೆ ಊರಿನಲ್ಲಿ ಹಲವಾರು ಕಡೆ ಆರತಿ ಹಾಗೂ ಪೂಜೆಗಳು ನಡೆಯುತ್ತದೆ. ಕರಗಪೂಜಾರಿಗೆ ಕುಡಿಯಲು ಹಾಲನ್ನು ಕೊಟ್ಟು ಅಲ್ಪಸ್ವಲ್ಪ ಹಣವನ್ನು ಸಹ ಕೊಡುವರು. ಕರಗವನ್ನು ತಲೆಯಮೇಲೆ ಹೊತ್ತು ಎರಡು ಕೈಗಳನ್ನು ಇಳಿಬಿಟ್ಟು ತಮಟೆ, ಡೋಲು ನಾಗಸ್ವರಗಳ ಗತ್ತಿಗೆ ಹಾಗೂ ನಾದಕ್ಕನುಗುಣವಾಗಿ ಕುಣಿಯುವನು. ತಮಟೆಯ ಗತ್ತಿಗನುಗುಣವಾಗಿ ವೀರಾವೇಷದಿಂದ ಕುಣಿದರೆ, ಡೋಲು-ನಾಗಸ್ವರಗಳ ಮಧುರ ನಾದಕ್ಕನುಗುಣವಾಗಿ ಗಂಭೀರವಾಗಿ ಆಕರ್ಷಕ ಭಂಗಿಗಳಲ್ಲಿ ಕುಣಿಯುವನು. [ಕರಗ ಹೋದೆಡೆಯಲ್ಲೆಲ್ಲ

ತಮ್ಮಟೆ ವಾದ್ಯದವನು ಮಾತ್ರ ಕರಗವನ್ನು ಅನುಸರಿಸುತ್ತಾನೆ. ಡೋಲು ನಾಗಸ್ವರದವರು ಒಂದೆಡೆ ಮಾತ್ರ ಕರಗ ನೃತ್ಯಕ್ಕೆ ವಾದ್ಯ ನುಡಿಸುವರಷ್ಟೆ] ಇದೊಂದು ರುದ್ರಭಯಂಕರ ವೀರಾವೇಷಪೂರಿತ ನೃತ್ಯ. (ಕೆಲವು ಸಲ ಮಾತ್ರ ತಾಮಸ ನೃತ್ಯ) ಕೆಲವೆಡೆಗಳಲ್ಲಿ ಕರಗಪೂಜಾರಿಯನ್ನು ಆವೇಷಗೊಳಿಸಲು ಹಾಡುಗಳನ್ನು ಹಾಡುವರು. ಹಲವಾರು ಘಂಟೆಗಳ ಕಾಲ ಕರಗಪೂಜಾರಿಯು ಒಂದೇ ಸಮನೆ ದಣಿವಿಲ್ಲದೆ ಕುಣಿಯುವನು. ಅನೇಕ ಮಂದಿ ಕರಗವನ್ನು ಹಿಂಬಾಲಿಸುವರು. ಕರಗ ಹೋದೆಡೆಯಲ್ಲೆಲ್ಲ ಜನತೆಯಿಂದ ಅಭೂತಪೂರ್ವ ಸ್ವಾಗತ, ಮನ್ನಣೆ ದೊರೆಯುತ್ತದೆ. ಸಾಮಾನ್ಯವಾಗಿ ಹೂವಿನ ಕರಗವು ಹುಣ್ಣಿಮೆಯ ದಿನದಂದು ನಡೆಯುತ್ತದೆ. ಹಾಲು ಚೆಲ್ಲಿದಂತಹ ಬೆಳದಿಂಗಳಿನ ಬೆಳಕಿನಲ್ಲಿ ಸುವಾಸಿತ ಮಲ್ಲಿಗೆಗಳಿಂದ ಅಲಂಕೃತ ಕರಗ ಕುಣಿತವನ್ನು ನೋಡಲು ಎಲ್ಲರ ಮನಸ್ಸು ತಹತಹಿಸುತ್ತದೆ. ಕರಗವು ತಮ್ಮ ತಮ್ಮ ಮನೆಗಳ ಮುಂದೆ ಹೆಚ್ಚು ಹೊತ್ತು ಕುಣಿಯಲು ಜನತೆ ಅಪೇಕ್ಷಿಸುತ್ತದೆ. ಕರಗದ ಬರವಿಗಾಗಿ ಕಾತರಿಸುವರು. ಅಂದು ಆ ಊರಿನಲ್ಲಿ ಉತ್ಸವಗಳೆಲ್ಲ ಒಂದು ದೊಡ್ಡ ಬಯಲಿನಲ್ಲಿ ಸೇರುವುದು. ಕರಗವು ಈ ಉತ್ಸವಗಳ ಸಮ್ಮುಖದಲ್ಲಿ ಹೆಚ್ಚು ಹೊತ್ತು ಕುಣಿಯುವುದು. ಈ ದೃಶ್ಯವನ್ನು ನೋಡಲು ಸಾವಿರಾರು ಮಂದಿ ಸೇರುವರು. ರಾತ್ರಿ ಇಡೀ ಊರೆಲ್ಲ ಕುಣಿದು ಪ್ರದರ್ಶನ ನಡೆಸಿದ ಕರಗವು ಮರುದಿನ ಬೆಳಿಗ್ಗೆ (ಉತ್ಸವದ ಆರನೆ ದಿನ) ಧರ್ಮರಾಯ ದೇವಾಲಯದ ಬಳಿಗೆ ಬಂದು ಅಲ್ಲಿ ಸಿದ್ಧಪಡಿಸಿರುವ ಅಗ್ನಿಕುಂಡದಲ್ಲಿ ವೀರಕುಮಾರರೊಂದಿಗೆ ಹಾಯ್ದು ದೇಗುಲದೊಳಕ್ಕೆ ಬಂದು ಕರಗವನ್ನು ಇಳಿಸುವರು.[5]

ಉತ್ಸವದ ಆರನೆ ದಿನ ಕರಗವನ್ನು ಇಳಿಸಿದನಂತರ ಅಂದು ಸಂಜೆ 'ಪುರಾಣಗಾವು' ಎಂಬ ಒಂದು ಕಾರ್ಯಕ್ರಮವಿರುತ್ತದೆ. ಈ ಕಾರ್ಯಕ್ರಮದ ಅಂಗವಾಗಿ ಮಹಾಭಾರತ ಕಥಾಶ್ರವಣವನ್ನು ನಡೆಸಿ ಪೋತರಾಜು ಎಂಬ ವ್ಯಕ್ತಿಯನ್ನು ಹೆಸರಿಸಿ ಆತನಿಗೊಂದು ಮೇಕೆಯನ್ನು ಬಲಿಕೊಡುವರು. ತಿಗಳರ ಪುರಾಣದಂತೆ ಇದಕ್ಕೆ ಒಂದು ಕಥೆ ಇದೆಯೆಂದು ಜನಪದರು ಹೇಳುವರು. ಪೋತರಾಜನೆಂಬುವ ಒಬ್ಬ ಬಲಿಷ್ಠ ವ್ಯಕ್ತಿಯಿದ್ದ. ಈತ ಧರ್ಮರಾಯನಿಗೆ ಒಮ್ಮೆ ಸಹಾಯಮಾಡಿದ. ಇದಕ್ಕಾಗಿ ಧರ್ಮರಾಯನು ಅವನಿಗೆ ಬೆಟ್ಟದಷ್ಟು ಅನ್ನವನ್ನು ಹಲವಾರು ಪ್ರಾಣಿ

---

5 ಕರಗದ ಮೇಲಿನ ಒಂದು ಹೂವು ಸಹ ಕೆಳಗೆ ಬೀಳದಂತೆ ಕರಗಪೂಜಾರಿಯು ಎಚ್ಚರಿಕೆಯಿಂದ ಕುಣಿಯುವನು. ಕರಗದ ಮೇಲಿನ ಒಂದು ಹೂ ಕೆಳಕ್ಕೆ ಬಿದ್ದರೆ, ಅಥವಾ ಕರಗವೇ ಕೆಳಕ್ಕೆ ಬಿದ್ದುಹೋದರೆ ಕರಗ ಪೂಜಾರಿಯ ತಲೆಯನ್ನು ಚೆಂಡಾಡುವರೆಂದು ಒಂದು ಪ್ರತೀತಿ ಇದೆ.

ಗಳನ್ನು ಬಹುಮಾನವಾಗಿ ಕೊಡುವನು. ಈ ಹಿನ್ನೆಲೆಯಲ್ಲಿ ಕಥಾಶ್ರವಣ[6] ವಾದ ನಂತರ ಪೋತರಾಜನ ಬಲಿ ಎಂಬ ಕಾರ್ಯಕ್ರಮವಿರುತ್ತದೆಂದು ಹೇಳುವರು.[7]

ಸುತ್ತಲು ಸೇರಿರುವ ವೀರಕುಮಾರರ ಮಧ್ಯೆ ಈ ಬಲಿ ನಡೆಯುತ್ತದೆ. ಈ ಸಂದರ್ಭದಲ್ಲಿ ಬಲಿಪೂಜಾರಿಯೊಬ್ಬನನ್ನು[8] ಕರೆತಂದು ಆತನನ್ನು ಚಾಟಿಯಿಂದ ಹೊಡೆದು ಆವೇಷಯುತನನ್ನಾಗಿ ಹಾಗೂ ಕೋಪೋದ್ರಿಕ್ತನನ್ನಾಗಿ ಮಾಡುವರು. ಒಂದು ಮೇಕೆಯನ್ನು ತಂದು ಅದನ್ನು ನಿಶ್ಯಕ್ತಗೊಳಿಸಿ ಒಂದೆಡೆ ಮಲಗಿಸಿ ಅದರ ಮೇಲೆ ಅರಿಸಿನ ಬಣ್ಣದ ಪಂಚೆ ಅಥವಾ ವಸ್ತ್ರವನ್ನು ಹೊದಿಸುವರು. ಇದನ್ನು ಬಲಿಪೂಜಾರಿಗೆ (ಬಲಿಪೂಜಾರಿ ಪೋತರಾಜನಿಗೆ ಸಂಕೇತ) ಅನ್ನದ ಜೊತೆಗೆ ಕೊಡುವರು. ಆವೇಷಗೊಂಡಿರುವ ಪೂಜಾರಿಯು ಅನ್ನವನ್ನು ಬಕಬಕನೆ ತಿಂದು ಮೇಕೆಯನ್ನು ಸಿಗಿದು ಅದರ ರಕ್ತವನ್ನು ಹೀರುವನು. ಇದೊಂದು ಹೃದಯ ವಿದ್ರಾವಕ ದೃಶ್ಯ. ಹಿಂದೆ ಈ ಸಂಪ್ರದಾಯವು ಚಾಚೂತಪ್ಪದೆ ನಡೆಯುತ್ತಿತ್ತು. ಈಗ ಕೇವಲ ಮೇಕೆರಕ್ತವನ್ನು ನೆಲದ ಮೇಲೆ ಚೆಲ್ಲಾಡುವರಷ್ಟೆ.

ಏಳನೆಯ ದಿನ ಉತ್ಸವದ ಕೊನೆಯ ದಿನ. ಈ ದಿನದ ಮುಖ್ಯ ಕಾರ್ಯಕ್ರಮ ವೆಂದರೆ ವಸಂತೋತ್ಸವ ಮತ್ತು ಕಲಶವಿಸರ್ಜನೆ ನಡೆಯುತ್ತದೆ. ಈ ದಿನದಂದು ಬೆಳಗ್ಗೆ ಮೆರವಣಿಗೆಯಲ್ಲಿ ಕಲಶದ ಹೂಗಳನ್ನು ದೇಗುಲದಿಂದ ಕೊಳದ ಬಳಿಗೆ ಕೊಂಡೊಯ್ದು ನೀರಿನಲ್ಲಿ ವಿಸರ್ಜಿಸುವರು. ಕೊಳದಲ್ಲಿ ಮಿಂದು ದೇವಸ್ಥಾನಕ್ಕೆ ಮರಳುವರು. ನಂತರ ಸಂಜೆ ವೀರಕುಮಾರರು ಮತ್ತು ಕರಗಪೂಜಾರಿಯು ಒನಕೆಯ ಮೇಲೆ ವಸಂತದ ನೀರುತುಂಬಿದ ಕೊಡಗಳನ್ನಿಟ್ಟು ಅದನ್ನು ನೆತ್ತಿಯಮೇಲೆ ಹೊತ್ತು ಮತ್ತು ಅಂಗೈಯಲ್ಲಿ ಹಿಡಿದು ಕುಣಿಯುವರು. ಹೀಗೆ ಕುಣಿಯುವಾಗ ವಸಂತದ ನೀರು ಸುತ್ತಲೂ ಚೆಲ್ಲುವುದು. ವಸಂತೋತ್ಸವದೊಂದಿಗೆ ಕರಗ ಮಹೋತ್ಸವವು ಕೊನೆಗೊಳ್ಳುವುದು.

ವೀರಕುಮಾರರು

ವಹ್ನಿಕುಲಸ್ಥರಾದ ಇವರು ಹಲವುಮಂದಿ ಕತ್ತಿಹಿಡಿದು ಕರಗ ಉತ್ಸವದ ಹಿಂದೆ ನಡೆದು ಬರುವರು. ಇವರು ಇಂತಿಷ್ಟೇ ಮಂದಿ ಬರಬೇಕೆಂಬ ನಿಯಮವಿಲ್ಲ. ಇವರನ್ನು ವೀರಕುಮಾರರು, ವೀರಗಾಳ್ಳು, ಕುಮಾರಮಕ್ಕಳು ಎಂದು ಕರೆಯುವರು.

---

6 ಕಥಾಶ್ರವಣ ಮಾಡುವವರು ವಹ್ನಿಮತಸ್ಥರೆ.

7 ಒಂಬತ್ತು ದಿನಗಳ ಉತ್ಸವವನ್ನು ಅಪರೋಕ್ಷವಾಗಿ ರಕ್ಷಿಸುವವನು ಪೋತರಾಜ ಎಂಬ ನಂಬಿಕೆಯಿದೆ.

8 ವೀರಕುಮಾರರೊಂದಿಗೆ ಬಲಿಪೂಜಾರಿಯು ಸಹ ಕರಗ ಉತ್ಸವದ ಹಿಂದೆ ನಡೆದ ಬರುತ್ತಾನೆ.

ಇವರನ್ನು ವೀರಭದ್ರನ ಅಪರಾವತಾರವೆಂದು ಹೇಳುತ್ತಾರೆ. ಕತ್ತಿ ಹಿಡಿದು ಕರಗ ಉತ್ಸವದ ಹಿಂದೆ ಇವರು ನಡೆದು ಬರುವ ಉದ್ದೇಶ ಕರಗ ಉತ್ಸವದ ರಕ್ಷಣೆಗಾಗಿ. ಇವರು ಸಹ ಅರಸಿನ ವಸ್ತ್ರಗಳನ್ನು ಉಟ್ಟಿದ್ದು ನಡುವಿಗೆ ದಟ್ಟಿಯನ್ನು ಸುತ್ತಿರುತ್ತಾರೆ. ಮುಖದಲ್ಲಿ ನಾಮದರಿಸುತ್ತಾರೆ. ಹರಕೆ ಹೊತ್ತ ವಹ್ನಿಮತಸ್ಥರು ಮಾತ್ರ ವೀರಕುಮಾರರಾಗಿರುತ್ತಾರೆ. ಅಪರೂಪವಾಗಿ ಕೆಲವು ಸ್ಥಳಗಳಲ್ಲಿ ಪಟ್ಟೆಗಾರರು, ದರ್ಜಿಯುವರು ವೀರಕುಮಾರರಾಗುವರು. ವಹ್ನಿಮತಸ್ಥರ ಮನೆಯಿಂದ ಮನೆಗೊಬ್ಬರಂತೆ ವೀರಕುಮಾರರು ಬರುವರು. ಕರಗಮಹೋತ್ಸವವು ನಡೆಯುವ ಕಾಲವೂ ಇವರು ನಿಯಮನಿಷ್ಠಿತರಾಗಿರುತ್ತಾರೆ. ವೀರಕುಮಾರರನ್ನು ಕುರಿತು ಜನಪದರು ಮತ್ತು ವಹ್ನಿಮತಸ್ಥರು ಒಂದು ಚಿಕ್ಕ ಕಥೆಯನ್ನು ಹೇಳುವರು: ಮಹಾಭಾರತದ ಯುದ್ಧದಲ್ಲಿ ಪಾಂಡವರ ವಿಜಯಕ್ಕೆ ಅನುಕೂಲವಾಗಲು ಅಗ್ನಿದೇವರು ಸೈನ್ಯವೊಂದನ್ನು ಸೃಷ್ಟಿಸುವನು. ಈ ಸೈನ್ಯವೆ ವೀರಕುಮಾರರು ಎಂದು ಹೇಳುವರು.

ಕರಗಪೂಜಾರಿ

ಕರಗವನ್ನು ಹೊರುವವನಿಗೆ ಕರಗಪೂಜಾರಿ ಎಂದು ಹೆಸರು. ಎಲ್ಲ ವಹ್ನಿಕುಲಸ್ಥರೂ ಕರಗಪೂಜಾರಿಗಳಾಗುವುದಿಲ್ಲ. ಕೇವಲ ಕೆಲವೇ ಮಂದಿ ಮಾತ್ರ ಕರಗ ಪೂಜಾರಿಗಳಾಗುವರು. ಮದುವೆಯಾದ ವಹ್ನಿಮತಸ್ಥರು ಮಾತ್ರ ಕರಗ ಪೂಜಾರಿಗಳಾಗಬೇಕೆಂಬ ನಿಯಮವಿದೆ. ಕರಗಪೂಜಾರಿಯು ಉತ್ಸವದ ಏಳು ದಿನಗಳು ಬಹಳ ನಿಯಮನಿಷ್ಠಿತನಾಗಿರುತ್ತಾನೆ. ಏಳು ದಿನಗಳ ಕಾಲ ತಾತ್ಕಾಲಿಕವಾಗಿ ಬ್ರಹ್ಮಚರ್ಯವನ್ನು ಪಾಲಿಸುತ್ತಾನೆ. ಈ ಅವಧಿಯಲ್ಲಿ ಈತನು ದೇವಾಲಯದಲ್ಲೆ ನೆಲೆಸುವನು. ದೇವಿಯನ್ನು ಸದಾ ಜಪಿಸುವನು. ಈ ಉತ್ಸವದ ಅವಧಿಯಲ್ಲಿ ಈತನು ತನ್ನ ಹೆಂಡತಿಯನ್ನು ನೋಡಬಾರದೆಂಬ ನಿಯಮವಿದೆ. ಉತ್ಸವದ ಮೊದಲ ದಿನ ನಾಲ್ಕುಜನ ಕುಲಸ್ಥರೆದುರು ತನ್ನ ಹೆಂಡತಿಯ ಮಾಂಗಲ್ಯವನ್ನು ತೆಗೆದು ತನ್ನ ಮನೆಯ ದೇವರ ಬಳಿ ಇಡುವನು. ಪುನಃ ಆರನೆಯ ದಿನ ಮಾಂಗಲ್ಯ ಧಾರಣೆ ಮಾಡುವನು. ವೀರಕುಮಾರರು ಮತ್ತು ಕರಗಪೂಜಾರಿಯು ಪ್ರತಿದಿನವೂ ಒಂದೊಂದು ಬಾವಿಗೆ ತೆರಳಿ ಸ್ನಾನಮಾಡಿ ಬರುವರು. ಹರಕೆ ಹೊತ್ತ ವಹ್ನಿಕುಲಸ್ಥರು ಉತ್ಸವಕಾಲದ ಒಳ್ಳೆಯ ದಿನಗಳಲ್ಲಿ ಪೂಜಾರಿ ಹಾಗೂ ವೀರಕುಮಾರರನ್ನು ಮನೆಗೆ ಕರೆದು ಪೂಜಿಸುವರು. ಪಾನಕಪಣ್ಯಾರ ನೀಡುವರು.

ಕರಗ ನೃತ್ಯದ ಮೂಲ

ಕರಗ ನೃತ್ಯವನ್ನು ದ್ರೌಪದಿ–ಧರ್ಮರಾಯರ ಕರಗವೆಂದು ಹೇಳುವುದರಿಂದ ಮತ್ತು ವಹ್ನಿಮತಸ್ಥರು ತಾವು ಪಾಂಡವರ ಆರಾಧಕರೆಂದು ಹೇಳಿಕೊಂಡು ಕರಗ

ವನ್ನು ಆಚರಿಸುವುದರಿಂದ ಪಾಂಡವರಿಗೂ ಕರಗಕ್ಕೂ ಸಂಬಂಧವಿರಬೇಕೆಂದು ಭಾವಿಸುವುದು ಸಹಜ. ಕರಗ ನೃತ್ಯದ ಆಚರಣೆಗೆ ಹಾಗೂ ಅದು ಹುಟ್ಟಿಕೊಂಡ ಬಗ್ಗೆ ವಹ್ನಿಕುಲಸ್ಥರು ತಮ್ಮದೇ ಆದ ಕಥೆಗಳನ್ನು ಹೇಳುವರು. ಈ ಕಥೆಗಳನ್ನು ಸಂಗ್ರಹಿಸಿ ಹೀಗೆ ಹೇಳಬಹುದು.

1. ದ್ರೌಪದಿಯು ಪಂಚಪಾಂಡವರ ವಲ್ಲಭೆ. ಒಬ್ಬೊಬ್ಬ ಗಂಡನ ಸಂಗಡವೂ ಒಂದೊಂದು ವರ್ಷಕಾಲ ಅವಳು ಸರದಿಯಂತೆ ವಾಸಿಸುವಳು. ಹೀಗಿರುವಲ್ಲಿ ಅವಳು ಒಬ್ಬರ ಸರದಿ ಮುಗಿದು ಮತ್ತೊಬ್ಬರ ಸರದಿಗೆ ತೆರಳುವಾಗ ಪವಿತ್ರಳಾಗಲು (ಲೋಕದ ದೃಷ್ಟಿಯಿಂದ) ಕಲಶವನ್ನು ಹೊತ್ತು ಊರೆಲ್ಲ ಸುತ್ತಿ ಅಗ್ನಿಪ್ರವೇಶಮಾಡಿ ಪವಿತ್ರಳಾಗುವಳು. ದ್ರೌಪದಿಯ ಈ ಆಚರಣೆಯೆ ಕರಗ ನೃತ್ಯ. ವಹ್ನಿಮತಸ್ಥರು ತಮ್ಮ ಆರಾಧ್ಯದೈವದ ಆಚರಣೆಯನ್ನು ಅನುಕರಿಸಿ ಅವರನ್ನು (ಆರಾಧ್ಯದೈವವನ್ನು) ತೃಪ್ತಿಪಡಿಸಲೋಸುಗ ನಡೆಸುವ ಕರಗವೇ ಈ ನೃತ್ಯದ ಹುಟ್ಟಿಗೆ ಪ್ರೇರಕವಾಗಿರಬಹುದು.

2. ಆದಿಕವಿ ಪಂಪನ ವಿಕ್ರಮಾರ್ಜುನ ವಿಜಯದಲ್ಲಿ 'ಕರಗಹೋಮ' ಎಂಬ ಉಲ್ಲೇಖಬರುತ್ತದೆ. ಕವಿ ರನ್ನನ ಸಾಹಸ ಭೀಮ ವಿಜಯದಲ್ಲಿ "ದೇವಾಸುರ ಯುದ್ಧಕ್ಕೆ ಕರಗಂಬೊತ್ತಳೆಂಬಂತೆ" ಎಂದು ದ್ರೌಪದಿಯ ವರ್ಣನೆ ಬರುತ್ತದೆ. ರನ್ನನ ಈ ಉಲ್ಲೇಖವನ್ನು ಆಚಾರ್ಯ ತೀ. ನಂ. ಶ್ರೀ. ಅವರು 'ದೇವಾಸುರ ಸದೃಶವಾದ ಭೀಮದುರ್ಯೋದನರ ಯುದ್ಧ ನಡೆಯಲೆಂಬ ಉತ್ಕಟೇಚ್ಛೆಯಿಂದ ಕರಗವನ್ನು ಹೊತ್ತಳೆಂಬಂತೆ ತೋರುತ್ತಿದ್ದಳೆಂ'ಬುದು ಇಲ್ಲಿ ಕವಿಯ ಕಲ್ಪನೆಯೆಂದು ಹೇಳಿ ಅವರು ವ್ಯಾಖ್ಯಾನಿಸುತ್ತಾರೆ.[9]

3. ಶ್ರೀ ಸಿ. ಕೆ. ಪರಶುರಾಮಯ್ಯನವರು ಕರಗ ಸಂಬಂಧವಾದ ಎರಡು ಐತಿಹ್ಯಗಳನ್ನು ಸಂಗ್ರಹಿಸಿದ್ದಾರೆ.[10]

(i) ಕುರುಕ್ಷೇತ್ರದ ಸಮರದನಂತರ ಪಾಂಡವರ ಸ್ವರ್ಗಾರೋಹಣ ಸಂದರ್ಭದಲ್ಲಿ ದ್ರೌಪದಿ ಮೂರ್ಛಿತಳಾಗಿ ಹಿಂದೆ ಬಿದ್ದಳಂತೆ. ಎಚ್ಚರಗೊಂಡನಂತರ ತನ್ನ ಪತಿಗಳು ಇಲ್ಲದಿರುವುದನ್ನು ಕಂಡು ರೋದಿಸುತ್ತಿರಲು. ತಿಮಿರಾಸುರನೆಂಬ ರಕ್ಕಸನು ಆಕೆಯನ್ನು ಪೀಡಿಸಲು ಅವನನ್ನು ನಿಗ್ರಹಿಸುವ ಸಲುವಾಗಿ ದ್ರೌಪದಿಯು ವಿರಾಟ್ ರೂಪ ತಾಳಿ ತಲೆಯಮೇಲೆ ಧರಿಸಿದ ಕುಂಭವೇ ಕರಗ.

---

9 ಗದಾಯುದ್ಧ ಸಂಗ್ರಹ ತೀ. ನಂ. ಶ್ರೀ.

10 ಸಂಪುಟ 3 'ಕನ್ನಡ ವಿಶ್ವಕೋಶ.' (ಮೈಸೂರು ವಿಶ್ವವಿದ್ಯಾನಿಲಯದ ಪ್ರಕಟಣೆ) ಪುಟ 903

(ii) ದ್ವಾಪರ ಯುಗದಲ್ಲಿ ಸರ್ವಾಲಂಕಾರಭೂಷಿತೆಯಯಾದ ದ್ರೌಪದಿಯು ಮಂಗಳ ಕಲಶವನ್ನು ಹಿಡಿದು ಸ್ವಯಂವರ ಮಂಟಪವನ್ನು ಪ್ರವೇಶಿಸಿ ಮತ್ಸ್ಯ ಯಂತ್ರವನ್ನು ಭೇದಿಸಿದ ಅರ್ಜುನನನ್ನು, ಕುಂತಿಯ ಅಭಿಲಾಷೆಯಂತೆ ಉಳಿದ ನಾಲ್ವರು ಪಾಂಡವರನ್ನು ಶಾಸ್ತ್ರೋಕ್ತವಾಗಿ ವಿವಾಹವಾದಳು. ಆಗ ಆನಂದಾತಿಶಯ ದಿಂದ ಕೈಯಲ್ಲಿದ್ದ ಕಲಶವನ್ನು ಶಿರದಲ್ಲಿ ದರಿಸಿದಳು. ಅದೇ ಕರಗವಾಯ್ತು.

ಮೇಲ್ಕಂಡ ಮೂರು ನಾಲ್ಕು ಕಥೆಗಳಿಂದ ಕರಗ ಆಚರಣೆಯ ಉದ್ದೇಶವನ್ನು ತಿಳಿಯಬಹುದು.

ಧರ್ಮಸಮನ್ವಯದ ಸಂಕೇತವಾಗಿ ಕರಗ ಉತ್ಸವ

ಬೆಂಗಳೂರು ನಗರ ಹಾಗೂ ಕೋಲಾರ ನಗರದಲ್ಲಿ ಕರಗ ಮಹೋತ್ಸವವು ಹಿಂದು ಮುಸ್ಲಿಂಮರ ಸುಮಧುರ ಬಾಂಧವ್ಯದ ಸಂಕೇತವಾಗಿ ಆಚರಿಸುವರು.

ಬೆಂಗಳೂರು ನಗರದಲ್ಲಿ ಹೂವಿನ ಕರಗವು ಮುಸ್ಲಿಮರ ಪವಿತ್ರ ದೇಗುಲವಾದ ದರ್ಗಾಕ್ಕೆ ತೆರಳಿ ಅಲ್ಲಿ ಪೂಜಾದಿಗಳನ್ನು ಸ್ವೀಕರಿಸುತ್ತದೆ. ಅಲ್ಲಿ ಸ್ವಲ್ಪ ಹೊತ್ತು ಕುಣಿಯುತ್ತದೆಂದು ಹೇಳುತ್ತಾರೆ. ಕೋಲಾರ ನಗರದಲ್ಲಿರುವ ಎರಡು ಧರ್ಮರಾಯ ಸ್ವಾಮಿ ದೇಗುಲಗಳ ಪ್ರಾಂಗಣದಲ್ಲಿ ಮುಸ್ಲಿಮರ ದೈವನೆಲೆಯಾದ ಮಸೀದಿರೂಪದ ಆಕೃತಿಯೊಂದು ಇದೆ. ಕರಗ ಉತ್ಸವದ ದಿನ ಈ ಪವಿತ್ರ ಆಕೃತಿಗೆ ಪೂಜೆಗಳು ವಿಶೇಷವಾಗಿ ನಡೆಯುತ್ತದೆಂದು, ಮೊದಲು ಕರಗವು ಇಲ್ಲಿ ಕುಣಿದು (ಗೌರವ ಸೂಚಕ) ಊರಿನೊಳಕ್ಕೆ ಹೋಗುತ್ತದೆಂದು ಹೇಳುತ್ತಾರೆ[11]. ಈ ಆಚರಣೆಗಳು ಸಂಪ್ರದಾಯಗಳು ಜನಪದರ ಧರ್ಮ ಸಹಿಷ್ಣುತೆಯನ್ನು ಎತ್ತಿತೋರಿಸುತ್ತದೆ. ಮಸೀದಿ ರೂಪದ ಆಕೃತಿಯು ಧರ್ಮರಾಯ ದೇವಾಲಯದಲ್ಲಿ ಇರುವ ಬಗ್ಗೆ ಜನಪದರು ಒಂದು ಕಥೆಯನ್ನು ಹೇಳುತ್ತಾರೆ. ಧರ್ಮರಾಯನಿಗೆ ಮಹಾಭಾರತದ ಯುದ್ಧದ ಕಾಲದಲ್ಲಿ ಓರ್ವ ಮುಸ್ಲಿಮನು ಸಕಾಲಿಕವಾಗಿ ಸಹಾಯಮಾಡಿದನೆಂದು ಈತನ ಸಹಾಯದಿಂದ ಸುಪ್ರೀತಗೊಂಡ ಧರ್ಮರಾಯನು 'ಇನ್ನುಮುಂದೆ ನನ್ನೊಂದಿಗೆ ನಿನಗೂ ಪೂಜೆ ಸಲ್ಲಲಿ' ಎಂದನೆಂದು ಹೇಳುವರು. ಮೇಲ್ಕಂಡ ಕಥೆಯಲ್ಲಿ ಹುರುಳಿಲ್ಲ ವಾದರೂ ಮುಂದಿನ ಸಂಶೋಧನೆ ನಡೆಯುವವರೆವಿಗೂ ಇದನ್ನು ಬಿಡುವಂತಿಲ್ಲ.


ತಿಗಳ ಜನಾಂಗ ಮತ್ತು ಕರಗ ಮಹೋತ್ಸವ

ಕರ್ನಾಟಕದಲ್ಲಿ ವಿಶಿಷ್ಟವಾಗಿರುವ ಈ ಜನಪದ ನೃತ್ಯವು ಧಾರ್ಮಿಕ ನೃತ್ಯಗಳ ಸಾಲಿಗೆ ಸೇರುತ್ತದೆ. ಇದೊಂದು ಶಾಕ್ತ ಸಂಪ್ರದಾಯದ ನೃತ್ಯ. ಈ ನೃತ್ಯವು

---

11 ಈ ವಿಷಯದ ಬಗ್ಗೆ. ನನ್ನ ಗಮನ ಸೆಳೆದವರು ನನ್ನ ಮಿತ್ರ ಎಸ್. ಮಹದೇವ ಪ್ರಕಾಶ್‌ರವರು.

ಕರ್ಣಾಟಕದಲ್ಲಿ ವಿಶೇಷವಾಗಿ ಕೋಲಾರ ಮತ್ತು ಬೆಂಗಳೂರು ಜಿಲ್ಲೆಗಳಲ್ಲಿ ಕಂಡು ಬರುತ್ತದೆ. ವೀರರಸ ಪ್ರಧಾನವಾದ ನೃತ್ಯವಿದು. ಈ ಉತ್ಸವವು ನಿರ್ದಿಷ್ಟ ದೈವ ಉತ್ಸವಗಳ ಸಂದರ್ಭದಲ್ಲಿ ಮಾತ್ರ ನಡೆಯುತ್ತದೆ. ನಿರ್ದಿಷ್ಟ ಜನಾಂಗವೊಂದು ಮಾತ್ರ ಈ ಕಲೆಯನ್ನು ಉತ್ಸವರೂಪದಲ್ಲಿ ಉಳಿಸಿಕೊಂಡು ಬರುತ್ತಿದೆ. ಇವರನ್ನು



ಚಿತ್ರ 2

ಕೋಲಾರ ನಗರದ ಈಲುಕೋಟೆ ಪ್ರದೇಶದಲ್ಲಿರುವ ಧರ್ಮರಾಯಸ್ವಾಮಿ ದೇಗುಲದ ಪ್ರಾಂಗಣದಲ್ಲಿರುವ ಮಸೀದಿ ಆಕೃತಿ

ತಿಗಳರೆಂದು ಪಡಾಕ್ಷಿಗಳೆಂದು, ವಹ್ನಿಕುಲಕ್ಷತ್ರಿಯರೆಂದು ಮತ್ತು ಪಳ್ಳಿಗರೆಂದು ಕರೆಯುವರು. ಇವರು ಪಾಂಡವರ ಆರಾಧಕರೆಂದು ಹೇಳುತ್ತಾರೆ. ಮೊದಮೊದಲು ಒಂದು ಜನಾಂಗದ ಉತ್ಸವವಾಗಿ ಕಂಡುಬಂದ ಕರಗ ಮಹೋತ್ಸವವು ಕ್ರಮೇಣ ಸಮೂಹದ ಉತ್ಸವವಾಗಿ ಪರಿಣಮಿಸಿತು.

ಈ ನೃತ್ಯದ ಮೂಲವನ್ನು ಜನಪದರು ತಮಿಳುನಾಡೆಂದು ಹೇಳುತ್ತಾರೆ. ಇದಕ್ಕೆ ಅವರು ನೀಡುವ ಸಮರ್ಥನೆಗಳೂ ಹೀಗಿವೆ. ಈ ನೃತ್ಯವನ್ನು ಆಚರಿಸುವ ವಹ್ನಿಕುಲ-ಕ್ಷತ್ರಿಯರು ತಮಿಳುನಾಡಿನಿಂದ ಕರ್ಣಾಟಕಕ್ಕೆ ಬಂದವರು. ಇವರ ಮಾತೃಭಾಷೆ ತಮಿಳು. ಇವರ ಹೆಸರುಗಳು ತಮಿಳರ ಹೆಸರುಗಳನ್ನು ಹೋಲುತ್ತವೆ. ತಮಿಳುನಾಡಿನ ಹಲವಾರು ಕಡೆಗಳಲ್ಲಿ ಈ ನೃತ್ಯವು ಈಗಲೂ ಆಚರಿಸಲ್ಪಡುತ್ತದೆ. ಕರಗ ಮಹೋತ್ಸವದ ಮಾರನೆಯದಿನ ನಡೆಯುವ ಮಹಾಭಾರತ ಕಥಾಶ್ರವಣವು ಸಹ ತಮಿಳಿನಲ್ಲಿ ನಡೆಯುತ್ತದೆ. ಅಲ್ಲದೆ ಕರಗ ಉತ್ಸವದ ಮುಂದೆ ಹಾಡಲ್ಪಡುವ ಹಾಡುಗಳು ತಮಿಳಿನಲ್ಲಿದೆ. ಇಂತಹ ಹಾಡುಗಳು ತಮಿಳುನಾಡಿನಲ್ಲಿ ದೊರೆಯುತ್ತದೆ ಯೆಂದು ಹೇಳುತ್ತಾರೆ.

ವಹ್ನಿಮತಸ್ಥರು ತಮ್ಮ ವಂಶಮೂಲವನ್ನು ಕುರಿತು ; ನಾವು ವಹ್ನಿವಂಶೋದ್ಭವರೆಂದು (ಅಗ್ನಿಯಲ್ಲಿ ಜನಿಸಿದವರೆಂದು) ಹೇಳುವರು. ಇವರ ಮೂಲಪುರುಷ ಬೆಂಕಿಯಲ್ಲಿ ಜನಿಸಿದವನೆಂದು ಹೇಳುವರು. ಅಲ್ಲದೆ ಜನಪದದಲ್ಲಿ ಇವರ ವಂಶ ಮೂಲವನ್ನು ಕುರಿತಂತೆ ಎರಡು ಸ್ವಾರಸ್ಯ ಕಥೆಗಳು ಪ್ರಚಲಿತವಾಗಿವೆ. 1) ಮಹಾಭಾರತದ ಯುದ್ಧದ ನಂತರ ಶ್ರೀಕೃಷ್ಣನು ಪಾಂಡವರನ್ನು ಸರಿಯಾದ ರೀತಿಯಲ್ಲಿ ಮಾರ್ಗದರ್ಶಿಸಿ ಆತನ ಅವಸಾನ ಪ್ರಾಪ್ತವಾಗಲು ಪಾಂಡವರ ಬಳಿಯಿದ್ದ ಶಕ್ತಿಯೆಲ್ಲವನ್ನು ಹಿಂಪಕ್ಕೆ ಪಡೆಯುವನು. ಆಗ ಪಾಂಡವರು ತಮಗೆ ಬೇರೊಂದು ರೀತಿಯ ಸಹಾಯಬೇಕೆಂದು ಶ್ರೀಕೃಷ್ಣನನ್ನು ಬೇಡಲು, ಅರಣ್ಯದಲ್ಲಿದ್ದ ಕೆಲವು ಮಂದಿಯನ್ನು ತೋರಿಸಿ ಅವರು ಇನ್ನು ಮುಂದೆ ನಿಮ್ಮ ಸಹಾಯಕ್ಕಿರುವರೆಂದು ಶ್ರೀಕೃಷ್ಣನು ಹೇಳುವನು. ಹೀಗೆ ಪಾಂಡವರ ಬಳಿ ಸಹಾಯಕ್ಕಿದ್ದವರೇ ತಿಗಳರೆಂದು ಹೇಳುವರು. 2) ಹಿಂದೆ ವಹ್ನಿರಾಜನೆಂಬ ಅರಸನು ಒಂದು ದೇಶವನ್ನು ಆಳುತ್ತಿದ್ದನು. ಇವನ ದೇಶವು ಸಮೃದ್ಧವಾಗಿದ್ದು ಪ್ರಜೆಗಳು ಸುಖ ಶಾಂತಿಗಳಿಂದಿದ್ದರು. ಇದನ್ನು ಕಂಡು ಅಸೂಯೆಗೊಂಡ ಛಪ್ಪನ್ನಾರು ದೇಶಗಳವರು ವಹ್ನಿರಾಜನ ದೇಶದ ಮೇಲೆ ದಂಡೆತ್ತಿ ಬರುವರು. ಆ ಕಾಲದಲ್ಲಿ ಆಪತ್ತೊದಗಿದುದಕ್ಕಾಗಿ ವಹ್ನಿರಾಜನು ದೇವರನ್ನು ಕುರಿತು ಹೀಗೆ ಪ್ರಾರ್ಥಿಸುವನು. 'ನಾನು ನಿನ್ನ ನಿಜವಾದ ಭಕ್ತನಾದರೆ ನೀನು ನನಗೆ ಸಹಾಯಮಾಡು ಇಲ್ಲದಿದ್ದರೆ ನಾನು ಅಗ್ನಿಯಲ್ಲಿ ಪ್ರವೇಶಿಸುವೆ,' ಹೀಗೆಂದು ಪ್ರಾರ್ಥಿಸಲು ದೇವರು ಪ್ರತ್ಯಕ್ಷನಾಗಿ ಕೂಡಲೆ ವಹ್ನಿರಾಜನ ಸಹಾಯಕ್ಕಾಗಿ ಒಂದು ಸೈನ್ಯವನ್ನು ಸೃಷ್ಟಿಸುವನು. ಈ ಸೈನ್ಯದ ಸಹಾಯದಿಂದ ವಹ್ನಿರಾಜನು ಶತ್ರುಗಳನ್ನು ಹೊಡೆದೋಡಿಸುವನು. ನಂತರ ತನಗೆ ನೆರವಾದ ಸೈನಿಕರನ್ನು ಸತ್ಕರಿಸಿ ಅವರಿಗೆ ತನ್ನ ರಾಜ್ಯದ ಹೆಣ್ಣುಗಳನ್ನು ಕೊಟ್ಟು ಮದುವೆಮಾಡುವನು. ಇವರ ಸಂತಾನವೇ ವಹ್ನಿಕುಲದವರು.

ತಿಗಳ ಜನಾಂಗದ ಚರಿತ್ರೆ

ಇವರು ತಮಿಳುನಾಡಿನಿಂದ ಕರ್ಣಾಟಕಕ್ಕೆ ಬಂದವರು. ಇವರು ಕರ್ಣಾಟಕಕ್ಕೆ ಯಲಹಂಕದ ಕೆಂಪೇಗೌಡನ ಕಾಲದಲ್ಲಿ ಕರ್ಣಾಟಕಕ್ಕೆ ಸೋಮನಾಥಪುರದಿಂದ ಬಂದರೆಂದು ಪ್ರಸಿದ್ಧ ಇತಿಹಾಸಕಾರರಾದ ಡಾ॥ ಎಸ್. ಶ್ರೀಕಂಠಶಾಸ್ತ್ರಿ ಅವರು ಅಭಿಪ್ರಾಯ ಪಡುತ್ತಾರೆ.[12] ಹೈದರಾಲಿಯು ವಹ್ನಿಕುಲ ಜನಾಂಗದ ಶಕ್ತಿ ಸಾಹಸಗಳನ್ನು ಹಾಗೂ ಇವರ ಕುಲವೃತ್ತಿಯಾದ ತೋಟಗಾರಿಕೆಯನ್ನು ಮೆಚ್ಚಿ ಇವರನ್ನು ಕರ್ಣಾಟಕಕ್ಕೆ ಕರೆತಂದನೆಂದು ಸಿ. ಕೆ. ಪರಶುರಾಮಯ್ಯನವರು ಅಭಿಪ್ರಾಯ ಪಡುತ್ತಾರೆ.[13] ಇವರ

---

12. ಸಂಶೋಧನ ಲೇಖನಗಳು ಡಾ॥ ಎಸ್. ಶ್ರೀಕಂಠಶಾಸ್ತ್ರಿ 'ಶ್ರೀಕರಗ ಮಹಾ ಶಕ್ತಿ' ಲೇಖನದಿಂದ

13. ಅಡಿಟಿಪ್ಪಣಿ 10 ನೋಡಿ.

ಕೇಂದ್ರಸ್ಥಳ ತಮಿಳುನಾಡಿನ ಕಂಚಿ. ಇವರದೇ ಆದ ವಹ್ನಿಪುರಾಣ ಎಂಬು ದೊಂದಿದೆ. ಇದು ಅಗ್ನಿಪುರಾಣದ ಒಂದು ಉಪಪುರಾಣವೆಂದು ಹೇಳುತ್ತಾರೆ. ಇದು ತಮಿಳು ಭಾಷೆಯಲ್ಲಿದೆ. ಕಂಚಿ, ಮಧುರೈ ಮುಂತಾದ ಕಡೆ ಇದನ್ನು 'ಕಂಚಿ ಗೌಂಡರ್ ಪುರಾಣಂ' ಎಂದು ಪ್ರಸಿದ್ಧವಾಗಿದೆ.

ತಿಗಳರ ಸಮಾಜ ರಚನೆ

ತಿಗಳ ಜನಾಂಗದ ಮುಖ್ಯಸ್ಥರನ್ನು ಗೌಂಡರ್ ಎಂದು ಕರೆಯುವರು. ಇವರ ಕುಲಕಸಬು ತೋಟಗಾರಿಕೆ. ಇವರಲ್ಲಿ ಸಗೋತ್ರ ವಿವಾಹ ಪದ್ಧತಿಯಿಲ್ಲ. ವಿವಾಹ ವಿಚ್ಛೇದನ ಹಾಗೂ ವಿಧವಾ ವಿವಾಹವು ನಡೆಯುತ್ತದೆ. ಮಾತೃಭಾಷೆ ತಮಿಳು. ಈ ಜನಾಂಗದ ಕುಲದೇವತೆ ದ್ರೌಪದಿ. ಶಿವ ಹಾಗೂ ವಿಷ್ಣುವೇ ಮೊದಲಾದ ಎಲ್ಲ ಹಿಂದೂ ದೇವತೆಗಳನ್ನು ಪೂಜಿಸುವರು. ಗಣಾಚಾರಿ ಎಂಬುವವನು ವಹ್ನಿ ಕುಲದಲ್ಲಿ ಅಗ್ರಮಾನ್ಯನು. ಧರ್ಮಕ್ಕೆ ಸಂಬಂಧಿಸಿದ ಸಲಹೆಗಳನ್ನು ನೀಡುವನು ಹಾಗೂ ಈ ಜನಾಂಗದ ಮನೆಗಳಲ್ಲಿ ಧರ್ಮಕಾರ್ಯಗಳನ್ನು ನಡೆಸಿಕೊಡುವನು. ಇವರಲ್ಲಿ ನಾಮಕರಣ, ಶಾಸ್ತ್ರೋಕ್ತ ಮದುವೆ, ಅಂತ್ಯಕ್ರಿಯ ಮೊದಲಾದ ಸಂಸ್ಕಾರಗಳು ರೂಢಿಯಲ್ಲಿವೆ.

ಕರಗ ಶಬ್ದದ ನಿಷ್ಪತ್ತಿ

ಬಹುತೇಕ ಮಂದಿಯ ಅಭಿಪ್ರಾಯದಂತೆ ಕರಗವೆಂದರೆ 'ಕಲಶ' ಎಂದು ಅರ್ಥ. ಕಾರಣ ಕರಗ ಹೊತ್ತು ಕುಣಿಯುವುದೆಂದರೆ ಕಲಶವನ್ನು ಹೊತ್ತು ಕುಣಿಯುವುದೇ ಆಗಿದೆ. ಇದು ಬಹುಮಟ್ಟಿಗೆ ಸಮರ್ಪಕವೆನಿಸುತ್ತದೆ. ಜನಪದ ವ್ಯಕ್ತಿಯೋರ್ವ ಕರಗ ಎಂಬ ಶಬ್ದಕ್ಕೆ ಹೀಗೆ ಅರ್ಥೈಸಿದ್ದಾರೆ. ಕರ + ಗ = ಕೈಯಲ್ಲಿ ಸಂಚರಿಸುವುದು. ಇದನ್ನು ಸಮರ್ಥಿಸಲು ಅವರು ಕೊಡುವ ವ್ಯಾಖ್ಯಾನ ಹೀಗಿದೆ. ಕರಗ ಮಹೋತ್ಸವದ ಎರಡನೆಯ ದಿನವೇ ಹಸಿಕರಗದ ಉತ್ಸವ. ಈ ದಿನದಂದು ಕೊಳದಲ್ಲಿ ಅಡಗಿಸಿಟ್ಟ ಕಲಶಕ್ಕೆ ಪೂಜಾವಿಧಿಗಳನ್ನು ಮಾಡಿ ಅದನ್ನು ಕೈಯೊಳಕ್ಕೆ ಆಹ್ವಾನಿಸುವರು. ಅದು ಕೈಗೆ ಬಂದನಂತರ ಕರಗ ಪೂಜಾರಿ ಮತ್ತು ಮತ್ತೀರ್ವರು ಕೈಯಲ್ಲಿ ಹಿಡಿದುಕೊಂಡು ಮೆರವಣಿಗೆಯಲ್ಲಿ ಅದನ್ನು ಧರ್ಮರಾಯ ದೇಗುಲಕ್ಕೆ ಕರೆತರುವರು. ಹೀಗೆ ಕೈಯಲ್ಲಿ ಸಂಚರಿಸುವ ಈ ಕಲಶಕ್ಕೆ ಕರಗವೆಂದು ಹೆಸರು ಬಂದಿರಬಹುದೆಂದು.

ಜಾನಪದ–ಜನಪದ ನೃತ್ಯಗಳ ಹಿನ್ನೆಲೆಯಲ್ಲಿ ಕರಗ ನೃತ್ಯ

ಜಾನಪದವೆಂಬುದು ಒಂದು ದೊಡ್ಡ ಚಕ್ರ. ಅದರ ಒಂದು ಭಾಗ ಜನಪದ ಕಲೆ. ಜನಪದ ಕಲೆಗಳಲ್ಲಿ ಒಂದು ವಿಭಾಗ ಜನಪದ ನೃತ್ಯ. ಜನಪದ ನೃತ್ಯಗಳನ್ನು

ಎರಡು ಶಾಖೆಗಳಾಗಿ ವಿಂಗಡಿಸಬಹುದು. ಧಾರ್ಮಿಕ ನೃತ್ಯ ಮತ್ತು ಲೌಕಿಕ ನೃತ್ಯ ಅಥವಾ ಮನರಂಜನಾ ನೃತ್ಯ. ಧಾರ್ಮಿಕ ನೃತ್ಯಗಳು ಹುಟ್ಟಿಕೊಂಡದ್ದು ದೈವೀ ಆರಾಧನಾ ಸಂದರ್ಭಗಳಲ್ಲಿ. ಲೌಕಿಕ ನೃತ್ಯಗಳು ಮಾನವನ ಆಸರಿಕೆ ಬೇಸರಿಕೆಗಳನ್ನು ಹೋಗಲಾಡಿಸಲು ಮನರಂಜನೆಗೋಸ್ಕರ ಹುಟ್ಟಿಕೊಂಡಂತವು. ಈ ಹಿನ್ನೆಲೆಯಲ್ಲಿ ಕರಗ ಶಕ್ತಿ ನೃತ್ಯವನ್ನು ನಾವು ಧಾರ್ಮಿಕ ನೃತ್ಯಗಳ ಸಾಲಿಗೆ ಸೇರಿಸಬಹುದು. ಇದು ಶಕ್ತಿದೇವತೆ ದ್ರೌಪದಿಯ ಆರಾಧನಾ ಸಂದರ್ಭದಲ್ಲಿ ಹುಟ್ಟಿಕೊಂಡ ನೃತ್ಯ.

ಕರಗ ನೃತ್ಯವನ್ನು ಕೇವಲ ಜನಪದ ಕಲೆಯ ದೃಷ್ಟಿಯಿಂದ ಮಾತ್ರ ನೋಡದೆ ಅದನ್ನು ವಿಶಾಲ ದೃಷ್ಟಿಕೋನವಾದ 'ಜಾನಪದ' ದೃಷ್ಟಿಯಿಂದ ನೋಡುವುದು ಒಳಿತು. ಕರಗ ನೃತ್ಯದ ಕಲಾತ್ಮಕ ದೃಷ್ಟಿಯೊಂದಿಗೆ ಅದರ ಶಾಸ್ತ್ರ ಮುಖವನ್ನು ನೋಡುವುದು. ಕರಗ ನೃತ್ಯಕ್ಕೆ ಸಂಬಂಧಿಸಿದ ಆಚರಣೆಗಳು, ಸಂಪ್ರದಾಯಗಳು, ನಂಬಿಕೆಗಳು, ಆಚಾರ ವಿಚಾರಗಳ ಬಗ್ಗೆ ಇದನ್ನು ಆಚರಿಸುವ ಜನಾಂಗದ ಚರಿತ್ರೆ, ಅವರ ಮೂಲ ಮೊದಲಾದ ವಿಷಯಗಳ ಬಗ್ಗೆ ಗಮನ ಹರಿಸಿದಲ್ಲಿ ಜಾನಪದ ದೃಷ್ಟಿಯಲ್ಲಿ ಕರಗವನ್ನು ಕುರಿತು ನಡೆಸುವ ಸಂಶೋಧನೆ, ಅಧ್ಯಯನಗಳು ಪೂರ್ಣವೆನಿಸುತ್ತದೆ. ಮೇಲ್ಕಂಡ ವಿಷಯಗಳು (ಅಂದರೆ ಕರಗ ನೃತ್ಯದ ಕಲಾತ್ಮಕ ಮತ್ತು ಶಾಸ್ತ್ರ ಮುಖ) ಒಂದರೊಳಗೊಂದು ಬೆಸೆದುಕೊಂಡಿವೆ. ಒಂದನ್ನು ಬಿಟ್ಟು ಮತ್ತೊಂದಿಲ್ಲ. ಅದಷ್ಟು ವಹ್ನಿಮತಸ್ಥರ ಬಗ್ಗೆ ತಿಳಿದುಕೊಂಡರೆ ಕರಗ ನೃತ್ಯದ ಸಂಬಂಧದಲ್ಲಿರುವ ಹಲವು ವಿಶಿಷ್ಟ ಆಚರಣೆಗಳನ್ನು ಸುಲಭವಾಗಿ ಅರ್ಥೈಸಬಹುದು. ಜನಾಂಗದ ಚರಿತ್ರೆಯೆಂದರೆ ಅವರ ನಡೆನುಡಿಗಳ, ಸಂಪ್ರದಾಯಗಳ, ಆಚಾರ ವಿಚಾರಗಳ ಮೊತ್ತವೇ ಆಗಿದೆ.

'ಜೊತೆಗಾತಿಗೆ'

ಎಚ್. ಎಚ್. ಗಂಗಾಧರಾಚಾರ್

ನಿನ್ನ ಬೆಳ್ಳನೆ ಸೊಂಟದ ಸುತ್ತ
ಸೀರೆ ಅಂಚಿನ ಸುತ್ತ
ಜೊಲ್ಲು ಸುರಿಸುತ್ತ
ತಿರುಗುವ ಗಾಣವಾದದ್ದ ಕಂಡು
ಕಿಸಕ್ಕನೆ ನಗಬೇಡ ಕಣೇ.

ಸುತ್ತಿರುವ ಮೌನದಲ್ಲಿ
ತುಂಬಿರುವ ನೂರಾರು ಬೇಸರಗಳ ಉಸುಕಿನಲ್ಲಿ
ನನ್ನ ಹುಗಿದು ಬಿಡಬೇಡ ಕಣೇ.

ನಾವೇನು ಕಲ್ಲು ಬಂಡೆಗಳ ಹಾಗೆ
ಶತ ಶತಮಾನಗಳಿಗೆ ಸಾಕ್ಷೀಭೂತವಾಗಿ
ಇಲ್ಲೇ ನಿಲ್ಲುವವರಲ್ಲ.

ಬೇಸಿಗೆ ಬಿಸಿಲಿಗೆ ಬಿರುಕು ಬಿಟ್ಟ ಎರೆಯಾಗಿ
ಮುಂಗಾರಿನಲ್ಲಿ ಹನಿ ಹನಿ ಹೀರಿ, ಹಸುರಾಗಿ
ತೂಗಿ, ತೊನೆದು ಬಯಲಲ್ಲಿ ಬಯಲಾಗುವವರು.

ನಿರ್ದಿಷ್ಟ ದೂರಕ್ಕಷ್ಟೇ ಟಿಕೆಟ್ ಕೊಂಡು
ಯಾವ ನಿಲ್ದಾಣದಲ್ಲೋ
ಮುನ್ಸೂಚನೆ ಕೊಡದೇ ಸೀಟು ಖಾಲಿ ಮಾಡುವವರು.

ಹೊಸ ಕೊಂಡಿಗಳಾಗಿ
ಸವೆದ ಸಾವಿರಾರು ತಲೆಮಾರುಗಳ ಸರಪಳಿಗೆ
ಸೇರುವವರು.

ವರ್ತಮಾನದ ಎಲ್ಲ ಕ್ಷಣಗಳೂ ಭೂತದ
ಬಕಾಸುರ ಹೊಟ್ಟೆಯಲ್ಲಿ ಜೀರ್ಣವಾಗುತ್ತವೆಯಾದರೂ
ನಾನೂ ನೀನೂ ಕೈಗೆ ಕೈ ಸೇರಿಸಿ,

ಅದೂ ಇದೂ ಮಾತಾಡಿ, ಸುಖದ ಕ್ಷಣಗಳ ಹಿಂಡಿ,
ನೆನಪಿನ ಪೆಟ್ಟಿಗೆಯಲ್ಲಿ ಶೇಖರಿಸಿದ ಅಮೂಲ್ಯ ಮುತ್ತು-
ರತ್ನಗಳ ಯಾರು ಕೊಳ್ಳೆ ಹೊಡೆಯಬಲ್ಲರು ಹೇಳು ?
ಅದಕ್ಕಾಗೇ ನಾನು ಹೇಳುವುದು :
ಕೆಂಪಗೆ ಕಾದ ಕಬ್ಬಿಣ
ತಣ್ಣಗಾಗುವ ಮೊದಲು
ಏನಾದರೂ ಒಂದು ಆಕಾರ ಕೊಡೋಣ,
ಖುಷಿ ಪಡೋಣ.

ಪುಲಿಗೆರೆ: ಜೈನ ಕೇಂದ್ರ*

ಎಸ್. ಪಿ. ಪಾಟೀಲ

1. ಪ್ರಾಚೀನತೆ

ಪ್ರಾಚೀನ ಕರ್ನಾಟಕದಲ್ಲಿ ಪುಲಿಗೆರೆ ಮುನೂರು ಎಂಬುದು ಒಂದು ರಾಜಕೀಯ ವಿಭಾಗ. ಇದು ಧಾರವಾಡ ಜಿಲ್ಲೆಯ ಶಿರಹಟ್ಟಿ, ಸವಣೂರು ತಾಲೂಕುಗಳನ್ನು, ಶಿಗ್ಗಾವ ತಾಲೂಕಿನ ಕೆಲವು ಭಾಗಗಳನ್ನು ಒಳಗೊಂಡು ವರದಾನದಿಯುವರೆಗೆ ಹಬ್ಬಿದ್ದಿತೆಂದು ಹೇಳಬಹುದು.

ಶ್ರೀಹರಿನಿರ್ಮಿತಾ ಪ್ರಥಮಕಲ್ಪೇ ವಿಷ್ಣುಪಲ್ಲೀ ತಥಾ
ಕಲ್ಯಾಣಂ ತ್ರಿತ್ರಯ ಗತೇ ಯುಗ ಚತುಷ್ಕೇ ಸಪ್ತವಿಂಶೇ ಪುನಃ
ದ್ವಾಪಾರಾಪಗಮೆ ವಿರಾಟತನಯೇನ ಶ್ವೇತನಾಮ್ನಾ ಕೃತಾ
ಗ್ರಾಮಾಣಾಂ ತ್ರಿಶತ್ಯೈವೃತಾಷ್ಪುರಿಕರ ಶ್ರೀಃ ರಾಜಿಧಾನೀತ್ಯಭೂಃ ॥

ಪ್ರಥಮ ಕಲ್ಪದಲ್ಲಿ ಶ್ರೀಹರಿಯಿಂದ ನಿರ್ಮಿತವಾಗಿ ವಿಷ್ಣುಪಲ್ಲಿ ಎಂಬ ಹೆಸರನ್ನೂ, ದ್ವಾಪರದಲ್ಲಿ ವಿರಾಟರಾಜನ ಮಗನಾದ ಶ್ವೇತನಿಂದ ನಿರ್ಮಿತವಾಗಿ ಪುರಿಕರ ಹೆಸರನ್ನು ಪಡೆದಿತ್ತೆಂದು ಮೇಲಿನ ಶಾಸನ ಹೇಳುತ್ತದೆ. ಹೀಗೆ ಪ್ರಾಚೀನತೆಯೊಂದಿಗೆ ಪ್ರಸಿದ್ಧಿಯನ್ನೂ ಪಡೆದ ಊರು ಪುಲಿಗೆರೆ. ಶಾಸನಗಳಲ್ಲಿ ಇದು ಮುಂದೆ ಪುಲಿಕರ, ಪುರಿಕರವೆಂದೂ ರೂಪಾಂತರವಾಗಿದೆ.

ಕನ್ನಡದ ಉಪಲಬ್ಧ ಕೃತಿಗಳಲ್ಲಿ ಮೊದಲನೆಯದಾದ 'ಕವಿರಾಜ ಮಾರ್ಗ'ದಲ್ಲಿಯೂ ಪುಲಿಗೆರೆಯ ಉಲ್ಲೇಖ ಬರುತ್ತದೆ :

ಕಾವೇರಿಯಿಂದಮಾ ಗೋ
ದಾವರಿವರಮಿರ್ದನಾಡದಾ ಕನ್ನಡದೊಳ್
ಭಾವಿಸಿದ ಜನಪದಂ ವಸು
ಧಾವಳಿಯ ವಿಲೀನ ವಿಶದ ವಿಷಯ ವಿಶೇಷಂ 1.36

ಅದಱೊಳಗಂ ಕಿಸುವೊಳಲಾ
ವಿದಿತ ಮಹಾಕೊಪಣ ನಗರದಾ ಪುಲಿಗೆಱೆಯಾ
ದದಭಿಸ್ತುತಮಪ್ಪೊಂಕುಂ
ದದ ನಡುವಣ ನಾಡೆ ನಾಡೆ ಕನ್ನಡದ ತಿರುಳ್ 1.37

---

*ಹಲವಾರು ಉಪಯುಕ್ತ-ಸಲಹೆ ಸೂಚನೆಗಳನ್ನಿತ್ತ ಡಾ॥ ಎಂ. ಎಂ. ಕಲಬುರ್ಗಿ ಅವರಿಗೆ ಕೃತಜ್ಞತೆಗಳು.

ಕಾವೇರಿಯಿಂದ ಗೋದಾವರಿ ನದಿಯುವರೆಗೆ ವಿಸ್ತಾರವಾಗಿ ಹಬ್ಬದ ನಾಡಿನಲ್ಲಿ 'ಕಿಸುವೊಳಲ್' (ಪಟ್ಟದ ಕಲ್ಲು), 'ಕೊಪಣ' (ಕೊಪ್ಪಳ), 'ಪುಲಿಗೆರೆ' (ಲಕ್ಷ್ಮೇಶ್ವರ), 'ಒಂಕುಂದ', ಇವುಗಳ ನಡುವಿನ ಪ್ರದೇಶವೇ, ತಿರುಳ್ಗನ್ನಡ ನಾಡಾಗಿತ್ತೆಂದು ತಿಳಿಯುತ್ತದೆ.

ಈ ನಾಡಿನ 'ತಿರುಳ್ಗನ್ನಡ'ದಲ್ಲಿಯೇ ತನ್ನ ಕಾವ್ಯವನ್ನು ರಚಿಸಿರುವುದಾಗಿ ಪಂಪ ಮಹಾಕವಿ ಹೇಳಿದ್ದಾನೆ :

ರಾಜದ್ರಾಜಕಮೆನಿಸಿದ
ಸಾಜದ ಪುಲಿಗೆಱೆಯ ತಿರುಳ್ಗನ್ನಡದೊಳ್ ನಿ
ರ್ವ್ಯಾಜ್ಯದೆಸಕದೊಳ್ ಪುದಿದುಂ
ದೋಜೆಯ ಬಲದಿನಿಯ ಕವಿತೆ ಪಂಪನ ಕವಿತೆ ![1]

ಕನ್ನಡ ಸಾಹಿತ್ಯಕ್ಕೆ ಪ್ರಮಾಣಭೂತವಾದ ಕನ್ನಡ ಭಾಷೆಯನ್ನು (Standard Language) ಒದಗಿಸಿಕೊಟ್ಟ ಕೀರ್ತಿ ಪುಲಿಗೆರೆ ನಾಡಿನದು.

ಲಕ್ಷ್ಮೇಶ್ವರದಲ್ಲಿಯೇ ದೊರೆತ ಕ್ರಿ. ಶ. 683 ರ ಚಾಲುಕ್ಯ ವಿನಯಾದಿತ್ಯನ ಶಾಸನ 'ಬೆಳವಲ ಮೂನೂರನ್ನು' ಹೆಸರಿಸುತ್ತದೆ. 'ಪುಲಿಗೆಱೆ ಮುನೂರು ಬೆಳ್ವಲ ಮುನೂರುಂ ಅಂತೆರಡುನೂರಂ' ಎಂಬ ಉಲ್ಲೇಖವು ಹಲವಾರು ಶಾಸನಗಳಿಂದ ದೊರೆಯುವುದು. ಆದುದರಿಂದ 7 ನೆಯ ಶತಮಾನದಿಂದ ಬೆಳೆಯುತ್ತಾ ಬಂದ ಪುಲಿಗೆರೆಯ ಕೀರ್ತಿ ವಿಜಯನಗರದೊಂದಿಗೆ ಪತನವಾಯಿತೆಂದು ಬಗೆಯುವುದಾದರೆ ಅಲ್ಲಿಯವರೆಗೆ ಅಂದರೆ ಸುಮಾರು 900 ವರ್ಷಗಳವರೆಗೆ ಈ ಪ್ರಾಂತ ಅಸ್ತಿತ್ವ ದಲ್ಲಿತ್ತೆಂದು ತಿಳಿಯಬಹುದಾಗಿದೆ.

ಈ ನಾಡಿನ ರಾಜಧಾನಿ ಪುಲಿಗೆರೆ ಪಟ್ಟಣವಾಗಿತ್ತೆಂದು ಅಲ್ಲಿಯ ಶಾಸನ ವೊಂದರಿಂದ ತಿಳಿಯುತ್ತದೆ.

ಭರತಾವನಿಯೊಳು ಕುಂತಳ
ಧರಿತ್ರಿ ರಂಜಿಸುವಲ್ಲಿ ಪುರಿಕರದೇಶಂ
ಕರಮೊಪ್ಪುಗುಮಾ ವಿಷಯಾಂ
ತರ ರಾಜದ್ರಾಜಧಾನಿ ಪುರಿಕರನಗರ

ಈ ಪುಲಿಗೆರೆಯ ಸೌಂದರ್ಯವನ್ನು ಶಾಸನವೊಂದು ಈ ಕೆಳಗಿನ ಶಬ್ದಗಳಲ್ಲಿ ಸೆರೆಹಿಡಿದಿದೆ :

---

1 ಪಂಪಭಾರತ : 14-58

ತೆವರೆಲ್ಲಂ ದೇವತಾಮಂದಿರ ನಿವಹಮೆ ನಿಮ್ನ ಸ್ಥಳೀರಾಜೀಯೆಲ್ಲಂ
ಸುವಿರಾಜದ್ದೀರ್ಘಿಕಾಸಂಕುಳ ಭರಿತ ಪಯಃಪೂರನಿರೇಜ ಕಾಸಾ
ರವೆ ಮತ್ತಂ ತತ್ಸಮಾಳಂಕೃತ ವಸುಧೆಯದೆಲ್ಲಂ ಲಸಚ್ಚಂದನೋದ್ಯಾ
ನವೆನಲ್ ರಮ್ಯಂದಲೆಂದು ಪುರಿಕರನಗರೀ ಲೀಲೆ ಲೋಕಾವಲೋಕಂ[2]

ಪುಲಿಗೆರೆಯು ದಿನ್ನೆ(ಗುಡ್ಡ)ಗಳೆಲ್ಲ ದೇವಸ್ಥಾನಗಳು, ಕೊಳಗಳೆಲ್ಲ ತಾವರೆಯ ಕೊಳಗಳು, ಭೂಪ್ರದೇಶವೆಲ್ಲ ಶ್ರೀಗಂಧದ ಮರಗಳಿಂದ ಕೂಡಿದುದು ಎಂದು ವರ್ಣಿಸಲಾಗಿದೆ.

ಮಹಾಕವಿ ರಾಘವಾಂಕ ವಿರಚಿಸಿದ 'ಸೋಮನಾಥ ಚರಿತೆ'ಯ ಕಥಾನಾಯಕ ನಾದ ಆದಯ್ಯನು ಪುಲಿಗೆರೆಗೆ ಬಂದು ಅಲ್ಲಿಯ ಅರಸನಾದ ಚಂದ್ರಾದಿತ್ಯನಿಗೆ ಪಟ್ಟಣದ ವೈಭವವನ್ನು ಹೇಳುವುದನ್ನು ಕವಿ ಹೀಗೆ ವರ್ಣಿಸಿದ್ದಾನೆ.

ಉನ್ನತಾಶ್ಚರ್ಯಂಗಳೇನ ಕಂಡೆಯೆನೆ
ನಿನ್ನ ನಚ್ಚಿನ ಋಷಿಯಗಸ್ತ್ಯನಾಶ್ರಮವಾತ
ತನ್ನ ಕೈಯಾರೆ ಪ್ರತಿಷ್ಠಿಸಿದಗಸ್ತ್ಯೇಶ್ವರಂ ರಾಮನನುಜನಂದು
ಚೆನ್ನಿಂ ಪ್ರತಿಷ್ಠಿಸಿದ ಲಕ್ಷ್ಮಣೇಶ್ವರವದಕೆ
ಮುನ್ನ ನಿನ್ನವಂಶವಹ ರುದ್ರರ್ ಪ್ರತಿಷ್ಠಿಸಿದ
ಹನ್ನೊಂದು ತೀರ್ಥಮಂತಳೆದ ಪುಲಕರನಗರಿಯಂ ಕಂಡೆ ನಾನೆಂದನು[3]

ಹೀಗೆ ಶಾಸನಗಳಲ್ಲಿ ಪುಲಿಗೆಱೆ, ಪುಲಿಕರ, ಪುರಿಕರವೆಂದು ಪ್ರಸಿದ್ಧವಾದ ಈ ಊರು ಮುಂದೆ ಸೋಮೇಶ್ವರನ ಕಾಲಕ್ಕೆ ಚೋಳರಾಜರಿಂದ ನಾಶವಾಗಲು ಲಕ್ಷ್ಮರಸನೆಂಬುವನು ಜೀರ್ಣೋದ್ಧಾರ ಮಾಡಿ ತನ್ನ ಹೆಸರಿನ 'ಲಕ್ಷ್ಮಣೇಶ್ವರ' ದೇವಾಲಯವನ್ನು ಕಟ್ಟಿಸಿದ ಕಾರಣ ಈ ಊರಿಗೆ 'ಲಕ್ಷ್ಮೇಶ್ವರ' ಎಂಬ ಹೆಸರು ಬಂದಿದೆ ಎಂದು ಜೆ. ಎಫ್. ಫ್ಲೀಟ್ ಅವರು ಅಭಿಪ್ರಾಯಪಟ್ಟಿದ್ದಾರೆ[4]

2. ಬಸದಿಗಳು

ಪ್ರಾಚೀನ ಕರ್ನಾಟಕದ ಪ್ರಬಲ ಮತಗಳಲ್ಲಿ ಜೈನಧರ್ಮವೂ ಒಂದು. ಆ ಕಾಲದ ಲಕ್ಕುಂಡಿ, ಮುಳಗುಂದ, ಕೊಪ್ಪಳ ಶ್ರವಣಬೆಳಗೊಳದಂತೆ ಪುಲಿಗೆರೆಯೂ ಜೈನಧರ್ಮದ ಮಹತ್ವದ ಕೇಂದ್ರವಾಗಿತ್ತು. ಇಲ್ಲಿ ದೊರೆತ ಶಾಸನಗಳಲ್ಲಿ ಅರ್ಧ ದಷ್ಟು ಜೈನಧರ್ಮಕ್ಕೆ ಸಂಬಂಧಪಟ್ಟಿರುವುದು ಈ ಮಾತಿಗೆ ಬಲವನ್ನೀಯುವುದು.

---

2 ಎ. ಇ. 36 (ಸಂ. 16)

3 ರಾಘವಾಂಕ: ಸೋಮನಾಥ ಚರಿತೆ, 1–40

4 J. F. Fleet: Dynasties of Kanarese Districts in Bombay Presidency

ಅಲ್ಲದೆ ಪುಲಿಗೆರೆಯಲ್ಲಿ ದೊರೆತ ಶಾಸನಗಳಲ್ಲಿ ಅತ್ಯಂತ ಪ್ರಾಚೀನವಾದ ಶಾಸನ ಜೈನ ಧರ್ಮಕ್ಕೆ ಸಂಬಂಧಪಟ್ಟುದಾಗಿದೆ.[5]

ಪುಲಿಗೆರೆಯಲ್ಲಿ ಏಳುನೂರಕ್ಕಿಂತ ಹೆಚ್ಚು ಬಸದಿಗಳಿದ್ದುವೆಂದು ಹೇಳಿಕೆ ರೂಢಿಯಲ್ಲಿದೆ. ಈ ಸಂಖ್ಯೆ ತುಸು ದೊಡ್ಡದಾಗಿ ಕಾಣುವುದು. ಇಷ್ಟೊಂದು ಬಸದಿಗಳು ಒಂದೇ ಊರಿನಲ್ಲಿದ್ದುವೆಂಬುದನ್ನು ನಂಬುವುದು ಕಷ್ಟವಾಗುವುದು. ಆದರೆ ಈ ಸಂಖ್ಯೆ 'ಪುಲಿಗೆಱೆ ಮುನೂರು' ಪ್ರದೇಶದ ಬಸದಿಗಳನ್ನು ಉಲ್ಲೇಖಿಸುವುದೆಂದರೆ ನಂಬಬಹುದಾಗಿದೆ. ಅದರಂತೆ ಪುಲಿಗೆರೆಯಲ್ಲಿ ಅನೇಕ ಬಸದಿಗಳಿದ್ದುವೆಂಬುದಕ್ಕೆ ಅಲ್ಲಿ ದೊರೆಯುವ ಬಸದಿಗಳ ಹೆಸರುಗಳಿಂದ ಸ್ಪಷ್ಟವಾಗುವುದು. ಶಂಖ ಬಸದಿ, ತೀರ್ಥಬಸದಿ, ಮುಕ್ಕರ ಬಸದಿ, ರಾಯರಾಚಮಲ್ಲ ಬಸದಿ, ಗಂಗ ಕಂದರ್ಪ ಜಿನಮಂದಿರ (ಗಂಗಪೆರ್ಮಾಡಿ ಚೈತ್ಯಾಲಯ ಅಥವಾ ಪೆರ್ಮಾಡಿ ಬಸದಿ), ಶ್ರೀ ವಿಜಯ ಬಸದಿ (1132) ; ಆನೆಸೆಜ್ಜೆಯ ಬಸದಿ (ಗಜ ಚೈತ), ಶಾಂತಿನಾಥ ಬಸದಿ ಮೊದಲಾದ ಜಿನಾಲಯಗಳಿದ್ದ ಬಗೆಗೆ ಶಾಸನಗಳಲ್ಲಿ ಉಲ್ಲೇಖ ಕಂಡುಬರುವುದು.

ಅಶ್ವಮೇಧಯಾಗಗಳನ್ನು ಮಾಡಿದ ಬಾದಾಮಿ ಚಾಲುಕ್ಯರು ಇಲ್ಲಿಯ ಜೈನ ಬಸದಿಗಳಿಗೆ ಉದಾರನೆರವು ನೀಡಿದ ಕುರಿತು ಶಾಸನಗಳಲ್ಲಿ ಆಧಾರವಿದೆ, ಪುಲಿಗೆರೆಯ 'ಆನೆಸೆಜ್ಜೆ ಬಸದಿ'ಯನ್ನು ಕಟ್ಟಿಸಿದವಳು ವಿಜಯಾದಿತ್ಯ ಚಕ್ರವರ್ತಿಯ ತಂಗಿ ಕುಂಕುಮಮಹಾದೇವಿ ಎಂಬುದು ಗಮನಾರ್ಹ ಸಂಗತಿ.[6] ಎರಡನೆಯ ವಿಕ್ರಮಾದಿತ್ಯನು (ಕ್ರಿ. ಶ. 735) ಧವಳ ಜಿನೇಂದ್ರಾಲಯದ ಜೀರ್ಣೋದ್ಧಾರಕ್ಕಾಗಿ ಐವತ್ತು ನಿವರ್ತನದಷ್ಟು ಭೂಮಿಯನ್ನು ದಾನಮಾಡಿದನು.[7]

ಗಂಗವಂಶದ ಇಮ್ಮಡಿ ಮಾರಸಿಂಹನು ತನ್ನ ವಂಶದ ಹೆಸರಿನಲ್ಲಿ ಒಂದು ಜಿನಮಂದಿರವನ್ನು ಕಟ್ಟಿಸಿದಂತೆ ತೋರುವುದು. ಕ್ರಿ. ಶ. 968–69ರ ಶಾಸನದಲ್ಲಿ 'ಗಂಗಕಂದರ್ಪ ಜಿನೇಂದ್ರ ಮಂದಿರ'ಕ್ಕೆ ದತ್ತಿಕೊಟ್ಟ ವಿವರ ಬರುವುದು. 971ರಲ್ಲಿ ಇದೇ ಮಾರಸಿಂಹನು ಶಂಖಬಸದಿಗೂ ದಾನವಿತ್ತನು.

---

5 S. I. I. Vol. xx. No. 3

6 "ಶ್ರೀಮದ್ಭುವನೈಕ ಮಲ್ಲದೇವರ ಶ್ರೀಮತ್ಕಂಚಲ ಮಹಾದೇವಿಯರು ಶ್ರೀಮತ್ಪರಿಯಯ್ಯಂಗಳ್ ಮೊದಲಾಗಿ ಸಮಸ್ತ ಪ್ರಧಾನರುಂ ಮುನ್ನಂ ಪುಲಿಗೆಱೆಯಲು ಚಾಲುಕ್ಯ ಚಕ್ರವರ್ತಿ ವಿಜಯಾದಿತ್ಯವಲ್ಲಭಾನು ಜಯಪ್ಪ. ಕುಂಕುಮ ಮಹಾದೇವಿ... ಮಾಡಿಸಿದ್ದಾನೆ ಸೆಜ್ಜೆ ಬಸದಿಗೆ ತಾಂಬ್ರಶಾಸನಮರ್ಯಾದೆಯಿಂದಾಳ ಗುಡಿಗೆಱೆಯ". S. I. I. Vol xx. No. 53.

7 "ಧವಳ ಜಿನಾಲಯಸ್ಯ ಜೀರ್ಣೋದ್ಧರಣಂ ... ಶತಾರ್ಧ ನಿವರ್ತನ ಪ್ರಮಾಣ ಕ್ಷೇತ್ರಂ ... ದತ್ತಂ. S. I. I. Vol. xx. No. 8.

ಯಾದವ ರಾಮಚಂದ್ರನ (ಕಿ. ಶ. 1295) ಕಾಲದ ಒಂದು ಶಾಸನದಲ್ಲಿ ಸೋಮಯ್ಯ, ಪದ್ಮಯ್ಯ ಇವರು ತಾವು ಕೊಂಡ ಭೂಮಿಯನ್ನು ಶಾಂತಿನಾಥ ಬಸದಿಗೆ ದತ್ತಿಕೊಟ್ಟ ವಿಷಯ ಉಲ್ಲೇಖಿಸಲ್ಪಟ್ಟಿದೆ.[8]

"...1132ರಲ್ಲಿ ಮುಮ್ಮಡಿ ಸೋಮೇಶ್ವರ ಕಾಲದ ಗೊಗ್ಗಿಯ ಬಸದಿಯ ಬಗ್ಗೆ 1247 ರಲ್ಲಿ ವಿಜಯ ಜಿನಾಲಯದ ಪುನರ್ ನಿರ್ಮಾಣ, 1295ರಲ್ಲಿ ಚತುರ್ಮುಖ ಚೈತ್ಯಾಲಯಕ್ಕೆ ದೊರೆತ ಭೂದತ್ತಿ ಬಿಟ್ಟರೆ 15ನೇ ಶತಮಾನದ ವರೆಗೂ ಬಸದಿಗಳ ವಿವರ ದೊರೆಯುವು" ಎಂದು ಡಾ|| ಎಸ್. ಶೆಟ್ಟರ ಅಭಿಪ್ರಾಯ ಪಟ್ಟಿದ್ದಾರೆ.[9]

ಇಲ್ಲಿಯ ಆನೆಸಜ್ಜೆಯ ಬಸದಿಯಲ್ಲಿ ಶ್ರೀನಂದಿ ಪಂಡಿತರೆಂಬ ಆಚಾರ್ಯರು ಒಂದು ತಿಂಗಳವರೆಗೆ ಸಲ್ಲೇಖನ ವ್ರತವನ್ನು ಸ್ವೀಕರಿಸಿ, ಸಮಾಧಿಮರಣವನ್ನಪ್ಪಿದ ರೆಂಬುದು ಗಮನಾರ್ಹ ಸಂಗತಿ.[10]

ಹೀಗೆ ಪುಲಿಗೆರೆಯ ಅನೇಕ ಬಸದಿಗಳ ವಿವರ ಶಾಸನಗಳಲ್ಲಿ ದೊರೆಯುತ್ತಿದ್ದು, ಅದರಲ್ಲಿಯ ಪ್ರಸಿದ್ಧವಾದ 'ಶಂಖಬಸದಿಯ' ಬಗೆಗೆ ತುಸು ವಿವರವಾಗಿ ನೋಡ ಬಹುದು.

ಶಂಖ ಬಸದಿ

ಶಂಖ ಬಸದಿಯ ಪ್ರಸಿದ್ಧಿ ಮತ್ತು ಪ್ರಾಚೀನತೆ-8ನೆಯ ಶತಮಾನದ ಈಚಿನ ಶಾಸನಗಳಿಂದ ತಿಳಿದುಬರುತ್ತದೆ. ಎಱೆಯಮ್ಮನ (ಎರಡನೆಯ ಪುಲಿಕೇಶಿ) ಕಾಲದಲ್ಲಿ ದುರ್ಗಶಕ್ತಿ ಎಂಬವನು ಶಂಖಜಿನಾಲಯದ ನಿತ್ಯ ಪೂಜೆಗಾಗಿ ಐದನೂರು ನಿವರ್ತನ ಭೂಮಿಯನ್ನು ದತ್ತಿಕೊಟ್ಟನು.[11]

ಮೂಲಸಂಘ ದೇವಗಣ ತಿಲಕ ಧ್ರುವಾದೇವಾಚಾರ್ಯರ ಧರ್ಮೋಪದೇಶ ದಿಂದ ವಿನಯಾದಿತ್ಯ ಮಹಾರಾಜನು (ಕ್ರಿ. ಶ. 683) ಶಂಖಬಸದಿಯ ಜೀರ್ಣೋ

---

8 S.I. I. Vol. xx. No. 273.

9 ಪುಲಿಗೆರೆ, ಪು. 97. ಡಾ|| ಎಸ್. ಶೆಟ್ಟರ : ಲಕ್ಷ್ಮೇಶ್ವರದ ದೇವಾಲಯಗಳು.

10 "ಶ್ರೀ ಶ್ರೀ ನಂದಿ ಪಂಡಿತದೇವರ್ಜ್ಜೀವಿತಾರಾಧನಾ ಪುರಸ್ಸರ ಮಾಸ ಸಲ್ಲೇಖನೆಯಿಂ...ಕುಂತಳ ವಿಷಯದ ಪುರಿಕರ ನಗರೀ ಭಾಳಲೀಲಾ ತಿಳಕಾಳಂ ಕಾರಮಾದಾನೆ ಸೆಜ್ಜೆ ಬಸದಿಯೊಳ್ ಚತುರ್ವಿಧಾರಾಧನೆಯಿನಾರಾಧಿಸಿ...ದೇವ ಲೋಕಕ್ಕೆ ವಿಜಯಂಗೆಯ್ದರ್" (S. I. I. Vol. xx. No. 65)

11 "ದುರ್ಗಶಕ್ತಿನಾಮಧೇಯೇನ ಶಂಖಜಿನೇಂದ್ರಚೈತ್ಯ ನಿತ್ಯ ಪೂಜಾರ್ಥಂ ಪುಣ್ಯಾಭಿ ವೃದ್ಧಿಯೇಚ ಪುಲಿಗೆಱೆನಾಮ ನಗರಸ್ಯೋತ್ತರ ಪಾರ್ಶ್ವೇ ಪಂಚಶತನಿವರ್ತನಂ ಪರಿಮಾಣಕ್ಷೇತ್ರಂ ದತ್ತಂ" (S. I. I. Vol. xx. No. 2)

ದ್ಧಾರ, ಪೂಜೆ, ಹಾಗೂ ದಾನಶಾಲೆಗಳಿಗಾಗಿ ಬೆಳವಲ ಮೂರುನೂರರಲ್ಲಿಯ ಹಡಗಿಲೆ ಎಂಬ ಗ್ರಾಮವನ್ನು ದಾನವಾಗಿ ಕೊಟ್ಟನು.[12]

ವಿನಯಾದಿತ್ಯ-ರಾಜನು (ಕ್ರಿ ಶ. 730) ನಿರವದ್ಯ ಪಂಡಿತರ ಹೇಳಿಕೆಯ ಪ್ರಕಾರ ಶಂಖಜಿನಾಲಯದ ನಿತ್ಯ ನೈಮಿತ್ತಿಕ ಪೂಜಾಕಾರ್ಯಕ್ಕಾಗಿ 'ಕದ್ದಮ' ಗ್ರಾಮವನ್ನು ದತ್ತಿಕೊಟ್ಟನು.[13]

ಕ್ರಿ. ಶ. 723ರಲ್ಲಿ ಬಿಕ್ಕಿರಣನೆಂಬ ಅಧಿಕಾರಿಯು ಪುಲಿಗೆರೆಯ ದಕ್ಷಿಣದ 'ಸೆಂಬಳಲ್' ಎಂಬ ಹಳ್ಳಿಯನ್ನು ಶಂಖಬಸದಿಗೆ ದಾನವಾಗಿ ಕೊಟ್ಟನು. ಇದರಲ್ಲಿ ಶಂಖಬಸದಿಯನ್ನು 'ಜಿನಭಟ್ಟಾರಕ ದೇವಾಲಯ'ವೆಂದು ಕರೆಯಲಾಗಿದೆ.

ಗಂಗವಂಶದ ಇಮ್ಮಡಿ ಮಾರಸಿಂಹನು 971ರಲ್ಲಿ ಶಂಖಬಸದಿಗೆ ದಾನವಿತ್ತನು 1074ರಲ್ಲಿ ಚಾಲುಕ್ಯ ಇಮ್ಮಡಿ ಸೋಮೇಶ್ವರನು ಪುಲಿಗೆರೆಗೆ ಬಿಜಯಂಗೆಯ್ದು, ಅಲ್ಲಿಯ ಶ್ರೀಶಂಖತೀರ್ಥಾದಿ ಜಿನಮಂದಿರಗಳನ್ನು 'ವಂದನಾಭಕ್ತಿ ಪೂರ್ವಕಂ' ನೋಡುತ್ತಾ ಬಂದು ಪೆರ್ಮಾಡಿ ಬಸದಿಗೆ ಆಗಮಿಸಿ ಭೂದಾನವನ್ನೂ ಮತ್ತು 'ಪುರ' ನಿರ್ಮಾಣವನ್ನೂ ಮಾಡಿದನು.[14]

ಪುಲಿಗೆರೆಯ ಬಸದಿಗಳಲ್ಲಿ ಶಂಖಬಸದಿಯೇ ತುಂಬ ಪ್ರಸಿದ್ಧವಾದ ಜಿನ ಮಂದಿರವಾಗಿತ್ತೆಂಬುದು ಅನೇಕ ಶಾಸನಗಳಿಂದ ಸ್ಪಷ್ಟವಾಗುವುದು. ಇದರಷ್ಟು ಪ್ರಸಿದ್ಧವಾದ ದೇವಾಲಯ ಪುಲಿಗೆರೆಯಲ್ಲಿ ಬೇರೊಂದಿರಲಿಲ್ಲವೆಂಬುದಕ್ಕೆ ಶಂಖ ಕವಿಯ 'ಶಂಖಜಿನೋದ್ಭವ ಕಾವ್ಯ'ವೂ ಸಾಕ್ಷಿಯಾಗಿದೆ.

ಕರ್ನಾಟಕದ ಶಿಲ್ಪ ಕಲಾಕೃತಿಯ ಮೇರು ಕೃತಿಯಾಗಿ ನಿಂತ ಶಂಖಜಿನಾಲಯ ಹಾಗೂ ಅದರ ಗರ್ಭಗೃಹದಲ್ಲಿರುವ ಮುಖ್ಯ ಜಿನಬಿಂಬದ ಕುರಿತು ವಿದ್ವಾಂಸರಲ್ಲಿ ಸಾಕಷ್ಟು ಗೊಂದಲವುಂಟಾದಂತೆ–ತೋರುವುದು.

---

12 ವಿನಯಾದಿತ್ಯ ಸತ್ಯಾಶ್ರಯ...ಶ್ರೀಮೂಲಸಂಘಾನ್ವಯ ದೇವಗಣತಿಳಿಕ ಧ್ರುವದೇವಾಚಾರ್ಯ ಧರ್ಮೋಪದೇಶತ್ ಶ್ರೀ। ಶಂಖದೇವತಾ ಪಾವನಾಖಂಡ ಸ್ಫುಟಿತ ಸಂಸ್ಕಾರ ಕುಸುಮದೇವ ಭೋಗ॥ ನಿಮಿತ್ತಂ ದಾನಶಾಲಾ ಪ್ರವರ್ತನಾರ್ಥಂ ಬೆಳುವಲ ಶತತ್ರಯ ಮಧ್ಯವ। ರ್ತ್ತಿ ಹಡಗಲೆ ನಾಮಗ್ರಾಮಂ ಸರ್ವಬಾಧ ಪರಿಹಾರಂ ದತ್ತವಾನ್ ॥'' (S. I. I. Vol. xx. No. 3)

13 'ವಿನಯಾದಿತ್ಯ ಸತ್ಯಾಶ್ರಯ ಶ್ರೀ ಪೃಥ್ವೀವಲ್ಲಭ...ಶ್ರೀ ಮೂಲಸಂಘಾನ್ವಯ ದೇವಗಣ ಸುಧಾ ಸಮುದ್ರಚಂದ್ರಸ್ಯ ಸ್ವಪರ ಮತವೇದಿತಃ ಶ್ರೀಪೂಜ್ಯಪಾದಸ್ಯಾಂತೇ ಉದಯ ದೇವ ಪಂಡಿತಸ್ಯ ಶ್ರೀ ನಿರವದ್ಯ ಪಂಡಿತಾಖ್ಯ ಯತಿಪತಿಃ ಸ್ವಗುರೋಃ ಧರ್ಮೋಪದೆಸಿನಃ ಶ್ರೀಮತ್ಪುರಿಕರನಗರ ಪ್ರಖ್ಯಾತ್ಯ ಶ್ರೀಶಂಖಜಿನೇಂದ್ರ ನಿತ್ಯನೈಮಿತ್ತಿಕ ಪೂಜಾನಿಮಿತ್ತಂ ತದ್ದಾನಶಾಲಾ ಪ್ರವರ್ತನಾರ್ಥಂ ನಗರಾದ್ದಕ್ಷಿಣ ಭಾಗೆ 'ಕದ್ದಮ' ಗ್ರಾಮಂ ದತ್ತವಾನ್'...(S. I. I. Vol. xx. No. 7)

14 ಪುಲಿಗೆರೆ, ಪು. 96. ಡಾ॥ ಎಸ್. ಶೆಟ್ಟರ : ಲಕ್ಷ್ಮೇಶ್ವರದ ದೇವಾಲಯಗಳು.

'ಸಿದ್ಧಾಂತ ಸಾರಾದಿ ಸಂಗ್ರಹ'ವೆಂಬ ಗ್ರಂಥದಲ್ಲಿ ಶ್ರೀ ಭಾನುಕೀರ್ತಿ ಸೈದ್ಧಾಂತಿಕ ಚಕ್ರವರ್ತಿ ವಿರಚಿತ 'ಶಂಖದೇವಾಷ್ಟಕ'ವನ್ನು ಪ್ರಕಟಿಸಲಾಗಿದೆ. "ಈ ಅಷ್ಟಕದಲ್ಲಿ ವರ್ಣಿಸಿದ ಶಂಖದೇವನ ಪರಿಚಯವನ್ನು ಪಂ. ಜುಗಲ ಕಿಶೋರ ಮುಖ್ತಾರರ ನೆರವಿನಿಂದ ಪಂ. ನಾಥುರಾಮ ಪ್ರೇಮಿಯವರು ಹೀಗೆ ವಿವರಿಸಿದ್ದಾರೆ: 'ಅತಿಶಯ ಕ್ಷೇತ್ರಕಾಂಡವೆಂಬ ಗ್ರಂಥದಲ್ಲಿ 'ಹೊಲಗಿರಿ ಶಂಖದೇವಾಮ್ಮಿ' ಎಂಬ ಪಾಠವಿದೆ. ಇದರಿಂದ ತಿಳಿಯುವುದೇನೆಂದರೆ, ಹೊಲಗಿರಿ ಎಂಬ ಪರ್ವತದ ಮೇಲೆ ಶಂಖದೇವ ಅಥವಾ ಶಂಖೇಶ್ವರ ಪಾರ್ಶ್ವನಾಥವೆಂಬ ತೀರ್ಥವಿದೆ. ಈಗ ತಿಳಿಯುತ್ತಿಲ್ಲ. ಬಹುಶಃ ದಕ್ಷಿಣದ ಕರ್ಣಾಟಕ ದೇಶದಲ್ಲಿರಬಹುದೇಂದು ಮುನ್ನುಡಿಯಲ್ಲಿ ಬರೆಯಲ್ಪಟ್ಟಿದೆ." ಈ ಉಲ್ಲೇಖವನ್ನು ಪರಿಶೀಲಿಸಿ ಅತಿಶಯ ಕ್ಷೇತ್ರ ಪುಲಿಗೆರೆ ಹಾಗೂ ಶಂಖಬಸದಿಯ ವಿಷಯದ ಮೇಲೆ ಬೆಳಕು ಬೀರಿದ ಶ್ರೇಯ ಶ್ರೀ ರಾಮಪ್ಪ. ಧ. ಟೀಕಣ್ಣವರ ಅವರಿಗೆ ಸಲ್ಲುವುದು.[15]

"ಈ ಬಸದಿಯಲ್ಲಿ ಶಾಂತಿನಾಥನ ಪ್ರತಿಷ್ಠಾಪನೆಯಾಗಿರಬಹುದೆಂದು ಸುಲಭವಾಗಿ ಊಹೆ ಮಾಡಬಹುದು, ಶಾಂತಿನಾಥನ ಲಾಂಛನವಾದ ಶಂಖದಿಂದ ಬಸದಿಯ ಹೆಸರು ಶಂಖ ಬಸದಿಯಾಯಿತು" ಎಂದು ಡಾ॥ ಎಸ್. ಶೆಟ್ಟರ ಅವರು ಅಭಿಪ್ರಾಯ ಪಟ್ಟಿದ್ದಾರೆ.[16] ಆದರೆ ಶಾಂತಿನಾಥನ ಲಾಂಛನ ಕುಂಭ. ಶಂಖವು 22ನೆಯ ತೀರ್ಥಂಕರರಾದ ನೇಮಿನಾಥರ ಲಾಂಛನ. ಆದುದರಿಂದ ಶಂಖ ಲಾಂಛನದಿಂದ ಗರ್ಭಗೃಹದಲ್ಲಿರುವ ಜಿನಬಿಂಬವು ನೇಮಿನಾಥರದಾಗಿರಬೇಕೆಂದು ತೋರುವುದು. ಅದರಂತೆ 'ಶಂಖಜಿನೋದ್ಭವ ಕಾವ್ಯ'ದ ಆರಂಭಕ್ಕೆ ಶಂಖ ಕವಿಯು 'ಶ್ರೀ ನೇಮಿನಾಥಾಯ ನಮಃ' ಎಂದು ಕೃತಿ ಆರಂಭಿಸಿರುವದು. ಹಸ್ತಪ್ರತಿಯಿಂದ ಕಂಡು ಬರುವುದು.[17] ಅದರಂತೆ ಅದೇ ಕಾವ್ಯದಲ್ಲಿ ಸಾಗರದತ್ತನು ಪುಲಿಗೆರೆ ಅತಿಶಯ ಕ್ಷೇತ್ರದ ಮಹಿಮೆಯನ್ನು ಕನಸಿನಲ್ಲಿ ಉಸಿರೆಂದು ಭಕ್ತಿಯಿಂದ ಬಿನ್ನವಿಸಿಕೊಂಡ ಯಕ್ಷಿ ಕುಷ್ಮಾಂಡಿನಿಯು ನೇಮಿನಾಥ ತೀರ್ಥಂಕರರ ಯಕ್ಷಿಯಾಗಿದ್ದಾಳೆ. ಆದುದರಿಂದ ಶಂಖಬಸದಿಯ ಗರ್ಭ ಗೃಹದಲ್ಲಿಯ ಮೂಲವಿಗ್ರಹ ನೇಮಿನಾಥ ತೀರ್ಥಂಕರರದಾಗಿರಬೇಕು. ಆದರೆ ಇದೀಗ ಮೂಲವಿಗ್ರಹ ಅಲ್ಲಿಲ್ಲ. ಅದರ ಬದಲು ಚತುರ್ವಿಂಶತಿ ಜಿನಬಿಂಬ ಅಲ್ಲಿದೆ.

---

15 ಶ್ರೀ ರಾಯಪ್ಪ. ಧ. ಟೀಕಣ್ಣವರ: ಶ್ರೀ ಭಾನುಕೀರ್ತಿ ಸೈದ್ಧಾಂತಿಕ ಚಕ್ರವರ್ತಿ ವಿರಚಿತ 'ಶಂಕದೇವಾಷ್ಟಕ' (ಸಂಶೋಧನಾತ್ಮಕ ಪ್ರಬಂಧ). 'ಸನ್ಮತಿ' ಅಕ್ಟೋಬರ್, 1973, ಪು. 290.

16 ಪುಲಿಗೆರೆ, ಪು. 97 ಡಾ॥ ಎಸ್. ಶೆಟ್ಟರ: ಲಕ್ಷ್ಮೇಶ್ವರದ ದೇವಾಲಯಗಳು.

17 ಕೊಲ್ಲಾಪುರದ ಶ್ರೀ ಲಕ್ಷ್ಮೀಸೇನ ಮಠದ ಹಸ್ತಪ್ರತಿ ಸಂಗ್ರಹದಲ್ಲಿಯ ತಾಳೆ ಗರಿಪ್ರತಿ ನಂ. 147 ಇದರಲ್ಲಿಯ ಅಪ್ರಕಟಿತ ಶಂಖ ಕವಿಯ 'ಶಂಖಜಿನೋದ್ಭವ ಕಾವ್ಯ'.

3. ಆಚಾರ್ಯರು

ರಾಜ ಮಹಾರಾಜರಿಂದ, ಮಂತ್ರಿ–ದಳಪತಿಗಳಿಂದ, ಶೆಟ್ಟಿ-ಸಾಮಂತರ ದಾನದಿಂದ ನಿರ್ಮಾಣಗೊಂಡ ಪುಲಿಗೆರೆಯ ಬಸದಿಗಳಲ್ಲಿ ವಿದ್ವಾಂಸರಾದ ಜೈನಾಚಾರ್ಯರು ಇರುತ್ತಿದ್ದರು. ಉದಯದೇವ ಪಂಡಿತ, ನಿರವದ್ಯ ಪಂಡಿತ, ರಾಮದೇವಾಚಾರ್ಯ, ಜಯದೇವ, ಶ್ರೀ ವಿಜಯದೇವ, ಧ್ರುವದೇವಾಚಾರ್ಯ, ದೇವಚಂದ್ರ ಭಟ್ಟಾರಕ, ಏಕದೇವ (11ನೇ ಶ.), ಜಯದೇವ ಪಂಡಿತ, (11ನೇ ಶ.), ಗಂಡ ವಿಮುಕ್ತ ಭಟ್ಟಾರಕ, ತ್ರಿಭುವನ ಚಂದ್ರ ಪಂಡಿತ, ಶ್ರೀ ನಂದಿ ಪಂಡಿತ, ಭಾಸ್ಕರ ಪಂಡಿತ, ಇಂದ್ರ ಕೀರ್ತಿಪಂಡಿತ (ಗೊಗ್ಗಿಯ ಬಸದಿಯ), ಪದ್ಮಸೇನ, ಹೇಮದೇವಾಚಾರ್ಯ ಹಾಗೂ ಶಂಖಣಾಚಾರ್ಯ (ಶಂಖ ಬಸದಿಯ) ಮೊದಲಾದ ಪ್ರಸಿದ್ಧ ಜೈನಾಚಾರ್ಯರು ಕ್ರಿ. ಶ. 7-8ನೆಯ ಶತಮಾನಗಳಿಂದ ಕ್ರಿ. ಶ. 11ನೆಯ ಶತಮಾನದವರೆಗೆ ಪುಲಿಗೆರೆ ಯಲ್ಲಿದ್ದು ಧರ್ಮ ಪ್ರಭಾವನೆ ಮಾಡಿದುದಾಗಿ ತಿಳಿಯುವುದು. ಜೈನ ಜೈನೇತರ ರಾಜ-ಮಹಾರಾಜರು ಈ ಆಚಾರ್ಯರನ್ನು ಗೌರವಿಸುತ್ತಿದ್ದರೆಂಬುದು ಅವರು ಕೊಟ್ಟ ದಾನ-ದತ್ತಿಗಳಿಂದ ವ್ಯಕ್ತವಾಗುವುದು.

"ಜೈನಾಚಾರ್ಯರಲ್ಲಿ ಪ್ರಸಿದ್ಧರಾದ ಪೂಜ್ಯಪಾದರ ಶಿಷ್ಯ ಉದಯದೇವ ಅಥವಾ ನಿರವದ್ಯಯತಿಪತಿ ಚಾಳುಕ್ಯ ದೊರೆ ವಿನಯಾದಿತ್ಯನಿಗೆ ಗುರುವಾಗಿದ್ದರು. ಅದರಂತೆ ವಿಜಯ ಜಿನಾಲಯವನ್ನು ಜೀರ್ಣೋದ್ಧಾರ ಮಾಡಿಸಿದ ಪದ್ಮಸೇನರೂ (13 ಶ.) ರಾಜಗುರುವಾಗಿದ್ದರೆಂಬ ವಿಷಯ ಗಮನಾರ್ಹವಾಗಿದೆ."[18]

4. ಜೈನಕವಿಗಳು

'ಕವಿರಾಜಮಾರ್ಗ' ಹಾಗೂ ಪಂಪನ 'ವಿಕ್ರಮಾರ್ಜುನ ವಿಜಯ'ಗಳಲ್ಲಿಯ ಉಲ್ಲೇಖಗಳಿಂದಲೇ ಕನ್ನಡ ಸಾಹಿತ್ಯ ಕ್ಷಿತಿಜದ ಮೇಲೆ ಪುಲಿಗೆರೆ ಕಾಣಹತ್ತುವುದು. 'ಪುಲಿಗೆಱೆಯ ಸಾಜದ ತಿರುಳ್ ಕನ್ನಡದೊಳ್' ಕಾವ್ಯರಚಿಸಿದವ ಪಂಪ.

ಈ ಗ್ರಾಮದ ಒಂದು ಶಾಸನ ನಯಸೇನಸೂರಿಯ ಕೀರ್ತಿಯನ್ನು ತುಂಬ ಮನೋಹರವಾಗಿ ಹೀಗೆ ಚಿತ್ರಿಸುತ್ತದೆ : "ಸರಸತಿಯನ್ ಮನೋಮುದದೆ ತಾಳ್ದಿದನ್, ಎನ್ನನ್ ಅವಜ್ಞೆಗೆಯ್ದನ್, ಆನ್ ಇರೆನ್, ಅವಳಿರ್ಕೆ ಚಿಃ ಸವತಿಯೊಳ್ ಪುದುವಾಳ್ವುದು ಕಷ್ಟಂ ಎಂದು ನಿಷ್ಠುರ ವಚನಂಗಳಂ ನುಡಿದು ದಿಕ್ಕರಿಯಂ ಪರಿದೇರಿ ಕೀರ್ತಿತಾಂ ಪುರುಡಿಸಿ ದೂರಿಪಳ್ ಪರ ತಪೋನಿಧಿಯಂ **ನಯಸೇನ ಸೂರಿಯಂ**"[19] ನಯಸೇನಸೂರಿಯಲ್ಲಿರುವ ಸರಸ್ವತಿಯ ಬಗೆಗೆ ದೂರುತ್ತ ಅವನ

---

18 ಪುಲಿಗೆರೆ, ಪು. 62. ಡಾ॥ ಬಿ. ಎಸ್. ಕುಲಕರ್ಣಿ : ಪುಲಿಗೆರೆಯಲ್ಲಿ ಜೈನದರ್ಮ.

19 E.I. 59. ಸಂ. 16.

ಕೀರ್ತಿಯೆಂಬ-ಕಾಂತೆ ದಿಗ್ದೇಶಗಳನ್ನೆಲ್ಲ ಸುತ್ತಿದಳಂತೆ, ಧರ್ಮಾಮೃತದ ನಯಸೇನನೇ ಇವನೆಂದು ಪಂಡಿತರ ಊಹೆ.

ಪುಲಿಗೆರೆಯ ಜೈನ ಕವಿಗಳಲ್ಲಿ ಕ್ರಿ. ಶ. ಸು. 1195 ರಲ್ಲಿದ್ದಿರಬಹುದಾದ ಕವಿ ಆಚಣ್ಣ ತುಂಬ ಪ್ರಸಿದ್ಧ. ತನ್ನ ವಿವರವನ್ನು ಕವಿ ಹೀಗೆ ಕೊಡುವನು :

ಶ್ರೀವಾಣೀವಲ್ಲಭಾಖ್ಯಾನಮನತಿ ಮುದದಿಂ ಪೆತ್ತು ವರ್ತಿಪ್ಪಧಾತ್ರೀ
ದೇವಂ ಸಂದಾಚಿರಾಜಂ ಪುರಿಕರ ನಗರಾಧೀಶ ಶಂಖಾಗ್ರಚಾರ್ಹ
ತ್ಸೇವಾಸಕ್ತಾಶಯಂ ಬಿತ್ತರಿಸಿದ ವಿಬುಧಶ್ರವ್ಯಮೀ ವೀರಕಾವ್ಯಂ
ಭೂವಿಖ್ಯಾತಾವದಾತಂ ಸಕಳ ಸಭೆಗಳೊಳ್ ವರ್ತಿಕಾ ಚಂದ್ರತಾರಂ[20]

ಕವಿ ಆಚಣ್ಣ (1195) ಪುಲಿಗೆರೆಯುವನೆಂಬುದು ಮೇಲಿನ ಪದ್ಯದಿಂದ ಸ್ಪಷ್ಟವಾಗುವುದು. ಅವನು ರಚಿಸಿದ 'ವರ್ಧಮಾನ ಪುರಾಣ'ವು 24ನೆಯ ತೀರ್ಥಂಕರ ಮಹಾವೀರರ ಕುರಿತಾಗಿದೆ. ಈ 'ವರ್ಧಮಾನ ಪುರಾಣ'ವು ಚಂಪೂರೂಪದಲ್ಲಿ ರಚಿತವಾಗಿದ್ದರೆ ಇವನ ಇನ್ನೊಂದು ಕೃತಿ 'ಶ್ರೀಪದಾಶೀತಿ' ಎಂಬುದು ಪಂಚಣ ಮೋಕಾರ ಮಂತ್ರದ ಮಹಿಮೆಯನ್ನು ಹೇಳುವುದು. ಕೃತಿಯ ಮಹಿಮೆಯನ್ನು ಈ ಕೆಳಗಿನ ಪದ್ಯ ಚಿತ್ರಿಸುವುದು :

ನಿರಪಾಯಾತ್ಮಪ್ರಭಾವಂ ಪರಮ ಹಿಮಕರಂ ದೂಷಿತಾಶೇಷದೋಷಂ
ದುರಘವ್ರಾತಾಬ್ಜವಕ್ತ್ರಂ ವಿರಹಿಜನಹಿತಂ ಸತ್ಪಥ ಜ್ಯೋತಿಶಶ್ವಾ
ತ್ಪರಿಪೂರ್ಣಂ ನಿಷ್ಕಳಂಕಂ ಬುಧಹೃದಯಗತಧ್ವಾಂತ ವಿಧ್ವಂಸಿ ತೇಜಂ
ಧರೆಯೊಳ್ ವರ್ತಿಕ್ಕೆ ನಿಚ್ಚಂ ಕುವಲಯಸುಖದಂ ಶ್ರೀಪದಾಶೀತಿ-ಚಂದ್ರಂ[21]

ಸೋಮೇಶ್ವರ ಶತಕವನ್ನು ರಚಿಸಿದ ಸೋಮ (?) ಕವಿಯು ಪುಲಿಗೆರೆಯುವನೆಂದು ಕೆಲವರ ಊಹೆ. 'ಭರತೇಶ ವೈಭವ' ಹಾಗೂ ಶತಕತ್ರಯಗಳನ್ನು ರಚಿಸಿದ ರತ್ನಾಕರವರ್ಣಿಯೇ ಈ 'ಸೋಮೇಶ್ವರ ಶತಕ'ವನ್ನು ಲಕ್ಷ್ಮೇಶ್ವರದಲ್ಲಿ ಬರೆದನೆಂದೂ ಹೇಳುವವರಿದ್ದಾರೆ. ಶ್ರೀ ಎಂ. ಜಿ. ನಂಜುಂಡಾರಾಧ್ಯರು 'ಕವಿ ರತ್ನಾಕರನೂ ಸೋಮೇಶ್ವರ ಶತಕವೂ'[22] ಎಂಬ ಲೇಖನದಲ್ಲಿ ಈ ವಿಷಯವನ್ನು ಸ್ಪಷ್ಟಪಡಿಸಿದ್ದಾರೆ.

ವರಸಮ್ಯಕ್ತ್ವ ಸುಧರ್ಮ ಜೈನಮತದೋಳ್ತಾಂ ಪುಟ್ಟಿಯಾ ದೀಕ್ಷೆಯಂ
ಧರಿಸೀ ಸನ್ನುತ ಕಾವ್ಯ ಶಾಸ್ತ್ರಂಗಳನುಂ ನಿರ್ಮಾಣಮಂ ಮಾಡುತಂ
ವರರತ್ನಾಕರಯೋಗಿಯೆಂದು ನಿರುತಂ ವೈರಾಗ್ಯ ಬಂದೇರಲಾಂ
ಹರದೀಕ್ಷಾವೃತನಾದೆನೈ ಪರಹರಾ ಶ್ರೀಚೆನ್ನಸೋಮೇಶ್ವರಾ

---

20 ಆಚಣ್ಣಕವಿಯ, 'ವರ್ಧಮಾನಪುರಾಣ', 16.92 ಸಂ. ಎಂ. ಮರಿಯಪ್ಪಭಟ್ಟ.

21 ಕವಿಚರಿತೆ ಸಂ. 1. (ದ್ವಿ. ಮು.) ಪು. 357.

22 ವಿಶ್ವಬಂಧು ಪತ್ರಿಕೆಯ 30-4-1929ರ ಸಂಚಿಕೆ.

ಎಂಬ ಪದ್ಯದಿಂದಲೂ ಈ ಶತಕದ ಕರ್ತೃ ರತ್ನಾಕರವರ್ಣಿಯಾಗಿ ತೋರುವನು. ಮೇಲಿನ ಪದ್ಯವನ್ನು ಪ್ರಕ್ಷಿಪ್ತವೆಂದು ಭಾವಿಸುವುದಾದರೆ, ಪುಲಿಗೆರೆಯ ಸೋಮ ಕವಿಯು ಮುಂಚೆ ಜೈನನಾಗಿದ್ದು ತರುವಾಯ ಶೈವಧರ್ಮಕ್ಕೆ ಮತಾಂತರ ಹೊಂದಿದ ನೆಂದು ಭಾವಿಸಬೇಕಾಗುವುದು. ರತ್ನಾಕರನೇ ಸೋಮೇಶ್ವರ ಶತಕದ ಕರ್ತೃ ಎಂಬುದನ್ನು ದೇವಚಂದ್ರನ 'ರಾಜಾವಳಿ' ಕಥೆಯಲ್ಲಿಯ ವಿವರ ಪುಷ್ಟೀಕರಿಸುವುದು.

ಪುಲಿಗೆರೆಯ ಸಿಂಹರಾಜನೆಂಬ ಕವಿಯು (1650) 'ಹರದ ನೀತಿ' ಎಂಬ ಕೃತಿ ಯನ್ನು ಕಂದ ಪದ್ಯಗಳಲ್ಲಿ ರಚಿಸಿದ್ದಾನೆ.

ಪರಮ ಜಿನಪಾದ ಭಕ್ತಂ
ನಿರುತ ಹುಲಿಗೆರೆಯ ಸಿಂಹರಾಜ ಪೇಳ್ದಂ
ವರನೀತಿಯನಾದರದಿಂ
ಪರಮ ಪರಂಜ್ಯೋತಿಗಳ್ಗೆ ಬುದ್ಧಿಯನನಿಸುಂ

ಅಲ್ಲದ ಸತಿಯೊಡನಾಟಂ
ತಲ್ಲಣಿಸುವ ಭಯದ ಬೆಟ್ಟಕಳ್ಳರ ಸಂಗಂ
ಬಲ್ಲಿದರೊಡನೆ ವಿರೋಧಂ
ಕೊಲ್ಲದೆ ಮಾಣ್ದಪುದೆ ಸುಕವಿ ಕರ್ಣಾಭರಣಾ[23]

ಎಂದು ಇವನ ನೀತಿ ಪದ್ಯಗಳ ಕೊನೆಯಲ್ಲಿ 'ಸುಕವಿ ಕರ್ಣಾಭರಣಾ' ಎಂಬ ಅಂಕಿತವಿದೆ. 'ಚಿನ್ಮಯ ಚಿಂತಾಮಣಿ' ಎಂಬ ಕೃತಿಯೂ ಸಿಂಹರಾಜನದೆಂದು ತಪ್ಪುಗ್ರಹಿಸಲಾಗಿದೆ. ಅದು ಕಲ್ಯಾಣಕೀರ್ತಿಯ ಕೃತಿಯೆಂದು ಈಗಾಗಲೇ ಸಿದ್ಧ ವಾಗಿದೆ.

ಇವರೊಂದಿಗೆ ಪುಲಿಗೆರೆಯ ಸಾಹಿತ್ಯ ಕ್ಷಿತಿಜದ ಮೇಲೆ ಕಂಡುಬಂದ ಶಂಖ ಕವಿಯೂ ಒಬ್ಬನಾಗಿದ್ದಾನೆ. ಅವನ ಕೃತಿ 'ಪುಲಿಗೆರೆಯ ಶಂಖಜಿನೋದ್ಭವ ಕಾವ್ಯ'ವು ಇತ್ತೀಚೆ ಕೊಲ್ಲಾಪುರದ ಲಕ್ಷ್ಮೀಸೇನ ಮಠದ ಹಸ್ತಪ್ರತಿ ಸಂಗ್ರಹಾಲಯದಲ್ಲಿ ಡಾ॥ ಎಂ. ಎಂ. ಕಲಬುರ್ಗಿ ಅವರಿಗೆ ದೊರೆಯಿತು.

ಪುಲಿಗೆರೆಯ 'ಮತಿವಂತ ಅಂತಪ್ಪನ ಮಗ ಕವಿಶಂಖನು' (ಪದ 137) ಇದನ್ನು ರಚಿಸಿದವನು. ಕವಿಯ ಹೆಸರು ಇಂದು ಅಪರೂಪವೆನಿಸಿದರೂ 16ನೆಯ ಶತಮಾನದ ಶಾಸನವೊಂದರಲ್ಲಿ ಶಂಖಣಾಚಾರ್ಯ ಎಂಬ ಹೆಸರು (1539) ಬಂದಿದೆ. ಅದರಂತೆ 16ನೆಯ ಶತಮಾನದ ಲಕ್ಕುಂಡಿಯ ಶಾಸನದಲ್ಲಿ ಶಂಖದೇವನು ಒಂದು ಜಿನಪ್ರತಿಮೆಯನ್ನು ಪ್ರತಿಷ್ಠೆಮಾಡಿದ ಉಲ್ಲೇಖ ದೊರೆಯುವುದು.[24] (ಕವಿಶಂಖ,

---

23 ಕವಿಚರಿತೆ, ಭಾಗ 2. (ದ್ವಿತೀಯ ಮುದ್ರಣ) ಪು. 421.

24 ಈ ವಿಷಯವನ್ನು ನನ್ನ ಗಮನಕ್ಕೆ ತಂದವರು ಶ್ರೀ ರಾಯಪ್ಪ ಥ. ಟೀಕಣ್ಣವರ ಅವರು

ಶಂಖದೇವ ಹಾಗೂ ಈ ಶಂಖಣಾಚಾರ್ಯರು ಒಬ್ಬರೇ ಹೇಗೋ ಎಂಬ ಕುರಿತು ಸಂದೇಹವುಂಟಾಗುವುದು.)

ಪಂಚ ಪರಮೇಷ್ಠಿಗಳನ್ನೂ, ಪೂರ್ವದ ಜೈನ ಕವಿಗಳನ್ನೂ ಸ್ಮರಿಸಿ ಕವಿ ಕೃತಿಯನ್ನು ಆರಂಭಿಸುವನು. ಉತ್ತರ ದೇಶದ ಸಾಗರದತ್ತನು ವೃಷಭಗಳ ಮೇಲೆ ಹತ್ತು ಸಾವಿರ ಶಂಖದ ಹೇರು ಹೇರಿಕೊಂಡು ಪ್ರಯಾಣಮಾಡುತ್ತ ಪುರಿಕ ನಗರಿಗೆ ಒಂದು ಬೀಡು ಬಿಡುವನು, ಅಲ್ಲಿ ಹರಿ-ಕರಿ, ಹುಲಿ-ಹುಲ್ಲೆ, ಅವುಗಳು ತಮ್ಮ ಜಾತವೈರಭಾವವನ್ನು ಮರೆತು ಕೂಡಿ ಇರುವುದನ್ನು ಕಂಡು ಸಂತೋಷಪಡುವನು. (10) ಇದೊಂದು 'ವರಪುಣ್ಯ ಕ್ಷೇತ್ರವೆಂದು' ಅದರ ಅತಿಶಯುವನ್ನು ತನಗೆ ಕನಸಿನಲ್ಲಿ ಉಸುರೆಂದು ಕೂಷ್ಮಾಂಡಿ ಯಕ್ಷಿಯನ್ನು ಪ್ರಾರ್ಥಿಸುವನು. 'ಪರಮಾತ್ಮರು ನಿನ್ನಯ ಭಕ್ತಿಗಿಂದು ಉದ್ಭವಿಸುವರು' 'ಬಲಮುರಿ ಶಂಖದೊಳು ಶ್ರೀಜಿನ ನೆಲಸುವರೆಂದು' ಹೇಳಿ ಅವಳು ಮಾಯವಾಗುವಳು.

ಬೆಳಗಾಗಲು ಮಳೆ ಸುರಿಯುವುದು ಒಟ್ಟಿದ ಹೇರು ದಡದಡನೆ ಕೆಳಗೆ ಉರುಳುವುದು ಮೇಲೆತ್ತಲು ಪ್ರಯತ್ನಿಸಿದರೂ ಸಾಧ್ಯವಾಗುವದಿಲ್ಲ. ಹೇರನ್ನು ಒಡೆದು ನೋಡಲು ಶಂಖದೊಳಗೆ ಪೊಡವಿಗೊಡೆಯ ಪುಟ್ಟಿರೆ ಬಡವರೊಡವೆ ಗಂಡಂತೆ ಅವನು ಅಡಿಗೆರಗುವನು (40). ಮುಂದೆ ಆ ಜಿನನ ಪ್ರತಿಮೆಯ ಪೂಜೆ ಯನ್ನು ಪಂಚಾಮೃತ ಅಭಿಷೇಕದಿಂದ ನೆರವೇರಿದ ಹಾಗೂ ಓಕುಳಿಯಾಟದ ವರ್ಣನೆ ವ್ಯಾಪಿಸಿದೆ. (45-133). ಕೊನೆಯಲ್ಲಿ ಸಾಗರದತ್ತನು ಒಡೆಯ ಶಂಖಜಿನನ ಶ್ರೀಪಾದಗಳನ್ನು ನಿತ್ಯ ಸ್ಮರಿಸುತ್ತ ತನ್ನ ನಾಡಿಗೆ ತಿರುಗಿದನು (135).

ಸಾಗರದತ್ತನು ಪುಲಿಗೆರೆಯಲ್ಲಿ ಶಂಖಜಿನೋದ್ಭವವನ್ನು ಅರಿತು ಭಕ್ತಿಭಾವ ದಿಂದ ಪೂಜಿಸಿದನೆಂಬ ಒಂದು ಸಂಗತಿಯನ್ನು ನೂರಾನಲವತ್ತು ಪದಗಳಲ್ಲಿ ವಿಸ್ತರಿಸು ವಲ್ಲಿ ಕವಿಶಂಖ ತನ್ನ ಜಾಣ್ಮೆಯನ್ನು ಮೆರೆದಿದ್ದಾನೆ. ಪ್ರೌಢಕವಿಗಳ ಪುರಾಣಗಳಲ್ಲಿ ಬರುವ ತೀರ್ಥಂಕರರ ಪಂಚಕಲ್ಯಾಣಗಳ ವರ್ಣನೆಯನ್ನು ಸುಲಲಿತವಾದ ಶೈಲಿಯಲ್ಲಿ ಓದಿದ ಅನುಭವ ವಾಚಕರಿಗಾಗದಿರದು. ಇಲ್ಲಿ ತೀರ್ಥಂಕರನ ಬದಲು ಜಿನಬಿಂಬ ಶಂಖಜಿನಬಿಂಬ ಕುರಿತು ಜನರಲ್ಲಿ ಭಕ್ತಿಭಾವ ಮೂಡುವಂತೆ ಕಥೆಯನ್ನು ಮುನ್ನಡೆಸು ವಲ್ಲಿ ಕವಿ ತನ್ನ ಕಲಾತ್ಮಕತೆಯನ್ನು ತೋರಿದ್ದಾನೆ. ಮಹಾಕವಿಗಳಲ್ಲಿರಬೇಕಾದ ಪ್ರತಿಭೆ, ಪಾಂಡಿತ್ಯಗಳನ್ನು ಈ ಚಿಕ್ಕ ಕೃತಿಯಲ್ಲಿ ಅರಸಲು ಪ್ರಯತ್ನಿಸದೆ, ಸಜ ಸಾಮಾನ್ಯರಿಗೂ ಅರ್ಥವಾಗುವಂತೆ, ಭಕ್ತಿ-ಭಾವ ಒಡಮೂಡುವಂತೆ ಕಥೆಯನ್ನು ನಿರೂಪಿಸುವ ಕಲೆಯನ್ನು ಕವಿಶಂಖನಲ್ಲಿ ಕಾಣಬಹುದು. ಶಂಖಜಿನೋದ್ಭವದ ಅಂತಸ್ಸತ್ವ ವರ್ಣನೆಯಲ್ಲಿ ಅಡಕವಾದಂತಿದೆ. ಕಥೆಯ ಕಿರುಬಳ್ಳಿಯನ್ನು ವರ್ಣನೆಯ ವಿಶಾಲ ಮಂಟಪದ ಮೇಲೆ ವಿಸ್ತಾರವಾಗಿ ಹಬ್ಬಿಸಿದ್ದಾನೆ.

ಬೆಳ್ಗಣ್ಣೆಸಳುಗಣ್ಣಿನ। ಮೀನ್ಗಣ್ಣು
ಯೆಳೆ ಹುಲ್ಲೆಯೊಳುಗಣ್ಣಿನ।
ಸೆಳೆಮಿಂಚು ಕಡೆಗಣ್ಣಿನ। ಪೆಣ್ಣುಗಳೆಲ್ಲ
ಯುಳಸಿತಾವೈತಂದರು 94

ಎಂಬಲ್ಲಿ ಹೆಣ್ಣ ಕಣ್ಣಿನ ವಿವಿಧ ಬೆಡಗಿನ ವರ್ಣನೆ ಚೇತೋಹಾರಿಯಾಗಿದೆ.

ಕಥಾ ನಿರೂಪಣೆ, ವರ್ಣನೆ, ಹೋಲಿಕೆಗಳಲ್ಲಿ ಶಂಖಕವಿಯ ಕಾವ್ಯಪ್ರತಿಭೆಯ ಮಿಂಚನ್ನು ಅಲ್ಲಲ್ಲಿ ಕಾಣಬಹುದಾಗಿದೆ. ಪೂರ್ವಕವಿಗಳ ಕೃತಿಗಳ ಆಳವಾದ ಅಧ್ಯಯನದ ಪ್ರಭಾವ ಅಲ್ಲಲ್ಲಿ ತೋರುವುದುಂಟು. ವಿವಿಧ ಬೆಡಗಿಯರು ಜಿನಪೂಜೆ ಮಾಡಲು ಬರುವವರ ವರ್ಣನೆ ರತ್ನಾಕರವರ್ಣಿಯ 'ಭರತೇಶ ವೈಭವ'ದಲ್ಲಿ ಕಾಣಿಕೆ ಕೊಂಡುಬರುವ ರಾಣಿಯರ ಚಿತ್ರವನ್ನು ನೆನಪಿಸುವಂತಿದೆ. ಒಬ್ಬೊಬ್ಬರ ರೀತಿ, ನಿಲವು, ಬೆಡಗುಗಳನ್ನು ಒಂದೊಂದು ರೀತಿ ವರ್ಣಿಸಿರುವದರಿಂದ ಅವರ ಚಿತ್ರಕ್ಕೆ ಕಳೆಯೇರಿದೆ. ಒಟ್ಟಿನಲ್ಲಿ ಅತಿಶಯ ಕ್ಷೇತ್ರವಾದ ಪುಲಿಗೆರೆಯ ಶಂಖಜಿನನ ಕುರಿತು ಭಕ್ತಿಭಾವ, ಮೂಡುವಂತೆ ಕಥೆಯನ್ನು ಹೇಳುವಲ್ಲಿ ಶಂಖಕವಿಯ ಪ್ರಯತ್ನ ಮೆಚ್ಚು ವಂತಿದೆ.

ಪ್ರಾಚೀನ ಕಾಲದಿಂದಲೂ ರಾಜ-ಮಹಾರಾಜರಿಂದ ದಾನ-ದತ್ತಿಗಳನ್ನು ಪಡೆದ ಬಸದಿಗಳಿಂದ, ಆಚಾರ್ಯರಿಂದ, ಕವಿಗಳಿಂದ ಪ್ರಸಿದ್ಧವಾದ ಪುಲಿಗೆರೆಯು ಶಂಖ ಬಸದಿಯು ಇಂದಿಗೂ ಶಿಲ್ಪಕಲಾಕೃತಿಯ ವೈಶಿಷ್ಟ್ಯವಾಗಿ ಮೆರೆಯುವುದನ್ನು ಶಂಖ ಕವಿಯು ತನ್ನ ಕಾವ್ಯದಲ್ಲಿ ನಿರೂಪಿಸಿ ಪುಲಿಗೆರೆಯು ಪ್ರಸಿದ್ಧ ಜೈನ ಕೇಂದ್ರ ವೆಂಬುದನ್ನು ವ್ಯಕ್ತಪಡಿಸುವನು.

ಮರಾಠೀ ಶ್ರೀಕೃಷ್ಣಪಾರಿಜಾತ ಮತ್ತು ನಮ್ಮ ನಾಟ್ಯಪರಂಪರೆ

ಪ್ರಲ್ಹಾದ ಮುದ್ಗಲ್

ಪಾರಿಜಾತವೆಂದು ನುಡಿದಕೂಡಲೇ ಕನ್ನಡ ಭಾಷೆಯಲ್ಲಿ ಪ್ರಚಲಿತವಿರುವ ಶ್ರೀಕೃಷ್ಣಪಾರಿಜಾತ, ಶ್ರೀವೆಂಕಟೇಶಪಾರಿಜಾತ ಇತ್ಯಾದಿ ಪಾರಿಜಾತಗಳು ಕಣ್ಣೆದುರು ಬರುವವಲ್ಲದೆ, ಕೆಲವು ಹಿರಿಯರು ತಮಗೆ ನೆನಪಿದ್ದ ಈ ಪಾರಿಜಾತದಲ್ಲಿಯ ಪದಗಳನ್ನು ಧ್ವನಿ ನಡುಗಿಸುತ್ತ ನುಡಿಯುವುದೂ, ದೇವರ ಉತ್ಸವ, ಜಾತ್ರೆ ಮುಂತಾದ ಸಮಾರಂಭಗಳು ಕಣ್ಣೆದುರು ಬಂದು, ಅವುಗಳಲ್ಲಿ ಪಾರಿಜಾತ ಮೇಳವನ್ನು ಕಂಡು, ಆನಂದ ಹೊಂದಿದುದೂ ನೆನಪಾಗುವುದು. ಸತ್ಯಭಾಮೆಯ ಮನೆಯ ಅಂಗಳದಲ್ಲಿದ್ದ ಪಾರಿಜಾತಗಿಡದ ಹೂವು ಹಾರಿ ಹೋಗಿ ರುಕ್ಮಿಣಿಯ ಮನೆಯ ಅಂಗಳದಲ್ಲಿ ಬಿದ್ದಂತೆ, ಕನ್ನಡ ಪಾರಿಜಾತ ನಾಟಕ ತನ್ನ ಸುಗಂಧವನ್ನು ಮರಾಠೀ ಸಾಹಿತ್ಯದಲ್ಲಿಯೂ ಬೀರಿದೆ, ಮಾತ್ರವಲ್ಲ ಮರಾಠೀ ರಂಗಭೂಮಿಯಮೇಲೆ ರಂಗ ಪ್ರಯೋಗವಾಗಿದೆ ಎಂಬುದು ಕೆಲವೇ ವಾಚಕರಿಗೆ ಗೊತ್ತಿರಬಹುದು. ಕನ್ನಡ ಸಾಹಿತ್ಯದಲ್ಲಿ ಶ್ರೀಕೃಷ್ಣಪಾರಿಜಾತದ ವಿಸ್ತಾರ, ಇತಿಹಾಸ ಮತ್ತು ಸತ್ವ ದೊಡ್ಡದಾಗಿರುತ್ತದೆ.

ಶ್ರೀಮಾನ್ ಮಧ್ವಾಚಾರ್ಯರು ದ್ವೈತಪಂಥವನ್ನು ಸ್ಥಾಪಿಸಿದುದರಿಂದ ದೇಶದಲ್ಲಿ ಭಕ್ತಿಪ್ರಸಾರಕ್ಕೆ ಅನುವು ಉಂಟಾಯಿತು. ದಾಸಕೂಟ, ವ್ಯಾಸಕೂಟಗಳು ಈ ಪ್ರಭಾವದಿಂದ ಜನ್ಮಪಡೆದು ಭಕ್ತಿಮಾರ್ಗ ಹಬ್ಬಿಸತೊಡಗಿದವು. ತಮ್ಮ ಶ್ರದ್ಧೆಯನ್ನು ಭಕ್ತರು ನಾನಾರೂಪದಿಂದ ತೋರಿಸಹತ್ತಿದರಲ್ಲದೆ ಆನಂದದಿಂದ ಕೃಷ್ಣ-ರಾಧೆಯರಾಗಿ ಹಾಡಿ, ಕುಣಿದು, ಭಕ್ತಿರಸದ ಸವಿಯೂಟ ಉಣ್ಣತೊಡಗಿದರು.

ಕರ್ನಾಟಕದಲ್ಲಂತೂ ಎಲ್ಲ ಪೂಜನೀಯ ಸ್ಥಳಗಳಲ್ಲಿ ಶ್ರೀಕೃಷ್ಣನ ಲೀಲೆ, ಭಾಗವತ ಆಟ, ದಾಸರ ಮುಖಾಂತರ ಉರ್ಜಿತಾವಸ್ಥೆ ಪಡೆಯಿತು. ಇದೆಲ್ಲದರ ಪ್ರಭಾವದಿಂದ ಅಪರಾಳ ತಮ್ಮಣ್ಣ ಶ್ರೀಕೃಷ್ಣಪಾರಿಜಾತವೆಂಬ ಗೀತ ನಾಟಕವನ್ನು ಬರೆದನು. ಈತ ಕನ್ನಡ, ಸಂಸ್ಕೃತ, ಪಂಡಿತ; ಮಾಧ್ವ ತತ್ವಜ್ಞಾನ, ದಾಸಸಾಹಿತ್ಯ, ಪುರಾಣ, ಗಾಯನ ಶಾಸ್ತ್ರಗಳನ್ನು ಅಭ್ಯಾಸ ಮಾಡಿ ಜೀರ್ಣಿಸಿಕೊಂಡ ವ್ಯಕ್ತಿ. ಶ್ರೀ ಕೃಷ್ಣ ಪಾರಿಜಾತವನ್ನು ಪ್ರದರ್ಶಿಸಿ ಧರ್ಮ, ನೀತಿಗಳನ್ನು ಜಾಗ್ರತಗೊಳಿಸತೊಡಗಿದನು.

ಉತ್ತರ ಕರ್ನಾಟಕದಲ್ಲಿ ಜನರು ಸಮಾರಂಭ ಸಮಯದಲ್ಲಿ ಈ ಆಟವನ್ನು ಆಡತೊಡಗಿದರು. ಇದನ್ನು ರಸಿಕರು ಕಲೆ, ಅಭಿನಯಗಳ ದೃಷ್ಟಿಯಿಂದ ಕಂಡರೆ, ಧಾರ್ಮಿಕಭಾವದಿಂದ ಸ್ತ್ರೀಯರು ಇದರ ಪಾರಾಯಣ ಮಾಡುತ್ತಿದ್ದರು.

ಅಪರಾಳ ತಮ್ಮಣ್ಣನ ಶ್ರೀಕೃಷ್ಣಪಾರಿಜಾತದ ಕಥಾವಸ್ತು ಹೀಗಿದೆ :—ಒಂದು ದಿನ ಸ್ವರ್ಗದಿಂದ ನಾರದನು ಶ್ರೀಕೃಷ್ಣನಿಗೆ ಪಾರಿಜಾತ ಪುಷ್ಪವನ್ನು ತಂದುಕೊಡುತ್ತಾನೆ. ಅದನ್ನು ಶ್ರೀಕೃಷ್ಣ ತನ್ನ ಪಟ್ಟದರಸಿ ರುಕ್ಮಿಣಿಗೆ ತೊಡಿಸುತ್ತಾನೆ. ನಾರದ ಇದನ್ನು ಸತ್ಯಭಾಮೆಗೆ ತಿಳಿಸಿ, ಪಾರಿಜಾತ-ಹೂವಿನ ಮಹಿಮೆ ಹೇಳಿ, ದೇವಲೋಕಕ್ಕೆ ಹೋಗುತ್ತಾನೆ. ಸತ್ಯಭಾಮೆ ಶ್ರೀಕೃಷ್ಣನ ಪಕ್ಷಪಾತ ವರ್ತನೆಗಾಗಿ ರೊಚ್ಚಿಗೆದ್ದು ಆತನನ್ನು ಕರೆಕಳಿಸುತ್ತಾಳೆ. ಸರ್ವಜ್ಞನಾದ ಶ್ರೀಕೃಷ್ಣ, ಇದೆಲ್ಲಕ್ಕೆ ನಾರದನೇ ಕಾರಣವೆಂದು ಮನಗಾಣುತ್ತಾನೆ. ಶ್ರೀಕೃಷ್ಣ ಬಾರದಿದ್ದರಿಂದ ಕ್ರುದ್ಧಳಾದ ಸತ್ಯಭಾಮೆ, ತನ್ನ ಸೌಂದರ್ಯದಿಂದ ಆತನನ್ನು ವಶಪಡಿಸಿಕೊಳ್ಳಬೇಕೆಂದು, ಸಿಂಗರಿಸಿಕೊಂಡು ರುಕ್ಮಿಣಿಯ ಬಿಡಾರಕ್ಕೆ ಬರುತ್ತಾಳೆ. ಅಲ್ಲಿ ಶ್ರೀಕೃಷ್ಣ ಲೆತ್ತದಲ್ಲಿ ಮಗ್ನನಾಗಿದ್ದು, ತನ್ನನ್ನು ಕಂಡು ಮಾತನಾಡಿಸದ್ದರಿಂದ ಮೂರ್ಛೆಹೋಗಿ ಬೀಳುವಾಗ್ಗೆ ಅವಳನ್ನು ಹಿಡಿದು ಉಪಚಾರ ಮಾಡುತ್ತಾನೆ. ಎಚ್ಚತ್ತಬಳಿಕ-ಶ್ರೀಕೃಷ್ಣನು ಸಂತೈಸಿದರೂ, ಇದೆಲ್ಲ ಕೃತ್ರಿಮವೆಂದು ಭಾವಿಸಿ, ರುಕ್ಮಿಣಿಯನ್ನು ಹಳಿದು ಹೊರಡುತ್ತಾಳೆ. ತನ್ನ ವಸತಿಗೆ ಬಂದು ಪಾರ್ವತಿಯನ್ನು ಒಲಿಸಿಕೊಂಡು 'ಶ್ರೀಕೃಷ್ಣನನ್ನು ನಿನ್ನ ಕೈಲಿ ಕೊಟ್ಟೆನೇ'ಎಂಬ ವರ ಪಡೆಯುತ್ತಾಳೆ. ವರದ ಪರಿಣಾಮ ಶ್ರೀಕೃಷ್ಣನಲ್ಲಿ ಉಂಟಾದಾಗ ಅವನು ಕೊರವಂಜಿಯ ರೂಪಧರಿಸಿ ಸತ್ಯಭಾಮೆಯ ಮನಸ್ಸನ್ನು ಅರಿತುಕೊಳ್ಳಲು ಬಗುತ್ತಾನೆ; ಮತ್ತು ಅವಳಿಗೆ 'ಬಂದನೆಂದು ತಿಳಿಯೆ ಸ್ಮರನ ಮಾತಿನ ಗಿಳಿಯೆ'ಎಂದು ಹೇಳಿ, ಆದರಾತಿಥ್ಯ, ಉಡುಗೊರೆ ಪಡೆದು ನೇರವಾಗಿ ರುಕ್ಮಿಣಿಯಲ್ಲಿ ಬರುತ್ತಾನೆ. ಕೃಷ್ಣನ ಮಾಯೆ ಅರಿತ ರುಕ್ಮಿಣಿ, ಕೊರವಂಜಿ ಬರಲು ಆದರದಿಂದ ಆರತಿಗೈದು ಸ್ವಾಗತಿಸುತ್ತಾಳೆ. ರುಕ್ಮಿಣಿಗೆ ಹೇಳಿ, ಶ್ರೀಕೃಷ್ಣ, ಸತ್ಯಭಾಮೆಯ ಮನೆಗೆ ಬರುತ್ತಾನೆ. ಸರಸಸಲ್ಲಾಪ ನಡೆದಾಗ್ಗೆ ಕೇವಲ ಹೂವಿಗಾಗಿ ಇಷ್ಟೇಕೆ ಮನಸ್ತಾಪ, ವೃಕ್ಷವನ್ನೇ ತಂದುಕೊಡುವೆನೆಂದು ವಚನಕೊಡುತ್ತಾನೆ.

ಈ ನಡುವೆ ದೇವೇಂದ್ರನು ಮುರಾಸುರ, ನರಕಾಸುರರ ಅತ್ಯಾಚಾರ ಮಿತಿ ಮೀರಿದೆ, ಅವರನ್ನು ಸಂಹರಿಸಬೇಕೆಂದು ಶ್ರೀಕೃಷ್ಣನಿಗೆ ಬಿನ್ನವಿಸುತ್ತಾನೆ. ಅದನ್ನು ಕೈಕೊಂಡು ಶ್ರೀಕೃಷ್ಣ, ಸತ್ಯಭಾಮೆಯೊಡನೆ ಮರಳುವಾಗ್ಗೆ 'ಕೋಪ ಕೆರಳಿಸಿದ ಪಾರಿಜಾತ'ವನ್ನು ತೋರಿಸುತ್ತಾನೆ. ವೃಕ್ಷವನ್ನು ತಂದು ಸತ್ಯಭಾಮೆ ತನ್ನ ಮನೆಯ ಅಂಗಳದಲ್ಲಿ ನಚ್ಚುತ್ತಾಳೆ. ಆದರೆ ಗಾಳಿಗೆ ಅದರ ಹೂವೆಲ್ಲ ಹಾರಿ ರುಕ್ಮಿಣಿಯ ಮನೆ ಸೇರುತ್ತವೆ. ಇವಕ್ಕೆಲ್ಲ ಕಾರಣವೇನೆಂದು ಶ್ರೀಕೃಷ್ಣನನ್ನು

ಕೇಳಿದ್ದಕ್ಕೆ ಆತ, 'ಅಹಂಕಾರ ಬಿಡು. ಅಕ್ಕ ರಕ್ಮಿಣಿಯನ್ನು ಮನ್ನಿಸೆಂದು' ಉಪದೇಶ ಮಾಡುತ್ತಾನೆ. ಸತ್ಯಭಾಮೆ ರಕ್ಮಿಣಿಯ ಮನೆಗೆ ಬರಲು, ಅವಳು ಆನಂದದಿಂದ ಅಪ್ಪಿಕೊಂಡು ಬರಮಾಡಿಕೊಳ್ಳುತ್ತಾಳೆ. ಇದೆ ಶುಭಸಮಯದಲ್ಲಿ 16000 ಗೋಪಿಕೆಯರೊಂದಿಗೆ ಶ್ರೀಹರಿಯ ಮದುವೆ ಕೈಗೂಡುತ್ತದೆ ಮತ್ತು ಎಲ್ಲೆಡೆಗೂ ಮಂಗಲವಾದ್ಯ ನಿನಾದಗೊಳ್ಳುತ್ತದೆ.

'ಶೃಂಗಾರ ರಸ' ಕನ್ನಡ ಪಾರಿಜಾತದಲ್ಲಿ ಮುಖ್ಯವಾಗಿದೆ. 'ಸಂಯೋಗ' 'ವಿಪ್ರಲಂಭ' ಕಂಡರೂ 'ವಿರಹ ಶೃಂಗಾರ' ಪ್ರಭಾವ ಬೀರುತ್ತದೆ. ಕೊರವಂಜಿಯ ಪಾತ್ರ ಹಾಸ್ಯರಸಕ್ಕೆ ಮೀಸಲಾಗಿರುತ್ತದೆ. ಹೀಗಾಗಿ ಈ ನಾಟಕದಲ್ಲಿ ವ್ಯಂಗ, ವಿಡಂಬನೆ, ಆಮೋದ, ಪ್ರಮೋದಗಳ ಸಂಗಮವಿದೆ.

ಅಪರಾಳ ತಮ್ಮಣ್ಣನ ಪಾರಿಜಾತದಿಂದ ಪ್ರಭಾವಿತನಾದ ಕುಲಗೋಡ ತಮ್ಮಣ್ಣ ಕಂಠ ಮಾಧುರ್ಯ, ಸಂಗೀತ, ಕವಿತ್ವ, ಅಭಿನಯಗಳಿಂದ, ಇದನ್ನು ಜನಪ್ರಿಯತೆಯ ಉಚ್ಚ ಶಿಖರಕ್ಕೆ ಮುಟ್ಟಿಸಲು ಶ್ರಮಿಸಿ ಯಶಪಡೆದನು. ಈತನ ಶಿಷ್ಯೆ ಕೌಜಲಗಿ ನಿಂಗಾಸಾನಿ ಪಾರಿಜಾತ–ಮೇಳದಲ್ಲಿ ಖ್ಯಾತನಾಮಳಾದ ಮೊದಲಿನ ಸ್ತ್ರೀಯಳು. ಕುಲಗೋಡ ತಮ್ಮಣ್ಣ ತನ್ನದೇ ಆದ ಆಟದ ಮೇಳವನ್ನು ಸ್ಥಾಪಿಸಿ, ಪೂರ್ವ ರಂಗದಲ್ಲಿ ಗೋಪಾಲ ಗೊಲ್ಲತಿಯರ ಸರಸಸಲ್ಲಾಪವನ್ನು ತನ್ನ ಕವಿತ್ವ ಶಕ್ತಿಯಿಂದ ರಚಿಸಿ ಜೋಡಿಸಿದನಲ್ಲದೇ, ತಾನು ಕೆಲವು ಬಾರಿ ಭಾಗವತನಾಗಿ, ಮತ್ತೆ ಕೆಲವು ಬಾರಿ ಶ್ರೀಕೃಷ್ಣನ ಪಾತ್ರವಹಿಸಿ, ಮನೋರಂಜನೆ ಮಾಡತೊಡಗಿದನು. ಹೀಗಾಗಿ ಈ ನಾಟಕವು ಲೋಕಪ್ರಿಯತೆಯನ್ನು ಪಡೆದು ಕುಲಗೋಡ ತಮ್ಮಣ್ಣನದೇ ಎಂಬ ಭಾವನೆ ಜನರಲ್ಲಿ ಬೇರೂರಿತು. ಈಗಲೂ ಪಾರಿಜಾತ ಮೇಳದವರು ಈತನು ರಚಿಸಿದ ಪದಗಳನ್ನು ಪೂರ್ವರಂಗವಾಗಿ ಅಭಿನಯಿಸುವರು.

ಹತ್ತೊಂಬತ್ತನೆಯ ಶತಮಾನದ ಮಧ್ಯದಲ್ಲಿ ಕನ್ನಡದ ಯಕ್ಷಗಾನ, ಬಯಲಾಟಗಳು ಮಹಾರಾಷ್ಟ್ರದಲ್ಲಿ ಪ್ರಸಿದ್ಧಿ ಹೊಂದಿದ್ದವು. ಕನ್ನಡ ಪಾರಿಜಾತ ನಾಟಕದ ಒಂದು ಮೇಳವು ಬೆಳಗಾಂವಿಯಲ್ಲಿ ಆಡಿತೋರಿಸಿದ ಆಟವನ್ನು ಕಂಡು ಅಂಣಾಸಾಹೇಬ ಕಿರ್ಲೋಸ್ಕರನು, ತಾನಾದರೂ ಮರಾಠಿಯಲ್ಲಿ ಪಾರಿಜಾತವನ್ನು ರಚಿಸಬೇಕೆಂದು ಸ್ಫೂರ್ತಿಪಡೆದನು. ಇದರಲ್ಲಿಯ ಅಭಿನಯ, ರಸಿಕತೆ ಆತನ ಕವಿತ್ವವನ್ನು ಜಾಗ್ರತಗೊಳಿಸಿದವೆಂದು ಕಾಣುತ್ತದೆ. ಮರಾಠೀ ಪಾರಿಜಾತದ ಕಥಾ ಸಾರಾಂಶ :- ಒಂದು ದಿನ ಶ್ರೀಕೃಷ್ಣನು ಆನಂದದಿಂದ ರತ್ನಖಚಿತವಾದ ಸಿಂಹಾಸನದಮೇಲೆ ಕುಳಿತ ಸಮಯದಲ್ಲಿ ಬ್ರಹ್ಮವೀಣೆಯನ್ನು ಬಾರಿಸುತ್ತ ನಾರದನು ಬರುತ್ತಾನೆ. ಆತ ಬಂದಾಗಿನಿಂದ ಸಭಾಸ್ಥಾನದಲ್ಲಿ ಸುವಾಸ ಪಸರಿಸಿದ್ದನ್ನು ತಿಳಿದು ಶ್ರೀಕೃಷ್ಣ ಆಶ್ಚರ್ಯದಿಂದ ಕೈಜೋಡಿಸಿ ಮುನಿವರ್ಯನಿಗೆ, ಸುವಾಸ ಬೀರುವ ಹೂವನ್ನು ತೋರಿಸಲು ಬೇಡಿಕೊಳ್ಳುತ್ತಾನೆ. ಶ್ರೀಕೃಷ್ಣನ

ಉತ್ಸುಕತೆಯನ್ನು ಕಂಡು, ನಿನ್ನ ಲೀಲೆ ಅನಂತವಾಗಿದೆ, ನಿನ್ನ ಮಹಿಮೆಗೆ ಅಂತವಿಲ್ಲ, ನಿನಗಾಗಿಯೇ ಈ ಪುಷ್ಪವನ್ನು ತಂದಿರುವೆ. ನರಲೋಕದಲ್ಲಿ ದುರ್ಲಭವಾದ ಇದನ್ನು ಇಂದ್ರನೇ ನಿನಗಾಗಿ ಕೊಟ್ಟಿದ್ದಾನೆಂದು ಪಾರಿಜಾತ ಪುಷ್ಪವನ್ನು ಕೊಟ್ಟು ಪ್ರೇಮಪತ್ನಿ ಸತ್ಯಭಾಮೆಗೆ ಕೊಡೆಂದು ಸೂಚಿಸುತ್ತಾನೆ. ಆದರೆ ಶ್ರೀಹರಿಯು ರುಕ್ಮಿಣಿಗೆ ಅದನ್ನು ಮುಡಿಸುತ್ತಾನೆ. ಹರಿನಾಮ ಪಠಿಸುತ್ತ ನಾರದ ಸತ್ಯಭಾಮೆಯ ಸದನಕ್ಕೆ ಬಂದು ಆದರ ಸತ್ಕಾರವಾದ ಬಳಿಕ, ನಿನ್ನ ಜನ್ಮ ವ್ಯರ್ಥವಾಯಿತು. ಹರಿಗೆ ನೀನು ಪ್ರಿಯಳಿರುವದಿಲ್ಲ. ಪಾರಿಜಾತ ಪುಷ್ಪವನ್ನು ನಾನು ಶ್ರೀಕೃಷ್ಣನಿಗೆ ಕೊಟ್ಟೆನು. ಅದನ್ನು ಆತ ರುಕ್ಮಿಣಿಗೆ ಮುಡಿಸಿದನೆಂದು ಹೇಳುತ್ತಾನೆ. ಸವತಿ ಮತ್ಸರ ಜಾಗೃತವಾಗಿ ಸತ್ಯಭಾಮೆ, ಶ್ರೀಕೃಷ್ಣನಿಗೆ ಕ್ಷಣಭಂಗುರ ಪ್ರಿಯಕರನೆಂದೂ, ಕುತ್ತಿಗೆ ಕೊಯ್ಯುಕನೆಂದೂ, ಇತ್ಯಾದಿ ಇತ್ಯಾದಿ ಶಪಿಸಿ ಶೋಕಿಸುತ್ತ ಮಲಗುತ್ತಾಳೆ. ಅದೇ ಸಮಯ ರುಕ್ಮಿಣಿ ಅಲ್ಲಿಗೆ ಬರುತ್ತಾಳೆ. ಸವತಿಯರ ಕಲಹ ಪ್ರಾರಂಭ ವಾಗುತ್ತದೆ. ಸತ್ಯಭಾಮೆ ಕೇವಲ ಪಾರಿಜಾತ ಪುಷ್ಪವೊಂದೇ ಶ್ರೀಹರಿಯಿಂದ ದೊರೆತರೆ, ನಾನು ನನ್ನ ಅಂಗಳದಲ್ಲಿ ಅದರ ಗಿಡವನ್ನೇ ತಂದು ಹಚ್ಚುವೆನೆಂದು ಜಂಬದಿಂದ ಹೇಳುತ್ತಾಳೆ.

ಕೊರವಂಜಿಯ ಪಾತ್ರ, ಮಂಗಲಾಂತಕ ಮರಾಠೀ ಪಾರಿಜಾತದಲ್ಲಿ ಇರುವದಿಲ್ಲ. ನರಕಾಸುರ, ಮುರಾಸುರ ವಧೆಯ ಉಲ್ಲೇಖ ಸಂದರ್ಭಸೂಚಿತವಾಗಿ ತೋರಿಸ ಲಾಗಿದೆ. ಕನ್ನಡ ಪಾರಿಜಾತದ ಮೇಳವು ಕರ್ನಾಟಕದಲ್ಲಿ ಇನ್ನೂ ಅಲ್ಲಿಇಲ್ಲಿ ಅಸ್ತಿತ್ವದಲ್ಲಿದ್ದು ಇದರ ರಂಗಪ್ರಯೋಗವಾಗುತ್ತಿರುತ್ತದೆ. "ಮರಾಠೀ ಪಾರಿಜಾತದ ರಂಗಪ್ರಯೋಗ ಸಾಂಗಲೀಕರ ನಾಟಕ ಕಂಪನಿ ಕೆಲವೇಬಾರಿ ಮಾಡಿರುತ್ತದೆ.[1]

ಕಾರವಾರ ಜಿಲ್ಲೆಯಲ್ಲಿರುವ ಕರ್ಕಿ ಗ್ರಾಮದ ಒಂದು ಯಕ್ಷಗಾನ ಮೇಳವು ಕ್ರಿ. ಶ. 1842ರಲ್ಲಿ ಸಾಂಗಲಿ ಅಧಿಪತಿ ಅಪ್ಪಾಸಾಹೇಬ ಪಟವರ್ಧನನ ಆಮಂತ್ರಣದ ಮೇರೆಗೆ, ಸಾಂಗಲಿ ಸಂಸ್ಥಾನಕ್ಕೆ ಭೆಟ್ಟಿಕೊಟ್ಟಿತು. "ಇವರು ಪ್ರದರ್ಶಿಸಿದ ಆಟ ವನ್ನು ಕಂಡು ಮೆಚ್ಚಿ ರಾಜನು 'ಶ್ರೀಕೃಷ್ಣನ' ಒಂದು ಮೂರ್ತಿಯನ್ನು ಪ್ರೇಮದ ಕಾಣಿಕೆಯಾಗಿ ಕೊಟ್ಟನು. ಅದು ಇಂದಿನವರೆಗೂ ಹಾಸ್ಯಗಾರ ಮನೆತನದಲ್ಲಿ ಇರುವುದು"[2] ಇದಲ್ಲದೆ ತನ್ನ ಮುಖ್ಯ ಗುಮಾಸ್ತನಾದ ವಿಷ್ಣುದಾಸ ಭಾವೆನಿಗೆ ಇದೇ ಮಾದರಿಯ ನಾಟಕವನ್ನು ಬರೆಯಲು ಸೂಚಿಸಿದನು. ಭಾವೆ 'ಸೀತಾಸ್ವಯಂವರ'

---

1 ಕಿರ್ಲೋಸ್ಕರ, ದೇವಲ, ಗಡಕರಿ ಯ್ಯಾಂಚಾ ನಾಟ್ಯಕೃತೀಚೆ ಸವಿಸ್ತರ ಮೂಲ್ಯಮಾಪನ ಆನಂರಸ ಗ್ರಹಣ ಲೇಖಕರು, ಪ್ರೊ. ನಾ. ಶಿ. ಫಡಕೆ, ಪುಟ ನಂಬರ–5

2 'ಪಾರ್ತಿಸುಬ್ಬ' ಲೇಖಕರು ಶ್ರೀ ಮುಳಿಯ ತಿಮ್ಮಪ್ಪಯ್ಯ. ಪುಟ ನಂಬರ 123.

ಅ 'ದಿ ಕರ್ನಾಟಕ ಥಿಯೇಟರ್' ಲೇಖಕರು. ಡಾ॥ ಎಚ್. ಕೆ. ರಂಗನಾಥ ಪುಟ 2. 'ಸಾಂಗಲಿ ಅಧಿಪತಿಯು ಕಾಣಿಕೆಯಾಗಿ ಈ ಮೇಳಕ್ಕೆ ಕೊಟ್ಟ ಶ್ರೀಕೃಷ್ಣನ ಮೂರುತಿಯು ಇಂದಿನವರೆಗೂ ಕರ್ಕಿಯ ಹಾಸ್ಯಗಾರ ಮನೆತನದಲ್ಲಿದೆ.

ವೆಂಬ ನಾಟಕವನ್ನು ರಾಜನ ಆಜ್ಞೆಯ ಮೇರೆಗೆ ರಚಿಸಿ 1843ರಲ್ಲಿ ಮೊದಲುಬಾರಿ ರಂಗಭೂಮಿಯಮೇಲೆ ಪ್ರದರ್ಶಿಸಿದನು. ಇದೇ ವರುಷ ಮಾರ್ಚ 31ರಂದು ಗುರ್ಲಹೊಸೂರು ಗ್ರಾಮದಲ್ಲಿ ಮರಾಠೀ ರಂಗಭೂಮಿಯನ್ನು ಬೆಳಕಿಗೆ ತರುವ ರಸಿಕಪುರುಷ ಬಳವಂತ ಪಾಂಡುರಂಗ ಉರ್ಫ ಅಂಣಾಸಾಹೇಬ ಕಿರ್ಲೋಸ್ಕರನ ಜನ್ಮವಾಯಿತು.

ಶೇಷಗಿರಿರಾವ ಚುರಮುರಿಯು ಕವಿಕಾಲಿದಾಸನ ಶಾಕುಂತಲ ನಾಟಕವನ್ನು 1869-70ರಲ್ಲಿ ಬರೆದು ಪ್ರಕಟಿಸಿದರೂ ಆದು ರಂಗಭೂಮಿಯಮೇಲೆ ಪ್ರದರ್ಶಿತವಾಗಲು ಸಾಕಷ್ಟು ವರುಷ ಕಾಯಬೇಕಾಯಿತು. ಆದರೂ ಈ ನಾಟಕದಲ್ಲಿಯ ಪದಗಳು ಕರ್ನಾಟಕ ಸಂಗೀತ ಮತ್ತು ಜಾನಪದ ಧಾಟಿಯವಾಗಿದ್ದರಿಂದ ಸಂಗೀತಕಾರರ, ರಸಿಕರ ಕಂಠೋದ್ಗತವಾಗಿದ್ದವು. ಚುರಮುರಿಯ ಶಾಕುಂತಲ ನಾಟಕದಲ್ಲಿಯ ಪದಗಳ ಧಾಟಿ, ರಂಗಸಜ್ಜಿಕೆ, ಅವರ ಮಿತ್ರ ಅಂಣಾಕಿರ್ಲೋಸ್ಕರನ ಮನಸೆಳೆದವು. ಈತ ಕನ್ನಡ ಪಂಡಿತ ಮತ್ತು ಕವಿ. ಅಂಣಾಕಿರ್ಲೋಸ್ಕರನೇ ರಚಿಸಿದ ಒಂದು ಕನ್ನಡ ಪದವನ್ನು ಮಾದರಿಗಾಗಿ ತೋರಿಸಿದೆ :

ರಾಧಾ ವಿಲಾಸ

ಕಾನಡಿ ಗವಳಣ

ನಂದಸುಂದರಿ ಕೇಳ ಮಾತ । ಮಗಗ ನೀನು ಹೇಳ । ತಾಯಿ ।
ಹಾಲು ಗಡಿಗಿ ಒಂದು । ಸಾಲದು । ಏನ ಇವನ ಛಂದು ।
ತಿರಗಿ ಬಂದರೆ ನಾ ಹೊಡೆದೇನು । ಸಿಟ್ಟ ಭಾಳ ತಾಯಿ ॥ 1 ॥

ತಾಯಿ ಹೋಗಲಿಲ್ಲಾ । ಇವರ ದಮನೀಯ ನೋಡಲಿಲ್ಲಾ । ತಾಯಿ ।
ಹೊರಗ ಹಾಕ ಯಲ್ಲಾ ಗವಳಣೀ । ಮಾರಿ ನೋಡುದಿಲ್ಲಾ । ತಾಯಿ ।
ಸೂಳೇರ ಕಡಿಗೆ ನೋಡುವ ದೇತು । ಇವರ ಮಾತು ಸುಳ್ಳತಾಯಿ । 2 ।[3]

ಇದಲ್ಲದೆ ಮರಾಠೀ, ಸಂಸ್ಕೃತ, ಕನ್ನಡ, ಉರ್ದು ಭಾಷೆಗಳಿಂದ ಕೂಡಿದ ಕವಿತೆ :

ಹರಿಶ್ಚಂದ್ರ

ಪದ. ತಾಲ-ಆದಿ. ಸಾಧೀಲಾವಣೀ ಚಾಲ

ಕೋಪುನಿ ಪೌರಸಂಘ ಆಲಾ । ನಿಂದಿತೇ ನಾನಾ ಪರಿಮುನಿಲಾ ॥ ॥ ಪಲ್ಲ ॥
ರಾಜ್ಯಂ ತ್ಯಕ್ತ್ವಾ ಬ್ರಾಹ್ಮಣ ವೃತ್ತಿಂ ಸ್ವೀಕೃತವಾನ್ ಶಿಪೂರ್ವಂ
ಅಧುನೇ ದೃಶ ಕರ್ತುಸ್ತೇ ಜ್ಞಾನಂ ಕುತ್ರಗತಂ ತತ್ ಸರ್ವಂ ॥ 1 ॥

3 'ರಾಧಾ ವಿಲಾಸ' ಪುಟ ನಂಬರ 9. ಲೇಖಕರು ಅಂಣ್ಣಾಸಾಹೇಬ ಕಿರ್ಲೋಸ್ಕರ. 'ಸಮಗ್ರ ಕಿರ್ಲೋಸ್ಕರ ಗ್ರಂಥ' ಸಂಪಾದಕರು. ಡಾ॥ ಯಶವಂತ ಗಂಗಾಧರ ಲೇಲೆ ಮತ್ತು ಪ್ರೊ. ನರಹರ ಕಾಶೀನಾಥ ಘಾರಪುರೆ. ಅಭಿನವ ಶಾರದೋಪಾಸಕ ಮಂಡಲ. ಪುಣೆಸಂಸ್ಥಾ ಪುರಸ್ಕೃತ.

ಭೂಪತಿ ನೋಹೆ ಪ್ರಾಣಾಚಿ ಆಮುಚಾದವಡಿಶಿಕಾಚಾಂಡಾಲಾ
ಬ್ರಾಹ್ಮಣ ನಚತೂ ಖಾಟಿಕ ಅಸಸಿ ಕಾಂಪಿಸೀ ಜನಕಂಟಾಲಾ ॥ 2 ॥

ಎನೋ ಭಟ್ಟಯಲ್ಲೆ ವೈಯ್ಯುಕ್ತಿ ನವುರಸನಿಗೆ ಹೇಳು
ಕೊಂದು ಹಾಕಿ ನಿನ್ನ ಹುಗದ ಬಿಡುವೆ ಲಂಡಹಾರುವಾಕೇಳು ॥ 3 ॥

ಕ್ಯೊಬೇ ಬಮನ್ ದಡ್ಡೀವಾಲೆ ನಿಕಾಲಜಾವ ತುಮ್‌ಹ್ಯಾಂಸೆ
ನೈತೊ ತೇರಾ ಲೇತ ಬಲವಂತ ಜಲದೀಸೆ। ಕೋಪುನಿ[4] ॥ 4 ॥

ಚುರಮುರಿಯ ಶಾಕುಂತಲದಿಂದಲೇ ಸ್ಫೂರ್ತಿಪಡೆದು. ಮೂಲ ಶಾಕುಂತಲ ವನ್ನು ಅಂಣಾಕಿರ್ಲೋಸ್ಕರನು 1878-79ರಲ್ಲಿ ಮರಾಠೀಯಲ್ಲಿ ಅನುವಾದಿಸಿ ಅಕ್ಟೋಬರ್ 1880ರಲ್ಲಿ ಮೊದಲು ಬಾರಿ ಪುಣೆ ಪಟ್ಟಣದಲ್ಲಿ ಪ್ರದರ್ಶಿಸಿದನು. ಮರಾಠೀ ಶಾಕುಂತಲದ ಪ್ರಭಾವ ಜನತೆಯ ಮೇಲೆ ಚೆನ್ನಾಗಿ ಆಯಿತು. ಎಲ್ಲ ನಾಟಕ ಕಂಪನಿಗಳು ಈ ನಾಟಕವನ್ನು ಆಡತೊಡಗಿದವು ಮತ್ತು ಅಂಣಾ ಕಿರ್ಲೋಸ್ಕರನು ಮರಾಠೀ ರಂಗಭೂಮಿಯ ಪಿತಾಮಹನಾದನು. ಉತ್ತರ ಕರ್ನಾಟಕದವರು ಅಂಣಾ ಕಿರ್ಲೋಸ್ಕರನು ತನ್ನ ಮಿತ್ರ ಮತ್ತು ಸ್ಫೂರ್ತಿದಾತ ಚುರಮುರಿಗೆ ಕೃತಜ್ಞತೆ ತೋರಿಸಬಹುದೆಂದು ಭಾವಿಸಿ ನಿರಾಶೆಗೊಂಡರು.[5]

ಅಂಣಾ ಕಿರ್ಲೋಸ್ಕರ, ಗೋವಿಂದ ಬಲ್ಲಾಲ ದೇವಲ. ಕೃಷ್ಣಾಜಿ ಪ್ರಭಾಕರ ಖಾಡಿಲಕರ ಮತ್ತು ಕೊಲ್ಹಟಕರರು ಮರಾಠೀ ಸಂಗೀತ ನಾಟಕಗಳನ್ನು ಹೋದ ಶತಮಾನದ ಉತ್ತರಾರ್ಧ ಮತ್ತು ಈ ಶತಮಾನದ ಪೂರ್ವಾರ್ಧದಲ್ಲಿ ಬರೆದರು. ತಮ್ಮ ನಾಟಕಗಳಲ್ಲಿ ಇವರು ಕೆಲವು ಕನ್ನಡ ಪದಗಳ ಧಾಟಿಯನ್ನು ಸೂಚಿಸಿ 'ಜಾ ಚಾಲೀವರ' ಎಂದು ಹೇಳಿ, ತಮ್ಮ ಮರಾಠೀ ಹಾಡನ್ನು ಕೊಟ್ಟಿದ್ದಾರೆ.

ಹತ್ತೊಂಬತ್ತನೆಯ ಶತಮಾನದ ಕೊನೆ ಮತ್ತು 20ನೇಯ ಶತಮಾನದ ಪ್ರಾರಂಭದಲ್ಲಿ ಕರ್ನಾಟಕ–ಮಹಾರಾಷ್ಟ್ರಗಳಲ್ಲಿ ಹಿಂದುಸ್ತಾನೀ ಸಂಗೀತವು ಪ್ರಚಾರ ದಲ್ಲಿ ಇರಲಿಲ್ಲವೆಂದು ಕಾಣುತ್ತದೆ. ಆಗ ಉತ್ತರ ಕರ್ನಾಟಕದ ಸಂಗೀತ ರಸಿಕರ ಬಳಕೆಯಲ್ಲಿರುವ ಹಾಡುಗಳನ್ನೇ ಮಹಾರಾಷ್ಟ್ರದ ನಾಟಕಕಾರರು ಬಳಸಿಕೊಂಡರು. ಭಾಸ್ಕರಬುವಾಬಖಲೇ ಮರಾಠೀ ರಂಗಭೂಮಿಗೆ ಸಂಗೀತ–ಗುರುಗಳಾಗಿ ದೊರೆತ ಮೇಲೆ, ಕನ್ನಡ ಹಾಡಿನ ಧಾಟಿಗಳು ಕೂಡ ಹಿಂದುಸ್ಥಾನಿ ರಾಗ ತಾಳಗಳಿಗೆ ಹೊಂದಿ ಕೊಂಡವು. ಈ ಕಾಲಕ್ಕೆ ಉತ್ತರ ಕರ್ನಾಟಕದಲ್ಲಿ ರೂಢವಾಗಿದ್ದ ಹಾಡುಗಳೆಂದರೆ, ಹರಿದಾಸ ಕೀರ್ತನೆಗಳು 'ಜಾವಡಿ' ಶೃಂಗಾರ ಪದಗಳು ಶ್ರೀ ಕೃಷ್ಣಪಾರಿಜಾತ,

---

4 'ಹರಿಶ್ಚಂದ್ರ' ಪುಟನಂಬರ 58–59. ಸಮಗ್ರ ಕಿರ್ಲೋಸ್ಕರ ಗ್ರಂಥ' ಸಂಪಾದಕರು ಡಾ॥ ಯಶವಂತ ಗಂಗಾಧರ ಲೇಲೆ ಮತ್ತು ಪ್ರೊ. ನರಹರ ಕಾಶೀನಾಥ ಘಾರಪುರೆ. ಅಭಿನವ ಶಾರದೋಪಾಸಕ ಮಂಡಲ. ಪುಣೆ ಸಂಸ್ಥಾಪುರಸ್ಕೃತ.

5 'ದಿ ಕರ್ನಾಟಕ ಥೀಯೇಟರ' ಲೇಖಕರು ಡಾ॥ ಎಚ್.ಕೆ. ರಂಗನಾಥ ಪುಟ ನಂಬರ–87 ''ಕನ್ನಡ ಶಾಕುಂತಲ''.

ಶ್ರೀ ವೆಂಕಟೇಶ ಪಾರಿಜಾತದಲ್ಲಿಯ ಹಾಡುಗಳು. ಬಳ್ಳಾರಿ ಬಸಪ್ಪನು ಕಲಿಸುತ್ತಿದ್ದ ಹರಿಶ್ಚಂದ್ರ, ಕೀಚಕ ವಧೆ ಮೊದಲಾದ ನಾಟಕದ ಕರ್ನಾಟಕೀ ಪದ್ಧತಿಯ ರಂಗಗೀತ ಗಳು ಇವೇ. ಮರಾಠೀ ನಾಟಕಕಾರರು ಈ ಹಾಡು ಕೀರ್ತನೆಗಳ ಧಾಟಿಗಳನ್ನೇ ಸ್ವೀಕರಿಸಿದ್ದಾರೆ.

ಅಂಣಾಕಿರ್ಲೋಸ್ಕರ 1866ರಲ್ಲಿ ಪುಣೆಯಿಂದ ಮರಳಿ ಧಾರವಾಡಕ್ಕೆ ಬಂದು ವಕೀಲಿ ಅಭ್ಯಾಸ.ಪ್ರಾರಂಭಮಾಡಿದನು. ನಂತರ 1867 ರಿಂದ 1880ರ ಮಧ್ಯದ ವರೆಗೆ ಬೆಳಗಾಂವಿ ಸರದಾರ ಹಾಯಸ್ಕೂಲದಲ್ಲಿ ಶಿಕ್ಷಕನೆಂದೂ, ಪೋಲಿಸಖಾತೆಯ ಜಮಾದಾರನೆಂದೂ, ರೆವಿನ್ಯೂ ಖಾತೆಯ ಕಾರಕೂನನೆಂದೂ ಕೆಲಸ ಮಾಡಿದನು. ಇದೇ ಕಾಲಕ್ಕೆ ಬೆಳಗಾಂವಿಗೆ ಬಂದ 'ಶ್ರೀ ಕೃಷ್ಣ ಪಾರಿಜಾತ' ನಾಟಕವು ಈತನ ಮನ ಸೆಳೆಯಿತಲ್ಲದೆ. ಅದೇ ಮಾದರಿಯ 'ಪಾರಿಜಾತ'ವನ್ನು ಮರಾಠೀಯಲ್ಲಿ ರಚಿಸಿ ಪ್ರದರ್ಶಿಸಬೇಕೆಂದು ಸ್ಫೂರ್ತಿಪಡೆದನೆಂದು ಈ ಮೊದಲೇ ಹೇಳಿದೆ. ಪಾರಿಜಾತ ವನ್ನು ರಚಿಸಿದನಂತರ ಈತ ಕಲೆಹಾಕಿದ ಪಾತ್ರವರ್ಗದವರು ತೀರ ಅಶಿಕ್ಷಿತರಿದ್ದುದ ರಿಂದ ರಂಗ ಭೂಮಿಯ ಮೇಲೆ ತರಲು ಸಾಧ್ಯವಾಗಲಿಲ್ಲ. ನಂತರ 'ಸಾಂಗಲೀಕರ ನಾಟಕ ಕಂಪನಿ'ಗೆ ಈ ನಾಟಕವನ್ನು ಪ್ರಯೋಗಿಸಲು ಕೇಳಿಕೊಂಡನಲ್ಲದೇ, ಸ್ವತಃ ದಿಗ್ದರ್ಶನಮಾಡಿ ಯಶಪಡೆದನು. ಕನ್ನಡ ಶ್ರೀಕೃಷ್ಣ ಪಾರಿಜಾತದಂತೆ, ಮರಾಠಿ ಶ್ರೀ ಕೃಷ್ಣ ಪಾರಿಜಾತದಲ್ಲಿಯೂ ಸಾಕಷ್ಟು ಪದಗಳನ್ನು ಪಾತ್ರಗಳೇ ಹಾಡುತ್ತವೆ. ಹೀಗಾಗಿ ನಂತರ ರಚಿಸಲಾದ ನಾಟಕಗಳಲ್ಲಿ ಸಂಗೀತವನ್ನು ಜೋಡಿಸುವ ಹೊಸ ಉಪಕ್ರಮಕ್ಕೆ ಮರಾಠೀ ಶ್ರೀಕೃಷ್ಣ ಪಾರಿಜಾತವೇ ತಳಹದಿಯಾಗಿದೆ'[6] ಇದಲ್ಲದೆ ಕುಲಗೋಡ ತಮ್ಮಣ್ಣ ತನ್ನ ಆಟದಲ್ಲಿ ಸೇರಿಸಿದ 'ಕ್ಷೀರಸಾಗರಾ ತವರ ಮನೆ, ದ್ವಾರಕಿ ನಮ್ಮತ್ತೆ ಮನೆ' ಎಂಬ ಪದವನ್ನು ಅಂಣಾಕಿರ್ಲೋಸ್ಕರ 'ಸಂಗೀತ ಸೌಭದ್ರ' ನಾಟಕದಲ್ಲಿ 'ಪಾಂಡುನೃಪತಿ ಜನಕಜಯಾ' ಪದಕ್ಕೆ, ಧಾಟಿಯಾಗಿ ಸೂಚಿಸಿದ್ದಾನೆ. ಈ ಮರಾಠೀ ಪದದ ಪ್ರಭಾವ ಇಂದಿಗಾದರೂ 'ಸೌಭದ್ರ' ನಾಟಕ ನೋಡುವ ಪ್ರೇಕ್ಷಕರ ಮೇಲೆ ಬೀರುತ್ತದೆ. 'ನಚ ಸುಂದರಿ ಕರು ಕೋಪಾ' ವೆಂಬ ಇದೇ ನಾಟಕ ದಲ್ಲಿ ಬರುವ ಪದಕ್ಕೆ 'ಬಿಡೊ ರಂಗಾ ಹೆರಳ' ವೆಂಬ ಶ್ರೀಪಾದರಾಜರು 'ರಂಗ ವಿಠಲ'ರ ಪದದ ಧಾಟಿ ಸೂಚಿಸಿದ್ದಾನೆ. ದಿವಂಗತ ಬಾಲ ಗಂಧರ್ವರು ಹಾಡಿದ ಈ ಪದವನ್ನು ಇಂದಿನ ಆಧುನಿಕರು ಅದೇ ಉತ್ಸಾಹದಿಂದ ಕೇಳುತ್ತಾರೆ. 'ಮೂಕನಾಯಕ' ನಾಟಕದಲ್ಲಿ ಕೊಲ್ಹಟಕರರು 'ಉಗಿಚ ಕಾ ಕಾಂತಾ' ವೆಂಬ ಮರಾಠೀ ಪದವನ್ನು 'ಇಡು ಇಡು ಕರುಣಾ ನಾರಾಯಣ'ವೆಂಬ ಕನ್ನಡ ಪದದಂತೆ ಹಾಡಲು ಸೂಚಿಸಿದ್ದಾರೆ. ಪೈಗಂಬರವಾಸಿ, ಖಾನಸಾಹೇಬ ಅಬ್ದುಲ್ ಕರೀಮಖಾನರು ಈ ಮರಾಠೀ ಪದ

6 "ಕಿರ್ಲೋಸ್ಕರ, ದೇವಲ, ಗಡಕರಿ ಯ್ಯಾಂಚಾ ನಾಟ್ಯಕೃತೀಚೆ ಸವಿಸ್ತರ ಮೂಲ್ಯ ಮಾಪನ ಆಣಿರಸ ಗ್ರಹಣ" ಲೇಖಕರು ಪ್ರೊ, ನಾ, ಶಿ. ಫಡಕೆ. ಪುಟ. 5.

ವನ್ನು ಸ್ವತಂತ್ರವಾಗಿ ಹಾಡಿದ್ದಾರೆ. ಈ ಪದವನ್ನು ರಸಿಕರು ಬಹಳೇ ಉತ್ಸಾಹ ದಿಂದ ಲಾಲಿಸುತ್ತಾರೆ.

ಇ. ಸ. 1870ರಲ್ಲಿ ಬೆಳಗಾಂವಿ ಸಮಾಚಾರ ಛಾಪಖಾನೆಯಲ್ಲಿ ಪ್ರಕಟವಾದ 'ಶ್ರೀ ಕೃಷ್ಣ ಪಾರಿಜಾತ' ನಾಟಕಕ್ಕೆ ಮರಾಠೀ ಮುನ್ನುಡಿ ಇರುತ್ತದೆ. ಆಬಾಜಿ ರಾಮಚಂದ್ರ ಸಾವಂತರ ಛಾಪಖಾನೆಯಲ್ಲಿ ದಾಸರಪದಗಳು 'ಬಾಳಬೋಧ' ಲಿಪಿಯಲ್ಲಿ ಪ್ರಕಟವಾಗಿವೆ. ಶ್ರೀ ಕೃಷ್ಣಪಾರಿಜಾತವನ್ನು ಆಳವಾಗಿ ಅಭ್ಯಾಸ ಮಾಡಿದ ಡಾ॥ ಬೆಟಗೇರಿ ಕೃಷ್ಣಶರ್ಮರು 1921 ರಲ್ಲಿ ಮರಾಠೀ ಕವಿ 'ಕಿರಾತ'ರನ್ನು ಕಂಡ ಸಮಯ, ಆ ಹಿರಿಯರು ತಮಗೆ ಕನ್ನಡ ಬರದಿದ್ದರೂ ತಮ್ಮ ಆಪ್ತ ಮಿತ್ರ ನಾಯಿಕರೆನ್ನುವವರಿಂದ ಇದನ್ನು ಓದಿಸಿ, ಕವಿಯ ರಚನಾ ಚಾತುರ್ಯವನ್ನು ಮನವಾರೆ ಹೊಗಳಿ ಮಾತನಾಡಿದರು.

ನಾರದನು ಸ್ವರ್ಗದಿಂದ ತಂದ ಪಾರಿಜಾತ ಕುಸುಮವೇ ಈ ಕೃತಿಯ ವಸ್ತುವಿಗೆ ಕಾರಣವಾಗಿರುವದರಿಂದ ಇದಕ್ಕೆ 'ಶ್ರೀ ಕೃಷ್ಣ ಪಾರಿಜಾತ' ವೆಂದು ಹೆಸರಿಡಲಾಗಿದೆ. 'ಶ್ರೀ ಕೃಷ್ಣ ಕೊರವಂಜಿ' ಎಂಬ ಇನ್ನೊಂದು ಹೆಸರೂ ಇದಕ್ಕುಂಟು. ಸತ್ಯಭಾಮೆ ರುಕ್ಮಿಣಿಯರ ಕಲಹ ಕನ್ನಡ ಪಾರಿಜಾತದಲ್ಲಿ ಪ್ರಾರಂಭದಲ್ಲಿ ಬರುವದು. ಆದರೆ ನಮಗೆ ದೊರೆತ ಮರಾಠೀ ಪಾರಿಜಾತದಲ್ಲಿ ಮುಕ್ತಾಯ ಭಾಗವಾಗಿರುತ್ತದೆ. ಹೀಗಾಗಿ ವಿಷಯವು ತೀರ ಸಂಕ್ಷೇಪಗೊಂಡಿದೆ.

ಮರಾಠೀ ಶ್ರೀ ಕೃಷ್ಣ ಪಾರಿಜಾತದೊಡನೆ ಕನ್ನಡ ಪಾರಿಜಾತವನ್ನು ತುಲನೆ ಮಾಡಲಾಗಿ, ಮರಾಠೀ ಪಾರಿಜಾತದ ರಚನಾಕಾರನಾದ ಅಣ್ಣಾಕಿರ್ಲೋಸ್ಕರ, ಮೂಲ ಅಪರಾಳ ತಮ್ಮಣ್ಣನ ಕೃತಿಯನ್ನು ಮತ್ತು ಕುಲಗೋಡ ತಮ್ಮಣ್ಣ ಜೋಡಿಸಿದ ಭಾಗವನ್ನು ಅಳವಡಿಸಿಕೊಂಡಿದ್ದನೆಂದು ತಿಳಿಯುತ್ತದೆ. ಈತ ಸ್ವತಃ ಕನ್ನಡ ಪಂಡಿತ, ಕವಿ ಇದ್ದನೆಂದು ಮೇಲೆ ಉಲ್ಲೇಖಿಸಿದ ಕವಿತೆಗಳಿಂದ ತಿಳಿಯುವದು; ಮತ್ತು 'ಸೌಭದ್ರ ನಾಟಕ'ದಲ್ಲಿ ಕುಲಗೋಡ ತಮ್ಮಣ್ಣನು ರಚಿಸಿದ ಕವಿತೆಯನ್ನು ಧಾಟಿಯಾಗಿ ಬಳಸಿರುವನು. ಅಪರಾಳ ತಮ್ಮಣ್ಣನ ಪಾರಿಜಾತದಲ್ಲಿ ಬರುವ ಗದ್ಯ–ಪದ್ಯಗಳ ಪ್ರಭಾವ ಈತನ ಕೃತಿಯಲ್ಲಿ ಕಂಡುಬರುತ್ತದೆ. ಅನುಬಂಧದಲ್ಲಿ ಪ್ರಭಾವ ಬೀರಿದ ಕನ್ನಡ ಪಾರಿಜಾತದ ಪಟ್ಟಿಕೊಡಲಾಗಿದೆ. ಮರಾಠೀ ಶ್ರೀಕೃಷ್ಣ ಪಾರಿಜಾತ ದಲ್ಲಿ ಬರುವ ರಾಗ–ತಾಳಗಳು ಕನ್ನಡ ಸಂಗೀತ ಪರಂಪರೆಯವೇ ಎಂದು ಹೇಳ ಬಹುದು.

ಮೊದಲಬಾರಿ ಮರಾಠೀ ಪಾರಿಜಾತ 'ಕಿರ್ಲೋಸ್ಕರ ಅಣ್ಣಾಸಾಹೇಬ-ಸಂಗೀತ ನಾಟ್ಯ ಮಾಲಿಕಾ ಅಥವಾ ನಾಟ್ಯಕವಿತಾ ಸಂಗ್ರಹ' ವೆಂಬ ಹೆಸರಿನಿಂದ ಆಬಾಜೀ ರಾಮಚಂದ್ರ ಸಾವಂತವ ಶಿವರಾಮ ಗಣೇಶ ಬಾಪಟ, ರಾಮತತ್ವ ಛಾಪಖಾನೆ ಬೆಳಗಾಂವದಲ್ಲಿ 1889ರಲ್ಲಿ ಪ್ರಕಟವಾಯಿತು.

ಡಾ॥ ಯಶವಂತ ಗಂಗಾಧರ ಲೇಲೆ ಮತ್ತು ಪ್ರೊ. ಡಾ॥ ನರಹರಕಾಶಿನಾಥ ಫಾರಪುರೆಯವರು ಸಂಪಾದಿಸಿದ 'ಸಮಗ್ರ ಕಿರ್ಲೋಸ್ಕರ ಗ್ರಂಥ' ಪ್ರಕಟನೆ 2–11–1935 ರಿಂದ 'ಮರಾಠೀ ಶ್ರೀ ಕೃಷ್ಣಪಾರಿಜಾತ'ದ ಪ್ರತಿಮಾಡಲಾಗಿದೆ. ಪ್ರಸ್ತಾವೆಯಲ್ಲಿ ಇವರು "1863 ರಿಂದ 1878ರ ಕಾಲದಲ್ಲಿ ಅಂಣಾಕಿರ್ಲೋಸ್ಕರ ಸಾಕಷ್ಟು ಕವಿತೆಗಳನ್ನು ರಚಿಸಿದನೆಂದೂ, ತನ್ನ ಜೀವಿತ ಸಮಯ ಪ್ರಕಟಿಸಲಿಲ್ಲದ್ದ ರಿಂದ ಸಾಕಷ್ಟು ಪದ್ಯಗಳು ದೊರೆಯದಾಗಿವೆ" ಎಂದು ಅಭಿಪ್ರಾಯ ವ್ಯಕ್ತ ಪಡಿಸಿದ್ದಾರೆ. ಹೀಗಾಗಿ ಮರಾಠೀ 'ಶ್ರೀ ಕೃಷ್ಣಪಾರಿಜಾತ' ಅಪೂರ್ಣವಾಗಿದೆ ಎಂದು ತೋರದೇ ಇರದು.

ಕನ್ನಡ ಪಾರಿಜಾತದಂತೆ ಮರಾಠೀ ಪಾರಿಜಾತದಲ್ಲಿಯೂ ಸವತಿ ಮತ್ಸರದ ದುಷ್ಪರಿಣಾಮ, ಬಹುಪತ್ನಿತ್ವದಿಂದ ಉಂಟಾಗುವ ದುಷ್ಮಾನ, ಶ್ರೀ ಕೃಷ್ಣನನ್ನೂ ಬಿಟ್ಟಿಲ್ಲವೆಂಬ ಭಾವನೆ ಉಂಟಾಗುತ್ತದೆ. ಸತ್ಯಭಾಮೆಯಲ್ಲಿ ಕೋಪ, ಮತ್ಸರ, ಕಾಮಪ್ರಜ್ವಲಿಸಿ, ಶ್ರೀ ಕೃಷ್ಣನು ಪರಮಾತ್ಮನೆಂಬ ಭಾವನೆ ಮರೆಯಾದುದನ್ನು ಕಾಣಬಹುದು. ಸತ್ಯಭಾಮೆ ಮತ್ಸರದಿಂದ ಕೃಷ್ಣ–ರುಕ್ಮಿಣಿಯರನ್ನು ಶಪಿಸಿದುದು ಕಾಣುವದು.

ಛಾಪಿಸಿದ ಮರಾಠೀ ಪಾರಿಜಾತ ಪುಟ ನಂಬರ್ 19ರಲ್ಲಿ ಸತ್ಯಭಾಮೆ ತನ್ನ ಸಂಭಾಷಣೆಯಲ್ಲಿ ರುಕ್ಮಿಣಿಗೆ ಉದ್ದೇಶಿಸಿ "ಪಂಸೀ ಸದನಿ ಕಾಗೀ ಆಲೀ'' ಎಂದು ನುಡಿದದ್ದು ಕಂಡುಬರುತ್ತದೆ. ಕೀಟಲ್‌ರ ಶಬ್ದಕೋಶದಲ್ಲಿ 'ಕಾಗಿ' ಕನ್ನಡ ಶಬ್ದವೆಂದು ತೋರಿಸಲಾಗಿದೆ. ಮರಾಠೀ ಭಾಷೆಯಲ್ಲಿ ಕಾಗಿಗೆ 'ಕಾವಳಾ' (ಪುಲ್ಲಿಂಗ), 'ಕಾವಳೀ' (ಸ್ತ್ರೀಲಿಂಗ) ವೆಂದಿರುವದಾಗಿ ಕಾಣುತ್ತದೆ. ಅಂಣಾಕಿರ್ಲೋಸ್ಕರನು 'ಕಾಕ' ವೆಂಬ ಸಂಸ್ಕೃತ ಶಬ್ದದ ತದ್ಭವ 'ಕಾಗಿ' ಅರ್ಥದಲ್ಲಿ ಪ್ರಯೋಗಿಸಿರುವನಲ್ಲದೆ ರುಕ್ಮಿಣಿಗೆ ಉದ್ದೇಶಿಸಿ ಬಳಸಿರುವದರಿಂದ ಇದು ಸ್ತ್ರೀಲಿಂಗವೆಂಬ ಭಾವನೆ ಉಂಟಾಗುವಂತೆ ತೋರಿಸಿದ್ದಾನೆ.

ಗ್ರಂಥಋಣ

1	ಅಪರಾಳ ತಮ್ಮಣ್ಣ ಕೃತ ಶ್ರೀ ಕೃಷ್ಣ ಪಾರಿಜಾತ	ಸಂಪಾದಕರು ಶ್ರೀ ಆರ್. ಜಿ. ಕುಲಕರ್ಣಿ. (ಅರಕೇರಿ).
2	ಅಂಣಾ ಸಾಹೇಬ ಕಿರ್ಲೋಸ್ಕರ ಸಂಗೀತ ನಾಟ್ಯ ಮಾಲಿಕಾ ಅಥವಾ ನಾಟ್ಯಕವಿತಾ ಸಂಗ್ರಹ	ಪ್ರಕಾಶಕರು ಆಬಾಜಿ ರಾಮಚಂದ್ರ ಸಾವಂತ-ವ-ಶಿವರಾಮ ಗಣೇಶ ಬಾಪಟ-ರಾಮತತ್ವ ಛಾಪ ಖಾನೆ ಬೆಳಗಾಂವ-1889.
3	ಮರಾಠೀ ರಂಗಭೂಮಿ	ಅಪ್ಪಾಜೀ ವಿಷ್ಣು ಕುಲಕರ್ಣಿ ಆರ್ಯ ಭೂಷಣ ಛಾಪಖಾನಾ ಪುಣೆ

4	ಮಹಾರಾಷ್ಟ್ರೀಯ ನಾಟಕಕಾರ ಕಿರ್ಲೋಸ್ಕರ	ಜೋಶಿ ಸದಾಶಿವ ವಾಮನ ಮತ್ತು ಸಾಠೇ ಕೇಶವ ವಾಮನ ಬೆಳಗಾಂವ (1930).
5	ಅಂಣಾ ಸಾಹೇಬ ಕಿರ್ಲೋಸ್ಕರ ಮಾಂಚೆ ಚರಿತ್ರೆ	ಶಂಕರ ಬಾಪೂಜಿ ಮುಜುಮದಾರ
6	ಮಹಾರಾಷ್ಟ್ರೀಯ ನಟ	,,
7	ಆಠವಣಿ ವ ಆಖ್ಯಾಯಿಕಾ	ತ್ರಂಬಕ ನಾರಾಯಣ ಸಾಠೇ
8	ಕಿರ್ಲೋಸ್ಕರ - ದೇವಲ - ಆಣಿ ಗಡಕರಿ ಯ್ಯಾಂಚಾನಾಟ್ಯ ಕೃತೀಚೆ ಸವಿಸ್ತರ ಮೂಲ್ಯ ಮಾಪನ ಆಣಿ ರಸ ಗ್ರಹಣ.	ಪ್ರೊ. ನಾ. ಶಿ. ಫಡಕೆ. (1950)
9	ಸಮಗ್ರ ಕಿರ್ಲೋಸ್ಕರ ಗ್ರಂಥ	ಸಂಪಾದಕರು. ಡಾ॥ ಯಶವಂತ ಗಂಗಾಧರ ಲೇಲೆ ಮತ್ತು ಪ್ರೊ॥ ಡಾ. ನರಹರ ಕಾಶೀನಾಥ ಘಾರಪುರೆ (2–11–1935)
10	ದೀ ಮರಾಠೀ ಥಿಯೇಟರ	ಪ್ರಕಾಶಕರು. ಪಾಪ್ಯೂಲರ ಬುಕ್ ಡೀಪೊ.
11	ದೀ ಕರ್ನಾಟಕ ಸ್ಟೇಜ	ಡಾ॥ ಎಚ್. ಕೆ. ರಂಗನಾಥ.

ಅನುಬಂಧ

ಅಪರಾಳ ತಮ್ಮಣ್ಣ ಕೃತ ಶ್ರೀ ಕೃಷ್ಣ ಪಾರಿಜಾತ. ಸಂಪಾದಕರು. ಶ್ರೀ ಆರ್. ಜಿ. ಕುಲಕರ್ಣಿ (ಅರಕೇರಿ) ಯವರ ಪುಸ್ತಕದಿಂದ :—

1 ಸರಸಿರುಹದಳ ನೇತ್ರೆ ರುಕ್ಮಿಣಿ ಅರಸಿ, ಸತ್ರಾಜಿತಕು
ಮಾರಿಯವೆರಸಿ, ಅಷ್ಟೈಶ್ವರ್ಯದಿ ಭೋಗದೊಳತಿ ಮಿಸದಲಿ
ಸರಸ ಸಲ್ಲಾಪದೊಳು ಸುಖ ಭರಿತದಲಿ ಉತ್ಕೃಷ್ಟ ಜಯದೊಳು
ಗಿರುತಲಿರೆ ಶ್ರೀ ಕೃಷ್ಣ ದ್ವಾರಕಿಯಲ್ಲಿ ರಂಜಿಸಿದಾ (ಪು. 119)

2 ಒಂದು ದಿನ ನಾರದನು ಹರುಷದಿ ಇಂದ್ರಲೋಕದ ಪಾರಿಜಾತವ
ತಂದು ಕುಸುಮನೊಂದು ದೇವಕಿ ಕಂದಗಿಹೆನೆಂದು
ಸಂದಟಿತ ಶ್ರೀತುಲಿಸಿ ಮಾಲೆಯು ಕಂಧರದ ಲೊಲೆಯುತ್ತ ಶಿರದಲಿ
ಬಂಧಿಸಿದ ಜಟೆ, ಗೋಪಿಚಂದನ ನಾಮಗಳನಿಟ್ಟು (ಪು. 119)

3 ಛಂದದಲಿ ವೀಣೆಯನು ಮೀಟುತ ಸಿಂಧು ಶಯನನ ಸ್ತುತಿ ಸುತಾ ನಭ
ದಿಂದಿಳಿದನಾ ಮಂದರೋದ್ಧರಸಿದ್ದ ದ್ವಾರಕಿಗೇ
ನಂದಗೋಪನ ತಂದ ಮನದಲಿ ಬಂದ ಮುನಿಪನ ಬಗೆಯು ತಿಳಿದನು.
ಮುಂದೆ ಕಲಹವನಿಕ್ಕಿ ನೋಡುವೆನೆಂದು ಭಾವಿಸಿದಾ (ಪು 120)

4 ಎತ್ತಾಲಿಂದಲಿ ಬಂದಿರಿ, ಎಲ್ಲ ಕಾರ್ಯವು ತಂದಿ
ರುತ್ತಾರೋತ್ತರವೆ, ಹದಿನಾಲ್ಕು ಲೋಕವನು
ಸುತ್ತುವಿರಿ, ಮುಲ್ಲೋಕಾದ ತೆತ್ತಿಗರ್ನೀವೆಂದು
ಚಿತ್ರಜಾಪಿತನು ವಿನಯದಿಂದ ನುಡಿದಾ (ಪು. 120)

5 ಅಜ ಭವಾದಿಗಳ ಆಲೋಚನೆಗೆ ನಿಲ್ಕದವ
ವ್ರಜ ವಧುಗಳಿಗೆ ಸಿಲ್ಕಿದೆಲೊ ನೀನು
ತ್ರಿಜಗ ಕುಷಿಯೊಳು ಇಕ್ಕಿಸಿಕೊಂಬೆ
ಗೋಪಿ ವಕ್ಷದ ಪಾಲುಂಡು ಜೀವಿಪೆಯೊ ಕೃಷ್ಣಾ (ಪು. 120)

6 ನಿಜ ಪೂರ್ಣ ಕಾಮು ಚಿತ್ರಜನ ಪಡೆದವಗೆ ಈ
ಗಜಗ ಮನೆಯರೊಳು ಮನ್ಮಥ ಕಲಾಪಾ
ದ್ವಿಜರಾಜ ವರದ ಇದು ಲೀಲೆಯಲ್ಲವೆ ನಿನ್ನ
ನಿಜವ ತಿಳಿದವರ್ಯಾರು ನೀರಜಾಕ್ಷಾ (ಪು. 121)

7 ಶಿಶುಪಾಲನಿಂದ ಸಿರಿದೇವಿಯನು ಸಂರಕ್ಷಿಸಿದೆ
ಕುಸುಮ ಜನಿಗಾಗಿ ಮುಖಿಯಾ ಸುರನ ಕೊಂದೆ
ಭಸಮಾಸುರನ ಬೂದಿಯ ಮಾಡ್ದೆ ಶಿವಗಾಗಿ
ಅಸಮ ಬಲಿಯನು ತುಳಿದೆ ಇಂದ್ರಗಾಗಿ
ಶಶೀಮುಖೀ ದ್ರೌಪತಿ-ಯ ಶಪಥಕ್ಕೆ ಕುರುವಂಶ
ಮಶಕಕ್ಕೆ ಸಮ ಮಾಡಿ ಸವರಿಬಿಟ್ಟೆ
ಕುಸುಮ ಶರನಯ್ಯ ವಸುಧೆಯ ಭಾರ ವಿಳಹುದಕೆ
ವಸುದೇವನುದರದಲಿ ಜನಿಸಿ ಬಂದ್ಯೆ (ಪು. 121)

8 ತಂದೇ ನೀ ಕುಸುಮವನು ಶೌರಿಮುಕುಂದ । ಸುರಪನ ಲೋಕ
ದಿಂದಲಿ ಇಂದು ನಿಮ್ಮಯ ಚರಣ-ಕಮಲಕೆ ಸಂದಿಪೆನೆಂದು
ಮಂದ ಹಾಸದಿ ಗೋವಿಂದ ಕರುಣಾಸಿಂಧು ನೀಕೊಳ್ಳೆಂದು ನಾರದ
ನಂದಗೋಪನ ಸುತಗೆ ಕೊಟ್ಟನು ನಯದಿನಸುನಗುತಾ (ಪು. 121)

9 ಎಲೆ ಮುರಾಂತಕ ಪಾರಿಜಾತವು ಸಲುಹುದೀ ರುಕ್ಮಿಣಿಗೆ ನೀ
ನೊಲಿದುಕೊಡು, ಅನ್ಯರಿಗೆ ಲಭ್ಯವಿದಲ್ಲಾ ನೀನರಿಯಾ
ಉಳಿದ ನಾರಿಯರಂತಿರಲಿ ನಿನ್ನಲಲನೆ ಸತ್ರಾಜಿತ ಕುಮಾರಿಯು
ಛಲವ ಮಾಡುವಳಾಕಿಯ ನೀ ತಿಳುಹಿನೋಡೆಂದಾ (ಪು. 121)

10 ಮುಡಿಸಿ ನ್ಯಾವರಿಸಿ ಮುಂದಕೆ ಕರೆದು ರುಕ್ಮಿಣಿಯ
ತೊಡಿಯ ಮ್ಯಾಲಿಟ್ಟು ಮುದ್ದಿಸಿ ಮುಖವನೋಡುತ
ಪಿಡಿದು ಗಲ್ಲವನು, ಕೈವಿಡಿದು ಕುಸುಮವನೆ ಕೊಟ್ಟು
ಮಡದಿಯರು ನಿನಗಾರು ಸರಿಯೆ, ಮೋಹನದ ಸಿರಿಯೆ
ನಡಿಯಲ್ಲಿ ಮದಕರಿಯೆ, ಮುದ್ದು ಸೌಂದರ್ಯೆ
ಬಡನಡುವಿನೊಯ್ಯಾರಿ, ಗುರುಕುಚ ವಿಹಾರಿ, ಕರವ
ಪಿಡಿದಿನಿಯರೆಲ್ಲರೊಳಧಿಕ ಭೀಷ್ಮಕ ಕುಮಾರೀ (122)

11 ಸರಿಗಾರತಿ ಸತ್ರಾಜಿತನಾ ತರಳೆ ನಿನಗಂಜುವಾಳು
ಹರಿ ನಿನ್ನ ಮಂದಿರವ ಬಿಟ್ಟು ಇರನೊಂದು ದಿನಾ
ಹರಿಣಕ್ಷಿ ಪಾರಿಜಾತದಾ ಪರಿವೆ ಬಿಟ್ಟಿರಲಾಗದು
ಸರುವಾರು ನಿನ್ನನು ನೋಡಿ ಧರಿಸಲಾರಾರೂ (122)

12 ಎಂದು ನಾರದನಪ್ಪಣೆ ಕೊಂಡು ತೆರಳಿ ಬರುತ್ತ
ಲ್ಲಿಂದ ಸತ್ಯಭಾಮೆಯರ ಮನೆಯಾ ಪೊಕ್ಕನು
ಇಂದೀವರಾಕ್ಷಿಯು, ಮುನಿಗೆ ವಂದಿಸಿ ಗದ್ದುಗೆಯಿಟ್ಟು
ಬಂದಾಸುದ್ದಿ, ಕುಳ್ಳರಿಸಿ ಕೇಳುತಿದ್ದಾಳೂ (122)

13 ಶೌರಿನಂಬಲು ಕೂಡದಮ್ಮಾ ಮುರ
ವೈರಿ ಗುಣಗಳ ನೋಡಿ ಬೆರಗಾದೆನಮ್ಮಾ
— — — — — — — —
— — — — — — — —
ಮಾತು ಸೇರದಲ್ಲೇ-ನಿದ್ರಾಕ್ಷುಧೆ
ಆತುರ ಎನಗಿಲ್ಲೇ
ನೂತನ ಕುಸುಮವ ನಾಥಗಿತ್ತಾ ಸುದ್ದಿ
ಘಾತಕ ಮುನಿ ಎನಗ್ಯಾತಕ್ಹೇಳಿದಾನೇ ಅಮ್ಮಯ್ಯಾ

ಪುಟ 123ರಿಂದ 125 (ಸತ್ಯಭಾಮೆ ಮನದ ತಾಪ).

14 ಎಲೆ ವಿರಂಚಿ ಕುವರ। ನೀನೆಲ್ಲಿ ಸುರಲೋಕ ಕುಸುಮವೊಂದು
ಅರಸಿ ತಂದಿತ್ತಾ ಅಬಲೆಯರೊಳು ಕಲಾಪವನು
ಬೆರಸಿ ಜಾರ್ದೇ. ಈ ಉಭಯ ಸಮ್ಮತವ ಇನ್ನಾವ
ಪರಿಯಲಿ ಮಾಡುವೆನು ಪರಮ ಪ್ರಮಾದವಿದು. (127)

ಸತ್ಯಭಾಮೆ-ರಾಗ-ಮೋಹನ ಕಲ್ಯಾಣಿ
15 ಮನ್ಮಥ ನಳಿವಾಗಲಿಲ್ಲವೇ
— — — — — —
ಸುಂದರ ಗೋಪಾಲಗೆ ಕೂಗಲೇ (ಪು. 147)

ಸತ್ಯಭಾಮೆ :-

16 ಎನ್ನ ಪೋಲುವ ಪಾಪಿ ಹೆಣ್ಣು ಈ ಇಳೆಯೊಳಗೆ
— — — — — — — — —
ಆರನಾಸರ ಕಾಣೆ ಅರಣ್ಯವಾಯಿತಿದು
ಮಾನನುಪಟಳವ ನಾ ತಾಳಲಾರೆ
(ಪುಟ 156-157)

ಸತ್ಯಭಾಮೆ ;-

17 ಕಾಮಿನಿಯೆ ವ್ಯರ್ಥವಾಯಿತು ಎನ್ನ ಯೌವನವು
— — — — — — —
ಕಣ್ಣೀರ ಸೋನೆಯಲಿ ಕಾಮ-ಕಲಾ-ಶಾಸ್ತ್ರ-ಸಂ
ಪನ್ನೆ ಗೈದಳು ಮೂರ್ಛೆ-ಕಾಮಗಿದು ಚರ್ಚೆ (ಪು. 159)

18 ಬಾಲ್ಯದಲಿ ಗೋಕುಲದಿ ಹಾಲು ಮೊಸರೆ ಕದ್ದು
— — — — — — —
ಕುನ್ನಿಗಳ ಕೈಯಲಿ ಕಳೆಸಿದ ಮಹಾತ್ಮ ನೀನು !
ಎನ್ನ ಪಾಡಿನ್ನೇನು, ಸುಗುಣ ನೀನು

(ಪುಟ ನಂಬರ್, 167-168)

19 ಮುನಿಸು ಗುಟ್ಟುವದುಂಟು, ಮರ್ಮಗಾಳಾಡುವದುಂಟು, ಮನದೊಳಗೆ
ದುಗುಡಬ್ಯಾಡೇ
ಅನುಮಾನವಿಲ್ಲದೆ ಅಭಿಮತಂಗಳ ಹೇಳೇ, ಅಪ್ತಾಲೋಚನೆ ಗಳ ಆಡೇ
ತನುಮನ ಧನವನ್ನು ನಿನ್ನಾದೆಂದು ತಿಳಿಯೇ, ತವಕ ಇದೇನು ಹೇಳೇ
ವನಿತೆ ಶಿರೋಮಣಿ ನೀನೇನಂದಂತೆ ಮಾಡದಿರೆ ಮನಸಿಜನಾಣೆ
ಗೋಪಾಲನಲ್ಲವು ಕಾಣೇ (169)

20 ವಸುಧೆಯೊಳು...ನಿನಗೆ ಕೊಟ್ಟಿದ್ದೆ ಬುದ್ಧಿ (170)

21 ಸತ್ಯಭಾಮೆ–ರುಕ್ಮಿಣಿಯರ ಕಲಹ–ಪುಟನಂಬರ 171 ರಿಂದ 175ರವರೆಗೆ.

22 ಇಂತಿರಲು ನಾರದನು ವಿಗಡತನದಿಂದ
ಕಂತುಪಿತನಿಗೆ ಪಾರಿಜಾತವನೆ ತಂದು ತಾ ಕೊಡಲು
ಸ್ತ್ರೀಯಾರು ತವಕೆ ಮಾಡಲಿಕೆ, ಕುಹಕ ಮಾತಾಡಿ
ರುಕ್ಮಿಣಿಗೆ ಕೊಡಿಸಲಿಕೆ, ಕೊಡುವಾಗ ತೊಡಿಮ್ಯಾಲೆ
ಕೋಮಲಾಂಗಿಯನು ಸಡಗರದಿ ಕುಳ್ಳಿರಿಸಿ
ಮುಡಿದಡವಿ ಪ್ರಿಯನು ಅತಿಶಯವ ಮಾಡಲು
ಆದನೆಲ್ಲ ನಿನಗೆ ಚತುರ ನಾರದ ಪೇಳಿದ
ಚಂಚುದಿ ಇಳೆಗೆ ಮೂರ್ಛೆಯನು ತಾಳಿ
ಮುನಿಸು ನೀನಾದೆ, ಸಾರ್ಚದೆ, ಸತ್ಯವೆ ಮಿಥ್ಯವೆ ಬೋಧೆ 219

23 ದ್ವಾರಕಾಪುರಿ ತಾರಕಾ ನಿನಗೆ
ನಾರದಾ ಘನ ಪಾರಿಜಾತವ
ತೋರಲು–ಮುದ ಬೀರಲು–ಸತಿ
ಸಾರಲು, ಸತಿಗಿತ್ತೆಸಂವತಿ–ಮತ್ಸರಾ
ನಾರೇರಿಗಿಟ್ಟೆ–ವಡಂಬಟ್ಟೆ ಶೋಭಾನವೇ 230

24 ಕೂತ ನಾರದನಿಲ್ಲಿಗೆ ಬಂದು, ಕುಸುಮವ ತಂದು
ಹಾಕಿದ ಮೋಡಿಯಿಂದು 233

ಶ್ರೀಕೃಷ್ಣ ಪಾರಿಜಾತಕ

ಪದ (ತಾಲ-ಬಿಲಂದೀ, ಧೀಸ ಸರಸೀಜಾ ಶರ ಸುಂದರಾ ಯಾ ಚಾಲೀವರ)
ಸುರವರ ಶಿವ ವಂದಿಲಾ । ಆಧೀ । ಧೃಂ । ದೀನ ಮುಖಯುದ ಭಕ್ತ
ಮುಖಿ ಸುಖಿ ರಾಹಿಲಾ ನಚ ಪಾಹಿಲಾ । ಮಣಿನಿಕವಿ
ನಿರ್ಧಾಸ್ತ ಹೊಯಿ । ಚಿಂತುನಿ ತವ ಪಾವಲಾ ॥ ಸು ॥
ದಾನವಾರೀ ಶ್ರೀ ಹರೀಚಾ ವರ್ಣಿಲಾ, ಬಹು ಗಾಯಿಲಾ ।
ಚಿತ್ರ ಮಹಿಮಾ, ಸತ್ಯಭಾಮಾ ರುಕ್ಮಿಣೀ ಪ್ರಿಯ
ಜಾಹಲಾ ॥ ಸು ॥ 2 ॥ ದುಷ್ಟದಾಂಭಿಕಯೂಥನಿಧಿ ಆಜ
ಆಟಿಲಾ, ಅತಿ ಶೊಷಿಲಾ । ನಿಂದ್ಯ, ರಸರತ್ನಾಕರೀ ಬಲವಂತ
ಕುಂಭಜ ಖಿವಳಲಾ ॥ ಸು ॥ 3 ॥

ಪದ (ತಾಲ-ಆದಿ ಧುಮಾಳೀ ; ಜಯಶ್ರೀ ರಮಣಾ ಭವಭಯ ಯಾ ಚಾಲೀವರ)

ವಿಧಿಮುಖಸುರನತ ಯದುಕುಲಪಂಡಿತ ಮಂಡವ ಮಂಡಿತ
ಅಧಹಾರೀ । ದ್ವಾರಾವರ್ತಿ ಸದನಾಂತ ವಿರಾಜೆ ಭಕ್ತರಾಜ
ಸುರಸುಖಕಾರೀ ॥ ಧೃ ॥ ರತ್ನಖಚಿತ ಮಂಟಪೀ ಸುಶೋಭಿತ
ಸಿಂಹಾಸನೀಬೈಸಲಾ ಹರೀ । ಕನಕಮಂಚ ವಿಸ್ತೀರ್ಣ
ಸಭೋವತೀ ಯಾದವವರ ಝುಲತಾತ, ವರೀ । ಸುಂದರ
ಸೇವಕ ಬಹುತ ಉಭೆ ತೆ ಛತ್ರಚಾಮರೆ ಧರುನಿಕರೀ ।
ವೈಕುಂಠಾಧಿಪ ಮಾಧವ ಶೋಭೆ ಬಲವಂತಾಚಾ ಕೈವಾರೀ ॥ ವಿಂ ॥

ಓವೀ

ಐಸಾ ಆನಂದ ಸಮಯಾತ । ಕೃಷ್ಣ ಬೈಸಲಾ ಅಸತಾ ಸಭೇತ ।
ತೋ ಬ್ರಹ್ಮವೀಣಾ ವಾಜವಿತ । ನಾರದಮುನಿ ಪಾತಲಾ ॥

ಪದ (ತಾಲ-ಆದಿ ಧುಮಾಳೀ, ಧನ್ಯ ಕಿರೀಟೀಕುಂತಿ-ಸುತ, ಯಾ ಚಾಲೀವರ)

ಧನ್ಯ ದಿವಸ ಆಜಿ ವರ್ಣೂಕಾಯ । ಸಂತಾಚೆಪಾಯ ।
ದೇಖೀಲೆ, ತೆ ಮುಖಿನ ಸಮಾಯ । ಬ್ರಹ್ಮಾಂಡೀ ಮಾಯ ॥ ಧೃಂ ॥
ಅಳಾಶಾವರೀ ವಾಹೆ ಗಂಗಾ । ತ್ರಯತಾಪಭಂಗಾ । ತೈಸೆ
ತುಮ್ಹೀ ಉದ್ಧರೀಲೆ ಜಗಾ । ದರ್ಶನೇಚೀ ಹೋಯ ॥

ಸಕಲಹೀ ಮಂಗಲೆ ಆಜಿ ಝಾಲೀ । ವ್ರತಪರ್ವೇ
ಘಡಲೀ । ಸಕಲಹೀ ತೀರ್ಥ ಸ್ನಾನೆ ಫಳಾಸಿ ಆಲೀ ।
ಪಾತಕೆ ಗೇಲೀ ॥ 2 ॥ ಐಕಾ ಶಿವರಾಮೀ ಧನ್ಯಝಾಲಾ ।
ನ ಬೋಲಲೆ ಬೋಲಾ । ಪೂರ್ವಸುಕೃತತೇವಾ ಫಳಾಸಿ
ಆಲಾ । ಸತ್ಸಂಗ ಘಡಲಾ ॥

ಓವೀ

ನಾರದ ಆಲ್ಹಾಪಾಸೂನೀ । ಸುವಾಸ ಭರಲಾ ಸಭಾಸ್ಥಾನೀ ।
ಕೃಷ್ಣ, ಆಶ್ಚರ್ಯ ಹೋಜನೀ । ಹಸ್ತ ಜೋಡೋನೀ ಪುಸೆ ತೊ ॥

ಪದ (ತಾಲ-ಆದಿ ಧುಮಾಳೀ, ಶಾರದೆ ದಾಸ ಕಾಮದೆ, ಯಾ ಚಾಲೀವರ

ನಾರದಾ । ಸಕಲ ತೋಷದಾ । ಪುಸೆ ತೆ ವದಾ । ಧರಿನ ಹೇ
ಪಾಯ । ಆಜಿಚಾ ರಂಗ ಮಜದಂಗ ಕರಿತಸೆಹಾಯ ॥ 1 ॥

ಹಾವಾಸ । ಫುಲಾಚಾ ಖಾಸ । ದಾಘವಾ ಯಾಸ । ಕಸೆ ತೇ ಕಾಯ ।
ಮಮ ಚಿತ್ತ ವೃತ್ತಿ ತಲ್ಲೀನ ಹೋತಿ ಮುನಿರಾಯ ॥ 2 ॥

ಬಹುಗೋಡ । ಫುಲಾಚೀ ಜೋಡ । ನಸೆ ಜಿಸ ತೋಡ ।
ಧ್ಯಾವೀ ಹಾ ನ್ಯಾಯ । ಬಲವಂತ ಪರೀ ತದ್ವಿನಾ ದೀನ
ಮೀ ಹೊಯ ॥ 3 ॥

ಪದ (ರಾಗ-ಶಾಲಾಂಗಡಾ-ತಾಲ ಆದಿ ; ಸತ್ಯಭಾಮಾ
ವದೆಕಾಯ, ಯಾಚಾಲೀವರ)

ಮುನಿ ನಾರದ ನಾರಾಯಣವಾಣೀ । ಐಕುನೀ ಹಾಸೆ,
ಪಿಟೀ ಪಾಣೀ ॥ ಧೃ ॥ ಕಿತಿ-ಉತ್ಸುಕ ಹೋಸೀ
ಗೋಪಾಲಾ । ಮನುಜಾಪರೀ ಕರಸೀ ಯಾಲೀಲಾ ।
ತವ ಅಂತ ನ ಲಾಗೆ ನಿಗಮಾಲಾ । ಆನಂದೆ
ನಯನೀ ಯೇ ಪಾಣೀ ॥ ಮು ॥ ತುಜಸಾಠಿಚ
ಆಣಿಲೆ ಕುಸುಮಾಲಾ । ನರಲೋಕೀ ದುರ್ಲಭ ಸುರಪಾಲಾ ।
ಇಂದ್ರಾನೆ ಹೆ ದಿಧಲೆ ಮಜಲಾ । ತುಜ ವಾಂಚುನಿ
ಯೋಗ್ಯ ನಯಾ ಕೋಣೀ ॥ ಮುಂ ॥ 2 ॥ ಪ್ರಿಯಭಾಮಾ
ಜೀ ತುಜಲಾ । ಧ್ಯಾವೆ ಹೆ ಪ್ರೀತೀನೆ ತಿಜಲಾ । ಹರಿಕರೀ
ದೆ ಮುನಿ ಪುಷ್ಪಾಲಾ । ಕಲಹಪ್ರಿಯಾ ತದ್ಬಲವತ್ಕರಣೀ ॥ ॥ ಮು ॥ 3 ॥

ಪದ (ತಾಲ : ಆದಿ ಧುಮಾಳೀ ಚಾಲಸಾದೀ ಲಾವಣೀಚೀ)

ರುಕ್ಮಿಣಿ ಆದಿ ಸುಂದರೀ । ಚಕಾಕೆ ವಿಜಚಿ ನಿಜ
ಮಂದಿರೀ ॥ ಧೃಂ ॥ ಪದೀ ನಪುರ ರುಣಝುಣ ಕರೀ ।
ಅಂಜಿರೀ ಪೈಠಣೀ ವರ ಭರಜರೀ । ರತ್ನಾಂಕಿತ
ನಗ ಬಹು ಧರೀ । ಆಸ್ಯಭಾ ಬಘುನೀ ದಿಪೆ ರವಿ
ವರೀ । ಉರೀ ಕಂಚುಕೀ ತಟತಟಕರೀ । ಜರೀಚಾ
ಪದರ ಶೋಭತೊ ಶಿರೀ ಅಸೀ ಭೀಮಕನ್ಯಪಕುಮರೀ ।
ವದೆ ಬಲವಂತ ಮಾಯ ಹೀ ಖರೀ ॥ 1 ॥

ಆರ್ಯಾ

ದಿಧಲೆ ಕುಸುಮ ಹರೀನೆ, ರುಕ್ಮಿಣಿಲಾ ಚುಂಬುನೀಪಸನ್ನ ಮನೆ ॥
ತನ್ಮಂದಿರೀಚ ರತಲಾ, ಪರಿ ನಾರದ ಕೃತ್ಯ ಆಯಕಾ ಕಾನೆ ॥ 1 ॥

ಪದ (ತಾಲ–ಆದಿ ಧುಮಾಳಿ. ಧುಂದ ತುಮ್ಹಾ ವಿಷಯಾಚೀ
ಯಾಚಾಲೀವರ)

ಚಂದ್ರಮುಖೀ ಸತ್ರಾಜಿತಕುಮರೀ ಭಾಮಾ ರಮ್ಯಾಕೃತೀ ।
ಬಸಲೀಸೆ ಯದುಸತಿ ॥ ಧೃಂ ॥ ಕನಕವರ್ಣ ಅಂಗೆ ತೀ
ಕಾಜಳೀ ಶಾಲೂತುನಿ ಚಮಕತೀ । ಜಲಧರಗತ
ವಿದ್ಯೂತಚ ತೀ । ವೇಣೀ ನವ್ಹೆ ಕಾಳಿ ತೀ ನಾಗಿಣ
ಪಾಠೀವರ ಡೊಲತೀ । ಹಿರಕಣೀಚೀಮುದ
ಶೋಭತೀ ಪೂರ್ಣ ಹರೀಚೀ ಮರ್ಜಿ ಜಿಸ ತಿಸ
ನ್ಯೂನ ವಸ್ತು ಕೋಣತೀ । ಬಲವಂತ ಕರೀ ತೀಸ ನತೀ ।
॥ ಚಂದ್ರ ॥

ಪದ (ರಾಗ-ಸಿಂಧ ಭೈರವೀ ತಾಲ–ಆದಿ, ಬಲ ಜೋರಿ ಕರತಾ
ಯಾ ಋ ಮರೀಚಿ ಚಾಲೀವರ)
ಹರಿ ಹರಿ ವದತ । ನಾರದ ನಾಚತ । ಹರಿ ಭಜನೀ
ಜೊ ರತ । ಕಮಲಜವರ ಭುತ ॥ ಹಂ ॥ ಧೃಂ ॥ ಭಾಮೇಚ್ಯಾ
ಸದನಾತ । ಜಾವಯಾ ಪಾಸಾತ । ಕಲಹ ಲಾವಾಯಾ
ಯೇತ । ಋಷಿವರ ಬಲವಂತ ॥ ಹಂ ॥ 1 ॥

ಆರ್ಯಾ

ಪೂಜೀ ನಾರದ ಋಷಿಲಾ, ಬಹು ಆದರ ಕರುನಿ ಸತ್ಯಭಾಮಾತೀ ।
ಬೋಲೆ ಋಷಿ ವತ್ಸೆ ತ್ವಜನ್ಮಾಚೀ ಜಾಹಲೀಕಿಗೆ ಮಾತೀ ॥ 1 ॥

ಶ್ಲೋಕ–(ಕಾಮದಾವೃತ್ತ)

ನಾರದಾ ಅಸೆ ಕಾಮ ಬೋಲತಾ । ಸತ್ಯಕೀ ವಿನೋದಾರ್ಥ ಸಾಂಗತಾ ।
ಭಾಗ್ಯವಂತ ಮೀ ಹರಿಸ ಆವಡೆ । ಸರ್ವ ನಾಯಕಾ
ತುಚ್ಚ ಮಜಪುಢೇ ॥ 1 ॥

ಪದ (ತಾಲ-ಬಿಲರದೀ, ಚಲಸಖಿ ಉಪವನ ಪಾಹೂ, ಯಾ ಚಾಲೀವರೆ)

ಭಾಮೆ ಪ್ರತೀ ಮೂನೀ ಕಥಿತ ಉದಂತ । ಧೃ ॥ ವ್ಯರ್ಥ
ಥೋರೀವಿ ಮಿರವೀಶೀ । ಹರಿಶೀ ತೂ ನಸಸೀ ಪಸಂತ ॥ 1 ।
ಪಾರಿಜಾತ ಕುಸುಮ ಹರಿಸ ಮೀ ದಿಧತೆ । ದೇವೊಕೀ
ತುಜ ಬಲವಂತ ರುಕ್ಮಿಣೀಲಾ ಪ್ರೀತೀಸೇಧಿಕ್ಯಾರೀ ತುಜ ಬಲವಂತ ಭಾಂ ॥ 3 ॥

ಪದ (ತಾಲ-ಆದಿ ; ಆಜ ಪಾನೀಯಾ ಭರನ, ಯಾಚಾಲೀವರ)
ಆಗ ಲಾಗೋ ಯಾ ಸವತೀಚ್ಯಾ ತೊಂಡಾ ಬಾಯೀಗೆ ।
ಕಸಾ ವಶ ಹರೀ ಕರುನಿ ತೀ ಘೇಯಿಗೆ ॥ ಧೃಂ ॥
ನಿಷ್ಠುರತಾ ಕರಣಾಸ ಕಾಯಭಯ । ಚೋರಜಾರ
ಮಣೇಲಾ ಆಹೆ । ಕಾಯ ಕರೂ ಮನ ಪೋಳತ
ಭಾರೀ । ಮರಣ ಕಸೆ ಮಜ ಏತನಾಹೀ ॥ 1 ॥
ಲಟಿಕೀ ಪ್ರೀತ ತುಝೀ ಗೋವಿಂದಾ ॥
ಪುರೆ ಆತಾ ಕಳಸಟಿ ಜಾಹಲಾ । ಹೃದಯಿ ವಿಷ
ಮುಖೀ ಸುಧಾ ಧರಿಸಿ ತೂ । ಚರ ಚರ ಮಾನ
ಕಾಪೀಲೀ ಕೀ ಆಯಿಗೆ ॥ 2 ॥ ಮಾನಾಚೀ ಪುತಳೀ
ಮೀ ಅಸತಾ ಸಾಹೂ ಕಶೀ ಯಾ ಅಪಮಾನಾ ।
ದೇಉನಿ ವಿಷ ಮಜ ಮುಕ್ತ ಕರಾವೆ ! ಪಡಲೀ
ಮುನೀ ಬಲವಂತ ಜಾಯೀಗೆ ॥ ಆಂ ॥ 3 ॥

ಓವಿ

ಕಲಹಾಚೆ ಬೀಜ ಲಾಓನಿ । ಪ್ರಸನ್ನ ಜಾಹಲಾ ನಾರದಮುನಿ ।
ಗೇಲಾ ಆಪಣ ನಿಘೋನಿ ಸತ್ರಭಾಮಾ ಶೋಕ ಕರೀ ॥ 1 ॥

ಗದ್ಯ

ಹಾಯ, ಹಾಯ, ಹೇ ವಿಧಾತ್ಯಾ, ಹೀ ಗಾಯಕಸಾಬತರೀ
ದಾಯಕ ಕರೀ ನ ತವ ಪೆಟಲೀ ಮದ್ಬಾಲ ಪಟಲೇಖಿನ
ಲೇಖನೀ । ಹೇ ಯದುವೀರ ಕಿಶೋರ ಚೋರಜಾರಶಿಖಾಮಣೀ
ಭೂಸುರಾರೀಮರ್ದನಾ । ಹೇ ನಿಖಿಲಚರಾಚರಂತರ್ಯಾಮಿ
ಸಕಲಾಘಶೋಷಣ ಜನಾರ್ದನಾ ಹೇ ಜಲಚರ ಭೂಚರ
ಪಶೊ ದಾನಮಿಷಕಪಟ ಜಿತಬಲೀ ವಾಮನಾ । ಸಬಾಹ್ಯಾಂತರ
ಕೃಷ್ಣವರ್ಣ ಮಾತೃರೇಣುಕಾಶಿರಚ್ಛೇದಕ ಮಹಾಪಾತಕೀ
ಜಮದಾಗ್ನಿನಂದನಾ । ಹೇ ರಣಧರ್ಮಶಾಲಿ ವಾಲೀಪ್ರಾಣ
ಹರಣ ಕೃತಮಹಾಕಪಟ ರಾಘವಾ ರಾವಣಮರ್ದನಾ ।
ಕಿತಿ ವರ್ಣು ಕಿತಿ-ವರ್ಣಿ ಸಪ್ತಾವತಾರವಿರಚಿತ
ಕಪಟಸೌಧಾಚಾ ಅಷ್ಟಮಾವತಾರ ಬಲವಂತ ಕಳಸಹಾ ॥ 1 ॥

ಪದ (ತಾಳ-ಆದಿಧುಮಾಳೀ-ಖರೀ ರಘಾಲೀದೃಷ್ಟಮಾರಘ್ಯಾ ಯಾಚಾಲೀವರ)

ರೇದೇವಾ ಕಾಯ ರಘಾಲೆ ಮಾರಘ್ಯಾ ಹ್ಯಾರಾಣೇಲಾ ॥ ಧೃ ॥ ಜಳೋ
ಬಾಯೀ ಆಗಲಾಗೋಕ್ಯಾ ಮುನೀಚ್ಯಾ ವಾಣೀಲಾ ॥ ಸಂತಾಪೇ ॥
ತಾಡುನೀಯಾ ಕ್ಷತ ಆಲೇ ಪಾಣಿಲಾ । ಡೊಳೆ ರಡುನಿ
ಸುಜಲೆ ಆಕಾಂತ ಮಾಂಡಿಲಾ ॥ ರೇ ॥ 1 ॥

ಪದ (ರಾಗ-ಖಮಾಜ ; ತಾಲ ಅದಿ ; ರಾಹೀನಾ ಗೋವಿಂದ ರಾಧೆ, ಯಾ ಚಾಲೀವರ)

ನಕೊ ನಕೊ ನಕೊ ಮಾತೆ ಜಗೀ ವಾಂಚಣೆ । ದೂತೆಧೃಂ ॥
ಪುಷ್ಪಸೇಜ ಕಾಂಟೆ ಜಣೂ ತಾಪವೀ ವಸಂತ ಭಾನೂ ।
ಅಂಗರಾಗ ಹಾ ಕೃಶಾಲೂ ಪೋಳವೀ ಹೇ ಚಾಂದಣೇ ॥
ನಕೊ ॥ 1 ॥ ತಪ್ತತೈಲವತ್ ಕೋಕಿಲಾ । ತ್ರಾಸವಿತೀ
ಮಾ ಶ್ರುತಿಲಾ । ಮಂದ ವಾಯು ರಿಪೂ ಹಿಲಾ । ಪುರೆ
ಯೇಥೇ ನಾಂದಣೆ ॥ ನಕೊ ॥ 2 ॥ ಹರಿ ತುರ್ಶಿ ॥ ಪ್ರೀತೀ
ಖರೀ ತೀಕ್ಷ್ಣ ಸಾಖರೇಚೀ ಸುರೀ । ಬಲವಂತಾ ಶಿರೆ
ಉರೀ । ಜಳೋ ಬಾಯೀ ಹೇ ಜೀಣೇ ॥ ನಕೋ ॥ 3 ॥

ಪದ (ರಾಗ–ಆನಂದ ಭೈರವೀ, ತಾಲ ಆದಿ)

ಮಜಕಾಹೀ ಸುಚೆನಾ ಕಸೆ ಕಾಮಕರೂ ॥ ಧೃಂ ॥ ಮನ
ಪೋಳತಸೆ ಕಿತೀ ಧೀರ ಧರೂ । ಹೇ ದುಃಖ ಕಿತೀ ತರೀ
ಮೀ ಆವರೂ । ಯಾ ಶೋಕಸಾಗರೀ ಸಪೆ ಕೇವಿ ತರೂ ।
॥ ಚಾಲ ॥ ಕಾಯ ವಿಹೀರೀ ಮಾಜೀ ಪಡೂ । ಗಿರೀವರುನೀ
ಉಡೂ ಕಿತೀ ರಡೂ ॥ ಮಜಂ ॥ 1 ॥ ಹಾ ಮಂಚಕ
ಬಘುನಿ ಮಮ ದೇಹ ಜಳೆ । ಹೇ ಭೋಗ ನವ್ಹತ
ಹೀ ರೋಗಫಳೆ । ಗತಜನ್ಮಿ ಚಿರಾರ್ಜಿತ ಪಾಪಬಳೆ ॥ ಚಾಲ ॥
ಕಶೀ ಜನಾತ್ ಮುಖ ದಾವೂ । ವನಾತ್ ಕೀ ಜಾವೂ । ವಿಷಾಸ
ಖಾಉ ॥ ಮಜಂ ॥ 2 ॥ ಸವತೀನೆ ಸುವೈರಚಿ ಸಾಧೀಯಲೇ ।
ಅಶ್ರೂನೆ ಧರಾ ಧುಊ ಲಾವಿಯಲೆ । ಮಮ ಸೌಖ್ಯನಿಧೀಸಹೀ
ಆಟವಿಲೆ ॥ ಚಾಲ ॥ ಸುಬಳವಂತ ಸವತಿಸ । ಅನಂತ ಕರಿ
ತೋಷ । ದೇತೆ ಅಸುಸ ॥ ಮಜಂ ॥ 3 ॥

ಪದ (ತಾಲ-ಬಿಲಂದೀ ; ಬೆಳಗಾಂವ ಬಂತು ಬಿಡಂತಾ, ಯಾ ಚಾಲೀವರ)

ಹಾ ಹಾ ಹೇ ಕೃಷ್ಣ ಮುಕುಂದಾ ತುಜ ಯೋಗ್ಯ ಅಸೆ ಕಾಹೆ
ಗೋವಿಂದಾ ॥ ಧೃಂ ॥ ತಪಟೀ ಕಠೋರ ಮನಾಚಾ । ಮಜ
ಠಾವುಕ ಪಹಿಲ್ಯಾಪಾಸೂನಿ ಸಾಚಾ । ಅಸತಾನಾ ವರ ಸಾಚಾ । ತೂ
ಭಂಗಕರಿಸೀ ರಾಧಾನಿಯಮಾಚಾ । ಬಹರ ಲುಟೂನೀ
ಗೋಪಿಚಾ ವಿಟ ಏತಾ ತ್ಯಾಸ ಸೊಡಿಸೀ ನಂದಾ ॥ ಹಾ ಹಾ ॥ 1 ॥
ಗೋಕುಳವಾಸೀ ಜನಾಲಾ । ಬಹು ಪಿಡುನಿ ಪಳಸೀ ಮಥುರೀಲಾ ।
ಕುಜ್ಬಾ ಪರಿರಂಭಾಲಾ । ಕರಿತಾನಾ ಪಾವಸಿ ನಚ
ಲಜ್ಜೆಲಾ । ಮಾತುಲ ಕಂಸಹೀ ವಧಿಲಾ ! ತುಜ ವ್ಯರ್ಥ
ಭಜತೀ ಜಿಸ ದಾವೂಸೀ । ಆನಂದ ಶಿಖರೀ ನೇವೂನೀ ।
ಠಕಲೀಸೀ ಮಜ ರಿಪುಪರೀ ಕಾ ತೇಥುನೀ । ನಾವಡತೀ
ತರೀ ವಿಚನೀ । ತ್ಯಜಲೀ ನಚ ಸುಬಲವದಾನಂದಾ । ಹಾ ಹಾ ॥ 3 ॥

ಪದ (ತಾಲ ಆದಿ; ಮಾರ್ಝ್ಯಾಶಿರೀಚಿ ಛತ್ರ ಪವಿತ್ರ, ಯಾಲಾವಣೀಚಿ ಚಾಲೀವರ)

ಪುರೆ ಕರಾ ರುಕ್ಮಿಣೀ ತುಮಚಾ ವಿಲಾಪ ಪಾಹವೇನಾ ।
ಕೋಮಲ ಪಲ್ಲವ ಮೃದುತನು ತ್ರಾಸೆ ತೇ ಮಜ ಪಾಹವೇನಾ ॥ ಧೃಂ ॥
ದುಃಖ ಬಘುನಿ ಬಹು ಪಿಂಜರ್ಯಾತೀಲ ಯಾ ಶುಕ ಮೈನಾ ರಡತೀ ।
ಉದ್ಯಾನಾತೀಲ ಸರಸ್ವಟೀ ತೆ ಹಂಸಹೀ ಆರಡತಿ । ಮೋರ
ಸಮೋರಿ ನೃತ್ಯ ಸೋಡುನಿ ಧರಣೀವರ ಪಡತಿ । ಉಪವಲ್ಲಿ
ವರುನಿ ಝುರಾರಾ ಪುಷ್ಪ ತೀ ಝುಡತೀ । ವ್ಯಾಕುಳ ಜಾಹಲಾ ಪುರೆ
ತುಮ್ಹಾ ತೊ ತೊಲಹೀ ಧರವೇನಾ । ಕುಸುಮಶಯನಿ ತರೀ
ಶಯನ ಕರಾ ದ್ಯಾ ಮನ ಬಲವತ್ಕೃವನಾ ॥ ಪುರೆಂ ॥ 1 ॥

ಓವಿ

ಸಾಪತ್ನ ಮತ್ಸರಾಚಾ ಆವಳ । ಭಡಕಲಾ, ಭಾಮಾ ಹೋಮ ವಿಪ್ಹಳ ।
ಪಡಲೀ ಭೂವರೀ ನಿಶ್ಚಳ । ರಕ್ಮಿಣೀ ತೇಥೇ ಪಾತಲೀ ॥ 1 ॥

ಝುಗಡಾ

ಭಾಷಣ ರುಕ್ಮಿಣೀಚಿ

ಪದ (ತಾಲ-ಆದಿ, ಹರಿಚೀ ಭಗಿನೀ ಮ್ಹಣೆ ಸುಭದ್ರಾ, ಯಾ ಚಾಲೀವರ)

ಶ್ರೀಹರೀ ಮಂದಿರೀ । ನಿಜತಾ ಸುಂದರಿ ರುಕ್ಮಿಣೀ ತೋರ್ಯಾನೆ ಆಲೀ
ಲೋಳತ ಪಾಹುನಿ ಭೂವರಿ, ಮರ್ಮವಾಕ್ಯ ಟೋಚುನಿ
ವದಲೀ ॥ ಧೃಂ ॥ ಕೊಣ ಆಸೆ ಗೆ ದಾಸೀ ಸಾಂಗೆ ನಿರ್ಲಜ್ಜತ್ವಾಚಿ
ಖಾಣೆ । ಪರಮ ಭಯಂಕರ ರೂಪ ಧರುನಿ ಹೀ ಕೊದು ನೀ
ಆಲೀ ಡಂಕೀಣೀ । ಭಾಮಾ ಮ್ಹಣಸೀ ಪರಿ ಹೀ ಪಸೀ ಲೋಳೆ
ಕೈಶೀ ಪಟ್ಟರಾಣೀ । ದೂತ ಆಣಾನೀ ಟಾಕ ಓಘೂನೀ
ದೃಷ್ಟೆಚೀ ಧರೂನಿ ವೇಣೀ । ಕೃಷ್ಣವರ್ಣ ನಾಗೀಣ ಶಿರಾವರ
ಪದ ಪಡತಾ ಕೀ ಘುಸಘುಸಲೀ । ತಶಿ ಚವಚಾಳುನೀ
ರುಕ್ಮಿಣೀವರ ತೀ ಬಲವದ್ವಿಜಚಿ ತಡಕಡಲೀ ॥ ೧ ॥

ಭಾಷಣ ಸತ್ಯಭಾಮೇಚಿ

ಕಾ ಗೆ ತುರ್ಝಿ ಡೋಳೆ ಫುಟಲೆ । ಮ್ಹಣುಸಿ ತುಲಾ ಮೀ
ನಾಹೀ ದಿಸಲೇ । ಕಿಂವಾ ತೇಥೆ ವಡಸ ವಾಡಲೆ । ಸವತೀ
ರುಕ್ಮಿಣೀ ॥ 1 ॥ ಹಂಸೀಸದನೀ ಕಾಗೀ ಆಲೀ । ಸಿಂಹಗ್ರಹೀ
ಕಾ ಜಂಬುಕೀ ಶಿರಲೀ । ಶೋಭಸಿ ಏಥೇ ತೊಗೆ ತಸಲೀ ।
ಸವತೀ ರುಕ್ಮಿಣಿ ॥ 2 ॥ ದಾಸೀ ಜಾಗೆ ಆಣೀ ಪಾಣೀ ।
ಶಿವಲೀ ಮಜ ಹೀ ಚಾಂಡಾಳಿಣೀ ನಾಹಾತೆ ಮೀ ಸೋಡೀ
ಹಿ ವೇಣೀ ॥ ಸಂ ॥ 3 ॥

ಭಾಷಣ ರಕ್ಮಿಣೀಚೆ :

ಕಾಗೆ ಸವತೀ । ಮೀ ಮಾನವತೀ, ರೀತೀ ಸೋಡುನಿ ಜರೀ ।
ವದಸೀ । ಬರೊಬರೀಚೆ ಭಾಷಣ ಕರಿಸಿ । ಪರಿ ಸಮಜೆ
ಮೀ ತುಜ ದಾಸೀ । ಆಜವರಿ ಹರೀನೆ ಬಹುತ ಭೋಗಿಲ್ಯಾ
ನಾರೀ ತ್ಯಾತೀಲ ತೂ ಅಸಸೀ । ಕೋಣ ಪುಸೆ ಸಾಗರಾತ ಏಕಾ
ಥೆಂಬಾಚೀ ಗಣತಿ ಜಸೀ । ಕೃಷ್ಣರುಕ್ಮಿಣೀ ಅಸೇಚಮ್ಹಣತೀ
ಭಕ್ತ ಪಹಾ ಭಜನಾಕಾಳೀ । ಮ್ಹಣತೀ ಸಕಳ ಭಾಮಾ ಹೀ
ಪಾಮಾ ಖಚಿತ ಮಾಧವಾಲಾ ಜಡಲೀ ॥ 2 ॥

ಭಾಷಣ ಸತ್ಯಭಾಮೇಚೆ :

ಅಸೋ ನಸೊ ಬರೋಬರೀ । ನಿರ್ಲಜೆ ತೂ ಚೊರಾಪರೀ । ಕಾ
ಗೆ ಆರಿಸ ಮಾರಶೂ ಘರೀ ॥ ಸ ॥ ಕಧೀ ನವ್ಹೆ ತೊ ಮಾನ
ಮಿಳಾಲಾ । ಮ್ಹಣುನೀ ಜರಿ ತುಜ ತೋರಾ ಆಲಾ । ನಾಚೆ ಶಿರಿ
ಘೇವುನಿಯಾ ಹರಿಲಾ ॥ ಸಂ ॥ ಮಜಿವರೀ ಹರಿಚೀ ಪೂರ್ಣ
ಪ್ರೀತೀ । ಆಹೆ ತ್ರೈಲೋಕೀ ವಿಖ್ಯಾತೀ । ಐಕ ಪಿಸೆ ಕಾ
ಮಯೂರ ಹೋತೀ ॥ 2 ॥

ಭಾಷಣ ರುಕ್ಮಿಣೀಚೆ :

ಅಝುನಿ ಕಶಾಲಾ ಗರ್ವ. ಮಶಾಲಾ ಬಹುತ
ವಿಶಾಲಾ ಪಾಜಳಸೀ । ಪ್ರಿಯಕರ ಹರಿಲಾ ಕೋಣ ಆಸೆಗೆ
ಪಹಾ ಲಸೂಣ ತೂ ಮೀ ತುಳಸೀ । ವಿಸರ ಹರೀಚೆ
ದರ್ಶನಾ ಆತಾ ಸರಲೀ ಪುಣ್ಯಾಚೀ ರಾಶೀ । ರಾಗ ತಝೂ
ತುಜಮಧ್ಯೇ ಜಿರೇಲಚಿ ಪುಷ್ಪಾಸಾರೀ ಕಾರುಸಸೀ ।
ಖೋಡ ತುಝೀ ಬೀ ಮೋಡ ಕರಾಯಾ ಜೊಡ ಪರೀನೆ
ಮಜ ದಿಧಲೀ । ತೋಡ ಕೇಶ ವನವಾಸ ಫಾಡಕರ
ರಾಡ ಅಶ್ರೂನೆ ಭೂ ಓಲೀ ॥ 3 ॥

ಭಾಷಣ ಸತ್ಯಭಾಮೇಚೆ :

ವೃದ್ಧೇ ಅಂಗೆ ಗಲಿತ ಜಾಹಲೀ । ಪಾಹಾ ಧವಲತಾ
ಕೆಶೀ ಆಲೀ । ಪಡೂ ಪಾಹಾತೀ ತವ ದಂತಾಳೀ ॥ ಸಂ ॥
ಸಹಜ ಮಂದಿರೀ ಹರಿ ಸಾಂಪಡಲಾ । ಚೊರೂನಿ ಘೆವುನಿ
ತ್ಯಾ ಕುಸುಮಾಲಾ । ಮಿರವೀನ ಆಲಿಸ ದಾವಾಯಾಲಾ ॥ ಸಂ ॥
ಪಹಾ ಮಾಝೀ ಸತ್ತಾ ತರೀ । ಪುಷ್ಪ ಮಿಳಾಲೇ
ತುಝ್ಯಾ ಕರೀ । ವೃಕ್ಷ ಆಣವಿನ ಮಾಝ್ಯಾ ದ್ವಾರೀ । ಸವತೀ
ರುಕ್ಮಿಣೀ ॥ 3 ॥

ಮಂಜುನಾಥ್ ದಾಸನ ಕೊಡಿಗೆ

ನಿಜ
ನನಗೆ ಗೊತ್ತಿರಲೇ ಇಲ್ಲ.

*

ನನಗೊಂದು ದಿನ ಕನಸು ;
ಬತ್ತಲು ಬತ್ತಲಲ್ಲಿ
ಬಯಲು
ಬೋಳುಮರ
ನೀಲಾಕಾಶ
ಕಂಡೆ.

ಮರುಗಳಿಗೆ ಕನಸು ಮರೆ
ತ ಮನಸ್ಸು ದಿನದ ಹೊಲಸಲಿ ಸವೆಯಿತು.

ಹಗಲ ಸವೆತ ರಾತ್ರಿ
ನಿದ್ರೆಯಪ್ಪುಗೆಯಲ್ಲಿ ಸುಖ
ದ ಬಿಸಿಯುಸಿರು, ಬೆವರ ವಾಸನೆಯ ಹಿತ.

ಕಂಡಿದ್ದು ಮತ್ತದೇ ಬಯಲು...
ನೀಲಾಕಾಶದ ಶಾಯಿ
ಬೋಳುಮರದ ಲೇಖನಿ
ಯಿಂದ ಬಯಲ ಮೇಲೆ ಹೊಮ್ಮಿತು.

ಕೈಗಡಿಯಾರದ ಕೆಂಪುಮುಳ್ಳು ಟಿಕ್‌ಟಿಕ್
ಸುತ್ತುತ್ತಾ, ಸುತ್ತುತ್ತಾ
ಹಗಲು ಸವೆದಿದ್ದನ್ನ
ರಾತ್ರಿ ಸುಖಿಸಿದ್ದನ್ನ
ಸರಸರನೆ ಬರೆಸಿತು.

ಕತ್ತಲ ಯೋನಿಯಿಂದ ತಲೆ
ಹೊರದೂಡುತ್ತಿದ್ದ ಸೂರ್ಯ
ಕಂಡಾಗ ನನ್ನ ಚಿತೆ ಧಗಧಗಿಸುತ್ತಿತ್ತು.

*

ಆಗ ನಿಜ ಹೊಳೆದಿತ್ತು
ಬರೆದುದೆಲ್ಲ
ಓದುವವರಿಗಾಗಿ,

ಮಂಥನ

1. ಕೂರ್ಚಕ - ಕೂಚಿಭಟ್ಟ

1. ಅ

ಕೂರ್ಚಕರೆಂದರೆ ಯಾರು ? ಕೂಚಿಭಟ್ಟ ಎಂದರೇನು ? ಇವು ವಿದ್ವಾಂಸರನ್ನು ಕೆಣಕಿ ತಿಣುಕುವಂತೆ ಮಾಡಿವೆ. ಆ ಸಿಕ್ಕುಗಳನ್ನು ಬಿಡಿಸುವತ್ತ ಮಾಡಿದ ಪ್ರಯತ್ನ ಈ ಟಿಪ್ಪಣಿ. ತನ್ನ ಶ್ರುತಾವತಾರದಲ್ಲಿ ಇಂದ್ರನಂದಿಯೆಂಬ ಜೈನಾಚಾರ್ಯನು (10. ಶ.) ಕೆಲವು ಜೈನಾಭಾಸಗಳನ್ನು ಹೇಳಿದ್ದಾನೆ :

> ಗೋಪುಚ್ಛಕಃ ಶ್ವೇತವಾಸಾ ದ್ರಾವಿಡೋ ಯಾಪನೀಯಕಃ
> ನಿಃಪಿಚ್ಛಕಶ್ಚೇತಿ ಪಂಚೈತೇ ಜೈನಾಭಾಸಾಃ ಪ್ರಕೀರ್ತಿತಾಃ

ಇಲ್ಲಿ ಹೇಳಿರುವ ಅಯ್ದು ಜೈನಾಭಾಸಗಳಲ್ಲಿ ಮೊದಲನೆಯದು ಗೋಪುಚ್ಛಕರದು. ಗೋವಿನ (ಆಕಳಿನ) ಬಾಲದ ಕೂದಲಿಂದ ಮಾಡಿದ ಪಿಂಛ (ಪಿಂಛಿ/ಪಿಚ್ಛ/ಪಿಚ್ಛ/ಪಿಚ್ಚಿ) ವನ್ನು ಉಳ್ಳ ಯತಿಗಳು ಗೋಪುಚ್ಛಕರು. ಈ ಗೋಪುಚ್ಛಕರಿಗೆ ಇರುವ ಇನ್ನೊಂದು ಹೆಸರೇ ಕೂರ್ಚಕರೆಂಬುದು ಈ ಟಿಪ್ಪಣಿಯ ಸಾರ.

ಗೋಪುಚ್ಛಕರು ಕಾಷ್ಠಾಸಂಘದ ಮುನಿಗಳು. ವಿಕ್ರಮ ಸಂವತ್ 753ರಲ್ಲಿ ಆರಂಭವಾದ ಕಾಷ್ಠಾಸಂಘದ ಆಚಾರ್ಯರು ಕುಮಾರಸೇನಾದಿಗಳು. ಇವರು ನಂದಿತಟದಲ್ಲಿ ವಾಸಿಸುತ್ತಿದ್ದರು ಮತ್ತು ಕರ್ಕಶ ಕೇಶವನ್ನು ('ಒರಟು ಕೂದಲನ್ನು') ಪಿಂಛವನ್ನಾಗಿ ಹಿಡಿಯುತ್ತಿದ್ದರು. ಜೈನಯತಿಗಳು ನವಿಲುಗರಿಯಿಂದ ಮಾಡಿದ ಪಿಂಛವನ್ನು ಹಿಡಿಯುವುದು ಹೆಚ್ಚು ವಾಡಿಕೆ, ಈಗಲೂ ಅಷ್ಟೆ; ಅದನ್ನು 'ಮಯೂರ ಪಿಂಛ' ವೆನ್ನುತ್ತಾರೆ. ರಣಹದ್ದಿನ ಗರಿಗಳಿಂದ ಮಾಡಿದ್ದು ಗೃಧ್ರಪಿಂಛ, ಅದನ್ನು ಹಿಡಿಯುತ್ತಿದ್ದ ಕಾರಣದಿಂದ ಕುಂದಕುಂದಾಚಾರ್ಯರಿಗೆ (ಪದ್ಮನಂದಿ, ಉಮಾಸ್ವಾತಿ) ಗೃಧ್ರಪಿಂಛಾಚಾರ್ಯರೆಂಬ ಹೆಸರಿದೆ. ಬೆಳ್ಳಕ್ಕಿಗಳಿಂದ ಮಾಡಿದ್ದು ಬಲಾಕಪಿಂಛ. ಇದನ್ನು ಧರಿಸುತ್ತಿದ್ದ ಕಾರಣದಿಂದಾಗಿ ಒಬ್ಬ ಅಜ್ಞಾತ ಜೈನಾಜಾರ್ಯರಿಗೆ 'ಬಲಾ(ಳಾ)ಕ ಪಿಂಛಾಚಾರ್ಯ' ರೆಂಬ ಹೆಸರಿದೆ. ಇದೇ ರೀತಿ ಉಲೂಕ ('ಗೂಬೆ') ಪಿಂಛಾಚಾರ್ಯರೆಂಬವರೂ ಇದ್ದಾರೆ. ಸ್ಥೂಲವಾಗಿ ಹೇಳುವುದಾದರೆ ಜೈನಾಚಾರ್ಯರು, ಹಕ್ಕಿಗಳಿಂದ ತಾನಾಗಿ ಉದುರಿದ ಗರಿಗಳಿಂದ ಮಾಡಿದ ಪಿಂಛಗಳನ್ನು ಉಪಯೋಗಿಸುವುದು ರೂಢಿ. ಪಿಂಛವನ್ನೇ ಬಳಸದ

ಆಚಾರ್ಯರಿಗೆ 'ನಿಃಪಿಂಛಕ'ರೆನ್ನುತ್ತಾರೆ, ಇಂದ್ರನಂದಿ ಇವರನ್ನೂ ಜೈನಾಭಾಸದ ಪಟ್ಟಿಗೆ ದಾಖಲಿಸಿದ್ದಾನೆ. ಬಿಳಿ ಬಟ್ಟೆಯಿಂದ ಮಾಡಿದ ಪಿಂಛ ಮಾದರಿಯನ್ನು ಶ್ವೇತಾಂಬರ ಗುರುಗಳಲ್ಲಿ ಒಂದು ವರ್ಗ ಬಳಸುತ್ತಾರೆ.

ಪ್ರಾಣಿಗಳ ಕೂದಲನ್ನು ಸಾಮಾನ್ಯವಾಗಿ ಪಿಂಛಕ್ಕೆ ಬಳಸುವುದಿಲ್ಲ. ಏಕೆಂದರೆ ಅದು ಒರಟು ಮತ್ತು ತಾನಾಗಿ ಉದುರುವುದು ಕಡಮೆ. ಆದರೆ ನಂದಿತಟವಾಸಿಗಳಾದ ಕಾಷ್ಠಾಸಂಘದ ಆಚಾರ್ಯರು ಕರ್ಕಶ ಕೇಶವನ್ನು ಪಿಂಛಿಯನ್ನಾಗಿ ಧರಿಸುತ್ತಿದ್ದರು. 'ಕರ್ಕಶಕೇಶ' ವೆಂದರೆ 'ದನದ ಕೂದಲು' ಎಂದರ್ಥ. ಕರ್ಕಶ ಕೇಶವನ್ನು ಕೂರ್ಚವೆಂದೂ ಹೇಳುತ್ತಾರೆ. ಕೂರ್ಚವೆಂದರೆ ದನದ ಕೂದಲಿನ ಕುಚ್ಚು. ಸಂಸ್ಕೃತ 'ಗುಚ್ಛ' ಎಂಬ ಶಬ್ದದಿಂದ ಕುಚ್ಛ ಶಬ್ದವನ್ನು ನಿಷ್ಪತ್ತಿಸುವುದಕ್ಕಿಂತ ಕೂರ್ಚ → ಕುಚ್ಚ / ಕುಚ್ಚು ಎಂಬಂತೆ ಬೆಳವಣಿಗೆಯನ್ನು ಗುರುತಿಸುವುದು ಸಮಂಜಸವಾಗಿದೆ. ಈ ಕೂರ್ಚವನ್ನು ಪಿಂಛವನ್ನಾಗಿ ಹಿಡಿದವರು ಕೂರ್ಚಕರು. ಕೂರ್ಚಕ ಶಬ್ದದ ಇನ್ನೆರಡು ಜ್ಞಾತಿರೂಪಗಳನ್ನು ದನಗಳ ಸಂಬಂಧದಲ್ಲಿ ಬಳಸುವುದು ಕಂಡು ಬರುತ್ತದೆ:

ಕೂರ್ಚಿಕೆ = ಗಿಣ್ಣು (ಹೊಸದಾಗಿ ಕರುಹಾಕಿದ ದನದ ಹಾಲನ್ನು ಗಟ್ಟಿಗೊಳಿಸಿ ಮಾಡಿದ ಆಹಾರ ವಿಶೇಷ)

ಕೂರ್ಚೆ = ಗೊರಸಿನ ಮೇಲ್ಭಾಗ, ಕುಚ್ಚು

ಪಂಡಿತ ನಾಥೂರಾಮ ಪ್ರೇಮಿಯವರು "ಗಡ್ಡ ಮತ್ತು ಮೀಸೆ ಬಿಡುವ ಯತಿಗಳು ಕೂರ್ಚಿಕ ಶಾಖೆಗೆ ಸೇರಿದವರು" ಎಂದು ವಿವರಣೆ ಕೊಟ್ಟಿದ್ದಾರೆ (ಜೈನ ಸಾಹಿತ್ಯ ಔರ್ ಇತಿಹಾಸ್, 1956, ಪುಟ 559). ಯಾವ ಆಧಾರದಿಂದ ಅವರು ಈ ತೀರ್ಮಾನಕ್ಕೆ ಬಂದರೆಂಬುದು ನನಗೆ ತಿಳಿಯದು.

1. ಆ.

ಓದಿಯೋದಿ ಮರುಳಾದ ಕೂಚಿ(ಚು)ಭ(ಬ)ಟ್ಟ ಎಂದು ಇಂದಿಗೂ ಹೇಳುವುದುಂಟು. ಈ ಕೂಚಿ ಭಟ್ಟ ಯಾರೆಂಬುದು ಚಿಂತನೀಯ. ಇದು "ಕೂಚಿಭಟಾ ರಕ" ಎಂಬ ಹೆಸರಿನ ಸವೆದ ರೂಪವಿರಬೇಕೆಂದು ಭಾವಿಸುತ್ತೇನೆ. ಕೂರ್ಚಕರ ಗುಂಪಿಗೆ ಸೇರಿದ ಭಟ್ಟಾರಕನೇ ಕೂಚಿಭಟ್ಟಾರಕ; ಕೂರ್ಚಕ → ಕೂರ್ಚ → ಕೂಚ → ಕೂಚಿ ಎಂಬಂತೆ ಈ ಶಬ್ದದ ಬೆಳವಣಿಗೆಯನ್ನು ಗುರುತಿಸಬಹುದು. ಕೂಚಿಭಟ್ಟಾರಕನನ್ನು ಕುರಿತು ಸಿಗುವ ಮೊದಲ ಉಲ್ಲೇಖ ಚಾವುಂಡರಾಯ ಪುರಾಣದ್ದು (10. ಶ.):

ವಿರಚಿಸಿದರ್ಮುನ್ನ ಮಹಾ
ಪುರಾಣಮಂ ನೆಗಟ್ದ ಕೂಚಿಭಟ್ಟಾರಕರುಂ
ಪರಮ ಶ್ರೀನಂದಿ ಮುನೀ
ಶ್ವರರುಂ ತದನಂತರಂ ಜಿನಾಗಮ ತಿಳಕರ್ ॥ 24 ॥

ಈ ಪದ್ಯವನ್ನು ಗಮನಿಸಿ, ಕೂಚಿಭಟ್ಟಾರಕನನ್ನು ಕುರಿತು ಡಾ॥ ಆ. ನೇ. ಉಪಾಧ್ಯೆಯವರು ತಮ್ಮ ಲೇಖನವೊಂದರಲ್ಲಿ "ಕೂಚಿಭಟ್ಟಾರಕರ ಬಗೆಗೆ ಅನ್ಯಮೂಲಗಳಿಂದ ಸಂಗತಿಗಳು ತಿಳಿದುಬಂದಿಲ್ಲ. ಅಲ್ಲದೆ ಆ ಹೆಸರೂ ಸಹ ಅಸ್ಖಲಿತವಾಗಿಲ್ಲ. ಕೂಚಿ ಎಂಬಂದು ಶ್ರೀನಂದಿಗೆ ಹೇಳಿದ ವಿಶೇಷಣವಾಗಿರಬಹುದು, ಹಾಗಿದ್ದಲ್ಲಿ ಶ್ರೀನಂದಿಯು ಭಟ್ಟಾರಕರಾಗುವುದಲ್ಲದೆ ಕೂರ್ಚಿಕ ಪಂಥದ ಹೆಸರಾಂತ ಆಚಾರ್ಯರೂ ಆಗುತ್ತಾರೆ" ಎಂದು ಹೇಳಿದ್ದಾರೆ (Ca:mundara:ya and his literary predecessors, Journal of Karnatak University 1960). ಆದರೆ ಅವರ ಅಭಿಪ್ರಾಯವನ್ನು ಒಪ್ಪಲು ಕೆಲವು ಅಡ್ಡಿಗಳಿವೆ; ಅವರ ದೃಷ್ಟಿಗೆ ಬೀಳದಿದ್ದ ಮತ್ತು ಕೂಚಿಭಟ್ಟಾರಕನನ್ನು ಉಲ್ಲೇಖಿಸಿದ ಇನ್ನೊಂದು ಉದಾಹರಣೆ ಯಿದೆ. ನಯಸೇನಕವಿ (1112) ತನ್ನ ಧರ್ಮಾಮೃತದಲ್ಲಿ ಕೂಚಿಭಟ್ಟಾರಕನನ್ನು ನೆನೆದಿದ್ದಾನೆ:

ವರ್ಯರ್ಲೋಕೋತ್ತಮರ್ಭಾವಿಸುವೊಡನಘರತ್ಯುನ್ನತರ್ಕೊಂಡ ಕುಂದಾ
ಚಾರ್ಯರ್ಚಾರಿತ್ರ ರತ್ನಾಕರರಧಿಕಗುಣರ್ಸಜ್ಜಟಾ ಸಿಂಹನಂದ್ಯಾ
ಚಾರ್ಯರ್ಶ್ರೀಕೂಚಿ ಭಟ್ಟಾರಕರುದಿತಯಶರ್ಮಿಕ್ಕ ಪೆಂಪಿಂಗೆ ಲೋಕಾ
ಶ್ಚರ್ಯರ್ನಿಷ್ಕರ್ಮರೆಮ್ಮಂ ಪೊರಮಡಿಸುಗೆ ಸಂಸಾರ ಕಾಂತಾರದಿಂದಂ ॥ 1-13

ಕೂಚಿ (← ಕೂರ್ಚಕ) ಭಟ್ಟಾರಕರು ತುಂಬ ವ್ಯಾಸಂಗಶೀಲರಾಗಿದ್ದು ಕಡೆಕಡೆಗೆ ಅದೇ ಗುಂಗಿನಲ್ಲಿ ತಲ್ಲೀನರಾಗಿರಬೇಕು. ಆದರಿಂದ ಜನತೆಯಲ್ಲಿ 'ಓದಿ ಓದಿ ಮರುಳಾದ ಕೂಚಿಭಟ್ಟ' ಎಂಬ ಪಡೆನುಡಿಗೆ ಎಡೆಯಾಗಿರಬೇಕು. ಸದಾ ಓದುವ 'ಪುಸ್ತಕ ಕೀಟ'ಗಳಿಗೆ ಇನ್ನೊಂದು ಹೆಸರು 'ಕುಡುಮಿ' ಎಂಬುದು. ಇದರ ಮೂಲಾರ್ಥ ಇಂದು ಮಸುಕಾಗಿದ್ದರೂ ಸ್ವಾರಸ್ಯವಾಗಿದೆ. ಕುಡುಮು / ಕುಡುಮಿ ಎಂದರೆ 'ಜುಟ್ಟು' ಎಂದರ್ಥ. ಹಿಂದೆ ಗುರುಕುಲವ್ಯಾಸಂಗ ಪದ್ಧತಿಯಿದ್ದ ಕಾಲದಲ್ಲಿ ವಟುಗಳೆಲ್ಲ ಜುಟ್ಟು ಬಿಟ್ಟಿರುತ್ತಿದ್ದರು. ಕುಡುಮನ್ನು ('ಜುಟ್ಟನ್ನು') ಬಿಟ್ಟವರೇ ಓದುತ್ತಿದ್ದರಿಂದ, ಒಂದೇ ಸಮನೆ ಓದುವವರನ್ನು ಕುಡುಮಿಗಳೆಂದು ಕರೆಯುವುದು ವಾಡಿಕೆಯಾಯಿತು. ಆದರಂತೆ 'ಕೂಚಿಭಟ್ಟಾರಕ' ಶಬ್ದವೂ ಬಳಕೆ ಯಲ್ಲಿ, ಅಪರೂಪವಾಗಿ ಕೇಳಿಬರುತ್ತದೆ. ಅದಕ್ಕೊಂದು ಐತಿಹಾಸಿಕ ಹಿನ್ನೆಲೆಯಿದೆ ಯೆಂಬುದು ಚಾವುಂಡರಾಯ, ನಯಸೇನರ ಪ್ರಯೋಗಗಳನ್ನೂ, ಕೂರ್ಚಕರ ಇತಿಹಾಸವನ್ನೂ ನೋಡಿದಾಗ ಮನವರಿಕೆಯಾಗುತ್ತದೆ.

ಉತ್ಸವದಿಂ ತಿರ್ದಿದರ್ ಮಾದಿರಾಜ ಮುನಿ

2 ಅ.

ಕವಿಚರಿತೆಯ ಪ್ರಥಮ ಸಂಪುಟದಲ್ಲಿ (II ಮು. 1972, ಪುಟ 82) ಮಾದಿ ರಾಜ ಮುನಿಯನ್ನು ಕುರಿತು ಈ ವಿವರಣೆಯಿದೆ: ಈತನು ದುರ್ಗಸಿಂಹನ

(ಸು. 1025) ಪಂಚತಂತ್ರವನ್ನು ತಿದ್ದಿದನೆಂದೂ ಕವಿಯಾಗಿದ್ದನೆಂದೂ ಆ ಗ್ರಂಥದ—

ಕವಿಗಮಕಿ ವಾದಿ ವಾಗ್ಮಿ
ಪ್ರವರರ್ ಶ್ರೀ ಮಾದಿರಾಜ ಮುನಿಪುಂಗವರು
ತ್ಸವದಿಂ ತಿರ್ದಿದರೆನೆ ಭೂ
ಭುವನದೊಳಿದನೆಯ್ದೆಕೊಂಡು ಕೊನೆಯುದರೊಳರೇ ॥

ಎಂಬ ಪದ್ಯದಿಂದ ವ್ಯಕ್ತವಾಗುತ್ತದೆ. ಇವನು ಸುಮಾರು 1025 ರಲ್ಲಿ ಇದ್ದಿರಬಹುದು ; ಆವಗ್ರಂಥಗಳನ್ನು ಬರೆದಿದ್ದಾರೆಯೋ ತಿಳಿಯದು ". ಇದರ ಬಗ್ಗೆ ಹೆಚ್ಚಿನ ಮಾಹಿತಿ ಒದಗಿಸುವುದು ಈ ಟಿಪ್ಪಣಿಯ ಉದ್ದೇಶ.

ಮಾದಿರಾಜ ಎಂಬ ಹೆಸರು ಅಪರೂಪದ್ದೇನೂ ಅಲ್ಲ. ಉದಾಹರಣೆಗೆ, ಕನ್ನಡದಲ್ಲಿ ಇದುವರೆಗೆ ತಿಳಿದು ಬಂದಿರುವಂತೆ ಅತ್ಯುತ್ತಮ ಸಂಪ್ರತಿಕಾರರಲ್ಲಿ ನವಿಲ್ಗುಂದದ ಮಾದಿರಾಜನೂ ಒಬ್ಬ ; ಈತ ಇಮ್ಮಡಿ ಗುಣವರ್ಮನ ಪುಷ್ಪದಂತ ಪುರಾಣವನ್ನು ಪ್ರತಿಮಾಡಿದ್ದಾನೆ. ದಾವಣಗೆರೆಯ 2ನೆಯ ಶಾಸನ ಬರೆದ ಕವಿಯೂ ಮಾದಿರಾಜನೇ. ಇದೇ ರೀತಿ ಮಾದಿರಾಜನೆಂಬ ಇನ್ನೊಬ್ಬ ಶಾಸನಕವಿಯಿದ್ದಾನೆ (Journal of the Bombay Branch of Royal Asiatic Society, X p. 260)

ಜೈನರಲ್ಲಿ ಮಾದಿರಾಜ ಎಂದು ಹೆಸರಿಡುವ ಪದ್ಧತಿಯಿದ್ದಂತೆ ಕಾಣುವುದಿಲ್ಲ. ಮೇಲೆ ಹೇಳಲಾದ ಮಾದಿರಾಜ ಮುನಿ ಒಬ್ಬ ಜೈನಯತಿಯೆಂದು ತಿಳಿಯಲು ಆಧಾರಗಳಿವೆ. ಆದರೆ ಜೈನಮುನಿಗಳ ಶ್ರೇಣಿಯಲ್ಲಿ ಮಾದಿರಾಜ ಮುನಿಯೆಂಬ ಹೆಸರು ಕಂಡು ಬರುವುದಿಲ್ಲ. ಆದರಿಂದ ಇಲ್ಲಿ ಏನೋ ಹೆಚ್ಚು ಕಡಮೆ ಆಗಿರುವ ಸಂಭವವಿದೆಯೆಂದು ಊಹಿಸಬಹುದು. ಏತತ್ಸಂಬಂಧಿಯಾದ ಸಮಕಾಲೀನ ಆಧಾರಗಳನ್ನು ಪರಿಶೀಲಿಸಲಾಗಿ ಈತ ಮಾದಿರಾಜಮುನಿಯಲ್ಲ, ವಾದಿರಾಜಮುನಿ ಎಂಬುದಾಗಿ ಸ್ಪಷ್ಟವಾಯಿತು. ಪಂಚತಂತ್ರದ ಸಂಪ್ರತಿಕಾರರು ಮಾಡಿದ ಅಕ್ಷರ ಸ್ಖಾಲಿತ್ಯದಿಂದಾಗಿ ವಕಾರಕ್ಕೆ ಮಕಾರ ಬಂದುಬಿಟ್ಟಿದೆ.

ಇನ್ನು ಈ ವಾದಿರಾಜಮುನಿ ಯಾರೆಂಬ ಪ್ರಶ್ನೆಯನ್ನು ಬಿಡಿಸಲು ತೊಡಕುಗಳಿಲ್ಲ. ವಾದಿರಾಜಮುನಿಗಳು ಹಲವರಿದ್ದಾರೆ. ಇವರಲ್ಲಿ ಕನಕಸೇನ ವಾದಿರಾಜ ಹತ್ತನೆಯ ಶತಮಾನದವನು, ಅವನ ತರುವಾಯ ಆಗಿ ಹೋದ ಇಮ್ಮಡಿ ವಾದಿರಾಜನೇ ಪಂಚತಂತ್ರದಲ್ಲಿ ಉಲ್ಲೇಖವಾಗಿರುವ ವಾದಿರಾಜಮುನಿ. ಇವನ ಕಾಲ ಹನ್ನೊಂದನೆಯ ಶತಮಾನದ ಪೂರ್ವಾರ್ಧ. ಪಂಚತಂತ್ರ ಕಾವ್ಯದ ರಚನೆ ಮುಗಿದದ್ದು ಶಕವರ್ಷ 953 ನೆಯ ಪ್ರಜಾಪತಿನಾಮ ಸಂವತ್ಸರ ಚೈತ್ರ ಶುದ್ಧ

ದ್ವಾದಶಿ ಸೋಮವಾರ (=1031). ಅದರಿಂದ ವಾದಿರಾಜ ಮುನಿಯ ಕಾಲವನ್ನು 1031 ಎಂದು ಧಾರಾಳವಾಗಿ ತಿಳಿಯಬಹುದು. ಪಂಚತಂತ್ರದ ಕರ್ತೃ ದುರ್ಗ ಸಿಂಹ ಬ್ರಾಹ್ಮಣ, ವಾದಿರಾಜಮುನಿ ಜೈನಾಚಾರ್ಯ, ಹೀಗೆ ಒಬ್ಬ ಬ್ರಾಹ್ಮಣಕವಿ ತನ್ನ ಕಾವ್ಯವನ್ನು ಜೈನ ಮುನಿಯಿಂದ ತಿದ್ದಿಸಿಕೊಳ್ಳಬೇಕಾದರೆ ಆ ಕಾಲದಲ್ಲಿ, ಆಸ್ಥಾನದಲ್ಲಿ ಆತನ ಸ್ಥಾನಮಾನಗಳು ಎಷ್ಟು ಉನ್ನತವೂ ಗೌರವಾರ್ಹವೂ ಆಗಿದ್ದಿರ ಬೇಕೆಂದು ಊಹಿಸಬಹುದು. ವಾಸ್ತವವಾಗಿ ಈ ವಾದಿರಾಜಮುನಿ, ಪಂಚತಂತ್ರ ಕವಿಯೂ ಹೇಳಿರುವಂತೆ, ಶ್ರೇಷ್ಠಕವಿಯೂ ವಾದಿಯೂ ವಾಗ್ಮಿಯೂ ಮುನಿ ಪುಂಗವನೂ ಆಗಿದ್ದನು. ಇದಕ್ಕೆ ಅನೇಕ ಆಧಾರಗಳಿವೆ. ಮುಖ್ಯವಾಗಿ ಮಲ್ಲಿಷೇಣ ಪ್ರಶಸ್ತಿ, ಹೊಂಬುಜದ ಸಂಸ್ಕೃತ ಶಾಸನಗಳನ್ನಲ್ಲದೆ ಕನ್ನಡ ಶಾಸನಗಳನ್ನೂ ನೋಡ ಬಹುದು. ಇವಲ್ಲದೆ ಕಾವ್ಯಾವಲೋಕನ (ನಾಗವರ್ಮ), ವರ್ಧಮಾನಪುರಾಣ (ನಾಗವರ್ಮ), ಸುಕುಮಾರ ಚರಿತೆ (ಶಾಂತಿನಾಥ), ಸಮಯಪರೀಕ್ಷೆ (ಬ್ರಹ್ಮಶಿವ) —ಮುಂತಾದ ಕಾವ್ಯಗಳಲ್ಲೂ ಈ ಪಂಚತಂತ್ರದ ಮಾತುಗಳನ್ನು ಪೋಷಿಸುವ ಪದ್ಯಗಳಿವೆ. ಇಮ್ಮಡಿ ನಾಗವರ್ಮನ ವರ್ಧಮಾನಪುರಾಣವನ್ನು ಕೂಡ ನೋಡಿ ತಿದ್ದಿಕೊಟ್ಟವರು ಈ ವಾದಿರಾಜಮುನಿಯೇ (ಶೋಧಿಸಿದರ್ ಸಲೆ ವಾದಿರಾಜ ಪಂಡಿತರ್). ಅದರಿಂದ ಇಮ್ಮಡಿ ನಾಗರ್ಮ ಮತ್ತು ದುರ್ಗಸಿಂಹ ಸಮಕಾಲೀನರು. ಒಂದು ಪರಿಸರಕ್ಕೆ ಸೇರಿದವರು ಎಂದು ತಿಳಿದುಬರುತ್ತದೆ.

ಇಷ್ಟು ಸುವಿಖ್ಯಾತರಾದ ವಾದಿರಾಜರ ಕೃತಿಗಳು :

ಯಶೋಧರ ಚರಿತ
ಪಾರ್ಶ್ವನಾಥ ಚರಿತ
ನ್ಯಾಯವಿನಿಶ್ಚಯ ವಿವರಣ
ಕಾಕುತ್ಸ್ಥ ಚರಿತ (ಅನುಪಲಬ್ಧ)

ಇವೆಲ್ಲಾ ಸಂಸ್ಕೃತದಲ್ಲಿವೆ. ಇವಲ್ಲದೆ ಏಕೀಭವಸ್ತೋತ್ರ ಮತ್ತು ಪ್ರಮಾಣ ನಿರ್ಣಯವೆಂಬ ಇನ್ನೆರಡು ಕೃತಿಗಳನ್ನೂ ಈ ವಾದಿರಾಜಮುನಿಯ ರಚನೆಯೆಂದು ಹೇಳುತ್ತಾರೆ. ಕನ್ನಡದಲ್ಲಿ ಪ್ರಸಿದ್ಧವಾಗಿರುವ ಜನ್ನನ ಯಶೋಧರ ಚರಿತೆಗೆ ಈ ವಾದಿರಾಜಮುನಿಯ ಯಶೋಧರಚರಿತ ಮೂಲಸೆಲೆಯೆಂದು ನೆನೆದಾಗ ಕನ್ನಡ ಸಾಹಿತ್ಯದಮೇಲೆ ಇವರ ಪ್ರಭಾವ ಎಷ್ಟಿದೆಯೆಂಬುದು ಸವೇದ್ಯವಾಗುತ್ತದೆ. ಈ ಸಂಶೋಧನೆ ಮತ್ತೊಂದು ಸಂಗತಿಯ ಮೇಲೂ ಬೆಳಕು ಚೆಲ್ಲುತ್ತದೆ. ಪಂಚತಂತ್ರ ಕಾವ್ಯದಲ್ಲಿ ವಸುಭಾಗಭಟ್ಟ ಮತ್ತು ವಿಷ್ಣುಶರ್ಮ ಎಂಬ ಎರಡು ಪರಂಪರೆಗಳಿವೆ. ಇವುಗಳಲ್ಲಿ ದುರ್ಗಸಿಂಹನ ಪಂಚತಂತ್ರ ವಸುಭಾಗಭಟ್ಟ ಪರಂಪರೆಗೆ ಸೇರಿದ್ದು. ಕನ್ನಡ ಪಂಚತಂತ್ರದಲ್ಲಿ ಜೈನಧರ್ಮದ ಪ್ರಭಾವವಿದೆ. ಇದಕ್ಕೆ ಕಾರಣವನ್ನು ಊಹಿಸುತ್ತಾ, ಮೂಲ ವಸುಭಾಗ ಭಟ್ಟನ ಕೃತಿಯಲ್ಲೇ ಜೈನ ಪ್ರಭಾವವಿದ್ದಿರ

ಬಹುದೆಂದು ವಿವರಿಸಲಾಗುತ್ತಿದೆ. ನಾನು ಅದನ್ನು ಅಲ್ಲಗಳೆಯಬೇಕೆನ್ನುತ್ತಿಲ್ಲ. ಆದರೆ ಈ ಕನ್ನಡ ಪಂಚತಂತ್ರವನ್ನು ಒಬ್ಬ ಜೈನಾಚಾರ್ಯನಾದ ವಾದಿರಾಜನು ತಿದ್ದಿಕೊಟ್ಟಿರುವುದರಿಂದ ಇಲ್ಲಿ ಜೈನ ವಾತಾವರಣ ತಲೆಹಾಕಿದೆಯೆಂದು ಸ್ಪಷ್ಟವಾಗುತ್ತದೆ.

ಕವಿಚರಿತೆಯ ಮುಂದಿನ ಮುದ್ರಣದಲ್ಲಿ ವಾದಿರಾಜಮುನಿ ಎಂಬುದನ್ನು ವಾದಿರಾಜಮುನಿ ಎಂಬುದಾಗಿ ತಿದ್ದುವುದಲ್ಲದೆ ಆತನ ಕಾಲ, ಕೃತಿ ಮತ್ತು ಇಲ್ಲಿ ಹೇಳಿರುವ ಇತರ ವಿವರಗಳನ್ನು ಸೂಚಿಸಬೇಕಾಗುತ್ತದೆ.

ವಾದಿರಾಜಮುನಿ ಉತ್ಸವದಿಂದ ದುರ್ಗಸಿಂಹನ ಕಾವ್ಯವನ್ನು ತಿದ್ದಿದಂತೆ ಇನ್ನೂ ಕೆಲವು ವಿದಗ್ಧರು ಕನ್ನಡ ಕಾವ್ಯಗಳನ್ನು ಪರಿಶೀಲಿಸಿದ್ದಾರೆ. ತಮ್ಮ ಕಾವ್ಯಗಳನ್ನು ಪ್ರಕಟಿಸುವ ಪೂರ್ವದಲ್ಲಿ ಪ್ರಾಜ್ಞರಾದವರಿಗೆ ತೋರಿಸಿ ಪರಿಷ್ಕಾರಗೊಳಿಸಿಕೊಳ್ಳುವ ಒಂದು ಶಿಷ್ಟ ಪರಿಪಾಠ ಕಂಡುಬರುತ್ತದೆ. ಅದಕ್ಕೆ ಕೆಲವು ಉದಾಹರಣೆಗಳು :

i. ರನ್ನನು (ಸು. 973) ಸಾಹಸಭೀಮ ವಿಜಯವನ್ನು 'ವನರುಹಭವನೆನಿಸಿದ ದಂಡನಾಯಕಂ ಕೇಶಿ ತಿರ್ದೆ ಪೇಟ್ದಿಂ' ಎಂದು ತಿಳಿಸಿದ್ದಾನೆ.

ii. ಚಂದ್ರರಾಜನ ಮದನತಿಲಕವನ್ನು (ಸು. 1025) 'ತಿರ್ದಿ ಬರೆದವಂ ಬ್ರಹ್ಮಂ'.

iii. ರಾಜವಲ್ಲಭನ ಒಂದು ಶಾಸನವನ್ನು (EI. XVI. 83-1067) ವಿಸ್ತರಿಸಿ ತಿರ್ದಿದರ್ ವಾಕ್ಪತಿ ಚಂದ್ರಭಟ್ಟರುಂ ಗುರು ಬಳಭದ್ರದೇವರುಂ'.

iv. ಭಾಸ್ಕರನ ಶಾಸನವನ್ನು (Arch, Survey of Indian Memoir, 13. p. 12) 'ಸಾಕ್ಷರ ನಿಳಯಂ ತಿಟ್ದಿ ಭಾಸ್ಕರಯ್ಯಂ ಬರೆದಂ' ಎಂದಿದೆ.

v. ಜಗದ್ದಳಸೋಮನಾಥನ (ಸು. 1175) ಕರ್ನಾಟಕ ಕಲ್ಯಾಣಕಾರಕವನ್ನು ಒಬ್ಬ ಕವಿ ಹಾಗೂ ಒಬ್ಬಮುನಿ ಪರಿಶೀಲಿಸಿದ್ದಾರೆ :

> ಸುಮನೋಬಾಣ ಕವೀಂದ್ರ
> ಪ್ರಮುಖಂ ಬೆಲಸಭಯಚಂದ್ರ ಸಿದ್ಧಾಂತಿಗಳು
> ತ್ರಮಮಾಗೆ ತಿರ್ದಿದೀಕೃತಿ
> ಗಮರ್ದುದು ಸೌಭಾಗ್ಯಮೊಂದಿದಾಯುಂ ಶ್ರೀಯುಂ ॥

vi. ಸ್ವಯಂ ಕೆಲವು ಶಾಸನಗಳ ಕವಿಯಾದ ತ್ರಿವಿಕ್ರಮಪಂಡಿತನು (ಸು. 1188) ಅರಸೀಯ ಕೆರೆಯ 118ನೆಯ ಶಾಸನವನ್ನು 'ತಿರ್ದಿತಾಂ ಬರೆದಂ' ಎಂದಿದೆ ; ಈ ಶಾಸನವನ್ನು ಬರೆದವನು ಹರಿಹರಸೂರಿ.

vii. ಕೇಶವರಾಜ ಚಮೂಪನು ರಚಿಸಿದ ಶಾಸನವನ್ನು (EI. V. 245. ಸು. 1195) ಸರಣನೆಂಬಕವಿ 'ತಿರ್ದಿ ನಿರಾಯಾಸದೆ ಬರೆದನವನೀಶನ ದಾಸಂ ಶಿವಚರಣಕಮಲ ಶರಣಂ ಸರಣಂ' ಎಂದಿದೆ.

viii. ನಾಗರಾಜನ (1231) ಪುಣ್ಯಾಸ್ರವವನ್ನು ತಿದ್ದಿ ಅಂದಗೊಳಿಸಿದ್ದು ಆರ್ಯಸೇನಮುನಿ.

ಶ್ರುತವಾರ್ಧಿಯಾರ್ಯಸೇನ
ವ್ರತಿಪತಿ ಕೊಂಡಾಡಿ ತಿರ್ದಿ ಕನ್ನಡದೊಳ್ಪಂ
ಪ್ರತಿಪಾದಿಸಿದನೆನಲ್ಕೀ
ಕೃತಿಪೆರ್ಮೆಯನಾಂತುದೇನಚ್ಚರಿಯೇ॥

ಇಂಥ ಉದಾಹರಣೆಗಳಿಂದ, ತಮ್ಮ ಕಾವ್ಯಗಳನ್ನು ಬಲ್ಲಿದರಿಗೆ ತೋರಿಸುವುದನ್ನು ಹೆಮ್ಮೆಯೆಂದು ಹಿಂದಿನ ಕವಿಗಳು ತಿಳಿದಿದ್ದರೆಂದು ಗೊತ್ತಾಗುತ್ತದೆ.

ಹಂಪ. ನಾಗರಾಜಯ್ಯ

ಉದ್ದಂಡನ "ಸುಜ್ಞಾನಿ ದೇವ ಕಾವ್ಯ" (="ನನ್ನಯ್ಯನ ಕಾವ್ಯ")ದ ಒಂದು ಹಸ್ತಪ್ರತಿ

'ಕನ್ನಡ ಸಂಶೋಧನ ಸಂಸ್ಥೆ' (ಧಾರವಾಡ) ಯು 'ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ', ಸಂಪುಟ ಎರಡು, ಕ್ರಮಾಂಕ 14 (ಪುಟ 33-36) ರಲ್ಲಿ "ನನ್ನಯ್ಯನ ಸಾಂಗತ್ಯ"ವೆಂಬ ಕೃತಿಯು ಉಲ್ಲೇಖವಿದೆ[1]. ಅಲ್ಲಿ ಕೃತಿಕಾರನ ಬಗೆಗೆ ಸಂಪಾದಕರು 'The author seems to be Parvatadeva. There is no difinite evidence in the work regarding the author' ಎಂದಿದ್ದಾರೆ.

ಸೂಚಿಯ ಸಂಪಾದಕರೆ ಸೂಚಿಯಲ್ಲಿ ಈ ಮುಂದಿನ ಪದ್ಯವನ್ನು ಉಲ್ಲೇಖಿಸಿದ್ದರೂ ಕೃತಿಕಾರನನ್ನು ಗುರುತಿಸಿಲ್ಲ.

ಕೋಳೂರು ಹೆಂಣಿನ ಸಂತತಿ ಹಲಗನು ।
ಭಾಳಲೋಚನ ವೀರೇಶ್ವರಗೆ ॥
ಮೇಳದಿ ಹಲಸರಿಸಿದವನ ಸುತ ।
ಹೇಳಿದ ಕೃತಿಯನುದ್ದಂಡಾ ॥ (ಪುಟ 35)

ಈ ಮೇಲಿನ ಉಲ್ಲೇಖದಿಂದ ಕೃತಿಕಾರ 'ಉದ್ದಂಡ'ನೆಂಬ ಅಂಶ ವ್ಯಕ್ತವಾಗುತ್ತದೆ.

---

1 A descriptive catalogue of Manuscripts in the Kannada Research Institute, Dharwar, Vol. II. Ed. S. S. Malwad and B. S. Kulkarni (1955)

ರಾವ್‌ಬಹದ್ದೂರ್ ಆರ್. ನರಸಿಂಹಾಚಾರ್ಯರ "ಕರ್ಣಾಟಕ ಕವಿಚರಿತೆ", ತೃತೀಯ ಸಂಪುಟ ಪುಟ 388-89 (1929) ರಲ್ಲಿ ಉದ್ದಂಡನ ಸುಜ್ಞಾನಿ ದೇವ ಕಾವ್ಯವನ್ನು ಕುರಿತ ವಿವರವಿದೆ.

ಉದ್ದಂಡನ ಕೃತಿಯ ಓಲೆ ಪ್ರತಿಯೊಂದು 'ಕನ್ನಡ ಅಧ್ಯಯನ ಸಂಸ್ಥೆ' (ಮೈಸೂರು) ಯಲ್ಲಿದ್ದು ಅದರ ವಿವರಣೆ 'ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚೀ', ಚತುರ್ಥ ಸಂಪುಟ (ಮೈಸೂರು) ಪುಟ 419 ರಲ್ಲಿದೆ. (1963).

ಎಸ್. ಶಿವಣ್ಣ

ದೇವವ್ರತ

ನಾಗಚಂದ್ರನ ಮಲ್ಲಿನಾಥ ಪುರಾಣದ ಒಂದು ಪದ್ಯದಲ್ಲಿ ಬರುವ 'ದೇವವ್ರತ'ದ ಬಗ್ಗೆ ಸಿ. ಪಿ. ಕೆ. ಅವರು 'ಸ್ತ್ರೀ ಸಂಗ ವರ್ಜನೆಗೆ ಸಂಬಂಧಿಸಿದ ಯಾವುದೋ ವ್ರತವನ್ನು ಸೂಚಿಸುತ್ತಿರುವುದು ಸ್ಪಷ್ಟ' ಎಂದಿದ್ದಾರೆ.[1] ಈ ಶಬ್ದ ಮತ್ತೆಲ್ಲಿ ಯಾದರೂ ಬರುವದೊ ನೋಡಬೇಕೆಂದೂ ಸೂಚಿಸಿದ್ದಾರೆ.

ಜೀವ ಸಂಬೋಧನೆಯ 'ಅಸ್ರವಾನು ಪ್ರೇಕ್ಷೆ' ಎಂಬ ಎಂಟನೇ ಅಧಿಕಾರದಲ್ಲಿ ದೇವವ್ರತದ ಸ್ಪಷ್ಟ-ವಿವರವಿದೆ. ಹೀಗೆ—

"ಕಂ ॥ ಆ (ಅ) ಬ್ರಹ್ಮಂ ದಶವಿಧದಿಂ
ತೀಬ್ರಂ ನೆಲಸಿದೊಡೆ ಸೋಲ್ತು ಸ್ವೈರಿಸದೆ ಚತು ।
ರ್ಥ ಬ್ರತಮಂ ಪೂರ್ದಿದೊಡೆ
ನ್ನೀ ಬ್ರಹ್ಮಂ ಕಿಡಿಸಲಘುಚಯಂ ಸೋರ್ತರ್ಕುಂ ॥

"ವ॥ ಅಂತು ಪತ್ತುಂತೆಱದ ಬ್ರಹ್ಮದಿಂ ತುತ್ತ ತುದಿಯೊಳಾಪತ್ತುವಡಿಸುವ ಕರ್ಮಂಗಳ್ ಪತ್ತುಗುಂ, ಅವಱಂ ಜೀವಂ ದುಃಖಾಗ್ನಿಯೊಳ್ ಪೊತ್ತುಗುಮುವು ಬಸನಮೆ. ಅಂತಪ್ಪ ಬ್ರಹ್ಮಂ ದಶವಿಧಮಾವುವೆಂದೊಡೆ—ಇಂದ್ರಿಯ ವರ್ಧನ ಮಪ್ಪಾಹಾರಮನುಣ್ಬುದುಂ, ತಂಬುಲಮಂ ತಿಂಬುದುಂ, ವಸ್ತ್ರ ಕಂಬಳಂಗಳಂ ಪೊದೆವುದುಂ, ಮೃದುಶಯ್ಯೆಯೊಳೊಱಗುವುದುಂ, ತನ್ನ ದಂತನಖ ತನುಮಲಾದಿ ಗಳಂ ಪಿಂಗಿಸುವುದುಂ, ಆಗಳುಂ ಸ್ತ್ರೀ ಪ್ರಸಂಗದೊಳಿರ್ಪುದುಂ, ಸುಗಂಧ ದ್ರವ್ಯಂಗಳಂ ಪೂಸುವುದುಂ, ಸುಗಂಧ ಪುಷ್ಪಂಗಳಂ ವಾಸಿಸುವುದುಂ, ಗೀತ ವಾದ್ಯಂಗಳಂ

1 ಕರ್ನಾಟಕ ಭಾರತಿ–8–2. ಒರೆಗಲ್ಲು. ''ದೇವವ್ರತ''–ಪುಟ 154

ಕೇಳ್ವುದುಂ, ನೃತ್ಯ ನಾಟಕಂಗಳಂ ನೋಟ್ಪುದುಂ2 ಎಂದಿಂತು ದಶವಿಧಮಕ್ಕುಂ. ಅಂತು ಬ್ರಹ್ಮಚರ್ಯಮೆಂಬುದು ದೇವವ್ರತಂ ಆವ ವ್ರತ ಕ್ಕಮುತ್ಕೃಷ್ಟಂ. ಅಂತಾ ಮಹಾವ್ರತಮಂ ತಾಳ್ದಿದ ಸತ್ಪುರುಷರೀ ಪೇಳ್ದ ಪತ್ತುಂತೆಱದತೀಚಾರಂಗಳಂ ಪೊರ್ದದೆ ತರಂ ಪ್ರಯತ್ನದೊಳಿರ್ಪುದು''.[3]

ಇದೇ ಅಧಿಕಾರದಲ್ಲಿ ಇನ್ನೊಂದೆಡೆಗೆ (ಪುಟ 141); ಮುನಿಗಳಿಗೆ ಉಪದೇಶ ಮಾಡುವಾಗ ''ನೀಂ ಕೈಕೊಂಡ ಮಹಾವ್ರತಂಗಳನೇಕಱಿವೈ? ಅದನಱಿವೊಡೆ ನಿನ್ನ ನೀನಱಿವೈ'' ಎಂದು ಇದೆ.[4]

ವ್ರತಗಳಲ್ಲಿ ಶ್ರೇಷ್ಠವಾದ 'ದೇವ ವ್ರತ'ಕ್ಕೆ ಬ್ರಹ್ಮಚರ್ಯವೆಂದು ಅರ್ಥ. ಹತ್ತು ರೀತಿಯ ಅಬ್ರಹ್ಮವನ್ನು ತ್ಯಜಿಸುವದು ಬ್ರಹ್ಮಚರ್ಯ. ಇನ್ನು 'ದೇವವ್ರತ'ದ ಅರ್ಥಕ್ಕೆ ಸಂಶಯಪಡಬೇಕಾಗಿಲ್ಲ. ದೇವವ್ರತವು 'ಮಹಾವ್ರತ'ವೆಂದು ಬಂಧು ವರ್ಮ ಸ್ಪಷ್ಟಪಡಿಸಿದ್ದಾನೆ. ಜೈನರಲ್ಲಿ ಮಹಾವ್ರತಕ್ಕೆ ಮಹತ್ವದ ಸ್ಥಾನವಿರುವದು ಸುವಿದಿತ. 'ಜೈನ ಸಾಧುವು ಪಾಲಿಸಲು ಯೋಗ್ಯವಾದ ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ, ಅಪರಿಗ್ರಹಗಳೆಂಬ ಐದು ವ್ರತಗಳಿಗೆ ಮಹಾವ್ರತವೆನ್ನುತ್ತಾರೆ'.

''ದೇವವ್ರತ ಶಬ್ದಕ್ಕೆ ಒಟ್ಟಿನಲ್ಲಿ ಯಾವುದೇ ಧಾರ್ಮಿಕ ವ್ರತವೆಂದೂ ನಿರ್ದಿಷ್ಟ ವಾಗಿ ಬ್ರಹ್ಮಚರ್ಯವೆಂದೂ ಅರ್ಥ. ಹೀಗಾಗಿ ಪುರುಷವ್ರತ, ದೇವವ್ರತಗಳೆರಡೂ ಬಹುಮಟ್ಟಿಗೆ ಸಮಾನಾರ್ಥಕವೆಂದು ತಿಳಿದರೆ ತಪ್ಪಾಗಲಾರದು''[5] ಎಂಬ ಸಿ.ಪಿ.ಕೆ. ಅವರ ಹೇಳಿಕೆ ಅರ್ಧ ಸತ್ಯ. ಪುರುಷವ್ರತಕ್ಕೂ ದೇವವ್ರತಕ್ಕೂ ದೂರದ ಸಂಬಂಧ ವಿರುವಂತಿದೆ.[6]

---

2. ನೃತ್ಯ ನಾಟಕಗಳನ್ನು ನೋಡುವದೇ, ಜೈನ ದೃಷ್ಟಿಗೆ ಅಧಾರ್ಮಿಕ, ಅಬ್ರಹ್ಮ ಎಂಬ ಅಂಶ ಇಲ್ಲಿ ಸ್ಪಷ್ಟ. ಜೈನರಿಂದಲೆ ಪ್ರಾರಂಭವಾದ ಕನ್ನಡ ಸಾಹಿತ್ಯದಲ್ಲಿ ವೈದಿಕ ಮತ್ತು ಶೈವರಲ್ಲಿ ಪ್ರಚಲಿತವಿದ್ದ ನಾಟಕಗಳಿಲ್ಲದಿರಲು ಈ ಅನ್ಯಮತೀಯತೆಯೂ, ವ್ರತಭಂಗದ ಭಯವೂ ಇರಬೇಕು.
3. ಜೀವ ಸಂಬೋಧನಂ (ಮದ್ರಾಸ್ ಗವರ್ನಮೆಂಟ್ ಓರಿಯೆಂಟಲ್ ಸೀರೀಜ) ಸಂ. ಹೆಚ್. ಶೇಷ ಅಯ್ಯಂಗಾರ್ 1955 ಪುಟ 138, 139.
4. ಅದೇ ಈ ಗ್ರಂಥದಲ್ಲಿ ಹನ್ನೊಂದು ಕಡೆ 'ಮಹಾವ್ರತ' ಶಬ್ದ (ಜೈನ ಯತಿಗಳಿಗೆ ಸಂಬಂಧಿಸಿದ್ದು) ಬಳಕೆ ಆಗಿದೆ.
5. ತ. ಭಾ. 8.2 ಪುಟ 154
6. 'ಪುರುಷ ವ್ರತ', ಪ್ರೊ॥ ಎಂ. ವಿ. ಸೀತಾರಾಮಯ್ಯನವರು ಹೇಳುವಂತೆ ಬ್ರಹ್ಮಚರ್ಯ ವಲ್ಲ. ನಿಷ್ಠಾವಂತಿಕೆಯ, ಸಂಯಮದ ವೀರ ಪ್ರತಿಜ್ಞೆ, ಅಥವಾ ವ್ರತ. 'ಪುರುಷ ವ್ರತ'ದ ಬಗ್ಗೆ ಬೇರೆ ಲೇಖನ ಬರೆದಿದ್ದೇನೆ. ವಿವರಗಳನ್ನು ಅಲ್ಲಿ ನೋಡಬಹುದು. (ಲೇಖನ ಇನ್ನೂ ಅಪ್ರಕಟಿತ)

'ದೇವವ್ರತ'ವು, ಸಿ.ಪಿ.ಕೆ. ಅವರ 'ಯಾವುದೇ ಧಾರ್ಮಿಕ ವ್ರತ' ವಿರಬಹುದೆಂಬ ಊಹೆಯು, ಹೆಚ್ಚಿನ ಆಧಾರವನ್ನು ಅಪೇಕ್ಷಿಸುತ್ತವೆ. ಈ ಊಹೆಗೆ ಜೀವಸಂಬೋಧನೆಯ ಬೆಂಬಲವಂತೂ ಇಲ್ಲ*

ಜೈನ ದೃಷ್ಟಿಯಲ್ಲಿ ಹತ್ತು ಅತೀಚಾರಗಳನ್ನು ಮೀರಿದ ಬ್ರಹ್ಮಚರ್ಯವು ದೇವ ವ್ರತ. ದೇವವ್ರತಕ್ಕೆ ಜೀವ ಸಂಬೋಧನೆಯು ಜೈನ ಪರಿಭಾಷಾವಲಯವನ್ನು ಕಲ್ಪಿಸಿರಬಹುದು. ವೈದಿಕ ವಾಙ್ಮಯದಲ್ಲಿ ಈ ಶಬ್ದ ಸಿಗುವದೊ ನೋಡಬೇಕು.[7]

ಎಸ್. ಎಸ್. ಹಿರೇಮಠ

ಬಾವಿ (ರಿ) - ಒಂದು ಪುನರ್ ವಿವೇಚನೆ

'ಬಾರಿ' ಪದ ಪ್ರಯೋಗ : ವಡ್ಡಾರಾಧನೆ : ವೃಷಭಸೇನ ಭಟ್ಟಾರರ ಕಥೆ, ಪುಟ 111 ; ಸಾಲು 14.

ಪೂಜ್ಯ D. L. N. ಅವರು ಈ ಪದಕ್ಕೆ 'ವಾರೀ ಕರ್ಮ' ಎಂದು ಅರ್ಥ ಹೇಳುತ್ತಾರೆ. ಆನೆಗಳನ್ನು ಹಿಡಿಯಲು ಕಟ್ಟಿರುವ ಕೋಟೆಯಲ್ಲಿ, ಬೋನಿನಲ್ಲಿ...... ಖೆಡ್ಡವನ್ನು ನಿರ್ಮಿಸುವ ವಿಧಾನ, ಇದಕ್ಕೆ ಸಂಸ್ಕೃತದಲ್ಲಿ 'ವಾರೀ ಕರ್ಮ' ಎನ್ನುತ್ತಾರೆ, ಎಂದು ಸಾಧಿಸಿದ್ದಾರೆ.

ಪ್ರಯೋಗ ಸಂದರ್ಭ ಹೀಗಿದೆ ; 'ಅಡವಿಯ ಸೊರ್ಕಿದ ಆನೆ ಗಣಿಯಾನೆಗಳ್ವೆರಸು ಬಂದು 'ಬಾವಿ'ಯಂ ಪೊಕ್ಕೊಡೆ ಪಿರಿದುಂ ಕಳಕಳವಾಗಿ ಅರಸಂಗೆ ಅಱಪಿದೊಡೆ ಅರಸನುಂ ಕೇಳ್ದು ತುರಿಪದಿಂ ಪೊಱಮಟ್ಟು ಕಾಡಾನೆಯುಂ ಕಟ್ಟಿಸಲೆಂದು 'ಬಾವಿ'ಗೆ ಪೋದನ್.

ಪೂಜ್ಯ ಡಿ. ಎಲ್. ಎನ್. ಅವರು 'ಬಾವಿ'ಗೆ 'ಬಾರಿ' ಎಂಬ ಪಾಠಾಂತರವನ್ನು ಸ್ವೀಕರಿಸಿ, ಈ ಭಾಗದ ಅರ್ಥವನ್ನು ಪೂರೈಸಲು ತೊಡಗುತ್ತಾರೆ. ಬಾರಿ (ಸಂ)= 'ವಾರೀತು ಗಜ ಬಂಧನೇ' ಎಂಬುದರ ಆಧಾರದ ಮೇಲೆ ಇದಕ್ಕೆ ಖೆಡ್ಡ ಕಾರ್ಯ

---

7 ಭೀಷ್ಮನು ತನ್ನ ಸುಖವನ್ನು ಲೆಕ್ಕಿಸದೆ ದಾಶರಾಜನೆದುರು ಪ್ರತಿಜ್ಞೆ ಮಾಡಿ ಸತ್ಯವತಿಯನ್ನು ತನ್ನ ತಂದೆಗೆ ಮದುವೆ ಮಾಡಿಸಿದ. ಇದರಿಂದ ಶಂತನುವಿನಿಂದ ಸ್ವೇಚ್ಛಾಮರಣ ರೂಪದ ವರಪಡೆದು 'ಸತ್ಯವ್ರತ', 'ದೇವವ್ರತ' ಮುಂತಾದ ಹೆಸರು ಪಡೆದ — ಪುರಾಣನಾಮ ಚೂಡಾಮಣಿ — ಪುಟ 462, 463.

* ಅಥವಾ — ಬಂಧುವರ್ಮ ಹೇಳುವ ಹತ್ತು ಅಬ್ರಹ್ಮಗಳನ್ನು ತ್ಯಜಿಸಿದ ಬ್ರಹ್ಮಚರ್ಯವನ್ನೇ 'ವ್ರತ'ವೆಂದು ಭಾವಿಸಬಹುದೇ ?

ಕ್ರಮದ ಅರ್ಥವನ್ನು ಹಚ್ಚುತ್ತಾರೆ. ಈ ಸನ್ನಿವೇಶದಲ್ಲಿ ಈ ವಿಶಾಲ ಅರ್ಥ ಬೇಕಾಗಿಲ್ಲ ಎನ್ನಿಸುತ್ತದೆ, ಅಲ್ಲದೆ ಅಸಮಂಜಸವೂ ಹೌದು.

ಮೊದಲನೆಯದಾಗಿ, ಕಾಡಾನೆಯನ್ನು ಖೆಡ್ಡದಲ್ಲಿ ಬೀಳಿಸಿ ಹಿಡಿಯುವ ಕಾರ್ಯ ವಾಗಿದ್ದಲ್ಲಿ ಜನರು 'ಕಳಕಳ' ವಾಗಿ ಅರಮನೆಯಲ್ಲಿದ್ದ ರಾಜನಿಗೆ ಹೇಳುವ ಅವಶ್ಯ ಕತೆ ಇರಲಿಲ್ಲ. ಈ ಆನೆಗಳನ್ನು ಕಟ್ಟಿಸಲು ಅರಸನು ತುರಿಪದಿಂದ ಹೊರಡುತ್ತಾನೆ. ಆ ದಿನವೇ ಆನೆಗಳನ್ನು ಕಟ್ಟಿಸಿ ಅವನು ಅರಮನೆಗೆ ಹಿಂದಿರುಗುತ್ತಾನೆ.

ಎರಡನೆಯದಾಗಿ, ಈ ಸನ್ನಿವೇಶಕ್ಕೆ ಹಿಂದಿನ ಪುಟದಲ್ಲಿಯೇ ಊರ ಹೊರಗಣ 'ಬಾವಿ'ಯಲ್ಲಿ ನೀರು ತರುವ, ಎರೆಯುವ ಕ್ರಿಯೆ ನಡೆದಿರುವುದರಿಂದ ಒಂದೊಂದು ಊರಿನ ಹೊರವಲಯದಲ್ಲಿ ಕುಡಿಯುವ ನೀರಿನ ಬಾವಿ ಇರುವುದು ಸಾಧ್ಯ.

ಅಂತಹ ಬಾವಿಯ ಬಳಿಗೆ ಆಗಾಗ ಕಾಡಾನೆಗಳು ಬಂದು ಧಾಳಿ ಮಾಡುತ್ತಿರ ಬಹುದೆಂಬ ಊಹೆಗೂ ಇಲ್ಲಿ ಸಾಧ್ಯ. (ಹೆಗ್ಗಡದೇವನಕೋಟೆ ತಾ||, ಗುಂಡ್ಲುಪೇಟೆ ತಾ||, ಪ್ರದೇಶಗಳ ನಿವಾಸಿಗಳ ಅನುಭವ ಇದಕ್ಕೆ ಸಾಕ್ಷಿ).

ಈ ಬಾವಿಯ ಬಳಿಗೆ ಕಾಡಾನೆ ಬಂದಿರುವ ವಿಷಯವನ್ನು ಕಳಕಳದಿಂದ ವಿನಂತಿಸಿ ಅರಸನ ಸಹಾಯವನ್ನು ಬೇಡಿಬಂದ ಪ್ರಜೆಗಳ ಆರ್ತನಾದ ಇಲ್ಲಿ ಇದೆ ಎನ್ನಿಸುತ್ತದೆ. 'ಬಾವಿ' ಪದಕ್ಕೆ 'ಬಾರಿ' ಎಂಬ ಪಾಠಾಂತರದ ಅವಶ್ಯಕತೆ ಬೇಕಿಲ್ಲ ಎನ್ನಬಹುದು.

ಒಂದು ವೇಳೆ 'ಬಾರಿ' ಪದವನ್ನು ಸ್ವೀಕರಿಸಿದರೂ ಸಹ ಈ ಸನ್ನಿವೇಶದ ಅರ್ಥ ಕೊಡುವುದಿಲ್ಲ ಎನ್ನುವುದಕ್ಕೆ ರೆ। ಫಾ। ಕಿಟ್ಟೆಲ್‌ರವರು ಕೊಡುವ ಅರ್ಥ ಪೋಷಕವಾಗುತ್ತದೆ. ಅವರು 'ಬಾರಿ' ಎನ್ನುವುದಕ್ಕೆ 'The passage at the side of a great well for bullocks to run down indrawing up water (ಯಾತದ ದಾರಿ) ಎಂದಿದ್ದಾರೆ.

ಇದರಿಂದ ಇದು ಸಣ್ಣ ಬಾವಿಯಲ್ಲ 'ಏತದ ಬಾವಿ' ಎಂದೂ ಊಹಿಸಲು ಸಾಧ್ಯ. ಈಗಲೂ ವಿಶಾಲವಾದ, ಗುಂಡಗೇಇರುವ ದೊಡ್ಡ ಬಾವಿಗಳನ್ನು ತೋಡಿಸಿ ಏತವಿಟ್ಟು ನೀರನ್ನು ಎತ್ತುಗಳಿಂದ ಎಳೆಸುವುದನ್ನು ನೋಡಬಹುದು. ಎತ್ತುಗಳು ಹಿಂದೆ ಮುಂದೆ ನಡೆದಾಡುವ ದಾರಿಗೆ 'ಬಾರಿ' ಎನ್ನುವ ಅರ್ಥ ಸ್ಪಷ್ಟವಾಯಿತು ಎಂದಮೇಲೆ ಎತದ ದಾರಿಯ ಬಳಿಗೆ (ಬಾರಿ) ಇಲ್ಲವೆ ಬಾವಿಯ ಬಳಿಗೆ ಆನೆಗಳು ಬಂದಿರುವುದು ನಿಜವೆಂದು ನಾವು ಭಾವಿಸಿ, ಆನೆಗಳನ್ನು ಕಟ್ಟಿಸುವ ಪ್ರಯತ್ನ ಇಲ್ಲಿ ನಡೆದಿದೆ ಎಂದು ಅರ್ಥೈಸಿಕೊಂಡು, ಖೆಡ್ಡಾ ಕಾರ್ಯಕ್ರಮವನ್ನು ತಳ್ಳಿಬಿಡಬಹುದು ಎಂದು ಅಭಿಪ್ರಾಯಪಡುತ್ತೇನೆ.

ಎಚ್. ವಿ. ಶ್ರೀನಿವಾಸಶರ್ಮ

ಪಂಪನ ಒಂದು ಪದ್ಯದ ಟಿಪ್ಪಣಿ

ಒಡಯು [ರ][4] ದೇವರೆಂದು ನಿನಗಿ ತ್ತೊಡೆ ಪಟ್ಟಮನುರ್ಕಿದಪ್ಪೆಪೇೞ್ ।
ಪೊಡವಿಗಧೀಶರಂತವರ್ಗಳಯ್ವರುಮಂ ಕ್ರಮದಿಂದೆ ಪಟ್ಟಮಂ ।।
ತಡೆಯದೆ ಕಟ್ಟಿ ಭೂತಳಮನಾಳಿಸ ದಿರ್ದೊಡದರ್ಕೆ ಸೊರ್ಕಿ ನೀಂ ।
ನುಡಿಯ ದಿರಣ್ಣ ನಿನ್ನನುಡಿಗಾಂ ತಡೆದಿರ್ಪೆನೆ ಪೇೞ್ಸುಯೋಧನಾ ।।

ಪಾಠಾಂತರ ; 4 – ರೆ (ಸ) – ವಿ. ವಿ. ಆ, 4-6

ಪೂಜ್ಯರಾದ D. L. N. ಅವರು ಈ ಪದ್ಯಕ್ಕೆ ಕೆಳಗಂಡಂತೆ ಅನ್ವಯಾರ್ಥ ವನ್ನು ಹೇಳಿದ್ದಾರೆ :

ಒಡೆಯರ್–ರಾಜರಾದ ಪಾಂಡವರು, ಅದೇವರ್–ಅದೇನು ಮಾಡಬಲ್ಲರು, ಎಂದು, ನಿನಗೆ ಪಟ್ಟಮಂ ಇತ್ತೊಡೆ–ರಾಜ್ಯವನ್ನು ಕೊಟ್ಟರೆ, ಉರ್ಕಿದಪ್ಪೆ–ಉಕ್ಕುತ್ತಿದೀಯೆ, ಉಬ್ಬುತ್ತಿದೀಯೆ ; ಪೇೞ್–ಹೇಳು ; ಪೊಡವಿಗದೀಶರಂತವರ್ಗಳ್–ರಾಜ್ಯಕ್ಕೆಹಾಗೆ ಒಡೆಯರು ಅವರು, ಅಯ್ವರುಮಂ–ಐವರನ್ನೂ, ಕ್ರಮದಿಂದೆ ಪಟ್ಟಮಂ ತಡೆಯದೆ ಕಟ್ಟಿ–ಕ್ರಮವಾಗಿ ರಾಜ್ಯಪಟ್ಟವನ್ನು ತಡಮಾಡದೆ ಕಟ್ಟಿ, ಭೂತಳಮನಾಳಿಸ ದಿರ್ದೊಡೆ–ಭೂಮಂಡಲವನ್ನು ಆಳಿಸದೆ ಇದ್ದರೆ, ಅದರ್ಕೆ–ಅದಕ್ಕೆ, ಸೊರ್ಕಿ–ಮದ ವೇರಿ, ನೀಂ-ನೀನು ನುಡಿಯದಿರ್ ಅಣ್ಣ-ಮಾತಾಡಬೇಡವೋ ಅಣ್ಣ ; ನಿನ್ನ ನುಡಿಗಾಂ–ಮಾತಿಗೆ ನಾನು, ತಡೆದು-ಅಡ್ಡಿಪಟ್ಟು, ಇರ್ಪೆನೆ-ಇರುತ್ತೇನೆಯೇ, ಸುಯೋಧನಾ-ದುರ್ಯೋಧನನೇ ಪೇೞ್–ಹೇಳು

ಈ ಅನ್ವಯಕ್ರಮದಲ್ಲಿ ಒಂದೆರಡು ಅನುಮಾನಗಳು ಉಳಿಯುತ್ತವೆ. ಮೊದಲನೆಯದಾಗಿ. ಒಡೆಯರ್ + ಅದೇವರ್–ಒಡೆಯರಾದ ಪಾಂಡವರು ಅದೇನು ಮಾಡಬಲ್ಲರು'–ಎಂಬುದು. ಈಗ ಪಾಂಡವರು ಇನ್ನೂ ರಾಜರಾಗಿಲ್ಲ, ಅಂದಮೇಲೆ ಅವರು ಒಡೆಯರು ಹೇಗಾಗುತ್ತಾರೆ ? ಭೀಷ್ಮನು ರಾಜ್ಯದ ಹಂಚಿಕೆಮಾಡಲು ದುರ್ಯೋಧನನನ್ನು ಒಡಂಬಡಿಸುವ ಸಂದರ್ಭ ಇದು. ಅವನಾದರೋ ಪಾಂಡವರಿಗೆ ಅರ್ಧರಾಜ್ಯವನ್ನು ಕೊಡಬಾರದೆಂದು ಮೊಂಡಾಟ ಹೂಡಿದ್ದಾನೆ. ಇಷ್ಟುದಿನ ಅನಧಿಕೃತವಾಗಿ ರಾಜ್ಯಸೂತ್ರಗಳನ್ನು ಕೈಗೆ ತೆಗೆದುಕೊಂಡು ಅಧಿಕಾರದ ರುಚಿ ಹತ್ತಿದೆ ಅವನಿಗೆ. ಈಗ ಸಾಮಾನ್ಯಕ್ಕೆ ಬಿಟ್ಟುಕೊಡಲು ಒಪ್ಪುತ್ತಾನೆಯೆ ? ಹಿಂದೆ ದುರ್ಯೋಧನ ಎಷ್ಟರಮಟ್ಟಿಗೆ ಆಡಳಿತದಲ್ಲಿ ಹಸ್ತಕ್ಷೇಪ ಮಾಡುತ್ತಿದ್ದನೆಂಬುದಕ್ಕೆ ಕರ್ಣನಿಗೆ ಅಂಗರಾಜ್ಯಾಭಿಷೇಕ ಮಾಡಿಸಿದ ಸಂದರ್ಭವೇ ನಿದರ್ಶನವಾಗಿದೆ. ಇತ್ತ ಪರಮ ವೈರಾಗ್ಯನಿಧಿಯಾದ ಭೀಷ್ಮನು ಅವನ ಚಲನವಲನಗಳನ್ನು ನಿರೀಕ್ಷಿಸುತ್ತಾ ಕೆಲವು ದಿನ ತಟಸ್ಥರಾಗಿದ್ದನು. ಆದರೆ ಪಾಂಡವರು ದ್ರೌಪದಿಯನ್ನು ವಿವಾಹ ವಾದರು, ಗೃಹಸ್ಥಾಶ್ರಮಕ್ಕೆ ಕಾಲಿಟ್ಟರು ಎಂಬ ಸುದ್ದಿಯನ್ನು ಕೇಳಿದಮೇಲೆ ಅವರಿಗೂ ಒಂದು ನೆಲೆಯನ್ನು ಕಲ್ಪಿಸಬೇಕೆಂಬ ಅಂತಃಕರಣಮೂಡಿ ರಾಜ್ಯದ

ಹಂಚಿಕೆಗೆ ಏರ್ಪಾಡು ಮಾಡಿದನು. ಅದಕ್ಕೆ ದುರ್ಯೋಧನ ವಿರೋಧಿಸಿದ. ಆಗ ಭೀಷ್ಮ ಮುನಿದು ಮೇಲಿನ ಮಾತನ್ನು ಸುಯೋಧನನಿಗೆ ಹೇಳುತ್ತಿದ್ದಾನೆ. ಆದ್ದರಿಂದ ಒಡೆಯರಾದ ಪಾಂಡವರು ಅದೇನು ಮಾಡುವರು' ಎಂಬ D.L.N. ಅವರ ಅನ್ವಯ ಸರಿಕಾಣುವುದಿಲ್ಲ. ಇಲ್ಲಿ ಕವಿಯ ಆಶಯ ಬೇರೆಯೇ ಇದ್ದಿರಬೇಕು ಎನಿಸುತ್ತದೆ. ಪದ್ಯದ ಪಾಠಾಂತರವನ್ನು ಇಲ್ಲಿ ಗಮನಿಸಬಹುದು. ಅಂದರೆ [ರ] ಎಂಬ ತಿದ್ದಿದ ಪಾಠಕ್ಕೆ ಬದಲಾಗಿ (ಸ) ಪ್ರತಿಯ 'ರೆ' ಎಂಬ ಪಾಠವನ್ನು ಸ್ವೀಕರಿಸಿದರೆ 'ಒಡೆಯರೆ +ದೇವರೆಂದು–ರಾಜರೆ ದೇವರೆಂದು'–ಎಂದಾಗುತ್ತದೆ. ಇದು ರಾಜಾ ಪ್ರತ್ಯಕ್ಷ ದೇವತಾ' ಎಂಬ ಲೋಕೋಕ್ತಿಯ ಅನುವಾದವಾಗಿದೆ. ಪಂಪ ಅದನ್ನು ಈ ಸಂದರ್ಭಕ್ಕೆ ಬಳಸಿಕೊಂಡಿರಬೇಕು. ಪ್ರಾಚೀನ ಭಾರತದಲ್ಲಿ, ಏಕೆ, ಸ್ವಾತಂತ್ರ್ಯ ಬರುವವರೆಗೂ ನಮ್ಮ ನಾಡಿನಲ್ಲಿ ರಾಜನನ್ನು ಪ್ರತ್ಯಕ್ಷದೇವರೆಂದು ಜನತೆ ಭಾವಿಸಿ ಗೌರವಿಸುತ್ತಿತ್ತು. ಇದನ್ನು ಕೇವಲ ಜನತೆಯ ಅಂಧಶ್ರದ್ಧೆ, ಮೂಢಭಕ್ತಿ, ಭಯ ಎನ್ನುವುದಕ್ಕಿಂತ ಧರ್ಮಜ್ಞರಾದ ಕೆಲವು ರಾಜರಾದರೂ ತಮ್ಮ ಪ್ರಜೆಗಳನ್ನು ದೇವರು ರಕ್ಷಿಸುವಂತೆಯೇ ರಕ್ಷಿಸುತ್ತಿದ್ದರೆಂಬುದು ಐತಿಹಾಸಿಕ ಸತ್ಯ. ಈ ಹಿನ್ನೆಲೆಯಲ್ಲಿ ಈಗ ಪದ್ಯದ ಅನ್ವಯಾರ್ಥ : ಭೀಷ್ಮನ ಕೋಪದ ಮಾತು ಒಡೆಯರೆ-ರಾಜರೆ, ದೇವರೆಂದು (ಪ್ರತ್ಯಕ್ಷ) ದೇವರು ಎಂಬುದಾಗಿ, ನಿನಗೆ ಪಟ್ಟಮಂ ಇತ್ತೊಡೆ–ರಾಜ್ಯವನ್ನು ಕೊಟ್ಟರೆ, ಉರ್ಕಿದಪ್ಪೆ–ಉಬ್ಬುತ್ತೀಯೆ (ಮುಂದೆ), (ಇದಕ್ಕೆ D.L.N. ಅವರು 'ಉಕ್ಕುತ್ತಿದೀಯೆ, ಉಬ್ಬುತ್ತಿದೀಯೆ', ಎಂದು ಅರ್ಥೈಸಿದ್ದಾರೆ); ಪೇೞ್–ಹೇಳು, ಪೊಡವಿಗಧೀಶರಂತವರ್ಗಳ್–ರಾಜ್ಯಕ್ಕೆ (ದೇವರ) ಹಾಗೆ ಒಡಯರು ಅವರು ಅಯ್ವರುಮಂ-ಐವರನ್ನೂ, ಕ್ರಮದಿಂದೆ–ಕ್ರಮವಾಗಿ, ಪಟ್ಟಮಂ ತಡೆಯದೆಕಟ್ಟಿ–ರಾಜ್ಯಪಟ್ಟವನ್ನು ತಡಮಾಡದೆ ಕಟ್ಟಿ, ಭೂತಳಮನಾಳಿಸದಿರ್ದೊಡೆ-ಭೂಮಂಡಲವನ್ನು ಆಳಿಸದೆ ಇದ್ದರೆ ? (ಇಲ್ಲಿಗೆ ಪದ್ಯದ ಮೊದಲ ಪಂಕ್ತಿಯ ಕೊನೆಯ ಶಬ್ದ 'ಪೇೞ್–ಹೇಳು' ಎಂಬುದನ್ನು ಇಟ್ಟುಕೊಂಡು ಅನ್ವಯಿಸಿಕೊಳ್ಳಬೇಕು); ಅದರ್ಕೆ-ಅದಕ್ಕೆ, ಸೊರ್ಕಿ–ಸೊಕ್ಕಿ, ನೀಂ–ನೀನು, ನುಡಿಯದಿರ್ ಅಣ್ಣ–ಮಾತಾಡಬೇಡವೊ ಅಣ್ಣ ; ನಿನ್ನ, ನುಡಿಗಾಂ–ಮಾತಿಗೆ ನಾನು, ತಡೆದು–ಅಡ್ಡಿ ಪಟ್ಟು, ಇರ್ಪೆನೆ–ಇರುತ್ತೇನೆಯೇ, ಸುಯೋಧನಾ–ಸುಯೋಧನನೇ, ಪೇೞ್-ಹೇಳು ?

ಹೀಗೆ ಅನ್ವಯ ಮಾಡಿಕೊಳ್ಳುವುದರಿಂದ ನಾವು ಕವಿಯ ಆಶಯಕ್ಕೆ ಹತ್ತಿರ ಹೋಗಬಹುದು. ಅಲ್ಲದೆ ಇಲ್ಲಿ ಸ್ವೀಕರಿಸಿರುವ ಪಾಠದ ಬಗ್ಗೆ ಒಂದು ಮಾತು: 'ಒಡೆಯರ್ತೆ— + ದೇವರೆಂದು' ಎನ್ನುವ ಪಾಠವೆ ಸರ್ವ ಮಾತೃಕೆಗಳಲ್ಲಿಯೂ ಇದ್ದು, [ರ] ವನ್ನು ಪರಿಷತ್ತಿನ ಮುದ್ರಿತ ಪ್ರತಿಯಲ್ಲಿ ತಿದ್ದಿಕೊಳ್ಳಲಾಗಿದೆಯೆಂದು ಸೂಚಿಸಿದ ಮುಳಿಯ ತಿಮ್ಮಪ್ಪಯ್ಯನವರು ತಮ್ಮ 'ನಾಡೋಜ ಪಂಪ' ದಲ್ಲಿ

ಒಡೆಯರ್ತೆ— + ದೇವರೆಂದು' ಎನ್ನುವ ಪಾಠವನ್ನೇ ಅವರೂ ಸಮ್ಮತಿಸಿದ್ದಾರೆ. (ನೋಡಿ-ನಾಡೋಜ ಪಂಪ-ಪುಟ-523)

ಎರಡನೆಯದಾಗಿ, D.L.N. ಅವರು ಸ್ವೀಕರಿಸುವ ಪಾಠದಂತೆಯೇ ಅರ್ಥೈಸಿದರೂ ಕೂಡ, 'ಒಡೆಯರ್' ಎಂಬ ಶಬ್ದಕ್ಕೆ ರಾಜರು, ಹಿರಿಯರು, ಯಜಮಾನರು, ಎಂದೂ ಬೇರೆ ಬೇರೆ ಅರ್ಥಗಳಿರುವುದರಿಂದ,' ಒಡೆಯರ್-ಯಜಮಾನರು (ಅಂದರೆ ಭೀಷ್ಮಾದಿ ಹಿರಿಯರು) ಅದೇವರೆಂದು-ಅದೇನು ಮಾಡುವರೇದು, ನೀನು ಉದಾಸೀನನಾಗಿ ರಾಜ್ಯ ಪಟ್ಟ ಮಾಡಿದರೆ ಉಬ್ಬುತ್ತೀಯೆ-ಎಂಬುದು ಭೀಷ್ಮನ ಅನ್ನಿಸಿಕೆಯಿರಬೇಕು. ಆದ್ದರಿಂದ D.L.N. ಅವರ ಅನ್ವಯ ಈ ಪಾಠಕ್ಕೂ ಸಮರ್ಪಕವಲ್ಲ, ಪಾಂಡವರು ಅದೇನು ಮಾಡುವರು ಎಂಬುದಕ್ಕಿಂತ, ಈ ಮುದುಕರು, ಯಜಮಾನರು ಏನು ಮಾಡುತ್ತಾರೆ ಮಹಾ, ಎಂದು ವಿಭ್ರಾಂತನಾಗಿ ದುರ್ಯೋಧನ ಬೀಗುತ್ತಾನೆ ಮುಂದೆ ಪಟ್ಟವಾದಾಗ ಎಂಬುದೇ ಹೆಚ್ಚು ಉಚಿತವಾಗುತ್ತದೆ. ಅಲ್ಲದೆ ಅಲ್ಲಿಯೇ ಏಳನೆಯ ಪದ್ಯದನಂತರ ಬರುವ ವಚನವೂ ಇದೇ ಅರ್ಥವನ್ನು ಸಮರ್ಥಿಸುತ್ತದೆ. ಪಾಂಡವರಾದರೊ 'ಎನ್ನ ಎಂದುದಂ ಮೀಱುವರಲ್ಲರ್'-ನಾನು ಹೇಳಿದು ಮಾತನ್ನು ಮೀರುವವರಲ್ಲ, ಆದ್ದರಿಂದ ಅವರಿಗೇ ಪಟ್ಟಕಟ್ಟಿ ನೆಲವನ್ನು ಹಂಚಿಕೊಡುತ್ತೇ, ಆಗ 'ಅಡ್ಡ ಬರ್ಪ ಗಂಡರಂ ನೋೞ್ಪೆನ್' ಎಂದು ಭೀಷ್ಮನು ದುರ್ಯೋಧನನನ್ನು ಗದರಿಸುವುದನ್ನು ಇಲ್ಲಿ ಗಮನಿಸಬಹುದು. ಅಂದರೆ ದುರ್ಯೋಧನನು ಯಾವೊತ್ತೂ ಯಜಮಾನರ ಮಾತನ್ನು ಲೆಕ್ಕಕ್ಕೆ ತೆಗೆದುಕೊಂಡವನಲ್ಲ (ನಿದರ್ಶನಗಳು ಹಲವಾರು) ವೆಂದೂ, ಇತ್ತ ಪಾಂಡವರು ಯಜಮಾನರ ಮಾತನ್ನು ಯಾವೊತ್ತೂ ಮೀರುವ ಸ್ವಭಾವದವರಲ್ಲವೆಂದೂ ಭೀಷ್ಮರ ಅನುಭವ ಸಿದ್ಧವಾದ ಮಾತು. ಆದ್ದರಿಂದ 'ಒಡೆಯರ್ + ಅದೇವರ್ ಎನ್ನುವುದಕ್ಕೆ, ಯಜಮಾನರು ಅದೇನು ಮಾಡುವರು ಎಂದು ಅನ್ವಯಿಸಿಕೊಳ್ಳುವುದೂ ಸೂಕ್ತವೆನಿಸುತ್ತದೆ. ಮೂರನೆಯದಾಗಿ, ರಾಜ್ಯಪಟ್ಟವು ಹಿರಿಯ ಮಗನಿಗೆ ವಂಶಾನುಕ್ರಮವಾಗಿ ಬರತಕ್ಕದ್ದು, ನಿಜ. ಆದರೆ ಕುರುವಂಶದ ಸಂದರ್ಭಕ್ಕೆ ಧೃತರಾಷ್ಟ್ರನು ಜಾತ್ಯಂಧನಾಗಿದ್ದುದರಿಂದ ಕಿರಿಯವನಾದ ಪಾಂಡುವಿಗೇ ಭೀಷ್ಮ ರಾಜ್ಯ ಪಟ್ಟಗಟ್ಟಿ ಆಳಿಸಿದ. ಈಗ ದುರ್ಯೋಧನ ರಾಜ್ಯಪಟ್ಟಕ್ಕೆ ಯೋಗ್ಯನಲ್ಲವೆಂದು ಭಾವಿಸಿದ ಭೀಷ್ಮ ಧರ್ಮರಾಜನಿಗೆ ಪಟ್ಟಗಟ್ಟಿಸಿದ. ಪಂಪನ ಪ್ರಕಾರ ಧರ್ಮರಾಜನಿಗೆ ರಾಜ್ಯ ಪಟ್ಟವಾದಮೇಲೆ ಧೃತರಾಷ್ಟ್ರನು ಕೌರವ–ಪಾಂಡವರಿಗೆ ನೆಲವನ್ನು ಹಂಚಿಕೊಡುತ್ತಾನೆ.* ಇಲ್ಲಿ ದುರ್ಯೋಧನನಿಗೆ ರಾಜ್ಯಪಟ್ಟ ಮಾಡಿದ

* ಭೀಷ್ಮನು ಧರ್ಮರಾಯನಿಗೆ ಪಟ್ಟಗಟ್ಟಿಸಿ ತಟಸ್ಥನಾಗಿರಬೇಕು. ಅನಂತರ ದುರ್ಯೋಧನನ ಸಂಕಟವನ್ನು ನೋಡಲಾರದ ಧೃತರಾಷ್ಟ್ರನ ಹೆತ್ತುಕರುಳು ಅವನಿಗೂ ಅರ್ಧ ರಾಜ್ಯವನ್ನು ಅನುನಯದಿಂದ ಹಂಚಿಕೊಟ್ಟಿರಬೇಕು.

ವಿಚಾರ ಎಲ್ಲೂ ಬಂದಿಲ್ಲ. ಹಾಗಾದರೆ ತನ್ನ ಅರ್ಧ ರಾಜ್ಯವನ್ನು ದುರ್ಯೋಧನ ಪಟ್ಟವಿಲ್ಲದೆಯೇ ಅನಧಿಕೃತರಾಜನಾಗಿ ಆಳಿದನೆ? ಅಥವಾ ಅಖಂಡ ರಾಜ್ಯಕ್ಕೆ ಧರ್ಮರಾಜ ಒಡೆಯನಾಗಿದ್ದು ಈತ ಸಾಮಂತನಾಗಿ ಆಳಿದನೆ (ಇದೂ ಉಕ್ತವಾಗಿಲ್ಲ)? ಇಲ್ಲವೆ ರಾಜ್ಯಪಟ್ಟವೆಂಬುದು ಅಖಂಡವಾಗಿ ಒಂದು ವಂಶದ ಗೌರವ ಪದವಿಯಂತಿದ್ದು ಅದನ್ನು ಹಂಚಲು ಸಾಧ್ಯವಿಲ್ಲವೊ? ಮತ್ತು ವಂಶದಲ್ಲಿ ಒಬ್ಬನಿಗೆ ಮಾತ್ರ ಪಟ್ಟದ ಕ್ರಮವಿದ್ದು ಉಳಿದ ದಾಯಾದಿಗಳು ನೆಲವನ್ನು ಹಂಚಿಕೊಂಡು ಆಳುತ್ತಿದ್ದರೆ? ಪಂಪನ ಕಾಲಕ್ಕೆ ಅಥವಾ ಭಾರತ ಕಥಾ ಸಂದರ್ಭಕ್ಕೆ ಈ ರಾಜ್ಯಪಟ್ಟ ಕ್ರಮ ಹೇಗಿತ್ತು ಎಂಬುದರ ಬಗ್ಗೆ ಅನುಮಾನ ಪರಿಹಾರವಾಗುವುದಿಲ್ಲ. ಈ ದಿಕ್ಕಿನಲ್ಲಿ ವಿದ್ವಾಂಸರು ಬೆಳಕು ಚೆಲ್ಲುವುದು ಒಳ್ಳೆಯದು.

ಶಿವರಾಮಯ್ಯ

ಸಂಪಾದಕೀಯ

ಕನ್ನಡದ ಒಲವಿನ ಕವಿ ಶ್ರೀ ಕೆ. ಎಸ್. ನರಸಿಂಹಸ್ವಾಮಿಯವರಿಗೆ, ಅವರ 'ತೆರೆದ ಬಾಗಿಲು' ಕವನ ಸಂಗ್ರಹದ ನಿಮಿತ್ತವಾಗಿ, ಕೇಂದ್ರ ಸಾಹಿತ್ಯ ಅಕ್ಯಾಡೆಮಿ ಪ್ರಶಸ್ತಿ ಲಭಿಸಿದ್ದು ಕನ್ನಡಿಗರೆಲ್ಲರಿಗೂ ಸಂತೋಷದ ವಿಷಯ.

'ಮೈಸೂರು ಮಲ್ಲಿಗೆ'ಯ ನರುಗಂಪಿನಿಂದ ಕನ್ನಡ ಜನಮನದ ಬಾಗಿಲನ್ನು ತಟ್ಟಿದ ಕೆ. ಎಸ್. ನರಸಿಂಹಸ್ವಾಮಿಯವರು, 'ತೆರೆದ ಬಾಗಿಲು' ಕವನ ಸಂಗ್ರಹದ ವರೆಗೆ ಹಂತ ಹಂತವಾಗಿ ಬೆಳೆದು ಕನ್ನಡ ಕಾವ್ಯಪ್ರಪಂಚದಲ್ಲಿ ವಿಶಿಷ್ಟವಾದ ಸ್ಥಾನವನ್ನು ಪಡೆದಿದ್ದಾರೆ. ಉದ್ದಕ್ಕೂ ಯಾವ ಸಾಹಿತ್ಯಕ ಪಕ್ಷ ಪಂಥಗಳಿಗೂ ಬಲಿಯಾಗದೆ, ಬದುಕನ್ನು ಪ್ರೀತಿಯಿಂದ, ತೆರೆದ ಕಣ್ಣಿನಿಂದ ನೋಡಿದ ನರಸಿಂಹ ಸ್ವಾಮಿಯವರ ಕವಿತೆ ವಾಸ್ತವವಾಗಿ ಓದುಗರ ಪಾಲಿಗೆ ಸದಾ ತೆರೆದ ಬಾಗಿಲಾಗಿದೆಯೇ ವಿನಾ, ಮುಚ್ಚಿದ ಬಾಗಿಲಾಗಿಲ್ಲ. ಜನಮನವನ್ನು ಸೂರೆಗೊಂಡ ಈ ಕವಿಗೆ, ಕೇಂದ್ರ ಸಾಹಿತ್ಯ ಅಕ್ಯಾಡೆಮಿ ಪ್ರಶಸ್ತಿ ಬಂದ ಈ ಸಂದರ್ಭದಲ್ಲಿ 'ಸಾಧನೆ'ಯು ಅವರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತದೆ.

ಈ ಸಂಚಿಕೆಯ ಲೇಖಕರು

ಜಂಬುಸುದರ್ಶನ	769, 5ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು 560 010
ಜಿ. ಎಸ್. ಶಿವರುದ್ರಪ್ಪ	ನಿರ್ದೇಶಕರು, ಕನ್ನಡ ಅಧ್ಯಯನ ಕೇಂದ್ರ, ಜ್ಞಾನಭಾರತಿ, ಬೆಂಗಳೂರು 560 056
ಬಿ. ವೈ. ಲಲಿತಾಂಬ, ಎಂ.ಎ.	ಅಧ್ಯಾಪಿಕೆ, ಹಿಂದಿ ವಿಭಾಗ, ಮಹಾರಾಣಿ ಕಾಲೇಜ್, ಬೆಂಗಳೂರು 560 001
ಬಿ. ರಾಜಣ್ಣ	ಪ್ರೊಡಕ್ಷನ್ ಕಂಟ್ರೋಲ್ ಇಲಾಖೆ, ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ, ಭದ್ರಾವತಿ 57731
ಎಂ. ಚಿದಾನಂದ ಮೂರ್ತಿ	ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಕೇಂದ್ರ, ಜ್ಞಾನಭಾರತಿ, ಬೆಂಗಳೂರು 560 056
ದೊ. ನಾ. ರಾಮೇಗೌಡ	48, ಥೊಣಚ್ಚಿ ಕೊಪ್ಪಲ್ ವಿಸ್ತರಣೆ, ಸರಸ್ವತಿಪುರಂ, ಮೈಸೂರು 570 009
ಎಂ. ಎಸ್. ಜೈಪ್ರಕಾಶ್	ಸರಕಾರಿ ಜೂನಿಯರ್ ಕಾಲೇಜು, ಮುಲ್ಕಿ, ದ. ಕ. ಜಿಲ್ಲೆ 574 154
ಪ್ರೊ. ಟಿ. ಸಿ. ಜವಳಿ	ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ 580 003
ವೈ. ಸಿ. ಪಾಟೀಲ್	ಹುಲ್ಲೇಕೆರೆ ಅಂಚೆ, ದಂಡಿನಶಿವರ ಮಾರ್ಗ ತುಮಕೂರು ಜಿಲ್ಲೆ 572 215

ಬಿ. ಎನ್. ಮೂರ್ತಿ	ಇಂಗ್ಲೀಷ್ ಉಪನ್ಯಾಸಕರು, ಮೇಗರವಳ್ಳಿ, ಶಿವಮೊಗ್ಗ ಜಿಲ್ಲೆ
ಕೃಷ್ಣ ಕೊಲ್ಹಾರ ಕುಲಕರ್ಣಿ C/o ಡಾ॥ ಕೆ. ಶ್ರೀನಿವಾಸ ಹಾವನೂರ್	ಲೈಬ್ರರಿಯನ್, ಟಾಟ ಇನ್‌ಸ್ಟಿಟ್ಯೂಟ್ ಆಫ್ ಫಂಡಮೆಂಟಲ್ ರಿಸರ್ಚ್, ಹೋಮಿಟಾಟ ರೋಡ್, ಬಾಂಬೆ 400 005
ಕೆ. ಎಸ್. ರಾಮಮೂರ್ತಿ	ಶಂಕರಮಠ ಬೀದಿ, ಕೋಟೆ, ಕೋಲಾರ 563 101
ಹೆಚ್. ಹೆಚ್. ಗಂಗಾಧರಾಚಾರ್	ಸಹಾಯಕ ಅಧ್ಯಾಪಕರು, ಎಸ್. ಜೆ. ಪಾಲಿಟೆಕ್ನಿಕ್, ಭದ್ರಾವತಿ 57731
ಎಸ್. ಪಿ. ಪಾಟೀಲ	ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ 580 003
ಪ್ರಲ್ಹಾದ ಮುರ್ಗಲ್ C/o ಡಾ॥ ಶ್ರೀನಿವಾಸ ಹಾವನೂರ್	ಲೈಬ್ರರಿಯನ್, ಟಾಟ ಇನ್‌ಸ್ಟಿಟ್ಯೂಟ್ ಆಫ್ ಫಂಡಮೆಂಟಲ್ ರಿಸರ್ಚ್, ಹೋಮಿಟಾಟ ರೋಡ್, ಬಾಂಬೆ 400 005
ಡಿ. ಎನ್. ಮಂಜುನಾಥ್	ಮೇಗರವಳ್ಳಿ, ಶಿವಮೊಗ್ಗ ಜಿಲ್ಲೆ
ಹಂಪ ನಾಗರಾಜಯ್ಯ	ರೀಡರ್, ಕನ್ನಡ ಅಧ್ಯಯನ ಕೇಂದ್ರ, ಜ್ಞಾನಭಾರತಿ, ಬೆಂಗಳೂರು 560 056
ಎಸ್. ಶಿವಣ್ಣ	ಸಂಪಾದಕರು, ಹಸ್ತಪ್ರತಿ ವಿಭಾಗ, ಕನ್ನಡ ಅಧ್ಯಯನ ಕೇಂದ್ರ, ಜ್ಞಾನಭಾರತಿ, ಬೆಂಗಳೂರು

ಎಸ್. ಎಸ್. ಹಿರೇಮಠ	ಕನ್ನಡ ಅಧ್ಯಾಪಕ, ವಿಜಯನಗರ ಕಾಲೇಜ್, ಹೊಸಪೇಟೆ, ಬಳ್ಳಾರಿ ಜಿಲ್ಲೆ
ಹೆಚ್. ವಿ. ಶ್ರೀನಿವಾಸ ಶರ್ಮ	ಕನ್ನಡ ರೀಡರ್, ಎಂ. ಇ. ಎಸ್. ಕಾಲೇಜ್, ಮಲ್ಲೇಶ್ವರಂ, ಬೆಂಗಳೂರು 560 003
ಶಿವರಾಮಯ್ಯ	ಅಧ್ಯಾಪಕರು, ಕನ್ನಡ ವಿಭಾಗ, ಮಹಾರಾಣಿ ಕಾಲೇಜ್, ಬೆಂಗಳೂರು 560 003

ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ

ಸಂಪುಟ 1	ಕನ್ನಡ ಸಾಹಿತ್ಯ ಸಮೀಕ್ಷೆ	...	ಜಿ. ಎಸ್. ಶಿವರುದ್ರಪ್ಪ
ಸಂಪುಟ 2	ಶಾಸನ ಮತ್ತು ಗದ್ಯ	...	ಹು. ಕಾ. ಜಯದೇವ್
ಸಂಪುಟ 3	ಶಾಸ್ತ್ರ ಸಾಹಿತ್ಯ	...	ಎಂ. ವಿ. ಸೀತಾರಾಮಯ್ಯ
ಸಂಪುಟ 4	ಚಂಪೂ ಕವಿಗಳು	...	ಪಿ. ವಿ. ನಾರಾಯಣ
ಸಂಪುಟ 5	ವಚನ ಸಾಹಿತ್ಯ	...	ಎಂ. ಚಿದಾನಂದಮೂರ್ತಿ
ಸಂಪುಟ 6	ಷಟ್ಪದಿ ಸಾಹಿತ್ಯ	...	ಕೆ. ಮರುಳಸಿದ್ಧಪ್ಪ
ಸಂಪುಟ 7	ತ್ರಿಪದಿ, ರಗಳೆ ಮತ್ತು ಜನಪದ ಸಾಹಿತ್ಯ	...	ಕಾಳೇಗೌಡ ನಾಗವಾರ
ಸಂಪುಟ 8	ಕೀರ್ತನಕಾರರು	...	ಎಚ್. ಎಸ್. ವೆಂಕಟೇಶ ಮೂರ್ತಿ
ಸಂಪುಟ 9	ಸಾಂಗತ್ಯ ಕವಿಗಳು	...	ಹಂಪ. ನಾಗರಾಜಯ್ಯ
ಸಂಪುಟ 10	ಹೊಸಗನ್ನಡ ಸಾಹಿತ್ಯ	...	ಎಲ್. ಎಸ್. ಶೇಷಗಿರಿ ರಾವ್

ಪ್ರತಿ ಸಂಪುಟದ ಬೆಲೆ : ರೂ. 4–00

ಈ ಸಂಪುಟಗಳನ್ನು ಕೊಳ್ಳುವ ಸಲುವಾಗಿ
ಸುಲಭ ಕಂತುಗಳಲ್ಲಿ ಸಾಲ ಸೌಲಭ್ಯವನ್ನು ಕೆನರಾ ಬ್ಯಾಂಕ್ ಒದಗಿಸಿದೆ.
ಕೆನರಾ ಬ್ಯಾಂಕ್‌ನ ಕರ್ನಾಟಕದ ಯಾವುದೇ ಶಾಖೆಯಲ್ಲಿ ಈ ಬಗ್ಗೆ
ವಿವರಗಳನ್ನು ಪಡೆಯಬಹುದು.

ವಿವರಗಳಿಗೆ ವ್ಯವಹರಿಸಿ :

ನಿರ್ದೇಶಕರು
ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು 560 056

ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು